MSIL ಚಿಟ್ಸ್

ಸುರಕ್ಷಿತ
ಹೂಡಿಕೆ
ತಕ್ಷಣ
ನೆರವಿಗೆ

57ನೇ ವಾರ್ಷಿಕ ವರದಿ 2022-23

ಹಾಟ್ ಸ್ಪ್ರಿಂಗ್
ಸೋಲಾರ್ ವಾಟರ್
ಹೀಟರ್

ಟೂರ್ಸ್ ಅಂಡ್ ಟ್ರಾವೆಲ್ಸ್

ಪ್ರಧಾನ್
ಮಂತ್ರಿ
ಜನೌಷಧಿ
ಪರಿಯೋಜನಾ

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಬೆಂಗಳೂರು

ಪರಿವಿಡಿ

	ಪುಟ ಸಂಖ್ಯೆ
ಸೂಚನೆ	03
ಸಂಸ್ಥೆಯ ಕುರಿತು	09
ನಿರ್ದೇಶಕರ ವರದಿ	10
ನಿರ್ದೇಶಕರುಗಳ ವರದಿಗೆ ಅನುಬಂಧ	19
ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆ (ಫಾರಂ ಎಓಸಿ-1)	28
ಹತ್ತು ವರ್ಷಗಳ ಸಾಧನೆ	36
31ನೇ ಮಾರ್ಚ್ 2023ಕ್ಕೆ ಮುಕ್ತಾಯಗೊಂಡ ವರ್ಷದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನ್ವಯದ ಸ್ವತಂತ್ರ ಲೆಕ್ಕ ಪತ್ರಗಳು	39
31ನೇ ಮಾರ್ಚ್ 2023ಕ್ಕೆ ಮುಕ್ತಾಯಗೊಂಡ ವರ್ಷದ ಕ್ರೋಢೀಕೃತ ಲೆಕ್ಕಪತ್ರಗಳು	129

ನಿರ್ದೇಶಕರ ಮಂಡಳಿ

ಶ್ರೀ ಹೆಚ್.ಹಾಲಪ್ಪ	ಅಧ್ಯಕ್ಷರು
ಶ್ರೀ ವಿಕಾಶ್ ಕುಮಾರ್ ವಿಕಾಶ್, ಭಾ.ಪೊ.ಸೇ	ವ್ಯವಸ್ಥಾಪಕ ನಿರ್ದೇಶಕರು
ಡಾ. ಜೆ. ರವಿಶಂಕರ್, ಭಾ.ಆ.ಸೇ	ನಿರ್ದೇಶಕರು
ಡಾ. ಎಂ.ಆರ್.ರವಿ, ಭಾ.ಆ.ಸೇ	ನಿರ್ದೇಶಕರು
ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ	ನಿರ್ದೇಶಕರು
ಶ್ರೀ ನಿತೀಶ್, ಕೆ. ಭಾ.ಆ.ಸೇ.	ನಿರ್ದೇಶಕರು
ಶ್ರೀ ಆರ್.ರಮೇಶ್	ನಿರ್ದೇಶಕರು
ಶ್ರೀ ವೆಂಕಟೇಶ್ ನಾಯ್ಡು ಎನ್.	ನಿರ್ದೇಶಕರು
ಶ್ರೀ ಸಿ.ಚನ್ನದೇವರು	ನಿರ್ದೇಶಕರು
ಶ್ರೀ ಕೆ.ಎಂ. ರವೀಂದ್ರ	ನಿರ್ದೇಶಕರು
ಶ್ರೀ ಶಿವಾಜಿ ಶಿವರಾಯ್ ಡೊಲ್ಲಿನ್	ನಿರ್ದೇಶಕರು
ಶ್ರೀ ಅಂದಪ್ಪ ಜವಳಿ	ನಿರ್ದೇಶಕರು
ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ	ನಿರ್ದೇಶಕರು
ಡಾ. ಆರ್.ಡಿ. ಸತೀಶ್	ನಿರ್ದೇಶಕರು
ಶ್ರೀ ನಿಂಗಪ್ಪ	ನಿರ್ದೇಶಕರು
ಶ್ರೀ ಶಶಿಧರ್ ಬಿ.ಹೊನ್ನಣ್ಣವರ್	ನಿರ್ದೇಶಕರು

ಶ್ರೀ ಎ.ಎಂ.ಚಂದ್ರಪ್ಪ	ಮುಖ್ಯ ಹಣಕಾಸು ಅಧಿಕಾರಿ
ಶ್ರೀಮತಿ ಶ್ರೀದೇವಿ ಬಿ.ಎನ್.	ಕಂಪನಿ ಕಾರ್ಯದರ್ಶಿ

ನೋಂದಾಯಿತ ಕಛೇರಿ : ಎಂಎಸ್ಐಎಲ್ ಹೌಸ್, 36, ಕನ್ನಿಂಗ್ಹ್ಯಾಮ್ ರಸ್ತೆ , ಬೆಂಗಳೂರು – 560 052.

ಶಾಖಾ ಕಛೇರಿಗಳು : ಬೆಂಗಳೂರು, ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಬೆಳಗಾವಿ, ಮುಂಬಯಿ, ನವದೆಹಲಿ

ಮಾರಾಟ ಕಛೇರಿಗಳು / ಘಟಕಗಳು :

● ವಿಜಯಪುರ ● ದಾವಣಗೆರೆ ● ಕಲಬುರಗಿ ● ಹಾಸನ ● ಹುಬ್ಬಳ್ಳಿ ● ಮಂಗಳೂರು ● ಮೈಸೂರು
● ಭಿವಂಡಿ ● ಕಾನ್ಪುರ ● ಘಜಿಯಾಬಾದ್ ● ಜೈಪುರ್

ಬ್ಯಾಂಕರ್‌ಗಳು : ಬ್ಯಾಂಕ್ ಆಫ್ ಬರೋಡಾ, ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್‌ಡಿಎಫ್‌ಸಿ ಬ್ಯಾಂಕ್

ಲೆಕ್ಕಪರಿಶೋಧಕರು : **ಮೆ।। ಬಿಎಸ್‌ಡಿ ಅಂಡ್ ಕೋ**, ಚಾರ್ಟರ್ಡ್ ಅಕೌಂಟೆಂಟ್ಸ್

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಂ ರಸ್ತೆ,
ಬೆಂಗಳೂರು - 560 052.

CIN: U85110KA1966SGC001612

ಸೂಚನೆ

ಈ ಮೂಲಕ **ಸೂಚಿಸುವುದೇನೆಂದರೆ,** ಅಲ್ಪಕಾಲಿನ ಸೂಚನೆ ಮೇರೆಗೆ ಈ ಕೆಳಕಂಡ ಕಲಾಪಗಳನ್ನು ನಡೆಸಲು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರ ಐವತ್ತ ಏಳನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ:29ನೇ ಡಿಸೆಂಬರ್, 2023ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಇನ್‌ವೆಸ್ಟ್ ಕರ್ನಾಟಕ ಫೋರಂ ಸಭಾ ಭವನ, ಖನಿಜ ಭವನ, 3ನೇ ಮಹಡಿ, ಈಸ್ಟ್‌ವಿಂಗ್, ನಂ.49, ಆರ್.ಸಿ.ರಸ್ತೆ, ಬೆಂಗಳೂರು-560 001 ಇಲ್ಲಿ ನಡೆಸಲಾಗುವುದು.

ಸಾಮಾನ್ಯ ಕಲಾಪಗಳು:

ಐಟಂ ಸಂ.1 - ಹಣಕಾಸಿನ ಹೇಳಿಕೆಗಳ ಅಳವಡಿಕೆ:

ದಿನಾಂಕ:31ನೇ ಮಾರ್ಚ್ 2023ರಂದು ಕೊನೆಗೊಂಡ ವರ್ಷದ ಕಂಪನಿಯ ಹಣಕಾಸಿನ ಹೇಳಿಕೆಗಳು (ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಸೇರಿದಂತೆ) ಮತ್ತು ನಿರ್ದೇಶಕರ ಮಂಡಳಿಯ ವರದಿಗಳು ಹಾಗೂ ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಜೊತೆಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(6)ರ ಅನ್ವಯ ಭಾರತದ ಮಹಾಲೆಕ್ಕಪರಿಶೋಧಕರಿಂದ ಬಂದಿರುವ ಟೀಕೆ ಟಿಪ್ಪಣಿಗಳನ್ನು ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.

ಐಟಂ ಸಂ: 2 - ಈಕ್ವಿಟಿ ಷೇರುಗಳ ಮೇಲೆ ಲಾಭಾಂಶ ಘೋಷಣೆ:

ದಿನಾಂಕ:31ನೇ ಮಾರ್ಚ್, 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಈಕ್ವಿಟಿ ಷೇರು ಒಂದಕ್ಕೆ ರೂ.42.77ರ ಲಾಭಾಂಶ ಘೋಷಣೆ ಮಾಡುವುದು.

ಐಟಂ ಸಂ:3 - ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು (ಸಿ ಅಂಡ್ ಎಜಿ) ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ದಿನಾಂಕ:31ನೇ ಮಾರ್ಚ್ 2024ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಪಾವತಿ ಮಾಡಬೇಕಿರುವ ಸಂಭಾವನೆ ನಿಗದಿಯನ್ನು ಪರಿಗಣಿಸುವುದು ಮತ್ತು ಕೆಳಕಂಡ ನಿರ್ಣಯವನ್ನು ಸೂಕ್ತವೆಂದು ಕಂಡುಬಂದರೆ ಮಾರ್ಪಾಡು(ಗಳು) ಇಲ್ಲದೆ ಅಥವಾ ಮಾರ್ಪಾಡು(ಗಳ) ಜೊತೆಗೆ ಸಾಮಾನ್ಯ ನಿರ್ಣಯವಾಗಿ ಅಂಗೀಕರಿಸುವುದು:-

''ನಿರ್ಣಯಿಸುವುದೇನೆಂದರೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 139(5)ರ ಉಪಬಂಧಗಳ ಅನ್ವಯ, ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಹಣಕಾಸಿನ ವರ್ಷ 2023-2024ಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಮೆ|| ಸೋರಬ್ ಇಂಜಿನೀರ್ ಅಂಡ್ ಕಂ, (ಬಿಓ0036) ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ವಾರ್ಷಿಕ ಮಹಾಸಭೆ (ಎಜಿಎಂ) ಸಮಾಪ್ತಿಯಾದ ಸಮಯದಿಂದ ಮುಂದಿನ ಎಜಿಎಂ ಮುಕ್ತಾಯವಾಗುವ ಸಮಯದವರೆಗೆ ಅಧಿಕಾರ ಹೊಂದಿರುವಂತೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವುದನ್ನು ಈ ಮೂಲಕ ಗಮನಿಸಲಾಗಿದೆ ಮತ್ತು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರ ಸಂಭಾವನೆ ನಿಗದಿ ಮಾಡಲು ಕಂಪನಿಯ ನಿರ್ದೇಶಕರ ಮಂಡಳಿಗೆ ಅಧಿಕಾರ ನೀಡಲಾಗಿದೆ''.

ವಿಶೇಷ ಕಲಾಪ:

ಐಟಂ ಸಂ.4- ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ರೂ.3.00 ಕೋಟಿ ದೇಣಿಗೆ ನೀಡಿಕೆಯ ವಿಚಾರವನ್ನು ಪರಿಗಣಿಸುವುದು, ಅಂಗೀಕರಿಸುವುದು ಮತ್ತು ಅನುಮೋದಿಸುವುದು ಮತ್ತು ಸೂಕ್ತವೆಂದು ಕಂಡು ಬಂದರೆ ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡುಗಳಿಲ್ಲದೆ ಕೆಳಕಂಡ ನಿರ್ಣಯವನ್ನು ಸಾಮಾನ್ಯ ನಿರ್ಣಯವಾಗಿ ಅಂಗೀಕರಿಸುವುದು:

''ನಿರ್ಣಯಿಸುವುದೇನೆಂದರೆ ಕಂಪನಿಗಳ ಕಾಯ್ದೆ, 2013 (''ಕಾಯ್ದೆ'') ರ ಪ್ರಕರಣ 181ರ ಉಪಬಂಧಗಳ ಮತ್ತು ಯಾವುದೇ ಇದ್ದಲ್ಲಿ ಅಂತಹ ಅನ್ವಯವಾಗುವ ಇತರೆ ಉಪಬಂಧಗಳ ಅನ್ವಯ ಜೊತೆಗೆ ಇದರಡಿ ರೂಪಿಸಿರುವ ಅನ್ವಯವಾಗುವ ನಿಯಮಗಳನ್ನು ಓದಿಕೊಂಡಂತೆ ಮತ್ತು ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಿಂದ ಬಂದಿರುವ ಪತ್ರದ ಸಂ: ಸಿಎಂ/1025/(ಪಿ)/ಸಿಎಂಆರ್‌ಎಫ್/2019 ದಿನಾಂಕ:29.08.2022ರ ಅನ್ವಯ ಹಣಕಾಸಿನ ವರ್ಷ 2022-23ರ ಸಾಲಿಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ರೂ.3.00 ಕೋಟಿಗೆ ದೇಣಿಗೆ ನೀಡಿರುವುದಕ್ಕೆ ಸದಸ್ಯರ ಒಪ್ಪಿಗೆಯನ್ನು ಈ ಮೂಲಕ ಪಡೆಯಲಾಗಿದೆ. ಅನುಮೋದಿಸಿದೆ ಮತ್ತು ಅಂಗೀಕರಿಸಲಾಗಿದೆ.

ಮಂಡಳಿಯ ಆದೇಶಾನುಸಾರ
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/-
ಶ್ರೀದೇವಿ. ಬಿ.ಎನ್.
ಕಂಪನಿ ಕಾರ್ಯದರ್ಶಿ

ದಿನಾಂಕ :26.12.2023
ಸ್ಥಳ : ಬೆಂಗಳೂರು

ಟಿಪ್ಪಣಿ

1. ವಾರ್ಷಿಕ ಮಹಾಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಅರ್ಹರಾದ ಸದಸ್ಯನು ಆತನ ಬದಲಾಗಿ ಸಭೆಗೆ ಹಾಜರಾಗಲು ಮತ್ತು ಮತಹಾಕಲುಪ್ರಾಕ್ಸಿಒಬ್ಬರನ್ನುನೇಮಕಮಾಡಲುಅರ್ಹರಾಗಿರುವರು ಮತ್ತು ಪ್ರಾಕ್ಸಿಯು ಕಂಪನಿಯ ಸದಸ್ಯರಾಗಿರಬೇಕಿಲ್ಲ. ಇದರೊಡನೆ ಲಗತ್ತಿಸಿರುವ ಪ್ರಾಕ್ಸಿ ಫಾರಂ ಅನ್ನು ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗಿಂತ ಕಡಿಮೆಯಿಲ್ಲದ ಅವಧಿ ಒಳಗೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸತಕ್ಕದ್ದು.

2. ಸಭೆಗೆ ಹಾಜರಾಗಲು ತಮ್ಮ ಅಧಿಕಾರ ನೀಡಿದ ಪ್ರತಿನಿಧಿಗಳನ್ನು ಕಳುಹಿಸಲು ಅಪೇಕ್ಷಿಸಿರುವ ಕಾರ್ಪೋರೇಟ್ ಸದಸ್ಯರು, ಅವರ ಪರವಾಗಿ ಸಭೆಗೆ ಹಾಜರಾಗಲು ಮತ್ತು ಮತಹಾಕಲು ಅವರ ಪ್ರತಿನಿಧಿಗೆ ಅಧಿಕಾರ ನೀಡಿ ಕಂಪನಿಯ ಮಂಡಳಿ ಮಾಡಿರುವ ನಿರ್ಣಯದ ದೃಢೀಕೃತ ಪ್ರತಿ ಒಂದನ್ನು ಕಳುಹಿಸಬೇಕಾಗಿ ಕೋರಲಾಗಿದೆ.

3. ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಕಂಪನಿಗಳ ಕಾಯ್ದೆ, 2013ರ ಪ್ರಕರಣ 139 (5)ರ ಅನ್ವಯ 2023-24ರ ವರ್ಷಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡಿದ್ದಾರೆ.

4. ಕಂಪನಿಗಳ ಕಾಯ್ದೆ, 2013ರ ಪ್ರಕರಣ 170ರ ಅನ್ವಯ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಮತ್ತು ಅವರು ಹೊಂದಿರುವ ಷೇರುಗಳ ರಿಜಿಸ್ಟರ್ ಅನ್ನು ನಿರ್ವಹಣೆ ಮಾಡಲಾಗಿದೆ. ಅದು ಎಜಿಎಂನಲ್ಲಿ ಸದಸ್ಯರುಗಳ ಪರಿಶೀಲನೆಗೆ ಲಭ್ಯವಿರುವುದಿಲ್ಲ.

5. ಅಲ್ಪಕಾಲಿಕ ಸೂಚನೆಗೆ ಎಲ್ಲಾ ಷೇರುದಾರರುಗಳ ಅನುಮತಿ ಪಡೆಯಲಾಗಿದೆ.

6. ಸದಸ್ಯರು/ಪ್ರಾಕ್ಸಿಗಳು/ಅಧಿಕಾರ ಹೊಂದಿದ ಪ್ರತಿನಿಧಿಗಳು ಸಭೆಗೆ ಹಾಜರಾಗಲು ಇಲ್ಲಿ ಲಗತ್ತಿಸಿರುವ ಹಾಜರಾತಿ ಚೀಟಿಯನ್ನು ಕ್ರಮವಾಗಿ ಭರ್ತಿ ಮಾಡಿ ತರತಕ್ಕದ್ದು.

ಮಂಡಳಿಯ ಆದೇಶಾನುಸಾರ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ

ಸಹಿ/-

ಶ್ರೀದೇವಿ. ಬಿ.ಎನ್.

ಕಂಪನಿ ಕಾರ್ಯದರ್ಶಿ

ದಿನಾಂಕ :26.12.2023

ಸ್ಥಳ : ಬೆಂಗಳೂರು

ಕಂಪನಿಗಳ ಕಾಯ್ದೆ, 2013ರ ಪ್ರಕರಣ 102ರ ಅನ್ವಯ ವಿವರಣಾತ್ಮಕ ಹೇಳಿಕೆ

ಐಟಂ ಸಂ.4

ರಾಜ್ಯದಾದ್ಯಂತ ಇರುವ ಸಮಾಜದ ಆರ್ಥಿಕ ದುರ್ಬಲ ವರ್ಗಗಳಿಗೆ ಸೇರಿದ ಮತ್ತು ಕ್ಯಾನ್ಸರ್, ಹೃದಯ ಮತ್ತು ಮೂತ್ರಪಿಂಡ ಸಮಸ್ಯೆ, ಮಾನಸಿಕ ಕಾಯಿಲೆಗಳಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಿಗೆ ಒಳಗಾಗಿರುವ ಜನರಿಗೆ ಹಣಕಾಸಿನ ನೆರವು ಒದಗಿಸುವ ದೃಷ್ಟಿಯಿಂದ ಸ್ಥಾಪನೆಯಾಗಿರುವ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಹಣ ನೀಡಿಕೆಗಾಗಿ ಕಂಪನಿಯನ್ನು ಕೋರಿ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಿಂದ ಪತ್ರದ ಸಂ.ಸಿಎಂ/1025/(ಪಿ)/ಸಿಎಂಆರ್ ಎಫ್/2019 ದಿನಾಂಕ:29.08.2022ರ ಪತ್ರ ಕಂಪನಿಗೆ ಬಂದಿದೆ. ಈ ಸಂಬಂಧವಾಗಿ, ದಿನಾಂಕ:21ನೇ ಮಾರ್ಚ್ 2023ರ ಮಂಗಳವಾರ ನಡೆದ ತನ್ನ ಸಭೆಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ಸದರಿ ನಿಧಿಗೆ ರೂ.3.00 ಕೋಟಿ ದೇಣಿಗೆ ನೀಡಲು ಅನುಮೋದನೆ ನೀಡಬೇಕೆಂದು ಷೇರುದಾರರುಗಳ ಮುಂದೆ ಪ್ರಸ್ತಾವನೆ ಇಟ್ಟಿತು.

ಕಂಪನಿಗಳ ಕಾಯ್ದೆ, 2013ರ ಪ್ರಕರಣ 181ರ ಉಪಬಂಧಗಳ ಅನುಸಾರ ನೈಜವಾದ ಮತ್ತು ಧರ್ಮಾರ್ಥ ನಿಧಿಗಳಿಗೆ ಕಂಪನಿಯು ಹಣಕಾಸಿನ ವರ್ಷದಲ್ಲಿನೀಡಲಿರುವ ಒಟ್ಟಾರೆ ದೇಣಿಗೆಮೊತ್ತವು ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳ ಸರಾಸರಿ ನಿವ್ವಳ ಲಾಭಗಳ ಶೇಕಡ ಐದರ ಪ್ರಮಾಣಕ್ಕೂ ಹೆಚ್ಚಾಗಿದ್ದ ಪಕ್ಷದಲ್ಲಿ, ಅಂತಹ ಹಣವನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ನೀಡುವ ಮುನ್ನ ಕ್ರಮವಾಗಿ ರೂಪಿಸಲಾದ ಮಹಾಸಭೆಯಲ್ಲಿ ಕಂಪನಿಯ ಸದಸ್ಯರ ಒಪ್ಪಿಗೆ ಪಡೆಯಬೇಕಾಗುತ್ತದೆ.

ಮೇಲೆ ತಿಳಿಸಿರುವ ನಿಯಮವನ್ನು ಪರಿಗಣಿಸಿದಾಗ, ಉದ್ದೇಶಿತ ರೂ.3.00 ಕೋಟಿ ಮೊತ್ತವು ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳ ಸರಾಸರಿ ನಿವ್ವಳ ಲಾಭದ ಶೇಕಡ ಐದರ ಪ್ರಮಾಣಕ್ಕೂ ಹೆಚ್ಚಿರುವುದರಿಂದ, ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಸದರಿ ಮೊತ್ತದ ದೇಣಿಗೆ ನೀಡಿಕೆಗೆ ಸಂಬಂಧಿಸಿದ ವಿಷಯವನ್ನು ಕಂಪನಿಯು ಈ ಮೂಲಕ ಸದಸ್ಯರ ಮುಂದಿರಿಸಿತ್ತು.

ಕಾರ್ಯಸೂಚಿ ಸಂ.4 ರಲ್ಲಿ ತಿಳಿಸಿರುವ ನಿರ್ಣಯವನ್ನು ಸಾಮಾನ್ಯ ನಿರ್ಣಯದ ರೂಪದಲ್ಲಿ ಅಂಗೀಕರಿಸುವಂತೆ ಮಂಡಳಿಯು ಶಿಫಾರಸ್ಸು ಮಾಡಿತು.

ಯಾವುದೇ ಪ್ರವರ್ತಕರು, ನಿರ್ದೇಶಕರು, ವ್ಯವಸ್ಥಾಪಕರು ಮತ್ತು ಪ್ರಮುಖ ವ್ಯವಸ್ಥಾಪನಾ ವ್ಯಕ್ತಿ ಅಥವಾ ಕಂಪನಿಯ ಮೇಲೆ ತಿಳಿಸಿರುವ ವ್ಯಕ್ತಿಯ ಯಾವುದೇ ಸಂಬಂಧಿಕರು, ಅವರು ಯಾವುದೇ ಷೇರುದಾರಿಕೆ ವಿಚಾರದ ಹೊರತಾಗಿ, ಸದರಿ ನಿರ್ಣಯದ ಬಗ್ಗೆ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಕಾಳಜಿ ಅಥವಾ ಆಸಕ್ತಿ ಹೊಂದಿರುವುದಿಲ್ಲ.

ಮಂಡಳಿಯ ಆದೇಶಾನುಸಾರ
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/-
ಶ್ರೀದೇವಿ. ಬಿ.ಎನ್.
ಕಂಪನಿ ಕಾರ್ಯದರ್ಶಿ

ದಿನಾಂಕ :26.12.2023
ಸ್ಥಳ : ಬೆಂಗಳೂರು

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಂ ರಸ್ತೆ,
ಬೆಂಗಳೂರು - 560 052.

CIN: U85110KA1966SGC001612

ಮುಂದೂಡಿದ ವಾರ್ಷಿಕ ಮಹಾಸಭೆಯ ಸೂಚನೆ

ಈ ಮೂಲಕ **ಸೂಚಿಸುವುದೇನೆಂದರೆ** 29ನೇ ಡಿಸೆಂಬರ್, 2023ರಿಂದ ಅನಿರ್ದಿಷ್ಟಕಾಲದವರೆಗೆ ಮುಂದೂಡಿದ್ದ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರ ಐವತ್ತ ಏಳನೇ ವಾರ್ಷಿಕ ಮಹಾಸಭೆಯನ್ನು ಅಲ್ಪಕಾಲಿಕ ಸೂಚನೆ ಮೇರೆಗೆ ಕೆಳಕಂಡ ಕಲಾಪಗಳನ್ನು ನಡೆಸಲು ದಿನಾಂಕ: 2ನೇ ಜವರಿ 2024 ರ ಸೋಮವಾರ ಮಧ್ಯಾಹ್ನ 3.30 ಗಂಟೆಗೆ ಇನ್‌ವೆಸ್ಟ್ ಕರ್ನಾಟಕ ಫೋರಂ ಸಭಾ ಭವನ, ಖನಿಜ ಭವನ, 3ನೇ ಮಹಡಿ, ಪೂರ್ವ ಭಾಗ, ನಂ.49, ಆರ್.ಸಿ.ರಸ್ತೆ, ಬೆಂಗಳೂರು-560 001 ಇಲ್ಲಿ ನಡೆಸಲಾಗುವುದು.

ಸಾಮಾನ್ಯ ಕಲಾಪಗಳು:

ಐಟಂ ನಂ.1 - ಹಣಕಾಸಿನ ಹೇಳಿಕೆಗಳ ಅಳವಡಿಕೆ:

ಕಂಪನಿಯ ದಿನಾಂಕ:31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ಮತ್ತು ಕ್ರೋಡೀಕೃತ ಲೆಕ್ಕಪರಿಶೋಧಿತ ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ನಿರ್ದೇಶಕರ ಮಂಡಳಿ ಮತ್ತು ಲೆಕ್ಕಪರಿಶೋಧಕರ ವರದಿಗಳು ಜೊತೆಗೆ ಕಂಪನಿಗಳು ಕಾಯ್ದೆ, 2013ರ ಪ್ರಕರಣ 143 (1)ರ ಅನ್ವಯ ಭಾರತದ ಮಹಾ ಲೆಕ್ಕಪರಿಶೋಧಕರಿಂದ ಬಂದಿರುವ ಟೀಕೆ ಟಿಪ್ಪಣಿಗಳನ್ನು ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.

ಐಟಂ ನಂ.2: ಈಕ್ವಿಟಿ ಷೇರುಗಳ ಮೇಲೆ ಲಾಭಾಂಶ ಘೋಷಣೆ:

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಈಕ್ವಿಟಿ ಷೇರು ಒಂದಕ್ಕೆ ರೂ.42.77 ರ ಲಾಭಾಂಶ ಘೋಷಿಸುವುದು.

ಮಂಡಳಿಯ ಆದೇಶಾನುಸಾರ
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/-
ಶ್ರೀದೇವಿ. ಬಿ.ಎನ್.
ಕಂಪನಿ ಕಾರ್ಯದರ್ಶಿ

ದಿನಾಂಕ :19.01.2024
ಸ್ಥಳ : ಬೆಂಗಳೂರು

ಮುಂದೂಡಿದ ವಾರ್ಷಿಕ ಮಹಾಸಭೆಯ ಸಂಬಂಧದ ಟಿಪ್ಪಣಿ:

1. ಕಂಪನಿಗಳ ಕಾಯ್ದೆ 2013ರ ಪ್ರಕರಣ 143(6)ರ ಉಪಬಂಧಗಳ ಅನ್ವಯ ಲೆಕ್ಕ ಪರಿಶೋಧಿತ ಸ್ವತಂತ್ರ ಮತ್ತು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿ ಅಂಡ್ ಎಜಿ) ಟೀಕೆ ಟಿಪ್ಪಣಿಗಳನ್ನು ಪಡೆದಿಲ್ಲದ ಪ್ರಯುಕ್ತ ಮೂಲತಃ ದಿನಾಂಕ:29ನೇ ಡಿಸೆಂಬರ್ 2023ರಂದು ನಡೆಸಲು ನಿಗದಿಯಾಗಿದ್ದ 57ನೇ ವಾರ್ಷಿಕ ಮಹಾಸಭೆಯಲ್ಲಿ 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ಮತ್ತು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸದಸ್ಯರು ಪರಿಗಣಿಸಲು ಸಾಧ್ಯವಾಗಿರುವುದಿಲ್ಲ.

   ಸದರಿ ಸಭೆಯಲ್ಲಿ, ಇತರೆ ಎಲ್ಲಾ ಕಾರ್ಯಸೂಚಿ ಐಟಂಗಳನ್ನು ಪರಿಗಣಿಸಿದ ನಂತರ, ಸದಸ್ಯರು ಸಿ ಅಂಡ್ ಎಜಿಯವರ ಟೀಕೆ ಟಿಪ್ಪಣಿಗಳನ್ನು ಪಡೆದ ನಂತರ ಸಭೆಯನ್ನು ನಡೆಸುವುದೆಂದು ಸಭೆಯನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡಲು ನಿರ್ಣಯಿಸಿದರು.

   ಸ್ವತಂತ್ರ ಮತ್ತು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ಸಿ ಅಂಡ್ ಎಜಿಯವರಿಂದ 'ಶೂನ್ಯ' ಟೀಕೆ ಟಿಪ್ಪಣಿ ಬಂದಿದ್ದು, ಅದರ ಪ್ರತಿಯನ್ನು ಇದರೊಡನೆ ಲಗತ್ತಿಸಿದೆ. ಈಗ (ಜಿ) 31ನೇ ಮಾರ್ಚ್, 2023ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ ಒಳಗೊಂಡಿರುವ ಸ್ವತಂತ್ರ ಮತ್ತು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು, ಲಾಭ ಮತ್ತು ನಷ್ಟದ ವಿವರಣೆ ಮತ್ತು ನಗದು ಹರಿಯುವಿಕೆ ವಿವರಣೆ ಜೊತೆಗೆ ಮಂಡಳಿ ಲೆಕ್ಕಪರಿಶೋಧಕರ ವರದಿ ಮತ್ತು ಇದರ ಬಗ್ಗೆ ಲೆಕ್ಕಪರಿಶೋಧಕರ ಟೀಕೆಗಳು ಹಾಗೂ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆ ಟಿಪ್ಪಣಿಗಳು ಮತ್ತು ಇದಕ್ಕೆ ಆಡಳಿತ ಮಂಡಳಿಯ ಉತ್ತರ ಮತ್ತು (ಜಿಜಿ) ಈಕ್ವಿಟಿ ಷೇರುಗಳ ಬಗ್ಗೆ ಲಾಭಾಂಶ ಘೋಷಣೆಯ ಕಾರ್ಯಸೂಚಿ ಐಟಂ ಅನ್ನು ಪರಿಗಣಿಸಲು ಮುಂದೂಡಲಾಗಿದ್ದ 57ನೇ ವಾರ್ಷಿಕ ಮಹಾಸಭೆಯನ್ನು ಪುನರ್ ಏರ್ಪಡಿಸಿದೆ.

   ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರುಗಳ ಮುಂದಿಡಬೇಕಾಗಿರುವ ಸ್ವತಂತ್ರ ಮತ್ತು ಕ್ರೋಡೀಕೃತ ಹಣಕಾಸಿನ ಹೇಳಿಕೆ ಮತ್ತು ಇತರೆ ಶಾಸನಬದ್ಧ ಅನುಬಂಧವನ್ನು ಒಳಗೊಂಡ ವರ್ಷದ ವಾರ್ಷಿಕ ವರದಿಯನ್ನು ಸದಸ್ಯರುಗಳಿಗೆ ಮತ್ತು ಅರ್ಹತೆ ಹೊಂದಿರುವ ಇತರರುಗಳಿಗೆ ತಲುಪುವಂತೆ ಕಳುಹಿಸಲಾಗಿದೆ.

ಮಂಡಳಿಯ ಆದೇಶದ ಮೇರೆಗೆ
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/-
ಶ್ರೀದೇವಿ. ಬಿ.ಎನ್.
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ :19.01.2024

ಇತರೆ ಸೂಚನೆಗಳು

1. ವಾರ್ಷಿಕ ಮಹಾಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಅರ್ಹರಾದ ಸದಸ್ಯನು, ತನ್ನ ಬದಲಾಗಿ ಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಪ್ರಾಕ್ಸಿ ಒಬ್ಬರನ್ನು ನೇಮಕ ಮಾಡಲು ಅರ್ಹರಾಗಿರುವರು. ಪ್ರಾಕ್ಸಿಯು ಕಂಪನಿಯ ಸದಸ್ಯರಾಗಿರಬೇಕಿಲ್ಲ. ಇದರೊಡನೆ ಲಗತ್ತಿಸಿರುವ ಪ್ರಾಕ್ಸಿ ಫಾರಂ ಅನ್ನು ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳ ಮುಂಚೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸಬೇಕು.

2. ಕಾರ್ಪೋರೇಟ್ ಸದಸ್ಯರು ಸಭೆಗೆ ಹಾಜರಾಗುವಂತೆ ತಮ್ಮ ಅಧಿಕೃತ ಪ್ರತಿನಿಧಿಯನ್ನು ಕಳುಹಿಸಲಿಚ್ಛಿಸಿದಲ್ಲಿ ದಯವಿಟ್ಟು ಅಂತಹ ಸದಸ್ಯರು ಕಂಪನಿಯ ನಿರ್ದೇಶಕರ ಮಂಡಳಿಯ ದೃಢೀಕೃತ ನಿರ್ಣಯದ ಪ್ರತಿಯೊಂದಿಗೆ ಕಳುಹಿಸಿ ಸಭೆಗೆ ಹಾಜರಾಗಲು ಮತ್ತು ಅವರ ಪರವಾಗಿ ಮತ ಹಾಕಲು ತಮ್ಮ ಪ್ರತಿನಿಧಿಗೆ ಅಧಿಕಾರ ನೀಡಬೇಕಾಗಿ ಕೋರಿದೆ.

3. ಕಂಪನಿಗಳ ಕಾಯ್ದೆ-2013ರ ಸೆಕ್ಷನ್ 170ರಡಿ ನಿರ್ವಹಿಸಲಾಗಿರುವ ನಿರ್ದೇಶಕರುಗಳ ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯ ಹಾಗೂ ಅವರ ಷೇರುಗಳ ರಿಜಿಸ್ಟರ್ ಅನ್ನು ಮಂಡಳಿಯ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಸದಸ್ಯರ ಪರಿಶೀಲನೆಗಾಗಿ ಲಭ್ಯಗೊಳಿಸಲಾಗುವುದು.

4. ಅಲ್ಪಕಾಲಿಕ ಸೂಚನೆಗೆ ಎಲ್ಲಾ ಷೇರುದಾರರುಗಳ ಒಪ್ಪಿಗೆ ಪಡೆಯಲಾಗಿದೆ.

5. ಸದಸ್ಯರು /ಪ್ರಾಕ್ಸಿಗಳು/ಅಧಿಕಾರ ನೀಡಲ್ಪಟ್ಟ ಪ್ರತಿನಿಧಿಗಳು ಸಭೆಗೆ ಹಾಜರಾಗಲು ಇದರೊಡನೆ ಲಗತ್ತಿಸಿರುವ ಹಾಜರಾತಿ ಪಟ್ಟಿಯನ್ನು ಕ್ರಮವಾಗಿ ಭರ್ತಿ ಮಾಡಿ ತರತಕ್ಕದ್ದು.

ಮಂಡಳಿಯ ಆದೇಶದ ಮೇರೆಗೆ
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ
ಸಹಿ/-
ಶ್ರೀದೇವಿ. ಬಿ.ಎನ್.
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ :19.01.2024

ಸಂಸ್ಥೆಯ ಕುರಿತು

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಇದು ಎಂಎಸ್‌ಐಎಲ್ ಎಂದೇ ಜನಪ್ರಿಯವಾಗಿದೆ. ಈ ಕಂಪನಿಯು ಒಂದು ಮಾರುಕಟ್ಟೆ ಸಂಸ್ಥೆಯಾಗಿ ತನ್ನ ಛಾಪನ್ನು ಮೂಡಿಸಿದೆ. ಕರ್ನಾಟಕದ ಮಾರುಕಟ್ಟೆ ಅವಶ್ಯಕತೆಗಳನ್ನು ಈಡೇರಿಸುವುದಕ್ಕಾಗಿ 1966ರಲ್ಲಿ ಸ್ಥಾಪನೆಯಾಗಿದೆ. ಈ ಕಂಪನಿಯು ಸ್ಥಾಪನೆಯಾದ ದಿನದಿಂದಲೂ ಬಲಯುತವಾಗಿ ಬೆಳೆದಿದೆ. ರಾಷ್ಟ್ರೀಯ ಮಟ್ಟದಲ್ಲಿ ಕಂಪನಿಯು ತನ್ನ ಅಸ್ತಿತ್ವವನ್ನು ಮೂಡಿಸುವುದಲ್ಲದೇ, ಅಂತರರಾಷ್ಟ್ರೀಯವಾಗಿಯೂ ಹೆಸರು ಮಾಡಿರುವ ಕ್ರಿಯಾಶೀಲ ಮಾರುಕಟ್ಟೆ ಶಕ್ತಿಯಾಗಿ ರೂಪುಗೊಳ್ಳಲು ಕಂಪನಿಯು ಚಿಂತನೆಯ ಪಥದಲ್ಲಿ ಸಾಗಿದೆ.

ವ್ಯವಹಾರ ಚಾತುರ್ಯತೆ, ವ್ಯಾಪಾರದ ಅನುಭವ, ಆಡಳಿತ ಪರಿಣಾಮಕತೆ ಮತ್ತು ವಿಶ್ವಾಸಾರ್ಹತೆ ಇವು ಸದರಿ ಮಾರುಕಟ್ಟೆ ದಿಗ್ಗಜ ಕಂಪನಿಯ ಕೆಲವು ವೈಶಿಷ್ಟ್ಯ ಗುರುತುಗಳಾಗಿವೆ. ನವೀನ ಮಾರುಕಟ್ಟೆ ಉಪಾಯಗಳ ಮೂಲಕ ವೈವಿಧ್ಯ ಶ್ರೇಣಿಯ ಉತ್ಪನ್ನಗಳು ಮತ್ತು ಸೇವೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಇದರ ಸಾಮರ್ಥ್ಯವು, ತನ್ನ ಯಶಸ್ಸಿನ ಗುಟ್ಟಾಗಿದೆ. ಯಾವುದೇ ವ್ಯವಹಾರವಾದರೂ ಅದರ ಪ್ರಮುಖ ಪ್ರವರ್ತಕರು ಜನರು ಎಂಬುದನ್ನು ಮನಗಂಡಿರುವ ಎಂಎಸ್‌ಐಎಲ್ ತನ್ನ ಆಲೋಚನಾ ಪರಿಧಿಯಲ್ಲಿ ಹಾಗೂ ಆಡಳಿತದ ಸ್ವರೂಪದಲ್ಲಿ ಉದಾರ ಮನೋಭಾವನೆಯನ್ನು ಬೆಳೆಸಿಕೊಂಡಿದೆ.

ಇದರಿಂದಾಗಿ ಮತ್ತು ನವೀನ ಕಾರ್ಯಶೈಲಿಯಿಂದ ಹೊಸದಾಗಿ ಎದುರಾಗುವ ಸವಾಲುಗಳನ್ನು ಎದುರಿಸಲು ಸಹಕಾರಿಯಾಗಿದೆ. ಇದಲ್ಲದೆ ಬದಲಾಗುತ್ತಿರುವ ಅಭಿರುಚಿಗಳು ಮತ್ತು ಮೌಲ್ಯಗಳಿಗೆ ಅನುರೂಪವಾಗಿ ಸದಾ ತನ್ನ ನಡೆಯನ್ನು ರೂಪಿಸಿಕೊಂಡು ಸ್ಥಿರವಾಗಿ ನೆಲೆ ನಿಂತಿದೆ.

ಎಂಎಸ್‌ಐಎಲ್ ಕಂಪನಿಯು ಬಹು ವಿಭಾಗೀಯ ಮಾರುಕಟ್ಟೆ ಸಂಸ್ಥೆಯಾಗಿರುವುದು. ಪ್ರಸ್ತುತದಲ್ಲಿ ಕಂಪನಿಯ ಪ್ರಮುಖ ವ್ಯವಹಾರವು ಕರ್ನಾಟಕ ರಾಜ್ಯದಲ್ಲಿ ಚಿಲ್ಲರೆ ಮದ್ಯ ಮಾರಾಟ ಕಾರ್ಯಾಚರಣೆಗಳು, ಚಿಟ್‌ಫಂಡ್ ವ್ಯವಹಾರ ಮತ್ತು ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಯಾಗಿದೆ. ಕಂಪನಿಯು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಶಾಖೆಗಳ ಕಾರ್ಯಜಾಲ ಬಂಧವನ್ನು ಹೊಂದಿದೆ ಮತ್ತು ಕರ್ನಾಟಕದ ಹೊರಗೆ ನವದೆಹಲಿ ಮತ್ತು ಮುಂಬಯಿಯಲ್ಲೂ ಎರಡು ಶಾಖೆಗಳನ್ನು ಹೊಂದಿದೆ. ಕಂಪನಿಯು ಹಿಂದಿನ ವರ್ಷದಲ್ಲಿ ರೂ.2899.47 ಕೋಟಿಗಳ ವಹಿವಾಟು ಹೊಂದಿದ್ದರೆ, ಪ್ರಸಕ್ತ ವರ್ಷದ ಅವಧಿಯಲ್ಲಿ ರೂ.3179.78 ಕೋಟಿಗಳ ವಹಿವಾಟು ಸಾಧಿಸುವ ಸನಿಹದಲ್ಲಿದೆ. ಇದರಿಂದ 10% ಪ್ರಗತಿ ಕಂಡು ಬಂದಂತಾಗಿದೆ.

ವಿಭಾಗಾವಾರು ವಹಿವಾಟು ಈ ಕೆಳಕಂಡಂತಿರುವುದು:- **(ರೂ.ಲಕ್ಷಗಳಲ್ಲಿ)**

ಕ್ರ.ಸಂ.	ವಿಭಾಗಗಳು	2022-23	2021-22	ಪ್ರಗತಿಯ %
1	ಪಾನೀಯಗಳು	266072.84	239978.17	11
2	ಚಿಟ್‌ಫಂಡ್	36367.61	30552.77	19
3	ಕಾಗದ	9984.71	7986.09	25
4	ಗ್ರಾಹಕ ಉತ್ಪನ್ನಗಳು	659.05	842.49	-
5	ಕೈಗಾರಿಕಾ ಉತ್ಪನ್ನಗಳು	1988.27	9164.03	-
6	ಟೂರ್ಸ್ ಅಂಡ್ ಟ್ರಾವಲ್ಸ್	1464.10	355.04	312
7	ಆಮದಾದ ಮರಳು	-	2.12	-
8	ಫಾರ್ಮಸಿ	1441.75	1066.71	35
		317978.33	**289947.42**	**10**

ನಿರ್ದೇಶಕರ ವರದಿ

ಸದಸ್ಯರಿಗೆ,

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ನಮ್ಮ ವ್ಯವಹಾರ ಮತ್ತು ಕಾರ್ಯಾಚರಣೆಗಳ ಬಗ್ಗೆ ವರದಿ ಮಂಡಿಸಲು ನಾವು ಹರ್ಷಪಡುತ್ತೇವೆ.

1.ಹಣಕಾಸಿನ ಮುಖ್ಯಾಂಶಗಳು:

ಪರಾಮರ್ಶೆಯಲ್ಲಿರುವ ವರ್ಷದ ಅವಧಿಯಲ್ಲಿನ ನಿಮ್ಮ ಕಂಪನಿಯ ಕಾರ್ಯ ಸಾಧನೆ ಕೆಳಕಂಡಂತಿರುವುದು:

(ರೂ. ಲಕ್ಷಗಳಲ್ಲಿ)

ವಿವರಗಳು	2022-23	2021-22
ವಹಿವಾಟು	317978.33	289947.42
ಬಡ್ಡಿ, ಸವಕಳಿ ಹಾಗೂ ತೆರಿಗೆಗಳ ಮುಂಚಿನ ಲಾಭ/ನಷ್ಟ	9915.52	10586.71
ಬಡ್ಡಿ	4.62	39.23
ಸವಕಳಿ	1243.47	1062.92
ಸವಕಳಿ-ಆರ್ ಒಯು	590.97	698.99
ತೆರಿಗೆಗೆ ಮುಂಚಿನ ಲಾಭ/(ನಷ್ಟ)	8076.46	8785.56
ತೆರಿಗೆಗೆ ಏರ್ಪಾಡು - ಚಾಲ್ತಿ - ಹಿಂದಿನ ವರ್ಷಗಳಲ್ಲಿ - ಮುಂದೂಡಲಾದುದು	 2019.71 35.28 (65.72)	 1950.00 (308.94)
ತೆರಿಗೆ ನಂತರದ ಲಾಭ/(ನಷ್ಟ)	6087.19	7144.50
ಇತರೆ ಸಮಗ್ರ ಆದಾಯ /(ನಷ್ಟ)	(5.70)	(495.14)
ವರ್ಷದ ನಿವ್ವಳ ಲಾಭ	**6092.89**	**6649.36**
ಲಾಭ ಮತ್ತು ನಷ್ಟದ ಖಾತೆಯಲ್ಲಿನ ಹಿಂದಿನ ವರ್ಷದ ಶಿಲ್ಕು	31122.36	24473.00
ಸ್ಥಿತಿ ವಿವರಣಾ ಪಟ್ಟಿಗೆ ಮುಂದುವರಿಸಿದ ಶಿಲ್ಕು	**37215.25**	**31122.36**

ಕಂಪನಿಯ ವಿವಿಧ ವಿಭಾಗಗಳ ಮಾರಾಟ ಸಾಧನೆಯನ್ನು ಈ ಕೆಳಗೆ ನಿರೂಪಿಸಿದೆ:

(ರೂ. ಲಕ್ಷಗಳಲ್ಲಿ)

ವಿಭಾಗ	2022-23	2021-22
1. ಪಾನೀಯಗಳ ವಿಭಾಗ	266072.84	239978.17
2. ಚಿಟ್ ಫಂಡ್‌ಗಳು	36367.61	30552.77
3. ಕಾಗದ	9984.71	7986.09
4.ಗ್ರಾಹಕರ ಉತ್ಪನ್ನಗಳು	659.05	842.49
5. ಕೈಗಾರಿಕಾ ಉತ್ಪನ್ನಗಳು	1988.27	9164.03
6. ಪ್ರವಾಸ ಮತ್ತು ಪ್ರಯಾಣ	1464.10	355.04
7. ಬಿಎಸಿಸಿ	-	2.12
8. ಫಾರ್ಮಸಿ	1441.75	1066.71
ಒಟ್ಟು	**317978.33**	**289947.42**

ಕಂಪನಿಯು ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ಇದರ 53% ಈಕ್ವಿಟಿ ಷೇರುಗಳನ್ನು ಕರ್ನಾಟಕದ ರಾಜ್ಯಪಾಲರು ಹೊಂದಿರುವರು ಮತ್ತು 47% ಈಕ್ವಿಟಿ ಷೇರುಗಳನ್ನು ಕೆಎಸ್ಐಐಡಿಸಿ ಮತ್ತು ಇದರ ನಾಮನಿರ್ದೇಶಿತರು ಹೊಂದಿರುವರು.

2. ಕಂಪನಿಯ ವ್ಯವಹಾರಗಳು ಮತ್ತು ಭವಿಷ್ಯದ ಹೊರನೋಟದ ವಿವರ:

(i) **ಪಾನೀಯ ವಿಭಾಗ:** 2009ರ ವರ್ಷದಲ್ಲಿ 463 ಸಿಎಲ್-11(ಸಿ) ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ತೆರೆಯುವ ಜವಾಬ್ದಾರಿಯನ್ನು ಕರ್ನಾಟಕ ಸರ್ಕಾರ ಎಂಎಸ್ಐಎಲ್‌ಗೆ ವಹಿಸಿತ್ತು. ಇದರ ಜೊತೆಗೆ ಕರ್ನಾಟಕ ಸರ್ಕಾರವು 2016ರಲ್ಲಿ ಕರ್ನಾಟಕದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ತೆರೆಯಲು ಎಂಎಸ್ಐಎಲ್‌ಗೆ ಮತ್ತೊಂದು 900 ಸಿಎಲ್-11(ಸಿ) ಪರವಾನಗಿ ಮಂಜೂರು ಮಾಡಿದೆ. ಈ ದಿಸೆಯಲ್ಲಿ ವಿಭಾಗವು ಕರ್ನಾಟಕದಾದ್ಯಂತ ಮಂಜೂರಾದ ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ತೆರೆಯಲು ಅಬಕಾರಿ ಇಲಾಖೆ ಸಹಕಾರದೊಡನೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ.

ಸದರಿ ವಿಭಾಗವು ದಿನಾಂಕ 31ನೇ ಮಾರ್ಚ್ 2023ರಂದು ಇದ್ದಂತೆ 463 ಕೋಟಾದ ಅಡಿಯಲ್ಲಿ 444 ಮತ್ತು 900 ಕೋಟಾದ ಅಡಿಯಲ್ಲಿ 656 ಪರವಾನಗಿಗಳನ್ನು ಪಡೆದಿದೆ. ಕರ್ನಾಟಕದಾದ್ಯಂತ ಒಟ್ಟಾರೆ 1015 ಮಾರಾಟ ಮಳಿಗೆಗಳು ಕಾರ್ಯಾಚರಣೆಯಾಗುತ್ತಿವೆ. ಎಂಎಸ್ಐಎಲ್‌ನ ಮದ್ಯ ಚಿಲ್ಲರೆ ಮಾರಾಟ ಮಳಿಗೆಗಳು ರಾಜ್ಯದ ಎಲ್ಲಾ ಕಡೆಗಳಲ್ಲೂ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹರಡಿಕೊಂಡಿದ್ದು, ಮೊಹರಾದ ಬಾಟೆಲ್‌ಗಳಲ್ಲಿ ಎಂಆರ್‌ಪಿಗೆ ಗುಣಮಟ್ಟದ ಮದ್ಯದ ಮಾರಾಟದ ಬಗ್ಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ದೊರತಿದೆ.

ಪಾನೀಯ ವಿಭಾಗವು ಹಿಂದಿನ ವರ್ಷದಲ್ಲಿನ ರೂ.266072.84 ಲಕ್ಷ ವಹಿವಾಟು ನಡೆಸಿರುವುದಕ್ಕೆ ಹೋಲಿಸಿದರೆ 2022-23ನೇ ಹಣಕಾಸು ವರ್ಷದಲ್ಲಿ ಅಂದಾಜು ಮಾಡಿದ ರೂ.275025.00 ಲಕ್ಷ ವಹಿವಾಟಿಗೆ ಬದಲಾಗಿ ರೂ.239978.17 ಲಕ್ಷ ವಹಿವಾಟನ್ನು ಸಾಧಿಸಿದೆ. ವಿಭಾಗವು ಮುಂದಿನ ದಿನಗಳಲ್ಲಿ 463 ಮತ್ತು 900 ಹಂಚಿಕೆಯಾಗಿರುವ ಕೋಟಾದ ಅಡಿಯಲ್ಲಿ ಉಳಿಕೆ ಮಾರಾಟ ಮಳಿಗೆಗಳನ್ನು ಆದಷ್ಟು ಬೇಗ ತೆರೆಯಲು ಸತತ ಪರಿಶ್ರಮ ಮತ್ತು ಪ್ರಯತ್ನ ನಡೆಸುತ್ತಿದೆ.

(ii) **ಚಿಟ್ ಫಂಡ್ಸ್ ವಿಭಾಗ:** ಈ ವಿಭಾಗವು ಹಿಂದಿನ ವರ್ಷ 2021-22ರಲ್ಲಿ ರೂ.30552.77 ಲಕ್ಷಗಳ ವಹಿವಾಟು ನಡೆಸಿದ್ದರೆ, ಹಿಂದಿನ ವರ್ಷ 2022-23ರಲ್ಲಿ ರೂ.36367.61 ಲಕ್ಷಗಳ ವಹಿವಾಟನ್ನು ನಡೆಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ವಹಿವಾಟಿನಲ್ಲಿ ಸುಮಾರು ರೂ.5814.83 ಲಕ್ಷ ಮಹತ್ತರ ಹೆಚ್ಚಳ ಉಂಟಾಗಿದೆ. ಪ್ರಸಕ್ತ ಅವಧಿಯಲ್ಲಿ 19.03% ಹೆಚ್ಚಳವಾಗಿದೆ.

ಚಿಟ್‌ಫಂಡ್ ವಿಭಾಗವು ಅದರ ವ್ಯವಹಾರ ಪ್ರಾರಂಭದ ಸಮಯದಿಂದ ಲಾಭದ ಜೊತೆಗೆ ಯಶಸ್ವಿಯಾಗಿ ಮುಂದುವರಿಯುತ್ತಿದೆ ಮತ್ತು ಕರ್ನಾಟಕದ ಪ್ರತಿಯೊಂದು ಜಿಲ್ಲೆ, ಪ್ರಮುಖ ಪಟ್ಟಣಗಳು ಮತ್ತು ತಾಲ್ಲೂಕುಗಳಲ್ಲಿ ಹೊಸ ಶಾಖೆಗಳನ್ನು ತೆರೆಯುವ ಮೂಲಕ ಚಿಟ್‌ಫಂಡ್ ವ್ಯವಹಾರವನ್ನು ಅಭಿವೃದ್ಧಿ ಮಾಡಲು ಮಹತ್ವಾಕಾಂಕ್ಷೆಯ ಕ್ರಿಯಾ ಯೋಜನೆ ಒಂದನ್ನು ಹೊಂದಿದೆ. ಪೂರ್ವಭಾವಿ ಕ್ರಮವಾಗಿ, ಕಂಪನಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಖಾಯಂ ಸಿಬ್ಬಂದಿ ನೇಮಕ ಮಾಡಲು ಕ್ರಮ ಕೈಗೊಂಡಿದೆ.

ವ್ಯವಹಾರವನ್ನು ಗರಿಷ್ಠ ಮಟ್ಟದಲ್ಲಿ ನಡೆಸುವುದಕ್ಕಾಗಿ ಸಮಕಾಲೀನ ರುಜುವಾತಿನ ಮತ್ತು ಬಳಕೆದಾರ ಸ್ನೇಹಿ ವ್ಯವಸ್ಥೆ ತಂತ್ರಾಂಶ ಅಳವಡಿಸಲು ಚಿಟ್‌ಫಂಡ್ ವಿಭಾಗವು ಕ್ರಮಗಳನ್ನು ಕೈಗೊಂಡಿದೆ.

(iii) **ಕಾಗದ ಮತ್ತು ಲೇಖನ ಸಾಮಗ್ರಿ ವಿಭಾಗ:** ಕಾಗದ ಮತ್ತು ಲೇಖನ ಸಾಮಗ್ರಿ ವಿಭಾಗವು ರೂ.8100.25 ಲಕ್ಷಗಳ ಗೊತ್ತುಪಡಿಸಿದ ವಹಿವಾಟಿಗೆ ಎದುರಾಗಿ, ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ರೂ.9984.71ಲಕ್ಷದ ವಹಿವಾಟು ಸಾಧಿಸಿದೆ. ತನ್ಮೂಲಕ ಈ ವಿಭಾಗವು ಸುಮಾರು 23% ಪ್ರಗತಿ ದಾಖಲಿಸಿದೆ.

ಪ್ರಸ್ತುತದಲ್ಲಿ ವಿಭಾಗದ ವಹಿವಾಟು ಪ್ರಧಾನವಾಗಿ ಸರ್ಕಾರದ ವಲಯದ ಮೇಲೆ ಒಳಪಟ್ಟಿದೆ. ಇದರಲ್ಲಿ ಖಾಸಗಿ ಮಾರುಕಟ್ಟೆಯ ಕೊಡುಗೆ ಅತ್ಯಲ್ಪವಾಗಿದೆ. ಹಲವು ವರ್ಷಗಳಲ್ಲಿ ಸಾಕಷ್ಟು ಪೂರ್ಣ ಪ್ರಮಾಣದ ಸಿಬ್ಬಂದಿ ಇಲ್ಲದ ಪ್ರಯುಕ್ತ ಖಾಸಗಿ ಮಾರುಕಟ್ಟೆಯಲ್ಲಿನ ನಮ್ಮ ಪಾಲು ಕನಿಷ್ಠ ಪ್ರಮಾಣಕ್ಕೆ ಕುಸಿದಿದೆ. ಎಲ್ಲಾ ಅಡಚಣೆಗಳ ನಡುವೆಯೇ, ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ವ್ಯಾಪಾರ ಸಹವರ್ತಿಗಳ ಸೇವೆಗಳನ್ನು ಉಪಯೋಗಿಸುವ ಮೂಲಕ ವಿಭಾಗವು ವಹಿವಾಟು ಪ್ರಗತಿಯನ್ನು ದಾಖಲಿಸಿದೆ. ಇದೊಂದು ಪ್ರೋತ್ಸಾಹಕಾರಿ ಸೂಚಕವಾಗಿದೆ. ಸರ್ಕಾರದ ಅನೇಕ ಇಲಾಖೆಗಳು ಈ ವ್ಯವಹಾರದಲ್ಲಿ ಒಳಪಟ್ಟಿಲ್ಲದಿರುವುದರಿಂದ ಸರ್ಕಾರದ ಎಲ್ಲಾ ಇಲಾಖೆಗಳನ್ನು ಪರಿಣಾಮಕಾರಿಯಾಗಿ ಒಳಪಡಿಸಿಕೊಳ್ಳಲು ಗಮನಹರಿಸಲು ಯೋಜನೆ ಮಾಡುತ್ತಿದೆ. ಇದರ ಜೊತೆಗೆ, ಸೃಜನಾತ್ಮಕ ಪ್ರಚಾರ ಅಭಿಯಾನ ಕೈಗೊಳ್ಳುವ ಮೂಲಕ ಮತ್ತು ಚಾನಲ್ ಪಾಲುದಾರರು/ಫ್ರಾಂಚೈಸಿಗಳನ್ನು ನೇಮಕ ಮಾಡುವ ಮೂಲಕ ಖಾಸಗಿ ಮಾರುಕಟ್ಟೆ ಮತ್ತು ಶಾಲೆಗಳು/ಕಾಲೇಜುಗಳು/ ಶಿಕ್ಷಣ ಸಂಸ್ಥೆಗಳಲ್ಲಿ 'ವಿದ್ಯಾ' ಮತ್ತು 'ಲೇಖಿಕ್' ಬ್ರಾಂಡ್‌ಗಳನ್ನು ಪ್ರವರ್ಧನೆ ಮಾಡಲು ಶ್ರಮಿಸುವುದು.

(iv) **ಗ್ರಾಹಕ ಉತ್ಪನ್ನಗಳ ವಿಭಾಗ:** ಈ ವಿಭಾಗವು 2022-23ರ ವರ್ಷದಲ್ಲಿ ರೂ.659.05ಲಕ್ಷಗಳ ವಹಿವಾಟನ್ನು ಸಾಧಿಸಿದೆ. ವ್ಯವಹಾರವನ್ನು ಪುನಶ್ಚೇತನಗೊಳಿಸುವ ಹಿನ್ನೆಲೆಯಲ್ಲಿ ವಿಭಾಗವು ಪ್ರಸಿದ್ಧ ತಯಾರಕರುಗಳ ಜೊತೆ ಸಹಭಾಗಿತ್ವ ಮಾಡಿಕೊಳ್ಳಲು ತನ್ನ ಉತ್ಪನ್ನ ಶ್ರೇಣಿಗಳನ್ನು ಬಲವರ್ಧನೆಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಈ ವಿಭಾಗವು ಹಣಕಾಸಿನ ವರ್ಷ 2022-23ರಲ್ಲಿ ಹಲವಾರು ಉತ್ಪನ್ನಗಳನ್ನು ಮಾರಾಟ ಮಾಡಿದೆ. ಈ ಉತ್ಪನ್ನಗಳು ಕೃಷಿ ಆಧಾರಿತ ಉತ್ಪನ್ನಗಳಾಗಿವೆ. ಮೆಟಲ್ ಸಜೆಷನ್ ಬಾಕ್ಸ್, ಟೋಟಲ್ ಡಿಟರ್ಜೆಂಟ್ ಬಾರ್ ಇತ್ಯಾದಿಗಳೂ ಈ ಉತ್ಪನ್ನ ಶ್ರೇಣಿಯಲ್ಲಿ ಸೇರಿವೆ. ಸ್ಯಾಂಡಲ್‌ವುಡ್ ಆಯಿಲ್ ಮತ್ತು ಸಂಬಂಧಪಟ್ಟ ಉತ್ಪನ್ನಗಳ ಸರಬರಾಜುದಾರರ ಜೊತೆ ಹೊಂದಾಣಿಕೆಯನ್ನು ಅಂತಿಮಗೊಳಿಸುವ ಕ್ರಿಯೆಯಲ್ಲಿದೆ.

ಈ ವಿಭಾಗವು ರೂ.2 ಕೋಟಿ ಮೊತ್ತದ ಅಡಿಕೆ ಸರಬರಾಜಿಗಾಗಿ ಡಿ.ಎಸ್.ಗ್ರೂಪ್‌ನಿಂದ ಆದೇಶ ಪಡೆದಿದೆ. ಈ ಕಾರ್ಯವು ಪ್ರಕ್ರಿಯೆಯಲ್ಲಿದೆ.

ಈ ವಿಭಾಗವು ವಿದ್ಯುತ್ ಸ್ಕೂಟರ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳು, ಎ4 ಕಾಪಿಯರ್ ಷೀಟ್‌ಗಳು, ಶಿಥಿಲಗೊಳ್ಳುವ ಜೈವಿಕ ಉತ್ಪನ್ನಗಳು ಆದ ಕೈಗವಸುಗಳು, ಟ್ಯಾಶ್ ಬ್ಯಾಗ್‌ಗಳು ಇತ್ಯಾದಿ ಮಾರಾಟ ಮಾಡುವ ಸಾಧ್ಯತೆಯ ಬಗ್ಗೆ ಚಿಂತಿಸುತ್ತಿದೆ.

(v) **ಕೈಗಾರಿಕಾ ಉತ್ಪನ್ನಗಳ ವಿಭಾಗ:** ಈ ವಿಭಾಗವು ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ರೂ.1988.27 ಲಕ್ಷಗಳ ವಹಿವಾಟು ಸಾಧಿಸಿದೆ. ರೂ.9300.00 ಲಕ್ಷಗಳ ಗುರಿ ನಿಗದಿಪಡಿಸಿದ್ದ ವಹಿವಾಟಿನ ಸಂಬಂಧ ಈ ಸಾಧನೆ ಮಾಡಿದೆ. ವಿಭಾಗವು ಕೆಟಿಪಿಪಿ ಕಾಯ್ದೆಯ ಪ್ರಕರಣ 4(ಜಿ) ಅನ್ವಯ ಮಂಜೂರಾಗಿರುವ ವಿನಾಯ್ತಿ ಮೂಲಕ, ಸರ್ಕಾರದ ಇಲಾಖೆಗಳಿಗೆ ಸೋಲಾರ್ ಉತ್ಪನ್ನಗಳನ್ನು ಮಾರಾಟ ಮಾಡುವ ಬಗ್ಗೆ ಪ್ರಮುಖವಾಗಿ ಗಮನಹರಿಸಿದೆ. ಸದರಿ ವಿನಾಯ್ತಿಯು ಡಿಸೆಂಬರ್ 2022ರಲ್ಲಿ ಮುಕ್ತಾಯವಾದ ನಂತರ ನವೀಕರಣ ಮಾಡದಿರುವುದರಿಂದ, ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ವಹಿವಾಟು ಕಡಿಮೆಯಾಗಿದೆ. ಇದರಿಂದಾಗಿ ವಿಭಾಗವು ಹಣಕಾಸಿನ ವರ್ಷದ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಯಾವುದೇ ವ್ಯವಹಾರ ನಡೆಸಲು ಸಾಧ್ಯವಾಗಿರುವುದಿಲ್ಲ. ಮುಂಬರುವ ದಿನಗಳಲ್ಲಿ ಗುರಿ ನಿಗದಿಪಡಿಸಿದ ವ್ಯವಹಾರ ಸಾಧಿಸಲು ನೆರವಾಗುವ ನಿರೀಕ್ಷೆಯಿರುವ ಉತ್ಪನ್ನ ಶ್ರೇಣಿಯನ್ನು ಬಲವರ್ಧನೆಗೊಳಿಸುವ ಮೂಲಕ ಚಟುವಟಿಕೆಗಳನ್ನು ವೈವಿಧ್ಯತೆಗೊಳಿಸುವ ಯೋಜನೆ ಇರುವುದು.

(vi) **ಟೂರ್ಸ್ ಮತ್ತು ಟ್ರಾವೆಲ್ಸ್ ವಿಭಾಗ:** ಇದು ಐಎಟಿಎ ಮಾನ್ಯತೆ ಪಡೆದ ಟ್ರಾವೆಲ್ ಏಜೆನ್ಸಿಯಾಗಿರುವುದು. (ಐಎಟಿಎ ನಂ.1435229). 2022-23ರ ಅವಧಿಯಲ್ಲಿ ಈ ವಿಭಾಗವು ರೂ.1464.10 ಲಕ್ಷಗಳ ವಹಿವಾಟು ಸಾಧಿಸಿದೆ. ಇದು ಹಿಂದಿನ ವರ್ಷ 2021-22ರ ಅವಧಿಯಲ್ಲಿ 355.04 ಲಕ್ಷ ವಹಿವಾಟು ನಡೆಸಿದ್ದಿತು. ಕೇಂದ್ರ ಸರ್ಕಾರದ ಸಂಸ್ಥೆಗಳಾದ ಇಂಡಿಯನ್ ಕೌನ್ಸಿಲ್ ಆಫ್ ಕಲ್ಚರಲ್ ರಿಲೇಶನ್ಸ್ (ಐಸಿಸಿಆರ್) ಮತ್ತು ಇನ್‌ಸ್ಟಿಟ್ಯೂಟ್ ಆಫ್ ಸೆಕ್ರೆಟೆರಿಯೇಟ್ ಟ್ರೈನಿಂಗ್ ಅಂಡ್ ಮ್ಯಾನೇಜ್‌ಮೆಂಟ್ (ಐಎಸ್‌ಟಿಎಂ) ಇವರು ನಮ್ಮ ಖಾಯಂ ಗ್ರಾಹಕರಾಗಿರುವರು ಮತ್ತು ಅಲ್ಲಿರುವ ಅಧಿಕಾರಿಗಳಿಗೆ ಎಂಎಸ್‌ಐಎಲ್ ಟಿ ಅಂಡ್ ಟಿ ಮೂಲಕ ಪ್ಯಾಕೇಜ್

ಟೂರ್ ಬುಕ್ಕಿಂಗ್ ಮಾಡುತ್ತಿರುವುದು. ಮುಂದುವರಿದು, ಅಧಿಕೃತ ಪ್ರಯಾಣ ಅಗತ್ಯತೆಗಳಿಗೆ ಎಂಎಸ್ಐಎಲ್ ಮೂಲಕ ವಿಮಾನ ಟಿಕೆಟ್ ಖರೀದಿಸುವಂತೆ ಮತ್ತು ಪ್ಯಾಕೇಜ್ ಟೂರ್ ಗಳನ್ನು ಉಪಯೋಗಿಸುವಂತೆ ಕರ್ನಾಟಕ ಸರ್ಕಾರ ಸುತ್ತೋಲೆ ಹೊರಡಿಸಿದೆ. ಇದು ವಿಭಾಗದ ವಹಿವಾಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು. ನಮ್ಮ ಕೆಲವು ಅಮೂಲ್ಯ ಗ್ರಾಹಕರು ಐಎಎಸ್ ಅಧಿಕಾರಿಗಳು, ಪೊಲೀಸ್ ಹೆಚ್ಚುವರಿ ಮಹಾ ನಿರ್ದೇಶಕರು, ಎಡಿಜಿಪಿ-ಗುಪ್ತದಳ, ಬಿಬಿಎಂಪಿ, ಮಕ್ಕಳ ಹಕ್ಕಿನ ಆಯೋಗ, ನಿರ್ದೇಶಕರು, ಹಿಂದುಳಿದ ವರ್ಗಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಡಿಪಿಎಆರ್, ಕರ್ನಾಟಕ ರಾಜ್ಯ ಕಾನೂನು ಸೇವೆ ಪ್ರಾಧಿಕಾರ, ಕೆಎಸ್ಐಐಡಿಸಿ, ಹೈಕೋರ್ಟ್ ನ್ಯಾಯಮೂರ್ತಿಗಳು ಮತ್ತು ಕರ್ನಾಟಕ ಸರ್ಕಾರದ ಇತರೆ ಗಣ್ಯರು ಆಗಿರುವರು.

(vii) **ಕಂತು ಖರೀದಿ (ಹೈರ್ ಪರ್ಚೇಸ್) ವಿಭಾಗ:** ಕಂಪನಿಯು ಹೈರ್ ಪರ್ಚೇಸ್ ಕಾರ್ಯಾಚರಣೆಯನ್ನು 2008-09ರ ಅವಧಿಯಲ್ಲಿ ನಿಲುಗಡೆ ಮಾಡಿದೆ. ಹೈರ್ ಪರ್ಚೇಸ್ ಕಾರ್ಯಾಚರಣೆಯನ್ನು ಮೈಕ್ರೋಸಾಫ್ಟ್ ಆಕ್ಸೆಸ್ ಪ್ರೋಗ್ರಾಂ ಸಾಫ್ಟ್‌ವೇರ್‌ನಲ್ಲಿ ನಡೆಸಲಾಗಿತ್ತು. 2022-23ರ ಅವಧಿಯಲ್ಲಿದ್ದಂತೆ, ಸುಸ್ತಿಯಾಗಿರುವ ಬಾಡಿಗೆದಾರರುಗಳಿಂದ ವಸೂಲಾಗದೆ ಉಳಿದಿರುವ ಬಾಕಿ ಮೊತ್ತ ರೂ.296.76ಲಕ್ಷಗಳನ್ನು ವಸೂಲಿ ಮಾಡಬೇಕಿದೆ. ಹೆಚ್‌ಪಿ ಕಾರ್ಯಾಚರಣೆಗಳಿಗಾಗಿ ನಿಯೋಜಿಸಲಾಗಿದ್ದ ಸಾಫ್ಟ್‌ವೇರ್ ಅಸ್ಥಿರವಾಗಿದೆ ಮತ್ತು ನಿಧಾನವಾಗಿದೆ. ಇದರಿಂದ ವಿಶ್ವಾಸರಹಿತ ಮತ್ತು ಅನುಪಯುಕ್ತವಾಗಿದೆ. ತಮ್ಮ ಬಾಕಿಗಳನ್ನು ಪಾವತಿಸಲು ಸ್ವಯಂ ಪ್ರೇರಣೆಯಿಂದ ಬರುತ್ತಿರುವ ಬಾಡಿಗೆದಾರರು ಕಾಲಾನಂತರ ಕಡಿಮೆಯಾಗಿದ್ದಾರೆ.

ಮೇಲೆ ತಿಳಿಸಿರುವ ಪರಿಸ್ಥಿತಿಯಲ್ಲಿ, 12.10.2022ರಂದು ಕೆಲಸವನ್ನು ವಹಿಸುವ ಮೂಲಕ ''ವಿಶೇಷ ಲೆಕ್ಕಪರಿಶೋಧನೆ'' ಒಂದನ್ನು ನಡೆಸಲಾಗಿದೆ. ಇದರ ಜೊತೆಗೆ 12.09.2023ರಂದು ವಕೀಲರಿಂದ ಕಾನೂನು ಅಭಿಪ್ರಾಯ ಒಂದನ್ನು ಪಡೆಯಲಾಗಿದೆ.

''ಹಣಕಾಸಿನ'' ಮೇಲೆ ಯಾವುದೇ ಪರಿಣಾಮ ಉಂಟಾದ ಪ್ರಯುಕ್ತ ರೂ.296.76ಲಕ್ಷಗಳ ಮೊತ್ತದ ವಸೂಲಾಗದ ಸಾಲಗಳನ್ನು ವಜಾ ಮಾಡುವಂತೆ ''ವಿಶೇಷ ಲೆಕ್ಕ ಪರಿಶೋಧನೆ'' ಶಿಫಾರಸ್ಸು ಮಾಡಿದೆ ಮತ್ತು ತೆರಿಗೆ ಸೌಲಭ್ಯ ಪಡೆಯುವಂತೆ ತಿಳಿಸಿದೆ. ತದನಂತರದ ವರ್ಷಗಳಲ್ಲಿ ಮಾಡಿದ ವಸೂಲಿಗಳನ್ನು ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಿಂದ ಬಂದ ಆದಾಯವೆಂದು ಪರಿಗಣಿಸಬಹುದು. ಇದಕ್ಕೆ ತೆರಿಗೆ ಅನ್ವಯವಾಗುವುದು ಎಂಬುದಾಗಿಯೂ ತಿಳಿಸಿದೆ.

ವಿಭಾಗವು ಈ ಮೊದಲು ಕೂಡ ಇದೇ ನಿಲುವನ್ನು ಸದರಿ ವಿಚಾರದ ಬಗ್ಗೆ ಹೊಂದಿದ್ದಿತು ಮತ್ತು ಮೇಲೆ ತಿಳಿಸಿರುವ ಲೆಕ್ಕಪರಿಶೋಧಕರ ಶಿಫಾರಸ್ಸುಗಳನ್ನು ಅನುಮೋದಿಸಿತ್ತು. ಹೆಚ್‌ಪಿ ವಿಭಾಗದ ರೂ.296.76ಲಕ್ಷಗಳ ಮೊತ್ತದ ವಸೂಲಾಗದ ಸಾಲಗಳನ್ನು ವಜಾ ಮಾಡಲು ಕೋರಿ ಮುಂಬರುವ ಮಂಡಳಿ ಸಭೆಯ ಮುಂದೆ ಈ ವಿಚಾರವನ್ನು ಇಡಲಾಗುವುದು.

(viii) **ಫಾರ್ಮ ವಿಭಾಗ:** ಫಾರ್ಮ ವಿಭಾಗವು 2021-22ರ ಅವಧಿಯಲ್ಲಿ ರೂ.1066.71ಲಕ್ಷಗಳ ವಹಿವಾಟು ನಡೆಸಿರುವುದಕ್ಕೆ ಪ್ರತಿಯಾಗಿ 2022-23ರ ಅವಧಿಯಲ್ಲಿ 1441.75ಲಕ್ಷಗಳ ವಹಿವಾಟು ಸಾಧಿಸಿದೆ. ಈ ವಿಭಾಗವು ಕರ್ನಾಟಕದಾದ್ಯಂತ ಸರ್ಕಾರದ ತಾಲ್ಲೂಕು/ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಧಾನ್ ಮಂತ್ರಿಭಾರತೀಯ ಜನೌಷಧಿ ಕೇಂದ್ರದ ಅಡಿಯಲ್ಲಿ 88 ಮಾರಾಟ ಮಳಿಗೆಗಳನ್ನು ತೆರೆದಿದೆ. ಈ ವಿಭಾಗವು ಕಾರ್ಪೋರೇಟ್ ಕಚೇರಿ, ಬೆಂಗಳೂರು ಇಲ್ಲಿಯೂ ಸಹ ಹೊಸ ಮಾರಾಟ ಮಳಿಗೆ ಒಂದನ್ನು ತೆರೆದಿದೆ. ವಿಭಾಗವು ಫಾರ್ಮಸಿಸ್ಟ್‌ರ ಬಳಕೆಗಾಗಿ ''ಫಾರ್ಮ ಸಾಫ್ಟ್‌ವೇರ್'' ಎಂಬ ಹೊಸ ಸಾಫ್ಟ್‌ವೇರ್ ಒಂದನ್ನು ಅನುಷ್ಠಾನ ಮಾಡಿದೆ. ಎಲ್ಲಾ ಫಾರ್ಮಸಿಸ್ಟ್‌ಗಳು ಫಾರ್ಮ ಸಾಫ್ಟ್‌ವೇರ್ ಬಳಸಿ ಬಿಲ್‌ಗಳನ್ನು ಮಾಡುವರು. ಇದನ್ನು ಕಾರ್ಪೋರೇಟ್ ಕಚೇರಿಯಲ್ಲಿಯೂ ಸಹ ನೋಡಬಹುದಾಗಿದೆ. ಸದರಿ ಸಾಫ್ಟ್‌ವೇರ್ ಬಳಸಿ ಮಾರಾಟದ ಇಂಡೆಂಟ್‌ಗಳನ್ನು ಜನರೇಟ್ ಮಾಡಲಾಗುತ್ತದೆ. ಈ ಸಾಫ್ಟ್‌ವೇರ್ ನಲ್ಲಿ ಮಳಿಗೆವಾರು ಮತ್ತು ದಿನಾಂಕವಾರು ಇನ್‌ವೆಂಟರಿ ಸ್ಥಿತಿಗತಿ ಲಭ್ಯವಾಗುವುದು.

(ix) **ಆಮದಾದ ಮರಳು:** ನೈಸರ್ಗಿಕ ನದಿ ಮರಳಿನ ಆಮದು ಮತ್ತು ನೈಸರ್ಗಿಕ ನದಿ ಮರಳಿನ ವ್ಯಾಪಾರದ ವ್ಯವಹಾರದಲ್ಲಿ ಕಂಪನಿ 2017-18 ರಿಂದ 2019-20 ರವರೆಗಿನ ಅವಧಿಯಲ್ಲಿ 14,759 ಎಂಟಿಗಳ ಪ್ರಮಾಣದ ಮರಳನ್ನು ಮಾರಾಟ ಮಾಡಿದ್ದು, ರೂ.381.66 ಲಕ್ಷಗಳ ಒಟ್ಟು ವಹಿವಾಟು ಸಾಧಿಸಿದೆ. ಕೋವಿಡ್ ಸೋಂಕಿನ ಬಿಕ್ಕಟ್ಟಿನ ಕಾರಣ 2020-21ರ ವರ್ಷದ ಅವಧಿಯಲ್ಲಿ ಆಮದಾದ ಮರಳನ್ನು ಕೃಷ್ಣಪಟ್ಟಣಂ ಪೋರ್ಟ್ ಕಂಪನಿ ಲಿ. (ಎ.ಪಿ) ಇಲ್ಲಿಂದ ಬೆಂಗಳೂರಿಗೆ ಅಂತರ್ ರಾಜ್ಯ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಇದಲ್ಲದೆ ನಿರ್ಮಾಣ ಉದ್ದಿಮೆಯಲ್ಲಿ ಆರ್ಥಿಕ ನಿಧಾನಗತಿಯ ಕಾರಣ ಆಮದಾದ ಮರಳಿನ ಮಾರಾಟದ ಮುಂಗಾಣ್ಕೆಯು ಸಾಧ್ಯವಾಗಿಲ್ಲ. ಆದ ಪ್ರಯುಕ್ತ ಅಧಿಕಾರ ಹೊಂದಿದ ಸಿ ಅಂಡ್ ಎಫ್ ಡಿಸ್ಟ್ರಿಬ್ಯೂಷನ್ ಏಜೆಂಟ್ ಮತ್ತು ಮಾರಾಟಗಾರರು ಯಾವುದೇ ಹಣ ಪಾವತಿ ಮಾಡಿಲ್ಲ ಮತ್ತು 2020-21ರ ಅವಧಿಯಲ್ಲಿ ಬಂದರಿನಿಂದ ಮರಳನ್ನು ತೆಗೆದುಕೊಂಡಿಲ್ಲ.

ಈ ಮಧ್ಯೆ ಪೊಸೆಡನ್ ಎಫ್‌ಜೆಡ್‌ಇ ಅನ್ನು ಪೊಸೆಡನ್ ಎಫ್‌ಜೆಡ್‌ಸಿ ತೆಗೆದುಕೊಂಡಿದೆ ಮತ್ತು ಸದರಿ ಪಾರ್ಟಿ ಜೊತೆ ಒಪ್ಪಂದ ಮಾಡಿಕೊಳ್ಳುವುದು ಬಾಕಿಯಿದೆ.

3. **ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆ ಇರುವುದೇ:**

ಕಂಪನಿಯ ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

4. ಲಾಭಾಂಶ

ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರುಗಳಿಂದ ಅನುಮೋದನೆಯಾದಲ್ಲಿ ಆರ್ಥಿಕ ವರ್ಷ 2022-23ರ ಅವಧಿಯಲ್ಲಿ ಕರ್ನಾಟಕ ಸರ್ಕಾರ ಮತ್ತು ಕೆಎಸ್ಐಐಡಿಸಿಗೆ ಪಾವತಿ ಮಾಡಬೇಕಾಗಿರುವ ರೂ.18,27,86,745ರ ಮೊತ್ತದ ಮೇಲೆ ತೆರಿಗೆ ನಂತರ ಕಂಪನಿಯ ಲಾಭದ 30% ರಂತೆ ಅಂದರೆ ಈಕ್ವಿಟಿ ಷೇರು ಒಂದಕ್ಕೆ ರೂ.42.77 ರಂತೆ ಲಾಭಾಂಶ ಘೋಷಿಸಲು ಕಂಪನಿ ಉದ್ದೇಶಿಸಿದೆ.

5. ಮೀಸಲು ನಿಧಿ

ಹಣಕಾಸಿನ ವರ್ಷ 2022-23ಕ್ಕೆ ಮತ್ತು ಹಿಂದಿನ ವರ್ಷದಲ್ಲಿ ಕಂಪನಿಯು ಇರಿಸಿರುವ ಮೀಸಲು ನಿಧಿಯು ಕೆಳಕಂಡಂತಿರುವುದು:

(ರೂ. ಲಕ್ಷಗಳಲ್ಲಿ)

ವಿವರಗಳು	2022-23	2021-22
ಸಾಮಾನ್ಯ ಮೀಸಲು ನಿಧಿ	31122.35	24473.00
ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿನ ಹೆಚ್ಚುವರಿ ನಿಧಿ	6092.90	6649.35

6. ಷೇರು ಬಂಡವಾಳ

ಕಂಪನಿಯ ಷೇರು ಬಂಡವಾಳದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

7. ಪ್ರಕರಣ 186ರ ಅನ್ವಯದ ಸಾಲಗಳು, ಗ್ಯಾರಂಟಿಗಳು ಅಥವಾ ಹೂಡಿಕೆಗಳ ವಿವರಗಳು:

ಪ್ರಕರಣ 100ರ ಅಡಿಯಲ್ಲಿನ ಸಾಲಗಳು ಗ್ಯಾರಂಟಿಗಳು ಅಥವಾ ಹೂಡಿಕೆಗಳ ವಿವರಗಳು-ಸದರಿ ವರ್ಷದಲ್ಲಿ ಕಂಪನಿಯ ಹೆಸರಿನಲ್ಲಿ ಯಾವುದೇ ಸಾಲ ಬಾಕಿಯಿರುವುದಿಲ್ಲ. ವರದಿಯಲ್ಲಿನ ವರ್ಷದಲ್ಲಿ ಇದನ್ನು -ಇಲ್ಲ- ಎಂಬುದಾಗಿ ತಿಳಿಸಬಹುದಾಗಿದೆ. ಯಾವುದೇ ಬ್ಯಾಂಕ್ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆದಿರುವ, ಕಂಪನಿಯ ಹೆಸರಿನಲ್ಲಿರುವ ಯಾವುದೇ ಸಾಲ ಬಾಕಿಯಿರುವುದಿಲ್ಲ. ಆದ್ದರಿಂದಾಗಿ ಒಂದು ಬಾರಿಯ ಇತ್ಯರ್ಥ (ಒಟಿಎಸ್) ಅನ್ವಯಿಸುವಿಕೆಯು ಉದ್ಭವವಾಗುವುದಿಲ್ಲ. ಮುಂದುವರೆದು, ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್ರಪ್ಟ್ಸಿ ಕೋಡ್ (ಐಬಿಸಿ) ಅಡಿಯಲ್ಲಿ ಕಂಪನಿಯ ಹೆಸರಿನಲ್ಲಿ ಯಾವುದೇ ಕ್ರಮಾವಳಿಗಳು ಬಾಕಿಯಿರುವುದಿಲ್ಲ.

8. ನೌಕರರ ವಿವರಗಳು

ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮಗಳು 5(2) ಮತ್ತು 5(3)ರ ಉಪಬಂಧಗಳನ್ನು ಓದಿಕೊಂಡಂತೆ ಪ್ರಕರಣ 197ರ ಅನ್ವಯ ನಿಗದಿಪಡಿಸಿರುವ ಮಿತಿಗೂ ಹೆಚ್ಚಿನ ಸಂಭಾವನೆ ಪಡೆಯುತ್ತಿರುವ ಯಾವುದೇ ನೌಕರರು ಇರುವುದಿಲ್ಲ.

9. ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ:

ಕರ್ನಾಟಕ ಸರ್ಕಾರದ ನಿರ್ದೇಶನಗಳ ಅನ್ವಯ 2021-22ರ ಹಣಕಾಸಿನ ವರ್ಷದ ಅವಧಿಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

ಕ್ರ. ಸಂ.	ನಿರ್ದೇಶಕರ ಹೆಸರು	ನೇಮಕಾತಿ ದಿನಾಂಕ	ಸಮಾಪ್ತಿ ದಿನಾಂಕ
1	ಶ್ರೀ ಎಚ್. ಹಾಲಪ್ಪ	27.07.2020	12.04.2023
2	ಶ್ರೀ ವಿಕಾಶ್ ಕುಮಾರ್ ವಿಕಾಶ್, ಭಾ.ಪೊ.ಸೇ	31.03.2021	03.07.2023
3	ಡಾ॥ ಜೆ. ರವಿಶಂಕರ್, ಭಾ.ಆ.ಸೇ	03.08.2021	-
4	ಡಾ॥ ಎಂ.ಆರ್.ರವಿ, ಭಾ.ಆ.ಸೇ	05.02.2022	23.11.2023
5	ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ	28.08.2018	-
6	ಶ್ರೀ ಚಂದ್ರಶೇಖರ್ ನಾಯಕ್.ಎಲ್	04.07.2020	07.05.2022
7	ಶ್ರೀ ಸತೀಶ್.ಕೆ, ಭಾ.ಆ.ಸೇ	07.05.2022	-
8	ಶ್ರೀ ಆರ್.ರಮೇಶ್	06.03.2018	-
9	ಶ್ರೀ ವೆಂಕಟೇಶ್ ನಾಯ್ಡು	02.12.2020	22.05.2023
10	ಶ್ರೀ ಸಿ.ಚನ್ನದೇವರು	19.10.2019	22.05.2023
11	ಶ್ರೀ ಕೆ.ಎಂ. ರವೀಂದ್ರ	12.03.2020	30.01.2023
12	ಶ್ರೀ ಶಿವಾಜಿ ಶಿವರಾಮ್ ಡೊಲ್ಲಿನ್	10.06.2020	22.05.2023
13	ಶ್ರೀ ಅಂದಪ್ಪ ಜವಳಿ	22.05.2020	22.05.2023
14	ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ	21.05.2020	22.05.2023
15	ಡಾ॥ ಆರ್.ಡಿ. ಸತೀಶ್	22.05.2020	22.05.2023
16	ಶ್ರೀ ನಿಂಗಪ್ಪ	21.05.2020	22.05.2023
17	ಶ್ರೀ ಶಶಿಧರ್ ಬಿ. ಹೊನ್ನಣ್ಣವರ್	30.01.2023	22.05.2023

ಶ್ರೀ ಹೆಚ್. ಹಾಲಪ್ಪ, ಶ್ರೀ ವಿಕಾಶ್ ಕುಮಾರ್ ವಿಕಾಶ್, ಭಾ.ಪೊ.ಸೆ, ಶ್ರೀ ಚಂದ್ರಶೇಖರ್ ನಾಯಕ್. ಎಲ್, ಭಾ.ಆ.ಸೇ., ಶ್ರೀ ಕೆ.ಎಂ.ರವೀಂದ್ರ, ಶ್ರೀ ವೆಂಕಟೇಶ್ ನಾಯ್ಡು, ಶ್ರೀ ಸಿ.ಚನ್ನದೇವರು, ಶ್ರೀ ಶಿವಾಜಿ ಶಿವರಾಮ್ ಡೊಲ್ಲಿನ್, ಶ್ರೀ ಅಂದಪ್ಪ ಜವಳಿ, ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ, ಡಾ॥ ಆರ್.ಡಿ. ಸತೀಶ್, ಶ್ರೀ ನಿಂಗಪ್ಪ, ಶ್ರೀ ಶಶಿಧರ್ ಬಿ.ಹೊನ್ನಣ್ಣವರ್ ಮತ್ತು ಡಾ. ಎಂ.ಆರ್.ರವಿ, ಭಾ.ಆ.ಸೇ, ನಿರ್ದೇಶಕರು ಇವರುಗಳು ನಿರ್ದೇಶಕರ ಮಂಡಳಿಯಲ್ಲಿ ನಿರ್ದೇಶಕರಾಗಿದ್ದ ಅವಧಿಯಲ್ಲಿ ನೀಡಿದ ಅತ್ಯುತ್ತಮ ಕೊಡುಗೆಯನ್ನು ಸ್ಮರಿಸಿ ಮಂಡಳಿಯು ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ.

ವರದಿಯ ದಿನಾಂಕದಂದು ಇರುವ ನಿರ್ದೇಶಕರ ಮಂಡಳಿಯ ವಿವರ ಕೆಳಕಂಡಂತಿರುವುದು:

ನಿರ್ದೇಶಕರ ಹೆಸರು	
1. ಶ್ರೀ ಎಂ.ಬಿ.ಪಾಟೀಲ್, ಸನ್ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು	- ಅಧ್ಯಕ್ಷರು

2. ಶ್ರೀ ಮನೋಜ್‌ಕುಮಾರ್, ಭಾ.ಆ.ಸೇ	– ವ್ಯವಸ್ಥಾಪಕ ನಿರ್ದೇಶಕರು
3. ಡಾ।। ಜೆ.ರವಿಶಂಕರ್, ಭಾ.ಆ.ಸೇ.	– ಸ್ವತಂತ್ರ ನಿರ್ದೇಶಕರು
4. ಡಾ.ಸತೀಶ, ಬಿ.ಸಿ, ಭಾ.ಆ.ಸೇ.	– ನಿರ್ದೇಶಕರು
5. ಶ್ರೀಮತಿ ಗುಂಜನ್‌ಕೃಷ್ಣ, ಭಾ.ಆ.ಸೇ.	– ನಿರ್ದೇಶಕರು
6. ಶ್ರೀ ನಿತೀಶ್ ಕೆ. ಭಾ.ಆ.ಸೇ.	– ನಿರ್ದೇಶಕರು
7. ಶ್ರೀ ಆರ್.ರಮೇಶ್	– ಸ್ವತಂತ್ರ ನಿರ್ದೇಶಕರು

2022-23ನೇ ಆರ್ಥಿಕ ವರ್ಷದಲ್ಲಿ ಕಂಪನಿಗಳ ಕಾಯ್ದೆ 2013ರ ಉಪಬಂಧಗಳ ಅನುಸಾರ ಕೆಳಕಂಡವರು ಕಂಪನಿಯ ಪ್ರಮುಖ ಆಡಳಿತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿರುವರು:

ಕ್ರ. ಸಂ.	ಪ್ರಮುಖ ಆಡಳಿತ ಅಧಿಕಾರಿಗಳ ಹೆಸರು	ನೇಮಕವಾದ ದಿನಾಂಕ	ಸಮಾಪ್ತಿ ದಿನಾಂಕ
1.	ಶ್ರೀ ವಿಕಾಶ್ ಕುಮಾರ್ ವಿಕಾಶ್, ಭಾ.ಪೊ.ಸೇ. –ವ್ಯವಸ್ಥಾಪಕ ನಿರ್ದೇಶಕರು	31.03.2021	–
2.	ಶ್ರೀ ಎ.ಎಂ.ಚಂದ್ರಪ್ಪ –ಮುಖ್ಯ ಹಣಕಾಸು ಅಧಿಕಾರಿ	14.12.2021	–
3.	ಶ್ರೀಮತಿ ಶ್ರೀದೇವಿ .ಬಿ.ಎನ್. ಕಂಪನಿ ಕಾರ್ಯದರ್ಶಿ	18.09.2013	–

ಮಂಡಳಿಯ ಲೆಕ್ಕ ಪರಿಶೋಧನ ಸಮಿತಿಯ ಸಂರಚನೆ

31ನೇ ಮಾರ್ಚ್ 2023ರಂದು ಇದ್ದಂತೆ		
1.	ಡಾ. ಎಂ.ಆರ್.ರವಿ, ಭಾ.ಆ.ಸೇ.	ಅಧ್ಯಕ್ಷರು
2.	ಡಾ. ಜೆ.ರವಿಶಂಕರ್, ಭಾ.ಆ.ಸೇ.	ಸದಸ್ಯರು
3.	ಶ್ರೀ ನಿತೀಶ್.ಕೆ, ಭಾ.ಆ.ಸೇ.	ಸದಸ್ಯರು
4.	ಶ್ರೀ ಆರ್.ರಮೇಶ್	ಸದಸ್ಯರು
5.	ಶ್ರೀ ವೆಂಕಟೇಶ್ ನಾಯ್ಡು.ಎನ್	ಸದಸ್ಯರು

ವರದಿಯ ದಿನಾಂಕದಂದು ಇದ್ದಂತೆ		
1.	ಡಾ. ಸತೀಶ್ ಬಿ.ಸಿ., ಭಾ.ಆ.ಸೇ.	ಅಧ್ಯಕ್ಷರು
2.	ಡಾ.ಜೆ.ರವಿಶಂಕರ್, ಭಾ.ಆ.ಸೇ.	ಸದಸ್ಯರು
3.	ಶ್ರೀ ನಿತೀಶ್.ಕೆ, ಭಾ.ಆ.ಸೇ.	ಸದಸ್ಯರು
4.	ಶ್ರೀ ಆರ್.ರಮೇಶ್	ಸದಸ್ಯರು

ಮಂಡಳಿಯ ಸಿಎಸ್‌ಆರ್ ಸಮಿತಿಯ ಸಂರಚನೆ

31ನೇ ಮಾರ್ಚ್ 2023ರಲ್ಲಿ ಇದ್ದಂತೆ		
1.	ಶ್ರೀ ವಿಕಾಶ್ ಕುಮಾರ್ ವಿಕಾಶ್, ಭಾ.ಪೊ.ಸೇ. ಎಂಎಸ್‌ಐಎಲ್	ಅಧ್ಯಕ್ಷರು
2.	ಶ್ರೀ ಆರ್. ರಮೇಶ್	ಸದಸ್ಯರು
3.	ಶ್ರೀ ಸಿ.ಚನ್ನದೇವರು	ಸದಸ್ಯರು
4.	ಡಾ.ಆರ್.ಡಿ.ಸತೀಶ್	ಸದಸ್ಯರು

ವರದಿಯ ದಿನಾಂಕದಂದು ಇದ್ದಂತೆ		
1.	ಶ್ರೀ ಮನೋಜ್ ಕುಮಾರ್, ಭಾ.ಆ.ಸೇ.	ಅಧ್ಯಕ್ಷರು
2.	ಶ್ರೀ ಆರ್.ರಮೇಶ್	ಸದಸ್ಯರು

10. ಸಭೆಗಳು :

ವಿಭಾಗೀಯ ಮುಖ್ಯಸ್ಥರುಗಳಿಂದ ಬಂದ ಮನವಿಯ ಆಧಾರದ ಮೇಲೆ, ವ್ಯವಸ್ಥಾಪಕನಿರ್ದೇಶಕರಅನುಮೋದನೆಗೆಒಳಪಟ್ಟುಮತ್ತು ಶಾಸನಬದ್ಧವಾಗಿ ಅಗತ್ಯವಾಗಿರುವಂತೆ ಕಾರ್ಯಸೂಚಿ ವಿಷಯಗಳ ಆಧಾರದ ಮೇಲೆ ಕಂಪನಿ ಕಾರ್ಯದರ್ಶಿಯು ವ್ಯವಸ್ಥಾಪಕ ನಿರ್ದೇಶಕರೊಡನೆ ಸಮಾಲೋಚಿಸಿ/ ಅವರ ಒಪ್ಪಿಗೆ ಪಡೆದು ವಿವರಣಾತ್ಮಕ ಟಿಪ್ಪಣಿಗಳ ಜೊತೆಗೆ ಪ್ರತಿ ಸಭೆಯ ಕಾರ್ಯಸೂಚಿಯನ್ನು ತಯಾರಿಸುವರು, ಮತ್ತು ಅದನ್ನು ಮಂಡಳಿಯ ನಿರ್ದೇಶಕರುಗಳಿಗೆ ಮುಂಚಿತವಾಗಿ ವಿತರಿಸುವರು. 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಈ ಕೆಳಕಂಡ ದಿನಾಂಕಗಳಂದು 4 ಮಂಡಳಿ ಸಭೆಗಳು, ನಾಲ್ಕು ಲೆಕ್ಕ ಪರಿಶೋಧನಾ ಉಪ-ಸಮಿತಿ ಸಭೆಗಳು ಮತ್ತು 1 ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆಯನ್ನು ನಡೆಸಲಾಗಿದೆ.

ಕ್ರ. ಸಂ.	ಮಂಡಳಿ ಸಭೆ ನಡೆದ ದಿನಾಂಕಗಳು	ಕ್ರ. ಸಂ.	ಲೆಕ್ಕ ಪರಿಶೋಧನಾ ಉಪಸಮಿತಿ ಸಭೆ ನಡೆದ ದಿನಾಂಕ
1.	15ನೇ ಜುಲೈ 2022	1.	27ನೇ ಜೂನ್ 2022
2.	28ನೇ ಅಕ್ಟೋಬರ್ 2022	2.	16ನೇ ಸೆಪ್ಟೆಂಬರ್ 2022
3.	15ನೇ ಡಿಸೆಂಬರ್, 2022	3.	15ನೇ ಡಿಸೆಂಬರ್ 2022
4.	24ನೇ ಮಾರ್ಚ್, 2023	4.	17ನೇ ಮಾರ್ಚ್ 2023

ಕ್ರ ಸಂ.	ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆ ದಿನಾಂಕ
1	19ನೇ ಆಗಸ್ಟ್ 2022

2022-2023ನೇ ಆರ್ಥಿಕ ವರ್ಷದಲ್ಲಿ ನಡೆದ ಮಂಡಳಿಯ ಸಭೆಗಳಿಗೆ ನಿರ್ದೇಶಕರುಗಳ ಹಾಜರಾತಿ ವಿವರ

ಕ್ರ ಸಂ.	ನಿರ್ದೇಶಕರ ಹೆಸರು	ನಡೆದ ಮಂಡಳಿ ಸಭೆಗಳ ಸಂಖ್ಯೆ	
		ನಡೆದದ್ದು	ಹಾಜರಾತಿ
1.	ಶ್ರೀ ಹೆಚ್.ಹಾಲಪ್ಪ	4	4
2.	ಶ್ರೀ ವಿಕಾಶ್ ಕುಮಾರ್ ವಿಕಾಶ್, ಭಾ.ಪೊ.ಸೇ	4	4
3.	ಡಾ.ಜೆ.ರವಿಶಂಕರ್, ಭಾ.ಆ.ಸೇ.	4	1
4.	ಡಾ.ಎಂ.ಆರ್.ರವಿ, ಭಾ.ಆ.ಸೇ	4	1
5.	ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ	4	–
6.	ಶ್ರೀ ನಿತೀಶ್.ಕೆ, ಭಾ.ಆ.ಸೇ.	4	4
7.	ಶ್ರೀ ಆರ್.ರಮೇಶ್	4	2
8.	ಶ್ರೀ ವೆಂಕಟೇಶ್ ನಾಯ್ಡು	4	4
9.	ಶ್ರೀ ಸಿ.ಚನ್ನದೇವರು	4	4

10.	ಶ್ರೀ ಕೆ.ಎಂ. ರವೀಂದ್ರ	3	2
11.	ಶ್ರೀ ಶಿವಾಜಿ ಶಿವರಾಯ್ ದೊಲ್ಲಿನ್	4	4
12.	ಶ್ರೀ ಅಂದಪ್ಪ ಜವಳಿ	4	4
13.	ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ	4	4
14.	ಡಾ.ಆರ್.ಡಿ.ಸತೀಶ್	4	4
15.	ಶ್ರೀ ನಿಂಗಪ್ಪ	4	2
16.	ಶ್ರೀ ಶಶಿಧರ್ ಬಿ. ಹೊನ್ನಣ್ಣವರ್	1	1

1. ಶ್ರೀ ನಿತೀಶ್ ಕೆ. ಭಾ.ಆ.ಸೇ. ಇವರು 07ನೇ ಮೇ 2022 ರಂದು ನಿರ್ದೇಶಕರಾಗಿ ನೇಮಕವಾಗಿದ್ದಾರೆ.
2. ಶ್ರೀ ಚಂದ್ರಶೇಖರ್ ನಾಯಕ್ ಎಲ್. ಇವರ ನಿರ್ದೇಶಕರ ಸ್ಥಾನವು 07ನೇ ಮೇ 2022 ರಿಂದ ಸಮಾಪ್ತಿಯಾಗಿದೆ.
3. ಶ್ರೀ ಶಶಿಧರ್ ಬಿ.ಹೊನ್ನಣ್ಣವರ್ ಇವರು 30ನೇ ಜನವರಿ 2023ರಂದು ನಿರ್ದೇಶಕರಾಗಿ ನೇಮಕವಾಗಿದ್ದಾರೆ.
4. ಶ್ರೀ ಕೆ.ಎಂ.ರವೀಂದ್ರ ಇವರ ನಿರ್ದೇಶಕರ ಸ್ಥಾನವು 30ನೇ ಜನವರಿ 2023 ರಿಂದ ಸಮಾಪ್ತಿಯಾಗಿದೆ.
5. ಶ್ರೀ ಎಂ.ಬಿ.ಪಾಟೀಲ್ ಇವರು 13ನೇ ಜೂನ್ 2023ರಿಂದ ಜಾರಿಗೆ ಬರುವಂತೆ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ.
6. ಶ್ರೀ ಮನೋಜ್‌ಕುಮಾರ್, ಭಾ.ಆ.ಸೇ. ಇವರು 03ನೇ ಜುಲೈ 2023ರಿಂದ ಅನ್ವಯವಾಗುವಂತೆ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕವಾಗಿದ್ದಾರೆ.
7. ಶ್ರೀ ವೆಂಕಟೇಶ್ ನಾಯ್ಡು ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023ರಿಂದ ಸಮಾಪ್ತಿಯಾಗಿದೆ.
8. ಶ್ರೀ ಸಿ.ಚನ್ನದೇವರು ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023 ರಿಂದ ಸಮಾಪ್ತಿಯಾಗಿದೆ.
9. ಶ್ರೀ ಶಿವಾಜಿ ಶಿವರಾಯ್ ದೊಲ್ಲಿ ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023ರಿಂದ ಸಮಾಪ್ತಿಯಾಗಿದೆ.
10. ಶ್ರೀ ಅಂದಪ್ಪ ಜವಳಿ ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023ರಿಂದ ಸಮಾಪ್ತಿಯಾಗಿದೆ.
11. ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023 ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.
12. ಡಾ.ಆರ್.ಡಿ. ಸತೀಶ್ ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023 ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.
13. ಶ್ರೀ ನಿಂಗಪ್ಪ ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.
14. ಶ್ರೀ ಶಶಿಧರ್ ಬಿ.ಹೊನ್ನಣ್ಣವರ್ ಇವರ ನಿರ್ದೇಶಕರ ಸ್ಥಾನವು 22ನೇ ಮೇ 2023 ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

11. ಸಹಾಯಕ ಕಂಪನಿಗಳ ವಿವರ

ದಿನಾಂಕ 31ನೇ ಮಾರ್ಚ್ 2023ರಂದು ಇದ್ದಂತೆ ಕಂಪನಿಯು ಎರಡು ಸಹಾಯಕ ಕಂಪನಿಗಳನ್ನು ಹೊಂದಿರುವುದು.

ಪ್ರಕರಣ 129(3)ರ ಉಪಬಂಧಗಳ ಅನುಸಾರ ಒಂದು ಅಥವಾ ಹೆಚ್ಚು ಸಹಾಯಕ ಕಂಪನಿಗಳನ್ನು ಹೊಂದಿರುವ ಕಂಪನಿಯು ಸ್ವತಂತ್ರ ಹಣಕಾಸಿನ ವಿವರಗಳನ್ನು ಹೊಂದಿರುವುದರ ಜೊತೆಗೆ ಕಂಪನಿಯ ಕ್ರೋಡೀಕೃತ ಹಣಕಾಸಿನ ವಿವರಗಳನ್ನು ಸಿದ್ಧಪಡಿಸಬೇಕು ಮತ್ತು ಎಲ್ಲಾ ಸಹಾಯಕ, ಸಹವರ್ತಿ ಕಂಪನಿಗಳು, ಜಂಟಿ ಉದ್ಯಮಗಳೂ ಸೇರಿದಂತೆ ಇದೇ ರೂಪದಲ್ಲಿ ಮತ್ತು ನಮೂನೆಯಲ್ಲಿ ತನ್ನದೇ ಸ್ವಂತ ಎಂಬುದಾಗಿರುವಂತೆ ಹಣಕಾಸಿನ ವಿವರಗಳನ್ನು ಹೊಂದಿರಬೇಕು ಮತ್ತು ಅದನ್ನು ಸ್ವತಂತ್ರ ಹಣಕಾಸು ಹೇಳಿಕೆಗಳ ಜೊತೆಗೆ ಕಂಪನಿಯ ವಾರ್ಷಿಕ ಮಹಾಸಭೆಯ ಮುಂದಿಡಬೇಕು. ಕಂಪನಿಯು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಕ್ರೋಡೀಕೃತ ಹಣಕಾಸಿನ ವಿವರಗಳನ್ನು ಸಿದ್ಧಪಡಿಸಿದೆ.

ಕಾಯ್ದೆಯ ಪ್ರಕರಣ 129ರ ಉಪ-ಪ್ರಕರಣ (3)ರ ಅನುಸಾರ ಕಂಪನಿಯ ಸಹಾಯಕ ಸಂಸ್ಥೆಗಳ ಹಣಕಾಸಿನ ವಿವರಗಳ ವೈಶಿಷ್ಟ್ಯತೆಗಳನ್ನು ಒಳಗೊಂಡ ವಿವರವನ್ನು ಅನುಬಂಧ-IIರಲ್ಲಿ ನಮೂನೆ ಎಒಸಿ-1ರಲ್ಲಿ ತಿಳಿಸಿದೆ.

12. ಲೆಕ್ಕ ಪರಿಶೋಧಕರು:

ಕಂಪನಿಯು, ಕಂಪನಿಗಳ ಕಾಯ್ದೆ, 2013ರ ಪ್ರಕರಣ 2(45) ರ ಅನ್ವಯ ಸರ್ಕಾರದ ಕಂಪನಿಯಾಗಿದ್ದು, ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರೀಶೋಧಕರು ಕಂಪನಿಗಳ ಕಾಯ್ದೆ 2013ರ ಪ್ರಕರಣ 139(5) ರ ಅನ್ವಯ ಕಂಪನಿಯ ವಾರ್ಷಿಕ ಲೆಕ್ಕ ಪತ್ರಗಳ ಪರಿಶೋಧನೆ ಮಾಡಲು ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವರು. ಸಿ ಅಂಡ್ ಎಜಿಐ ಇವರು ಮೆ|| ಬಿಎಸ್‌ಡಿ ಅಂಡ್ ಕಂ (ಬಿಎ0490) ಚಾರ್ಟರ್ಡ್ ಅಕೌಂಟೆಂಟ್, ಬೆಂಗಳೂರು ಇವರನ್ನು 2022-23ರ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿದ್ದಾರೆ. ಸಿ ಅಂಡ್ ಎಜಿಐ ಇವರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರು, ಮುಂಬರುವ ವಾರ್ಷಿಕ ಮಹಾಸಭೆಯವರೆಗೆ ಲೆಕ್ಕಪರಿಶೋಧಕರಾಗಿರುವರು.

ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಚೇರಿ, ನವದೆಹಲಿ ಇವರು ಮೆ|| ಸೊರಬ್ ಇಂಜಿನಿಯರ್ ಅಂಡ್ ಕಂ, (ಬಿಒ0036), ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2023-24ರ ಸಾಲಿಗೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವುದಾಗಿ ತಿಳಿಸಿದ್ದಾರೆ.

13. ಲೆಕ್ಕಪರಿಶೋಧಕರ ವರದಿ:

ಲೆಕ್ಕಪರಿಶೋಧಕರ ವರದಿಯು ಆಕ್ಷೇಪಣೆಗಳನ್ನು ಒಳಗೊಂಡಿರುವುದು. ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳ ಸಂಬಂಧದ ಆಡಳಿತ ಮಂಡಳಿಯ ಉತ್ತರಗಳನ್ನು ಈ ವರದಿಗೆ ಲಗತ್ತಿಸಲಾಗಿದೆ.

14. ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿ:

ಕಾಯ್ದೆಯ ಪ್ರಕರಣ 204 ಮತ್ತು ಇದರಡಿಯಲ್ಲಿ ರೂಪಿಸಿರುವ ನಿಯಮಗಳ ಅನ್ವಯ ಶ್ರೀ ಎಸ್.ವಿಶ್ವನಾಥನ್, ಕಾರ್ಯನಿರತ ಕಂಪನಿ ಕಾರ್ಯದರ್ಶಿ ಇವರು ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧಕರಾಗಿ 31ನೇ ಮಾರ್ಚ್ 2023ಕ್ಕೆ

ಕೊನೆಗೊಂಡ ವರ್ಷದ ಬಗ್ಗೆ ತಮ್ಮ ವರದಿಯನ್ನು ಸಲ್ಲಿಸಿದ್ದಾರೆ. ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರ ವರದಿಯನ್ನು ಸದರಿ ವರದಿಗೆ ಅನುಬಂಧ-IV ಆಗಿ ಲಗತ್ತಿಸಲಾಗಿದೆ. ವರದಿಯು ಸ್ವಯಂ ವಿವರಣಾತ್ಮಕವಾಗಿದ್ದು, ಮುಂದಿನ ಯಾವುದೇ ಟೀಕೆಗಳಿಗೆ ಅವಕಾಶವಿರುವುದಿಲ್ಲ.

15. ಆಂತರಿಕ ಲೆಕ್ಕಪರಿಶೋಧನೆ ಮತ್ತು ನಿಯಂತ್ರಣಗಳು:

ಕಂಪನಿಯು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಪ್ರಕ್ರಿಯೆಯನ್ನು ಮುಂದುವರಿಸುವುದು. ಆಂತರಿಕ ಲೆಕ್ಕಪರಿಶೋಧಕರ ಕಾರ್ಯವ್ಯಾಪ್ತಿ ಮತ್ತು ಉದ್ದೇಶವು ವ್ಯವಹಾರಗಳ ಲೆಕ್ಕಪರಿಶೋಧನೆ ಮತ್ತು ಪುನರ್ ಅವಲೋಕನವನ್ನು ಒಳಗೊಂಡಿರುವುದು. ಆಂತರಿಕ ಲೆಕ್ಕಪರಿಶೋಧಕರು ತಮ್ಮ ವರದಿಯನ್ನು ಕಂಪನಿಯ ಟಿಪ್ಪಣಿಗಳ ಜೊತೆಗೆ ಕಂಪನಿಗೆ ಸಲ್ಲಿಸುವರು. ಸದರಿ ವರದಿಯನ್ನು ಕಾರ್ಯಾಚರಣೆಗಳ ಸಾಮರ್ಥ್ಯಗಳನ್ನು ಸುಧಾರಿಸಲು ಚಲನಾತ್ಮಕ ಆಧಾರದ ಮೇಲೆ ಲೆಕ್ಕಪರಿಶೋಧನಾ ಸಮಿತಿ ಮುಂದೆ ಇರಿಸಲಾಗುವುದು.

16. ಸ್ವತಂತ್ರ ನಿರ್ದೇಶಕರಿಂದ ಘೋಷಣೆ:

ಕಂಪನಿಯು ಪ್ರತಿ ನಿರ್ದೇಶಕರುಗಳಿಂದ, ಕಂಪನಿಗಳ ಕಾಯ್ದೆ, 2013ರ ಪ್ರಕರಣ 149(7)ರ ಅನ್ವಯ ಆತ/ಆಕೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 149 (6)ರಲ್ಲಿ ತಿಳಿಸಿರುವ ಸ್ವತಂತ್ರದ ಮಾನದಂಡವನ್ನು ಈಡೇರಿಸಿರುವುದಾಗಿ ಅಗತ್ಯ ಘೋಷಣೆಯನ್ನು ಪಡೆದಿದೆ.

17. ವಾರ್ಷಿಕ ರಿಟರ್ನ್:

ಕಂಪನಿಗಳ ಕಾಯ್ದೆ, 2013ರ ಅನುಸಾರ, ನಿಗದಿತ ನಮೂನೆಯಲ್ಲಿನ ವಾರ್ಷಿಕ ರಿಟರ್ನ್ **https://msilonline.karnataka.gov.in/annual-reports/in** ಇಲ್ಲಿ ದೊರೆಯುವುದು.

18. ಹಣಕಾಸಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವಿಕೆ

ಕಂಪನಿಯು ಹಣಕಾಸಿನ ಹೇಳಿಕೆಗಳ ಸಂಬಂಧ ಸಾಕಷ್ಟು ರೀತಿಯ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಹೊಂದಿರುವುದು. ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಸದರಿ ನಿಯಂತ್ರಣಗಳನ್ನು ಪರೀಕ್ಷಿಸಲಾಗಿದ್ದು, ಅವುಗಳ ಕಾರ್ಯಾಚರಣೆಯಲ್ಲಿ ಯಾವುದೇ ಗಣನೀಯವಾಗಿ ತಿಳಿಸಬಹುದಾದ ವಾಸ್ತವಿಕ ದೌರ್ಬಲ್ಯಗಳಿರುವುದಿಲ್ಲ.

19. ಕಂಪನಿಯ ಜಾಗೃತ ವ್ಯವಸ್ಥೆ

ಜಾಗೃತ ವ್ಯವಸ್ಥೆಗೆ ಸಂಬಂಧಿಸಿದ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

20. ಅಪಾಯ ನಿರ್ವಹಣಾ ನೀತಿ

ಕಂಪನಿಯು ಎಲ್ಲಾ ಕಾರ್ಯಾಚರಣೆ ವಿಭಾಗಗಳ ಆಪತ್ತಿನ ಅಂಶಗಳನ್ನು ಗುರುತಿಸಿದೆ ಮತ್ತು ಪ್ರತಿಯೊಂದು ಆಪತ್ತಿನ ಉಪಶಮನ ಉಪಾಯವನ್ನು ಕಂಡುಕೊಂಡಿದೆ. ಮುಖ್ಯ ಧ್ಯೇಯವು ಸ್ಥಿರತೆಯ ಜೊತೆಗೆ ಸುಸ್ಥಿರ ವ್ಯವಹಾರ ವೃದ್ಧಿಯನ್ನು ಖಾತರಿಪಡಿಸುವುದಾಗಿದೆ ಮತ್ತು ವ್ಯವಹಾರಕ್ಕೆ ಒಳಪಟ್ಟಿರುವ ಅಪಾಯಗಳನ್ನು ವರದಿ ಮಾಡುವಿಕೆ, ಮೌಲ್ಯಮಾಪನ ಮತ್ತು ಪರಿಹರಿಸುವಿಕೆಯಲ್ಲಿ ಸಕಾರಾತ್ಮಕ ಪಾಲ್ಗೊಳ್ಳುವಿಕೆಯನ್ನು ಪ್ರವರ್ಧನೆ ಮಾಡುವುದು.

21. ವಾರ್ಷಿಕ ರಿಟರ್ನ್‌ನ ಸಾರಾಂಶ:

ಕಂಪನಿಗಳ ಕಾಯ್ದೆ, 2013ರ ಪ್ರಕರಣ 92(3) ಮತ್ತು ಕಂಪನಿಗಳ (ಆಡಳಿತ ವರ್ಗ ಮತ್ತು ಆಡಳಿತ) ನಿಯಮಗಳು 2014ರ ನಿಯಮ 12(1)ರ ಅನುಸಾರ ಅಗತ್ಯವಾದಂತೆ, ಸದರಿ ವಾರ್ಷಿಕ ವರದಿಯ ಒಂದು ಭಾಗವಾಗಿ ಎಂಜಿಟಿ 9 ರಲ್ಲಿ ವಾರ್ಷಿಕ ರಿಟರ್ನ್‌ನ ಸಾರಾಂಶವನ್ನು ಅನುಬಂಧ-1 ಆಗಿ ಲಗತ್ತಿಸಿದೆ. ವಾರ್ಷಿಕ ರಿಟರ್ನ್‌ನ ಉದ್ಧೃತ ಒಂದನ್ನು ಕಂಪನಿಯ ವೆಬ್‌ಸೈಟ್‌ನ ವೆಬ್ ಲಿಂಕ್: **https://msilonline.karnataka.gov.in** ನಲ್ಲಿ ಪ್ರಕಟಿಸಿದೆ.

22. ಹಣಕಾಸಿನ ವಿವರಗಳು ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷದ ಕೊನೆ ಮತ್ತು ವರದಿಯ ದಿನಾಂಕದ ನಡುವೆ ಉಂಟಾಗಿರುವ, ಕಂಪನಿಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡಬಹುದಾದ ವಾಸ್ತವಿಕ ಬದಲಾವಣೆಗಳು ಮತ್ತು ಬದ್ಧತೆಗಳು

ಸ್ಥಿತಿ ವಿವರಣಾ ಪಟ್ಟಿ ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷ ಮುಕ್ತಾಯದ ತರುವಾಯ ಮತ್ತು ತೆರಿಗೆ ಹೊಣೆಗಾರಿಕೆ ಇತ್ಯರ್ಥ, ಪೇಟೆಂಟ್ ಹಕ್ಕುಗಳ ಕಾರ್ಯಾಚರಣೆ, ಹೂಡಿಕೆಗಳ ಮಾರುಕಟ್ಟೆ ಮೌಲ್ಯದಲ್ಲಿ ಸವಕಳಿ ಕಂಪನಿಯಿಂದ ಅಥವಾ ಕಂಪನಿಯ ಮೇಲೆ ಹೂಡಿರುವ ದಾವೆಗಳು, ಬಂಡವಾಳ ಸ್ವತ್ತುಗಳ ಮಾರಾಟ ಅಥವಾ ಖರೀದಿ ಅಥವಾ ಯಾವುದೇ ಆಸ್ತಿಗಳ ನಾಶ ಇತ್ಯಾದಿ ವರದಿಯ ದಿನಾಂಕದಲ್ಲಿ ಯಾವುದೇ ಅಂತಹ ವಾಸ್ತವಿಕ ಬದಲಾವಣೆಗಳಿರುವುದಿಲ್ಲ.

23. ಕಂಪನಿಯ ಹಾಲಿ ಪ್ರಗತಿಯ ಸ್ಥಿತಿಗತಿ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮವನ್ನುಂಟು ಮಾಡುವ ದಿಸೆಯಲ್ಲಿ ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧೀಕರಣಗಳಿಂದ ಹೊರಡಿಸಿರುವ ಮಹತ್ವಪೂರ್ಣವಾದ ಮತ್ತು ಭೌತಿಕ ಆದೇಶಗಳ ವಿವರಗಳು:

ಚಾಲ್ತಿ ಸಂಸ್ಥೆಯ ಸ್ಥಿತಿಗತಿಗಳ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ಅಂತಹ ಆದೇಶಗಳನ್ನು ಹೊರಡಿಸಿರುವುದಿಲ್ಲ.

24. ಠೇವಣಿಗಳು

ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಕಂಪನಿಯು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-v ರಡಿ ಒಳಪಡುವ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಸಾರ್ವಜನಿಕರಿಂದ ಅಂಗೀಕರಿಸಿರುವುದಿಲ್ಲ.

25. ಸಂಬಂಧಪಟ್ಟ ವ್ಯಕ್ತಿ ವ್ಯವಹಾರಗಳು:

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 188ರ ಉಪಬಂಧಗಳ ಅನುಸಾರ ಕಂಪನಿಯು ಯಾವುದೇ ಗುತ್ತಿಗೆ ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ.

26. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿಷೇಧ ಮತ್ತು ಪರಿಹಾರ) ಕಾಯ್ದೆ-2013ರ ಅನ್ವಯ ಕಂಪನಿಯ ಬಾಧ್ಯತೆಗಳು

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿಷೇಧ ಮತ್ತು ಪರಿಹಾರ) 2013ರ ಹೊಸ ಕಾಯ್ದೆಯನ್ನು 09.12.2013 ರಂದು ಪ್ರಕಟಿಸಲಾಗಿದೆ. ಈ ಕಾಯ್ದೆಯ ಪ್ರಕಾರ ಯಾವುದೇ ಮಹಿಳಾ ಉದ್ಯೋಗಿಗಳು ಕೆಲಸದ ಸಂದರ್ಭದಲ್ಲಿ ತಮ್ಮ ಮೇಲೆ ಆದ ದೌರ್ಜನ್ಯಗಳ ಕುರಿತಂತೆ ಸಲ್ಲಿಸಿದ ದೂರುಗಳನ್ನು ವಿಚಾರಿಸಲು ಪ್ರತಿಯೊಂದು ಕಂಪನಿಯು ಆಂತರಿಕ ದೂರುಗಳ ವಿಚಾರಣೆ ಸಮಿತಿಯನ್ನು ಸ್ಥಾಪಿಸಬೇಕಾಗುವುದು.

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಯುವ ನೀತಿಯನ್ನು ಕಂಪನಿ ಅಳವಡಿಸಿಕೊಂಡಿದೆ. ಮತ್ತು ಸದರಿ ನೀತಿ ಅನುಷ್ಠಾನಕ್ಕೆ ಸಮಿತಿ ಒಂದನ್ನು ರೂಪಿಸಿದೆ. ಸದರಿ ವರ್ಷದಲ್ಲಿ ಕಂಪನಿಗೆ ಲೈಂಗಿಕ ದೌರ್ಜನ್ಯದ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

27. ಆಂತರಿಕ ನಿಯಂತ್ರಣ ವ್ಯವಸ್ಥೆಗಳು:

ನಿಮ್ಮ ಕಂಪನಿಯು 2022-23ರ ವರ್ಷದಲ್ಲಿ ಕಂಪನಿಯ ಆಂತರಿಕ ಲೆಕ್ಕಪರಿಶೋಧಕರುಗಳನ್ನಾಗಿ ವಿವಿಧ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳನ್ನು ನೇಮಕ ಮಾಡಿದೆ. ಆಂತರಿಕ ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಸ್ತಾರವು ವ್ಯವಹಾರಗಳ ಲೆಕ್ಕಪರಿಶೋಧನೆ ಮಾಡುವುದು ಮತ್ತು ಪರಿಶೀಲನೆ ನಡೆಸುವ ಕಾರ್ಯಗಳನ್ನು ಒಳಗೊಂಡಿರುವುದು. ಆಂತರಿಕ ಲೆಕ್ಕಪರಿಶೋಧಕರು ಅವರ ವರದಿಯನ್ನು ಕಂಪನಿಗೆ ಸಲ್ಲಿಸುವುದು. ಇದನ್ನು ಕಂಪನಿಯ ಟೀಕೆಗಳ ಜೊತೆಗೆ ಲೆಕ್ಕಪರಿಶೋಧನೆ ಸಮಿತಿ ಮುಂದೆ ಹಾಗೂ ನಿರ್ದೇಶಕರುಗಳ ಮಂಡಳಿ ಮುಂದೆ ಇಡಲಾಗುವುದು.

28. ಕಂಪನಿಯ ಜಾಗೃತ ವ್ಯವಸ್ಥೆ :

ಜಾಗೃತ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ವ್ಯವಸ್ಥೆ ಮಾಡುವಿಕೆಯು ಕಂಪನಿಗೆ ಅನ್ವಯವಾಗುವುದಿಲ್ಲ.

29. ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವು:

ಸದರಿ ಕಂಪನಿಯಲ್ಲಿನ ಕಾರ್ಯಾಚರಣೆಯ ಎಲ್ಲಾ ಮಟ್ಟಗಳಲ್ಲಿ ಇಂಧನ ಸಂರಕ್ಷಣೆಗೆ ಆದ್ಯತೆ ಗಮನಹರಿಸುವ ಕಾರ್ಯವನ್ನು ಮುಂದುವರಿಸಿಕೊಂಡು ಬರಲಾಗುತ್ತಿದೆ. ಇಂಧನ ಸಂರಕ್ಷಣೆ ಮಾಡುವುದಕ್ಕೆ ಹಾಗೂ ಇಂಧನವನ್ನು ಬಳಸುವ ಪ್ರಕ್ರಿಯೆಯನ್ನು ಗರಿಷ್ಠಗೊಳಿಸಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿವಿಗೆ ಸಂಬಂಧಿಸಿದ ಮಾಹಿತಿಯು ಏನೂ ಇರುವುದಿಲ್ಲ.

30. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್)

ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಅನ್ವಯ ಅನ್ವಯವಾಗುವ ಮಾನದಂಡಗಳನ್ನು ಪರಿಪಾಲಿಸುವ ಒಂದು ಕಂಪನಿಯು, ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳ ಸರಾಸರಿ ನಿವ್ವಳ ಲಾಭದ ಕನಿಷ್ಠ 2% ಹಣವನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಚಟುವಟಿಕೆಗಳಿಗೆ ಖರ್ಚು ಮಾಡಬೇಕಾಗುತ್ತದೆ. ಸಿಎಸ್‌ಆರ್ ಚಟುವಟಿಕೆಗಳ ಕ್ಷೇತ್ರಗಳು-ಶಿಕ್ಷಣ ಪ್ರವರ್ಧನೆ ಮತ್ತು ಆರೋಗ್ಯ ರಕ್ಷಣೆ. ಕಂಪನಿಯು ಕಾಯ್ದೆಯ ಪ್ರಕಾರ ಸಿಎಸ್‌ಆರ್ ಸಮಿತಿಯನ್ನು ರಚಿಸಿದೆ. ಇದಕ್ಕೆ ಮೀಸಲಿರಿಸಿರುವ ಹಣವನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-VIIರಲ್ಲಿ ವಿವರಿಸಿರುವ ಈ ಚಟುವಟಿಕೆಗಳಿಗೆ ಬಳಸಲಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕುರಿತಂತೆ ಕಂಪನಿಗಳ ಕಾಯ್ದೆ, 2013 ಪ್ರಕರಣ 135(4)ರ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಕೈಗೊಂಡ ಚಟುವಟಿಕೆಗಳ ವಿವರಗಳನ್ನು ಅನುಬಂಧ-III ರಲ್ಲಿ ನಮೂದಿಸಿ ಸದರಿ ವರದಿಗೆ ಲಗತ್ತಿಸಿದೆ.

31. ಮಾನವ ಸಂಪನ್ಮೂಲಗಳು:

ನಿಮ್ಮ ಕಂಪನಿಯು ತನ್ನ ''ಮಾನವ ಸಂಪನ್ಮೂಲಗಳನ್ನು'' ಅತ್ಯಮೂಲ್ಯವಾದ ಆಸ್ತಿಗಳಲ್ಲಿ ಒಂದು ಎಂಬುದಾಗಿ ಪರಿಗಣಿಸಿದೆ.

ನಿಮ್ಮ ಕಂಪನಿಯು ನೌಕರರುಗಳಿಗೆ ತರಬೇತಿ ನೀಡುವ ಮತ್ತು ಅವರನ್ನು ವಿಕಾಸಗೊಳಿಸುವುದಕ್ಕೆ ಒತ್ತು ನೀಡುವ ಕ್ರಮವನ್ನು ಮುಂದುವರಿಸುತ್ತಿದೆ. 2022-23ರ ಸಾಲಿನಲ್ಲಿ ನೌಕರರ ಕಾರ್ಯದಕ್ಷತೆಯನ್ನು ಹೆಚ್ಚಿಸಲು 9 ನೌಕರರಿಗೆ (ಎಕ್ಸಿಕ್ಯುಟಿವ್‌ಗಳು/ಅಧಿಕಾರಿಗಳು) ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತರಬೇತಿ ಕಾರ್ಯಕ್ರಮ ನಡೆಸಲು ಕಂಪನಿ ಯೋಜಿಸಿದೆ.

2022-23ರ ಅವಧಿಯಲ್ಲಿ (31ನೇ ಮಾರ್ಚ್ 2023ರವರೆಗೆ) ನಿಮ್ಮ ಕಂಪನಿಯಲ್ಲಿ 78 ನೌಕರರಿದ್ದರು. (ಎಕ್ಸಿಕ್ಯುಟಿವ್‌ಗಳು/ಅಧಿಕಾರಿಗಳು 38 ಮತ್ತು ಸಿಬ್ಬಂದಿಗಳು 61). ಇವರಲ್ಲಿ ಒಬ್ಬ ಅಧಿಕಾರಿಯನ್ನು ಪಿಡಬ್ಲ್ಯೂಡಿಗೆ ನಿಯೋಜಿಸಲಾಗಿದೆ.

32. ಯೋಜನೆ/ಎಸ್ಟೇಟ್ ಇಲಾಖೆ:

ಬೈಕಂಪಾಡಿ, ಮಂಗಳೂರು ಮತ್ತು ಮೈಸೂರಿನಲ್ಲಿ ಕಚೇರಿ ಹಾಗೂ ಉದ್ಯಾಣ ಯೋಜನೆಗಳು ಪೂರ್ಣಗೊಂಡಿದ್ದು, ಇವುಗಳನ್ನು ಬಾಡಿಗೆಗೆ ನೀಡಿದೆ ಮತ್ತು ವಿಭಾಗವು ಆದಾಯ ಗಳಿಸುತ್ತಿದೆ. ಕಲಬುರಗಿ ಉದ್ಯಾಣದ ಸಂಬಂಧದಲ್ಲಿ, ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇದರ ನಿರ್ಮಾಣ ಕಾರ್ಯವು ಹಲವಾರು ಕಾರಣಗಳಿಂದ ಸ್ಥಗಿತಗೊಂಡಿತ್ತು .

33. ನಿರ್ದೇಶಕರ ಹೊಣೆಗಾರಿಕೆ ವಿವರ:

ತಮ್ಮ ತಿಳುವಳಿಕೆ ಮತ್ತು ನಂಬಿಕೆಯಂತೆ ಮತ್ತು ಅವರು ಪಡೆದುಕೊಂಡಿರುವ ಮಾಹಿತಿ ಮತ್ತು ವಿವರಣೆಯ ಅನುಸಾರ ಕಂಪನಿಗಳ ಕಾಯ್ದೆ, 2013ರ ಪ್ರಕರಣ 134ರ ಉಪ-ಪ್ರಕರಣ (3)ರ ಕಲಂ (ಸಿ) ಅನ್ವಯ ನಿಮ್ಮ ನಿರ್ದೇಶಕರು ಈ ಕೆಳಕಂಡ ವಿವರಗಳನ್ನು ನೀಡುವರು, ಅವುಗಳೆಂದರೆ:-

(ಎ) 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದರಲ್ಲಿ ವಾಸ್ತವಿಕ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸೂಕ್ತ ವಿವರಣೆಗಳ ಜೊತೆಗೆ ಅನ್ವಯವಾಗುವ ಲೆಕ್ಕಪತ್ರಗಳ ಮಾನದಂಡಗಳನ್ನು ಅನುಸರಿಸಲಾಗಿದೆ;

(ಬಿ) ನಿರ್ದೇಶಕರು ಅಂತಹ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡಿದ್ದು, ಅವುಗಳನ್ನು ನಿರಂತರವಾಗಿ ಅನ್ವಯಿಸಿದ್ದಾರೆ ಮತ್ತು 31ನೇ ಮಾರ್ಚ್ 2023ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಯ ಬಗ್ಗೆ ಮತ್ತು ಸದರಿ ಅವಧಿಯಲ್ಲಿನ ಕಂಪನಿಯ ಲಾಭ ಮತ್ತು ನಷ್ಟದ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡಲು ಸೂಕ್ತವಾದ ಹಾಗೂ ಯುಕ್ತವಾದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡಿರುವರು;

(ಸಿ) ಕಂಪನಿಯ ಆಸ್ತಿಗಳನ್ನು ಸಂರಕ್ಷಿಸಲು ಮತ್ತು ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು ಸದರಿ ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆಗೆ ನಿರ್ದೇಶಕರು ಸೂಕ್ತವಾದ ಮತ್ತು ಸಮಗ್ರವಾದ ಮುತುವರ್ಜಿ ವಹಿಸಿದ್ದಾರೆ;

(ಡಿ) ನಿರ್ದೇಶಕರು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರವನ್ನು ಪ್ರಗತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ಸಿದ್ದಪಡಿಸಿದ್ದಾರೆ; ಮತ್ತು

(ಇ) ಅನ್ವಯವಾಗುವ ಎಲ್ಲಾ ಕಾನೂನುಗಳ ಉಪಬಂಧಗಳನ್ನು ಅನುಸರಿಸಿರುವುದನ್ನು ಖಾತರಿಪಡಿಸಲು ನಿರ್ದೇಶಕರು ಸೂಕ್ತವಾದ ವ್ಯವಸ್ಥೆಯನ್ನು ರೂಪಿಸಿರುವರು ಮತ್ತು ಆ ವ್ಯವಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಸಮರ್ಥವಾಗಿ ಕಾರ್ಯಾಚರಣೆಯಾಗುತ್ತಿವೆ.

34. ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ಹಣದ ವರ್ಗಾವಣೆ:

ನಿಮ್ಮ ಕಂಪನಿಯು ಕಳೆದ ಏಳು ವರ್ಷಗಳ ಅವಧಿಯಲ್ಲಿ ಪಾವತಿಯಾಗದೆ ಅಥವಾ ಕೇಳುವುವವರಿಲ್ಲದೆ ಹಾಗೆಯೇ ಉಳಿದಿರುವ ಯಾವುದೇ ಹಣವನ್ನು ಹೊಂದಿರುವುದಿಲ್ಲ. ಆದ್ದರಿಂದಾಗಿ, ಹೂಡಿಕೆದಾರರ ಶಿಕ್ಷಣಕ್ಕೆ ಮತ್ತು ರಕ್ಷಣೆ ನಿಧಿಗೆ (ಐಇಪಿಎಫ್) ವರ್ಗಾಯಿಸಬೇಕಾದ ಯಾವುದೇ ನಿಧಿ ಇರುವುದಿಲ್ಲ.

35. ಕೃತಜ್ಞತೆಗಳು

ಕಂಪನಿಗೆ ಅಮೂಲ್ಯವಾದ ನೆರವು ಮತ್ತು ಬೆಂಬಲ ನೀಡಿದ್ದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ, ಅದರಲ್ಲೂ ವಿಶೇಷವಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಹಣಕಾಸು ಇಲಾಖೆ, ಮೆ।। ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತ, ಮುಖ್ಯಸ್ಥರುಗಳು, ಸರಬರಾಜುದಾರರು, ಬ್ಯಾಂಕರುಗಳು, ಗ್ರಾಹಕರುಗಳಿಗೆ ಹಾಗೂ ವಿಸ್ತೃತವಾಗಿ ಸಮಾಜಕ್ಕೆ ಈ ಸಂದರ್ಭದಲ್ಲಿ ನಿಮ್ಮ ನಿರ್ದೇಶಕರು ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಧನ್ಯವಾದಗಳನ್ನು ಸಲ್ಲಿಸುವರು. ಕಂಪನಿಯ ಗುಣಮಟ್ಟ ನೀತಿಯ ಬಗ್ಗೆ ಗ್ರಾಹಕರುಗಳ ಸಂಪೂರ್ಣ ತೃಪ್ತಿ ಸಾಧಿಸಲು ಸಮಸ್ತ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಿದ ಸ್ತುತ್ಯಾರ್ಹ ಕಾರ್ಯಕ್ಕಾಗಿ ನಿರ್ದೇಶಕರು ಮಾಧ್ಯಮಗಳಿಗೂ ಕೃತಜ್ಞತೆ ಸಲ್ಲಿಸುವರು.

ಕಂಪನಿಗೆ ನೆರವು ಮತ್ತು ಸಹಕಾರ ನೀಡಿದಕ್ಕಾಗಿ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ ಇವರಿಗೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರು, ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರಿಗೂ ನಮ್ಮ ನಿರ್ದೇಶಕರು ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಲ್ಲಿಸುವರು.

ನಿಮ್ಮ ಕಂಪನಿಯ ಎಲ್ಲಾ ಮಟ್ಟದ ನೌಕರರು ಕಂಪನಿಯ ಪ್ರಗತಿಗೆ ಸಲ್ಲಿಸಿರುವ ಕೊಡುಗೆಯನ್ನು ನಿಮ್ಮ ನಿರ್ದೇಶಕರು ಸ್ಮರಿಸುವರು.

ನಿರ್ದೇಶಕರ ಮಂಡಳಿಯ
ಪರವಾಗಿ ಮತ್ತು ಹೆಸರಿನಲ್ಲಿ
ಸಹಿ/-
(ಎಂ.ಬಿ.ಪಾಟೀಲ್)
ಅಧ್ಯಕ್ಷರು

ಸ್ಥಳ : ಬೆಂಗಳೂರು
ದಿನಾಂಕ: 29ನೇ ನವೆಂಬರ್ 2023

ಅನುಬಂಧ ಪರಿವಿಡಿ	
ಅನುಬಂಧ	ವಿವರಗಳು
I	ಎಂಜಿಟಿ 9ರಲ್ಲಿ ವಾರ್ಷಿಕ ರಿಟರ್ನ್‌ನ ಉದ್ದೇಶಗಳು
II	ಸಹಾಯಕ ಸಂಸ್ಥೆಗಳ ವಿವರಗಳು–ಎಓಸಿ–1
III	ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಗಳ ಚಟುವಟಿಕೆಗಳ ವಾರ್ಷಿಕ ವರದಿ
IV	ಎಂಆರ್–02 ಸೆಕ್ರೆಟೆರಿಯಲ್ ಲೆಕ್ಕಪರಿಶೋಧನೆ ವರದಿ

ಅನುಬಂಧ-I

ಫಾರಂ ನಂ. ಎಂಜಿಟಿ 9

ವಾರ್ಷಿಕ ರಿಟರ್ನ್‌ನ ಸಾರಾಂಶ

31.03.2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಲ್ಲಿದ್ದಂತೆ

ಕಂಪನಿಗಳ ಕಾಯ್ದೆ, 2013ರ ಪ್ರಕರಣ 92(3) ಮತ್ತು ಕಂಪನಿ (ಆಡಳಿತ ವರ್ಗ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನ್ವಯ

I. ನೋಂದಣಿ ಮತ್ತು ಇತರೆ ವಿವರಗಳು :

1.	ಸಿಐಎನ್	U85110KA1966SGC001612
2.	ನೋಂದಣಿ ದಿನಾಂಕ	17.3.1966
3.	ಕಂಪನಿಯ ಹೆಸರು	ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
4.	ಕಂಪನಿಯ ಪ್ರವರ್ಗ/ಉಪ ಪ್ರವರ್ಗ	ಷೇರುಗಳಿಂದ ಕಂಪನಿ ನಿಯಮಿತವಾಗಿದೆ/ರಾಜ್ಯ ಸರ್ಕಾರದ ಕಂಪನಿ
5.	ನೋಂದಾಯಿತ ಕಚೇರಿ ವಿಳಾಸ ಮತ್ತು ಸಂಪರ್ಕ ವಿವರಗಳು	''ಎಂಎಸ್‌ಐಎಲ್ ಹೌಸ್'', ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು - 560 052. ದೂ. ಸಂಖ್ಯೆ : 080-22264021-26
6.	ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಕಂಪನಿಯೇ?	ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿಲ್ಲ
7.	ಇದ್ದಲ್ಲಿ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು	ಅನ್ವಯಿಸುವುದಿಲ್ಲ

II. ಕಂಪನಿಯ ಪ್ರಮುಖ ವ್ಯವಹಾರದ ಚಟುವಟಿಕೆಗಳು (ಕಂಪನಿಯ ಒಟ್ಟು ವಹಿವಾಟಿನ ಶೇ.10 ಅಥವಾ ಅದಕ್ಕೂ ಅಧಿಕ ಕೊಡುಗೆ ನೀಡುತ್ತಿರುವ ಎಲ್ಲಾ ವ್ಯವಹಾರಗಳನ್ನು ತಿಳಿಸತಕ್ಕದ್ದು)

ಕ್ರ. ಸಂ.	ಪ್ರಮುಖ ಉತ್ಪನ್ನಗಳು / ಸೇವೆಗಳ ಹೆಸರು ಮತ್ತು ವಿವರಣೆ	ಉತ್ಪನ್ನ / ಸೇವೆಯ ಎನ್‌ಐಸಿ ಕೋಡ್	ಕಂಪನಿಯ ಒಟ್ಟು ವಹಿವಾಟಿನ %
1	ಪಾನೀಯಗಳು	47221	83.67%
2	ಚಿಟ್ ಫಂಡ್‌ಗಳು	64990	11.43%

III. ಧಾರಕ, ಸಹಾಯಕ ಮತ್ತು ಸಹವರ್ತಿ ಕಂಪನಿಗಳ ವಿವರ :

ಕ್ರ. ಸಂ.	ಹೆಸರು	ಕಂಪನಿ ವಿಳಾಸ	ಸಿಐಎನ್/ ಜಿಎಲ್‌ಎನ್	ಧಾರಕ/ ಸಹಾಯಕ/ ಸಹವರ್ತಿ ಸಂಸ್ಥೆ	ಹೊಂದಿರುವ ಶೇಕಡವಾರು ಷೇರು	ಅನ್ವಯಿತ ಸೆಕ್ಷನ್
1.	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿ.	ಖನಿಜ ಭವನ, 49, 4ನೇ ಮಹಡಿ, ರೇಸ್‌ಕೋರ್ಸ್ ರಸ್ತೆ , ಬೆಂಗಳೂರು-01	U93000KA1964 ULL001532	ಸಹವರ್ತಿ ಸಂಸ್ಥೆ	47%	ಸೆಕ್ಷನ್ 2(6)
2.	ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್	ನಂ.42, ಮೆಹ್ರಾ ಕಾಂಪ್ಲೆಕ್ಸ್, ಮಿಲ್ಲರ್ಸ್ ರಸ್ತೆ, ಬೆಂಗಳೂರು - 52	U51101KA1972 PLC002242	ಸಹಾಯಕ	100%	ಸೆಕ್ಷನ್ 2(87)
3.	ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	ಕೇರಾಫ್ ಎಂಎಸ್‌ಐಎಲ್, ನಂ.36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು - 52	U85110KA1940 SGC000261	ಸಹಾಯಕ	95.10%	ಸೆಕ್ಷನ್ 2(87)
4.	ಫುಡ್ ಕರ್ನಾಟಕ ಲಿಮಿಟೆಡ್	ನಂ.17, ರಿಚ್‌ಮಂಡ್ ರಸ್ತೆ , ಬೆಂಗಳೂರು - 25	U01513KA2003 PLC031873	ಸಹವರ್ತಿ ಸಂಸ್ಥೆ	50%	ಸೆಕ್ಷನ್ 2(6)

VI. ಷೇರು ಹೊಂದಿರುವಿಕೆ ಸ್ವರೂಪ

(ಒಟ್ಟು ಈಕ್ವಿಟಿಯ ಶೇಕಡವಾರು ಆಗಿ ಈಕ್ವಿಟಿ ಷೇರು ಬಂಡವಾಳದ ವಿಭಜನೆ)

ಪ್ರವರ್ಗವಾರು ಷೇರು ಹೊಂದಿರುವಿಕೆ

ಷೇರುದಾರರ ಪ್ರವರ್ಗ	ವರ್ಷಾರಂಭದಲ್ಲಿ (1ನೇ ಏಪ್ರಿಲ್ 2022ರಂದು) ವರ್ಷಾಂತ್ಯದಲ್ಲಿ (31ನೇ ಮಾರ್ಚ್ 2023ರಂದು) ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷಾಂತ್ಯದಲ್ಲಿ (31ನೇ ಮಾರ್ಚ್ 2023ರಂದು) ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷದಲ್ಲಿ ಬದಲಾವಣೆ ಶೇ.
	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ ಶೇ.	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ ಶೇ.	
ಎ. ಪ್ರವರ್ತಕರು									
(1) ಭಾರತೀಯ									
ಎ) ವೈಯಕ್ತಿಕ/ ಹೆಚ್‌ಯುಎಫ್									
ಬಿ) ಕೇಂದ್ರ ಸರ್ಕಾರ									
ಸಿ) ರಾಜ್ಯ ಸರ್ಕಾರ (ಗಳು)		2255817	2255817	53%	N.A.	2255817	2255817	53%	
ಡಿ) ಬಾಡೀಸ್ ಕಾರ್ಪೋರೇಟ್		2017660	2017660	47%	N.A.	2017660	2017660	47%	
ಇ) ಬ್ಯಾಂಕ್‌ಗಳು/ಎಫ್‌ಐ									
ಎಫ್) ಇತರೆ ಯಾವುದೇ									
ಪ್ರವರ್ತಕರ (ಎ) ಒಟ್ಟು ಷೇರುದಾರಿಕೆ		**4273477**	**4273477**	**100%**	N.A.	**4273477**	**4273477**	**100%**	
ಬಿ. ಸಾರ್ವಜನಿಕ ಷೇರುದಾರಿಕೆ									
1. ಸಂಸ್ಥೆಗಳು									
ಎ) ಮ್ಯೂಚುವಲ್ ಫಂಡ್ಸ್									
ಬಿ) ಬ್ಯಾಂಕ್‌ಗಳು/ಎಫ್‌ಐ									
ಸಿ) ಕೇಂದ್ರ ಸರ್ಕಾರ									
ಡಿ) ರಾಜ್ಯ ಸರ್ಕಾರ(ಗಳು)									
ಇ) ವೆಂಚರ್ ಕ್ಯಾಪಿಟಲ್ ಫಂಡ್ಸ್									
ಎಫ್) ವಿಮಾ ಕಂಪನಿಗಳು									
ಜಿ) ಎಫ್‌ಐಐಎಸ್									
ಹೆಚ್) ವಿದೇಶಿ ವೆಂಚರ್ ಕ್ಯಾಪಿಟಲ್ ಫಂಡ್ಸ್									
ಐ) ಇತರೆ (ವಿವರಿಸಿ)									
ಉಪ ಒಟ್ಟು (ಬಿ)(1):									
2. ಸಂಸ್ಥೆಯೇತರ									
ಎ) ಬಾಡೀಸ್ ಕಾರ್ಪೋರೇಟ್									
i) ಭಾರತೀಯ									
ii) ಸಾಗರೋತ್ತರ									
ಬಿ) ವೈಯಕ್ತಿಕ									

i) ರೂ.1 ಲಕ್ಷದವರೆಗಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು									
ii) ರೂ.1 ಲಕ್ಷಕ್ಕೂ ಹೆಚ್ಚಿನ ಸಾಧಾರಣ ಷೇರು ಬಂಡವಾಳ ಹೊಂದಿರುವ ವ್ಯಕ್ತಿ ಷೇರುದಾರರು									
ಸಿ) ಇತರೆ (ವಿವರಿಸಿ)									
ಅನಿವಾಸಿ ಭಾರತೀಯರು									
ಸಾಗರೋತ್ತರ ಕಾರ್ಪೊರೇಟ್ ಸಂಸ್ಥೆಗಳು									
ವಿದೇಶಿ ಪ್ರಜೆಗಳು									
ಕ್ಲಿಯರಿಂಗ್ ಮೆಂಬರ್ಸ್									
ಟ್ರಸ್ಟ್									
ವಿದೇಶಿ ಸಂಸ್ಥೆಗಳು-ಡಿಆರ್									
ಉಪ ಒಟ್ಟು (ಬಿ)(2):									
ಒಟ್ಟು ಸಾರ್ವಜನಿಕ ಷೇರುದಾರಿಕೆ (ಬಿ)=(ಬಿ)(1)+ (ಬಿ)(2)									
ಸಿ. ಜಿಡಿಆರ್ ಮತ್ತು ಎಡಿಆರ್ ಗಳ ಮೇಲ್ವಿಚಾರಕರು ಹೊಂದಿರುವ ಷೇರು									
ಅಂತಿಮ ಒಟ್ಟು (ಎ+ಬಿ+ಸಿ)		**4273477**	**4273477**	**100%**	**ಅನ್ವಯವಾಗದು**	**4273477**	**4273477**	**100%**	**ಇಲ್ಲ**

MSIL

ಬಿ) ಪ್ರವರ್ತಕರು ಹೊಂದಿರುವ ಷೇರುದಾರಿಕೆ

ಕ್ರ. ಸಂ.	ಷೇರುದಾರರ ಹೆಸರು	ವರ್ಷಾರಂಭದಲ್ಲಿ ಹೊಂದಿದ್ದ ಷೇರುಗಳು			ವರ್ಷಾಂತ್ಯದಲ್ಲಿ ಹೊಂದಿದ್ದ ಷೇರುಗಳು			ವರ್ಷದಲ್ಲಿನ ಷೇರು ದಾರಿಕೆಯ ಬದಲಾವಣೆ ಶೇ.
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರಿನ ಶೇ.	ಒಟ್ಟು ಷೇರುಗಳಿಗೆ ಅಡಮಾನ / ಹೊರೆಯ ಶೇ.	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.	ಒಟ್ಟು ಷೇರುಗಳಿಗೆ ಅಡಮಾನ / ಹೊರೆಯ/ ಶೇ.	
1	ಕರ್ನಾಟಕದ ರಾಜ್ಯಪಾಲರು	2255817	53%		2255817	53%		
2	ಕೆಎಸ್ಐಐಡಿಸಿ ಕೆಳಕಂಡ 6 ವ್ಯಕ್ತಿಗಳು ಕೆಎಸ್ಐಐಡಿಸಿಯ ಪರವಾಗಿ ಷೇರು ಹೊಂದಿರುವರು	2017570	47%		2017570	47%		
	1) ಎಂಡಿ, ಕೆಎಸ್ಐಐಡಿಸಿ	40			40			
	2) ಎಂಡಿ, ಎಂಎಸ್ಐಎಲ್	10			10			
	3) ಡಿ.ಪಿ.ಪ್ರಕಾಶ್	20			20			
	4) ವೈ.ಶ್ರೀನಿವಾಸಪ್ಪ	10			10			
	5) ಎನ್.ಕೆ. ಪರಶುರಾಮ್	10			10			

ಸಿ) ಪ್ರವರ್ತಕರ ಷೇರುದಾರಿಕೆಯಲ್ಲಿ ಬದಲಾವಣೆ (ಬದಲಾವಣೆ ಇಲ್ಲದಿದ್ದರೆ ವಿವರಿಸಿ)

ಕ್ರ. ಸಂ.	ವಿವರಗಳು	ವರ್ಷಾರಂಭದಲ್ಲಿ ಹೊಂದಿದ್ದ ಷೇರುದಾರಿಕೆ		ವರ್ಷಾವಧಿಯಲ್ಲಿ ಹೊಂದಿದ್ದ ಸಂಚಿತ ಷೇರುದಾರಿಕೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.
	ವರ್ಷಾರಂಭದಲ್ಲಿ	ಬದಲಾವಣೆಯಿಲ್ಲ.			
	ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ ಮತ್ತು ಏರಿಕೆ / ಇಳಿಕೆ ಬಗ್ಗೆ ಕಾರಣ ತಿಳಿಸಿ (ಉದಾ: ಹಂಚಿಕೆ/ವರ್ಗಾವಣೆ/ ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ):				
	ವರ್ಷಾಂತ್ಯದಲ್ಲಿ				

ಡಿ) ಪ್ರಮುಖ ಹತ್ತು ಷೇರುದಾರರ ಷೇರುದಾರಿಕೆ ಮಾದರಿ :

(ನಿರ್ದೇಶಕರು, ಪ್ರವರ್ತಕರು ಮತ್ತು ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಧಾರಕರು ಹೊರತಾಗಿ): ಇಲ್ಲ

ಇ) ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು:

ಕ್ರ. ಸಂ.	ಪ್ರತಿ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿ ಹೊಂದಿರುವ ಷೇರುಗಳು	ವರ್ಷಾರಂಭದಲ್ಲಿ ಹೊಂದಿದ್ದ ಷೇರುದಾರಿಕೆ		ವರ್ಷಾವಧಿಯಲ್ಲಿ ಹೊಂದಿದ್ದ ಸಂಚಿತ ಷೇರುದಾರಿಕೆ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇ.
	ವರ್ಷಾರಂಭದಲ್ಲಿ–				
1.	ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ	40	0.001%	40	0.001%
2	ವ್ಯವಸ್ಥಾಪಕ ನಿರ್ದೇಶಕರು, ಎಂಎಸ್ಐಎಲ್/ಪ್ರಮುಖ ಆಡಳಿತ ಸಿಬ್ಬಂದಿ	10	0.0005%	10	0.0005%

	ವರ್ಷದಲ್ಲಿ ಪ್ರವರ್ತಕರ ಷೇರುದಾರಿಕೆಯಲ್ಲಿ ದಿನಾಂಕವಾರು ಏರಿಕೆ/ಇಳಿಕೆ. ಈ ಏರಿಕೆ / ಇಳಿಕೆಗೆ ಕಾರಣ ವಿವರಿಸಿ (ಉದಾ: ಹಂಚಿಕೆ/ ವರ್ಗಾವಣೆ/ಬೋನಸ್/ಸ್ವೆಟ್ ಈಕ್ವಿಟಿ ಇತ್ಯಾದಿ) :				
	ವರ್ಷಾಂತ್ಯದಲ್ಲಿ – ಷೇರುದಾರಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ	ಬದಲಾವಣೆ ಇಲ್ಲ			

V. ಋಣಗಾರಿಕೆ– ಕಂಪನಿಯ ಋಣಗಾರಿಕೆಯಲ್ಲಿ ಬಾಕಿಯಿರುವ/ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ ಸೇರಿರುವುದು

(ರೂ. ಲಕ್ಷಗಳಲ್ಲಿ)

	ಠೇವಣಿ ಹೊರತಾದ ಭದ್ರತಾ ಸಾಲಗಳು	ಅಭದ್ರತಾ ಸಾಲಗಳು	ಠೇವಣಿಗಳು	ಒಟ್ಟು ಋಣಬದ್ಧತೆ
ಹಣಕಾಸು ವರ್ಷಾರಂಭದಲ್ಲಿದ್ದ ಋಣಬದ್ಧತೆ				
i) ಅಸಲು ಮೊತ್ತ	-	-	-	-
ii) ಪಾವತಿಸಬೇಕಾಗಿರುವ ಆದರೆ ಪಾವತಿಸದಿರುವ ಬಡ್ಡಿ	-	-	-	-
iii) ಸಂಚಯನವಾದ ಆದರೆ ಪಾವತಿ ಮಾಡಬೇಕಿಲ್ಲದ ಬಡ್ಡಿ	-	-	-	-
ಒಟ್ಟು (i+ii+iii)	-	-	-	-
ಹಣಕಾಸು ವರ್ಷದ ಅವಧಿಯಲ್ಲಿ ಋಣಬದ್ಧತೆಯಲ್ಲಿನ ಬದಲಾವಣೆ				
★ ಸೇರ್ಪಡೆ				
★ ಕ್ಷೀಣತೆ				
ನಿವ್ವಳ ಬದಲಾವಣೆ				
ಹಣಕಾಸು ವರ್ಷಾಂತ್ಯದಲ್ಲಿದ್ದ ಋಣಬದ್ಧತೆ				
i) ಅಸಲು ಮೊತ್ತ				
ii) ಪಾವತಿಸಬೇಕಾದ ಆದರೆ ಪಾವತಿಸಿಲ್ಲದ ಬಡ್ಡಿ	-	-	-	-
iii) ಸಂಚಯನವಾಗಿರುವ ಆದರೆ ಪಾವತಿಸಲು ಬಾಕಿ ಇಲ್ಲದ ಬಡ್ಡಿ				
ಒಟ್ಟು (i+ii+iii)	-	-	-	-

VI. ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಸಂಭಾವನೆ :

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿಯ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಸಂಭಾವನೆ : (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಸಂಭಾವನೆಯ ವಿವರ	ಎಂಡಿ/ಡಬ್ಲ್ಯೂಟಿಡಿ/ವ್ಯವಸ್ಥಾಪಕರ ಹೆಸರು				ಒಟ್ಟು ಮೊತ್ತ
		ಎಂಡಿ	.....	.....	.....	
1	ಒಟ್ಟು ವೇತನ					
	(ಎ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(1)ರಲ್ಲಿ ಒಳಗೊಂಡಿರುವ ಮುನ್ನೇರ್ಪಾಡುಗಳಂತೆ ವೇತನ	40.02	–	–	–	40.02
	(ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ					
	(ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(3)ರನ್ವಯ ವೇತನದ ಬದಲಾಗಿ ಲಾಭ					
2	ಸ್ಟಾಕ್ ಆಪ್ಷನ್					
3	ಸ್ವೆಟ್ ಈಕ್ವಿಟಿ					

4	ಕಮಿಷನ್ – –ಲಾಭದ ಶೇಕಡವಾರು ಆಗಿ – –ಇತರೆ, ವಿವರಿಸಿ ...					
5	ಇತರೆ, ವಿವರಿಸಿ	–	–	–	–	–
	ಒಟ್ಟು (ಎ)	**40.02**				**40.02**
	ಕಾಯ್ದೆಯಂತೆ ಮಿತಿ					

ಬಿ. ಇತರೆ ನಿರ್ದೇಶಕರಿಗೆ ಸಂಭಾವನೆ :

ಕ್ರ.ಸಂ.	ಸಂಭಾವನೆಯ ವಿವರ	ನಿರ್ದೇಶಕರ ಹೆಸರು	ಒಟ್ಟು ಮೊತ್ತ
1	**ಸ್ವತಂತ್ರ ನಿರ್ದೇಶಕರು:** **ಮಂಡಳಿ/ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ**	ಡಾ. ರವಿಶಂಕರ್ ಜೆ. ಐಎಎಸ್	4000
		ಶ್ರೀ ಆರ್.ರಮೇಶ್	14000
		ಶ್ರೀ ವೆಂಕಟೇಶ್ ನಾಯ್ಡು	18000
	ಕಮಿಷನ್		
	ಇತರೆ, ದಯಮಾಡಿ ವಿವರಿಸಿ		
	ಒಟ್ಟು (1)		36000
2	**ಇತರೆ ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು**	ಡಾ. ಎಂ.ಆರ್.ರವಿ, ಭಾ.ಆ.ಸೇ	10000
	ಮಂಡಳಿ ಸಮಿತಿ ಸಭೆಗಳಿಗೆ ಹಾಜರಾಗಿದ್ದಕ್ಕೆ ಶುಲ್ಕ	ಶ್ರೀ ಕೆ.ನಿತೀಶ್. ಭಾ.ಆ.ಸೇ	12000
		ಶ್ರೀ ಚನ್ನದೇವರು	15000
		ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ	12000
		ಶ್ರೀ ಅಂದಪ್ಪ ಜವಳಿ	12000
		ಶ್ರೀ ಶಿವಾಜಿ ಶಿವರಾಯ್ ಡೊಲ್ಲಿ	12000
		ಶ್ರೀ ನಿಂಗಪ್ಪ	6000
		ಶ್ರೀ ಕೆ.ಎಂ.ರವೀಂದ್ರ	12000
		ಡಾ.ಆರ್.ಡಿ ಸತೀಶ್	15000
		ಶ್ರೀ ಶಶಿಧರ್ ಬಿ.ಹೊನ್ನಣ್ಣವರ್	3000
	ಕಮಿಷನ್		
	ಇತರೆ, ದಯಮಾಡಿ ವಿವರಿಸಿ		
	ಒಟ್ಟು (2)		**1,09,000**
	ಒಟ್ಟು (ಬಿ)=(1+2)		**1,45,000**
	ವ್ಯವಸ್ಥಾಪಕರ ಒಟ್ಟು ಸಂಭಾವನೆ		
	ಕಾಯ್ದೆಯಂತೆ ಒಟ್ಟಾರೆ ಮಿತಿ		

ಸಿ. ಎಂಡಿ/ವ್ಯವಸ್ಥಾಪಕರು/ಡಬ್ಲ್ಯೂಟಿಡಿ ಹೊರತಾಗಿ ಪ್ರಮುಖ ಆಡಳಿತ ಸಿಬ್ಬಂದಿ ಸಂಭಾವನೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಸಂಭಾವನೆಯ ವಿವರಗಳು	ಪ್ರಮುಖ ಆಡಳಿತ ಸಿಬ್ಬಂದಿ			
		ಸಿಇಒ	ಸಿಎಸ್	ಸಿಎಫ್ಒ	ಒಟ್ಟು
1	ಒಟ್ಟು ವೇತನ		28.06	37.76	65.82
	(ಎ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(1)ರಲ್ಲಿ ಇರುವ ಮುನ್ನೇರ್ಪಾಡುಗಳಂತೆ ವೇತನ				
	(ಬಿ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(2)ರನ್ವಯ ಅನುಷಂಗಿಕ ಸವಲತ್ತುಗಳ ಮೌಲ್ಯ		0.51	1.02	1.53
	(ಸಿ) ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 17(3)ರನ್ವಯ ವೇತನಕ್ಕೆ ಬದಲಾಗಿ ಲಾಭ				
2	ಸ್ಟಾಕ್ ಆಪ್ಷನ್				
3	ಸ್ವೆಟ್ ಈಕ್ವಿಟಿ				
4	ಕಮಿಷನ್				
	-ಲಾಭ ಶೇ, ಆಗಿ				
	ಇತರೆ, ವಿವರಿಸಿ				
5	ಇತರೆ, ದಯಮಾಡಿ ವಿವರಿಸಿ				
	ಒಟ್ಟು		**28.57**	**38.78**	**67.35**

VII. ದಂಡಗಳು/ಶಿಕ್ಷೆ/ಅಪರಾಧಗಳ ಸಂಯೋಜನೆ :

ಮಾದರಿ	ಕಂಪನಿಗಳ ಕಾಯ್ದೆಯ ಸೆಕ್ಷನ್	ಸಂಕ್ಷಿಪ್ತ ವಿವರ	ವಿಧಿಸಿದ ದಂಡ /ಶಿಕ್ಷೆ ಸಂಯೋಜಿತ ಶುಲ್ಕದ ವಿವರ	ಪ್ರಾಧಿಕಾರ [RD / NCLT/ ಕೋರ್ಟ್]	ಸಲ್ಲಿಸಿರುವ ಮೇಲ್ಮನವಿ ಯಾವುದೇ ಇದ್ದಲ್ಲಿ (ವಿವರ ನೀಡಿ)
ಎ. ಕಂಪನಿ	ಇಲ್ಲ				
ದಂಡ					
ಶಿಕ್ಷೆ					
ಸಂಯೋಜಿತ					
ಬಿ. ನಿರ್ದೇಶಕರು	ಇಲ್ಲ				
ದಂಡ					
ಶಿಕ್ಷೆ					
ಸಂಯೋಜಿತ					
ಸಿ. ತಪ್ಪಿತಸ್ಥ ಇತರೆ ಅಧಿಕಾರಿಗಳು	ಇಲ್ಲ				
ದಂಡ					
ಶಿಕ್ಷೆ					
ಸಂಯೋಜಿತ					

ಸಹಾಯಕ ಕಂಪನಿ ಸಂಬಂಧ ಕಂಪನಿಗಳ ಕಾಯ್ದೆ 1956ರ ಸೆಕ್ಷನ್ 212(8)ರ ಅನ್ವಯ ಹೇಳಿಕೆ

ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ 2011ರ ಫೆಬ್ರವರಿ 8ರ ಸಾಮಾನ್ಯ ಸುತ್ತೋಲೆ ಸಂಖ್ಯೆ 2/2011ರ ಅನುಸಾರ ಸಹಾಯಕ ಕಂಪನಿಯ ಸ್ಥಿತಿ ವಿವರಣಾ ಪಟ್ಟಿ , ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ಇತರೆ ದಾಖಲಾತಿಗಳನ್ನು ಕಂಪನಿಯ ವಾರ್ಷಿಕ ಲೆಕ್ಕಪತ್ರಗಳೊಂದಿಗೆ ಲಗತ್ತಿಸಿಲ್ಲ . ಸಹಾಯಕ ಕಂಪನಿಯ ವಾರ್ಷಿಕ ಲೆಕ್ಕಪತ್ರಗಳು ಮತ್ತು ಸಂಬಂಧಿತ ಮಾಹಿತಿಯನ್ನು ಕೋರಿಕೆ ಮೇರೆಗೆ ಕಂಪನಿಯ ಮತ್ತು ಇದರ ಸಹಾಯಕ ಕಂಪನಿಯ ಷೇರುದಾರರಿಗೆ ಒದಗಿಸಲಾಗುವುದು ಹಾಗೂ ಇವುಗಳನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಮತ್ತು ಸಹಾಯಕ ಕಂಪನಿಯಲ್ಲಿ ಷೇರುದಾರರ ಪರಿಶೀಲನೆಗೆ ತೆರೆದಿಡಲಾಗುವುದು.

(ರೂ.ಲಕ್ಷಗಳಲ್ಲಿ)

ಸಹಾಯಕ ಕಂಪನಿಯ ಹೆಸರು	ಮೆ।। ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿ.
ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ	75.74
ಮೀಸಲುಗಳು	(835.39)
ಒಟ್ಟು ಆಸ್ತಿಗಳು	72.01
ಒಟ್ಟು ಹೊಣೆಗಾರಿಕೆಗಳು	907.73
ಹೂಡಿಕೆಗಳು	–
ವಹಿವಾಟು	–
ತೆರಿಗೆಗೆ ಮುಂಚಿನ ಲಾಭ/(ನಷ್ಟ)	4.04
ತೆರಿಗೆಗಾಗಿ ಮುನ್ನೇರ್ಪಾಡು	1.05
ತೆರಿಗೆ ನಂತರದ ಲಾಭ/(ನಷ್ಟ)	2.99

ಸಹಾಯಕ ಕಂಪನಿಯ ಹೆಸರು	ಮೆ।। ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್
ವಿತರಿಸಿದ ಮತ್ತು ಚಂದಾದಾರಿತ ಬಂಡವಾಳ	357.25
ಮೀಸಲುಗಳು	19338.66
ಒಟ್ಟು ಆಸ್ತಿಗಳು	42579.52
ಒಟ್ಟು ಹೊಣೆಗಾರಿಕೆಗಳು	22682.59
ಹೂಡಿಕೆಗಳು	–
ವಹಿವಾಟು	57914.37
ತೆರಿಗೆಗೆ ಮುಂಚಿನ ಲಾಭ/(ನಷ್ಟ)	3405.16
ತೆರಿಗೆಗಾಗಿ ಮುನ್ನೇರ್ಪಾಡು	772.63
ತೆರಿಗೆ ನಂತರದ ಲಾಭ/(ನಷ್ಟ)	2632.53
ಉದ್ದೇಶಿತ ಲಾಭಾಂಶ	

ಅನುಬಂಧ-II

ಫಾರಂ ಎಒಸಿ-1

ಸಹಾಯಕ ಕಂಪನಿಗಳು/ಸಹವರ್ತಿ ಕಂಪನಿಗಳು/ಸಹಭಾಗಿ ಉದ್ಯಮಗಳ ಹಣಕಾಸು ಹೇಳಿಕೆಗಳ ವೈಶಿಷ್ಟ್ಯತೆಯನ್ನು ಒಳಗೊಂಡ ವಿವರ

ಭಾಗ ಎ : ಸಹಾಯಕ ಕಂಪನಿಗಳು

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಸಹಾಯಕ ಕಂಪನಿ ಹೆಸರು	ವರದಿ ಅವಧಿ	ವರದಿಯಲ್ಲಿ ಬಳಸಿರುವ ಕರೆನ್ಸಿ	ಷೇರು ಬಂಡವಾಳ (ಆದ್ಯತಾ ಷೇರು ಸೇರಿ)	ಮೀಸಲುಗಳು ಮತ್ತು ಹೆಚ್ಚಳಗಳು	ಒಟ್ಟು ಆಸ್ತಿ	ಒಟ್ಟು ಹೊಣೆಗಾರಿಕೆಗಳು (ಷೇರು ಬಂಡವಾಳ ಮತ್ತು ಮೀಸಲು ಹೊರತುಪಡಿಸಿ)	ಹೂಡಿಕೆಗಳು	ವಹಿವಾಟು	ಇತರೆ ಆದಾಯ	ಒಟ್ಟು ಆದಾಯ	ತೆರಿಗೆಗೆ ಮುಂಚಿನ ಲಾಭ/ ನಷ್ಟ	ತೆರಿಗೆಗಾಗಿ ಮುನ್ನೇರ್ಪಾಡು (ಮುಂದೂಡಿದ ತೆರಿಗೆ ಸೇರಿ)	ತೆರಿಗೆ ನಂತರದ ಲಾಭ/ (ನಷ್ಟ)	ಈಕ್ವಿಟಿ ಷೇರುಗಳ ಮೇಲೆ ಉದ್ದೇಶಿತ ಲಾಭಾಂಶ ಶೇ.	ಈಕ್ವಿಟಿ ಷೇರುಗಳ ಮೇಲೆ ಪ್ರಸ್ತಾಪಿತ ಲಾಭಾಂಶ	ಷೇರುದಾರಿಕೆ ಶೇಕಡವಾರು
1	ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್	31.03.2023	ಭಾರತದ ರೂಪಾಯಿ	357.25	19338.66	42579.52	22682.59	–	57914.37	644.27	58558.64	3405.16	772.63	2632.53	–	–	100%
2	ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	31.03.2023	ಭಾರತದ ರೂಪಾಯಿ	75.74	(835.39)	72.00	907.73	–	–	6.89	6.89	4.04	1.05	2.99	–	–	95.10%

ಅನುಬಂಧ-III

ಸಿಎಸ್ಆರ್ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿ

(ಕಂಪನಿಗಳ ಕಾಯ್ದೆ-2013ರ ಪ್ರಕರಣ 135ರ ಅನ್ವಯ)

1. ಕಂಪನಿಯ ಸಿಎಸ್ಆರ್ ನೀತಿಯ ಸಂಕ್ಷಿಪ್ತ ವಿವರ: ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಉಪಬಂಧಗಳು ಮತ್ತು ಕಂಪನಿಗಳ (ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ) ನಿಯಮಗಳು 2014ರ ಅನ್ವಯ, ಕಂಪನಿಯು ಸಿಎಸ್ಆರ್ ಚಟುವಟಿಕೆಗಳ ಬಗ್ಗೆಗಿನ ನೀತಿಯನ್ನು ರೂಪಿಸಿದೆ. ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳನ್ನು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-VII ರ ಅನುಸಾರ ಹಮ್ಮಿಕೊಳ್ಳಲಾಗುವುದು. ಇವು ಸಿಎಸ್ಆರ್ ನೀತಿಯಲ್ಲಿ ಕ್ರಮವಾಗಿ ಸೇರ್ಪಡೆಯಾಗಿರುವವು ಮತ್ತು ನಮ್ಮ ಎಲ್ಲಾ ಕಾರ್ಯಕ್ರಮಗಳಿಗೆ ಮಾರ್ಗದರ್ಶಿ ನೀತಿಗಳಾಗಿರುವವು.

2. ಸಿಎಸ್ಆರ್ ಸಮಿತಿಯ ಸಂರಚನೆ

ಕ್ರ. ಸಂ	ನಿರ್ದೇಶಕರ ಹೆಸರು	ಪದನಾಮ/ನಿರ್ದೇಶಕತ್ವದ ಸ್ವರೂಪ	ವರ್ಷದ ಅವಧಿಯಲ್ಲಿ ನಡೆಸಿರುವ ಸಿಎಸ್ಆರ್ ಸಮಿತಿ ಸಭೆಗಳ ಸಂಖ್ಯೆ	ವರ್ಷದ ಅವಧಿಯಲ್ಲಿ ಹಾಜರಾಗಿದ್ದ ಸಿಎಸ್ ಆರ್ ಸಮಿತಿ ಸಭೆಗಳ ಸಂಖ್ಯೆ
1	ಶ್ರೀ ವಿಕಾಶ್‌ಕುಮಾರ್ ವಿಕಾಶ್, ಭಾ.ಪೋ.ಸೇ	ವ್ಯವಸ್ಥಾಪಕ ನಿರ್ದೇಶಕರು	1	1
2	ಶ್ರೀ ಆರ್.ರಮೇಶ್	ಸ್ವತಂತ್ರ ನಿರ್ದೇಶಕರು	1	1
3	ಶ್ರೀ ಸಿ ಚನ್ನದೇವರು	ನಾಮ ನಿರ್ದೇಶಿತ ನಿರ್ದೇಶಕರು	1	1
4	ಡಾ.ಆರ್.ಡಿ.ಸತೀಶ್	ನಾಮ ನಿರ್ದೇಶಿತ ನಿರ್ದೇಶಕರು	1	1

3. ವೆಬ್-ಲಿಂಕ್ (ಸ್) ಮಂಡಳಿಯಿಂದ ಅನುಮೋದಿತವಾಗಿರುವ ಸಿಎಸ್ಆರ್ ಸಮಿತಿ ಸಂಯೋಜನೆ, ಸಿಎಸ್ಆರ್ ನೀತಿ ಮತ್ತು ಸಿಎಸ್ಆರ್ ಯೋಜನೆಗಳನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರಕಟಪಡಿಸಿದೆ.

i. ಸಿಎಸ್ಆರ್ ಸಮಿತಿ ಸಂಯೋಜನೆ: **https://www.msilonline.com/committee-of-the board**

ii. ಸಿಎಸ್ಆರ್ ನೀತಿ: **https://www.msilonline.com/csr-policy**

iii. ಮಂಡಳಿಯು ಅನುಮೋದಿಸಿರುವ ಸಿಎಸ್ಆರ್ ಯೋಜನೆಗಳು: **https://www.msilonline.com/csr-contributions**

4. ಅನ್ವಯವಾದಲ್ಲಿ ನಿಯಮ 8ರ ಉಪ ನಿಯಮ (3)ರ ಅನ್ವಯ ನಡೆದಿರುವ ಸಿಎಸ್ಆರ್ ಯೋಜನೆಗಳ ಪರಿಣಾಮದ ನಿರ್ಧರಣೆಯ ವೆಬ್-ಲಿಂಕ್ (ಗಳ) ಜೊತೆಗೆ ಕಾರ್ಯನಿರ್ವಾಹಕ ಸಾರಾಂಶ ನೀಡಿ:

ಕಂಪನಿಯು ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳಲ್ಲಿ ರೂ.10 ಕೋಟಿ ಅಥವಾ ಅದಕ್ಕೂ ಹೆಚ್ಚಿನ ಸಿಎಸ್ಆರ್ ಹೊಣೆಗಾರಿಕೆಯನ್ನು ಹೊಂದಿರದ ಪ್ರಯುಕ್ತ ಸಿಎಸ್ಆರ್ ಯೋಜನೆಗಳ ಮೇಲಿನ ಪರಿಣಾಮ ನಿರ್ಧರಣೆಯು ಕಂಪನಿಗೆ ಅನ್ವಯವಾಗುವುದಿಲ್ಲ.

5. (ಎ) ಪ್ರಕರಣ 135ರ ಉಪ-ಪ್ರಕರಣ(5)ರ ಅನ್ವಯ ಕಂಪನಿಯ ಸರಾಸರಿ ನಿವ್ವಳ ಲಾಭ ರೂ.6450.60 ಲಕ್ಷಗಳು.

(ಬಿ) ಪ್ರಕರಣ 135ರ ಉಪ ಪ್ರಕರಣ(5)ರ ಅನ್ವಯ ಕಂಪನಿಯ ಸರಾಸರಿ ನಿವ್ವಳ ಲಾಭದ ಶೇಕಡ ಎರಡರಷ್ಟು: ರೂ.129.01 ಲಕ್ಷಗಳು.

(ಸಿ) ಹಿಂದಿನ ಹಣಕಾಸಿನ ವರ್ಷಗಳಲ್ಲಿನ ಸಿಎಸ್ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಉಂಟಾಗಿರುವ ಹೆಚ್ಚುವರಿ: ಇಲ್ಲ

(ಡಿ) ಹಣಕಾಸಿನ ವರ್ಷದಲ್ಲಿ ಯಾವುದೇ ಇದ್ದಲ್ಲಿ ವಜಾ ಮಾಡಬೇಕಾಗಿರುವ ಮೊತ್ತ : ರೂ.49.36 ಲಕ್ಷ

(ಇ) ಹಣಕಾಸಿನ ವರ್ಷದಲ್ಲಿ ಒಟ್ಟು ಸಿಎಸ್ಆರ್‌ನ ಹೊಣೆಗಾರಿಕೆ [(ಬಿ)+(ಸಿ)-(ಡಿ)]: ರೂ.79.65 ಲಕ್ಷಗಳು

6. (ಎ) ಸಿಎಸ್ಆರ್ ಯೋಜನೆಗಳ ಮೇಲೆ ಖರ್ಚು ಮಾಡಿರುವ ಮೊತ್ತ (ನಡೆಯುತ್ತಿರುವ ಯೋಜನೆ ಮತ್ತು ನಡೆಯುತ್ತಿರುವ ಯೋಜನೆಯ ಹೊರತಾದದು ಸೇರಿದಂತೆ ಎರಡೂ): ರೂ.90.66 ಲಕ್ಷಗಳು

(ಬಿ) ಆಡಳಿತಾತ್ಮಕ ಮೇಲ್ವೆಚ್ಚಗಳಿಗೆ ಖರ್ಚು ಮಾಡಿರುವ ಮೊತ್ತ : ಇಲ್ಲ

(ಸಿ) ಅನ್ವಯವಾದಲ್ಲಿ, ಪರಿಣಾಮ ನಿರ್ಧರಣೆ ಬಗ್ಗೆ ಖರ್ಚು ಮಾಡಿರುವ ಮೊತ್ತ : ಇಲ್ಲ

(ಡಿ) ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ : [(ಎ)+(ಬಿ)+(ಸಿ)]: ರೂ.90.66 ಲಕ್ಷಗಳು

(ಇ) ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಅಥವಾ ಖರ್ಚು ಮಾಡದಿರುವ ಸಿಎಸ್ಆರ್ ಮೊತ್ತ :

ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ (ರೂ.ಗಳಲ್ಲಿ) (ಲಕ್ಷಗಳಲ್ಲಿ)	ಖರ್ಚು ಮಾಡದಿರುವ ಮೊತ್ತ (ರೂ.ಗಳಲ್ಲಿ)		ಪ್ರಕರಣ 135ರ ಉಪ ಪ್ರಕರಣ (5)ರ ದ್ವಿತೀಯ ಉಪಬಂಧದ ಅನ್ವಯ ಪರಿಚ್ಛೇದ-vii ರ ಅನ್ವಯ ನಿರ್ದಿಷ್ಟಪಡಿಸಿರುವ ಯಾವುದೇ ನಿಧಿಗೆ ವರ್ಗಾವಣೆ ಮಾಡಿರುವ ಮೊತ್ತ		
	ಪ್ರಕರಣ 135ರ ಉಪ ಪ್ರಕರಣ (6)ರನ್ವಯ ಖರ್ಚು ಮಾಡಿರದ ಸಿಎಸ್ಆರ್ ಖಾತೆಗೆ ವರ್ಗಾಯಿಸಿರುವ ಒಟ್ಟು ಮೊತ್ತ				
	ಮೊತ್ತ	ವರ್ಗಾಯಿಸಿದ ದಿನಾಂಕ	ನಿಧಿಯ ಹೆಸರು	ಮೊತ್ತ	ವರ್ಗಾವಣೆಯ ದಿನಾಂಕ
121.6	–	–	–	–	–

ಎಫ್. ಯಾವುದೇ ಇದ್ದಲ್ಲಿ, ವರ್ಗಾವಣೆ ಮಾಡಬೇಕಾದ (Set-off) ಹೆಚ್ಚುವರಿ ಮೊತ್ತ :

ಕ್ರ.ಸಂ.	ವಿವರಗಳು	ಮೊತ್ತ (ರೂ.ಗಳಲ್ಲಿ) (ಲಕ್ಷಗಳಲ್ಲಿ)
1	2	3
i	ಪ್ರಕರಣ 135ರ ಉಪ ಪ್ರಕರಣ (5)ರ ಅನ್ವಯ ಕಂಪನಿಯ ಒಟ್ಟಾರೆ ನಿವ್ವಳ ಲಾಭದ ಶೇಕಡ ಎರಡಷ್ಟು	129.01
ii	ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ	90.66
iii	ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿದ ಹೆಚ್ಚುವರಿ ಮೊತ್ತ (ii)-(i)	38.35
iv	ಯಾವುದೇ ಇದ್ದಲ್ಲಿ, ಹಿಂದಿನ ಹಣಕಾಸಿನ ವರ್ಷಗಳ ಸಿಎಸ್ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಉಂಟಾಗಿರುವ ಹೆಚ್ಚುವರಿ ಮೊತ್ತ	49.36
v	ಮುಂಬರುವ ಹಣಕಾಸಿನ ವರ್ಷಗಳಿಗೆ ವರ್ಗಾವಣೆ ಮಾಡಲು ದೊರೆಯುವ ಮೊತ್ತ [(iii)-(iv)]	11.01

7. ಹಿಂದಿನ ಮೂರು ಹಣಕಾಸಿನ ವರ್ಷಗಳಿಗೆ ಖರ್ಚು ಮಾಡಿರದ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಮೊತ್ತದ ವಿವರ:

(1)	(2)	(3)	(4)	(5)	(6)		(7)
ಕ್ರ. ಸಂ.	ಹಿಂದಿನ ಹಣಕಾಸಿನ ವರ್ಷ(ಗಳು)	ಪ್ರಕರಣದ 135ರ ಉಪ ಪ್ರಕರಣ (6) ರ ಅನ್ವಯ ಖರ್ಚು ಮಾಡಿರದ ಸಿಎಸ್ಆರ್ ಖಾತೆಗೆ ವರ್ಗಾಯಿಸಿರುವ ಮೊತ್ತ (ರೂ.ಗಳಲ್ಲಿ)	ಪ್ರಕರಣ 135ರ ಉಪ ಪ್ರಕರಣ (6) ರ ಅನ್ವಯ ಖರ್ಚು ಮಾಡಿರದ ಸಿಎಸ್ ಆರ್ ಖಾತೆಯಲ್ಲಿ ಉಳಿದಿರುವ ಮೊತ್ತ (ರೂ.ಗಳಲ್ಲಿ)	ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಮೊತ್ತ (ರೂ.ಗಳಲ್ಲಿ)	ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿದ ಮೊತ್ತ (ರೂ.ಗಳಲ್ಲಿ) ಯಾವುದೇ ಇದ್ದಲ್ಲಿ ಪ್ರಕರಣ 135ರ ಉಪ ಪ್ರಕರಣ(5)ರ ದ್ವಿತೀಯ ಉಪಬಂಧದ ಅನ್ವಯ ಪರಿಚ್ಛೇದ (vii) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ನಿಧಿಗೆ ವರ್ಗಾವಣೆ ಮಾಡಿರುವ ಮೊತ್ತ		ಮುಂದಿನ ಹಣಕಾಸಿನ ವರ್ಷಗಳಲ್ಲಿ ಖರ್ಚು ಮಾಡಲು ಉಳಿದ ಮೊತ್ತ (ರೂ.ಗಳಲ್ಲಿ)
1	ಹಣಕಾಸಿನ ವರ್ಷ:1 21-22	–	–	–	–	–	–
2	ಹಣಕಾಸಿನ ವರ್ಷ:2 20-21	–	–	–	–	–	–
3	ಹಣಕಾಸಿನ ವರ್ಷ:3 19-20	–	–	–	–	–	–

8. ಹಣಕಾಸಿನ ವರ್ಷದಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಮೂಲಕ ಖರ್ಚು ಮಾಡಿದ ಮೊತ್ತದಿಂದ ಯಾವುದೇ ಬಂಡವಾಳ ಆಸ್ತಿಯನ್ನು ಸೃಜಿಸಲಾಗಿರುವುದೇ ಅಥವಾ ಪಡೆಯಲಾಗಿರುವುದೇ: ಇಲ್ಲ

9. ಪ್ರಕರಣ 135ರ ಉಪ ಪ್ರಕರಣ (5)ರ ಅನ್ವಯ ಒಟ್ಟಾರೆ ನಿವ್ವಳ ಲಾಭದ ಶೇಕಡ ಎರಡರಷ್ಟು ಹಣ ಖರ್ಚು ಮಾಡಲು ಕಂಪನಿ ವಿಫಲವಾಗಿದ್ದಲ್ಲಿ ಅದಕ್ಕೆ ಕಾರಣ (ಗಳು) ತಿಳಿಸಿ: ಇಲ್ಲ

ಸಹಿ/-

(ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಎಸ್ಆರ್ ಸಮಿತಿ ಅಧ್ಯಕ್ಷರು)

ಅನುಬಂಧ-IV

ಫಾರಂ ಸಂಖ್ಯೆ ಎಂಆರ್-3

ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿ

2023ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ

[ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 204(1) ಮತ್ತು ಕಂಪನಿಗಳ (ಆಡಳಿತ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ ಸಂಖ್ಯೆ 9ರ ಅನ್ವಯ)]

ಗೆ,

ಸದಸ್ಯರು,

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಬೆಂಗಳೂರು

ನಾನು /ನಾವು ಅನ್ವಯಿತ ಶಾಸನಬದ್ಧ ಮುನ್ನೇರ್ಪಾಡುಗಳ ಅನುಸರಣೆಯ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಹಾಗೂ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**, (U85110KA1966SGC001612) ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560052 ಇಲ್ಲಿ ತನ್ನ ನೋಂದಾಯಿತ ಕಚೇರಿ ಹೊಂದಿರುವುದು. (ಇನ್ನು ಮುಂದೆ ಕಂಪನಿ ಎಂದು ಕರೆಯಲಾಗುವುದು) ಉತ್ತಮ ಕಾರ್ಪೊರೇಟ್ ಅಭ್ಯಾಸಗಳ ಅನುಸರಣೆಯ ಅನ್ವಯ ಲೆಕ್ಕಪರಿಶೋಧನೆ ಮಾಡಿದ್ದೇನೆ.

ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ಇದು ಮುಖ್ಯವಾಗಿ ಪಾನೀಯಗಳು, ಕಾಗದ, ಗ್ರಾಹಕ ಉತ್ಪನ್ನಗಳು, ಕೈಗಾರಿಕಾ ಉತ್ಪನ್ನಗಳು, ಆಮದಾದ ಮರಳು ಮತ್ತು ಫಾರ್ಮಾ ಉತ್ಪನ್ನಗಳ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿರುವುದಲ್ಲದೆ, ಚಿಟ್ ಫಂಡ್ ವ್ಯವಹಾರ ಮತ್ತು ಟೂರ್ಸ್ ಅಂಡ್ ಟ್ರಾವೆಲ್ಸ್ ವ್ಯವಹಾರಗಳನ್ನು ನಡೆಸುತ್ತಿದೆ. ಕಂಪನಿಯ ಆಂತರ್ ನಿಯಮಾವಳಿಯನುಸಾರ, ಕಂಪನಿ ಕಾಲಕಾಲಕ್ಕೆ ಕರ್ನಾಟಕ ಸರ್ಕಾರ ಹೊರಡಿಸುವ ನಿರ್ದೇಶನಗಳು ಮತ್ತು ಮಾರ್ಗದರ್ಶನಗಳನ್ನು ಸಹ ಪರಿಪಾಲಿಸಬೇಕಾಗುತ್ತದೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಧಿಸೂಚನೆ ನಂ.ಜಿ.ಎಸ್.ಆರ್. 463(ಇ) ದಿನಾಂಕ: 5ನೇ ಜೂನ್ 2015ರ ಅನುಸಾರ ಸರ್ಕಾರದ ಕಂಪನಿಗಳಿಗೆ ಕಂಪನಿಗಳ ಕಾಯ್ದೆ, 2013ರ ಕೆಲವೊಂದು ಉಪಬಂಧಗಳ ಅನುಸರಣೆಯಿಂದ ವಿನಾಯಿತಿ ನೀಡಿದೆ.

ಕಾರ್ಪೊರೇಟ್ ನಡತೆ/ಶಾಸನಬದ್ಧ ಅನುಸರಣೆ ಮೌಲ್ಯಮಾಪನ ಮಾಡಲು ಮತ್ತು ಆ ಬಗ್ಗೆ ನನ್ನ ಅಭಿಪ್ರಾಯ ತಿಳಿಸಲು ನನಗೆ/ನಮಗೆ ಒದಗಿಸಿರುವ ಸೂಕ್ತವಾದ ಆಧಾರದ ಮೇಲೆ ಅಂತಹ ಸ್ವರೂಪದಲ್ಲಿ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಮಾಡಲಾಗಿದೆ.

ಕಂಪನಿಯ ಪುಸ್ತಕಗಳು, ಕಾಗದ ಪತ್ರಗಳು, ಮಿನಿಟ್ ಪುಸ್ತಕಗಳು, ಸಲ್ಲಿಸಿರುವ ಫಾರಂಗಳು ಮತ್ತು ರಿಟರ್ನ್‌ಗಳು ಮತ್ತು ಕಂಪನಿ ನಿರ್ವಹಣೆ ಮಾಡಿರುವ ಇತರೆ ದಾಖಲೆಗಳನ್ನು ನಾನು/ನಾವು ಪರಿಶೀಲಿಸಿದ ಆಧಾರದ ಮೇಲೆ ಮತ್ತು ಕಂಪನಿಯಿಂದ, ಇದರ ಅಧಿಕಾರಿಗಳು, ಏಜೆಂಟರು ಮತ್ತು ಅಧಿಕಾರ ಹೊಂದಿದ ಪ್ರತಿನಿಧಿಗಳು, ಸೆಕ್ರೆಟೆರಿಯಲ್ ಲೆಕ್ಕ ಪರಿಶೋಧನೆ ನಡೆಸುವ ಅವಧಿಯಲ್ಲಿ ಒದಗಿಸಿದ ಮಾಹಿತಿ ಮೇರೆಗೆ, ನಾನು/ನಾವು ಈ ಮೂಲಕ ವರದಿ ಮಾಡುವುದೇನೆಂದರೆ, ನನ್ನ/ನಮ್ಮ ಅಭಿಪ್ರಾಯದಲ್ಲಿ, 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷವನ್ನು ಒಳಪಡಿಸಿಕೊಂಡ ಲೆಕ್ಕ ಪರಿಶೋಧನೆ ಅವಧಿಯಲ್ಲಿ ಕಂಪನಿಯು ಈ ಕೆಳಗೆ ಪಟ್ಟಿ ಮಾಡಿರುವ ಶಾಸನಬದ್ಧ ಉಪಬಂಧಗಳನ್ನು ಅನುಸರಿಸಿದೆ ಮತ್ತು ಕಂಪನಿಯು ಗಾತ್ರದ ಸ್ವರೂಪದಲ್ಲಿ ಮತ್ತು ಇಲ್ಲಿ ಇನ್ನು ಮುಂದೆ ಮಾಡಿರುವ ವರದಿಗೆ ಒಳಪಟ್ಟು ಸೂಕ್ತವಾದ ಮಂಡಳಿ ಪ್ರಕ್ರಿಯೆಗಳು ಮತ್ತು ಅನುಸರಣೆ ವ್ಯವಸ್ಥೆ ಹೊಂದಿದೆ.

ಈ ಕೆಳಕಂಡ ಉಪಬಂಧಗಳ ಅನುಸಾರ, 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಲ್ಲಿ ಕಂಪನಿ ನಿರ್ವಹಣೆ ಮಾಡಿರುವ ಪುಸ್ತಕಗಳು, ಕಾಗದ ಪತ್ರಗಳು, ಮಿನಿಟ್ ಪುಸ್ತಕಗಳು, ಸಲ್ಲಿಸಿರುವ ಫಾರಂಗಳು ಮತ್ತು ರಿಟರ್ನ್‌ಗಳು ಹಾಗೂ ಇತರೆ ದಾಖಲೆಗಳನ್ನು ನಾನು/ನಾವು ಪರಿಶೀಲನೆ ಮಾಡಿರುವೆವು:

ಎ) ಕಂಪನಿಗಳ ಕಾಯ್ದೆ, 2013 (ಕಾಯ್ದೆ) ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳು,

ಬಿ) ಸೆಕ್ಯೂರಿಟೀಸ್ ಕಾಂಟ್ರಾಕ್ಟ್ (ರೆಗ್ಯುಲೇಷನ್)ಕಾಯ್ದೆ, 1956 ('ಎಸ್‌ಸಿಆರ್‌ಎ') ಮತ್ತು ಇದರಡಿ ಮಾಡಿರುವ ನಿಯಮಗಳು,

ಸಿ) ಕರ್ನಾಟಕ ಚಿಟ್‌ಫಂಡ್ ಕಾಯ್ದೆ, 1982(ಚಿಟ್‌ಫಂಡ್ ವ್ಯವಹಾರಕ್ಕೆ ಸಂಬಂಧಿಸಿದಂತೆ, ಕಂಪನಿಯನ್ನು ಬ್ಯಾಂಕಿಂಗ್‌ಯೇತರ ಹಣಕಾಸು ಕಂಪನಿ ಎಂಬುದಾಗಿ ವರ್ಗೀಕರಣ ಮಾಡಬೇಕಾಗಿರುವುದಿಲ್ಲ ಎಂಬುದಾಗಿ ನಮಗೆ ತಿಳಿಸಲಾಗಿದೆ)

ಡಿ) ಕರ್ನಾಟಕ ಅಬಕಾರಿ ಕಾಯ್ದೆ, 1968

ಇ) ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ, 1961

ಎಫ್) ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ, 1999 ಮತ್ತು ವಿದೇಶಿ ವಿನಿಮಯ ಗಳಿಕೆಗಳು ಮತ್ತು ಹೊರ ಹರಿವುಗಳ ಪ್ರಮಾಣದವರೆಗೆ ಇದರಡಿ ಮಾಡಿರುವ ನಿಯಮಗಳು ಮತ್ತು ನಿಬಂಧನೆಗಳು.

ಜಿ) ಕರ್ನಾಟಕ ವೃತ್ತಿ, ವ್ಯಾಪಾರ, ಕಾಲಿಂಗ್ಸ್ ಮೇಲಿನ ತೆರಿಗೆ ಮತ್ತು ಉದ್ಯೋಗ ಕಾಯ್ದೆ 1976

ಎಚ್) ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ (ತಡೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013

ಐ) ನೌಕರರ ಭವಿಷ್ಯ ನಿಧಿ ಮತ್ತು ವಿವಿಧ ಉಪಬಂಧಗಳ ಕಾಯ್ದೆ, 1952

ಜೆ) ಹೆರಿಗೆ ಸೌಲಭ್ಯ ಕಾಯ್ದೆ, 1961

ಕೆ) ಕನಿಷ್ಠ ವೇತನ ಕಾಯ್ದೆ, 1948

ಎಲ್) ಬೋನಸ್ ಪಾವತಿ ಕಾಯ್ದೆ, 1965

ಎಂ) ಗ್ರಾ್ಯಚ್ಯುಟಿ ಪಾವತಿ ಕಾಯ್ದೆ, 1972

ಎನ್) ಸಂಬಳ ಪಾವತಿ ಕಾಯ್ದೆ, 1936

ಓ) ಅಪ್ರೆಂಟೀಸ್ ಕಾಯ್ದೆ, 1961

ಪಿ) ಅಗತ್ಯ ಪದಾರ್ಥಗಳ ಕಾಯ್ದೆ, 1955

ಕ್ಯೂ) ಫಾರ್ಮಸಿ ಉತ್ಪನ್ನಗಳ ಚಿಲ್ಲರೆ ಮಾರಾಟಕ್ಕೆ ಪರವಾನಗಿ/ನೋಂದಣಿ.

ಆರ್) ಔಷಧಿ ನಿಯಂತ್ರಣ ಕಾಯ್ದೆ, 1950

ಎಸ್) ವ್ಯಾಪಾರ ಚಿಹ್ನೆ ಕಾಯ್ದೆ, 1999

ನಾನು/ನಾವು ಈ ಕೆಳಕಂಡವುಗಳ ಅನ್ವಯವಾಗುವ ವಿಧಿಗಳನ್ನು ಅನುಸರಣೆ ಮಾಡಿರುವುದನ್ನು ಸಹ ಪರಿಶೀಲನೆ ಮಾಡಿರುವೆವು:

ಎ. ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿರುವ ಸೆಕ್ರೆಟೆರಿಯಲ್ ಗುಣಮಟ್ಟಗಳು.

ಬಿ. ನಾನು/ನಾವು ಮುಂದುವರಿದು ವರದಿ ಮಾಡುವುದೇನೆಂದರೆ, ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.ಜಿ.ಎಸ್.ಆರ್.463(ಇ) ದಿನಾಂಕ 5ನೇ ಜೂನ್ 2015 ಮತ್ತು ಸೆಕ್ಷನ್ 149(1)ರ ಅನ್ವಯ ಅಗತ್ಯವಾದಂತೆ ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು, ಸ್ವತಂತ್ರ ನಿರ್ದೇಶಕರು ಮತ್ತು ಒಬ್ಬರು ಮಹಿಳಾ ನಿರ್ದೇಶಕರ ಸೂಕ್ತವಾದ ಸಮತೋಲನದಿಂದ ಕ್ರಮವಾಗಿ ರಚನೆ ಮಾಡಿರುವ ಕಂಪನಿ ನಿರ್ದೇಶಕರ ಮಂಡಳಿ ಇದೆ.

ಸಿ. ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ಆಗಿರುವ ನಿರ್ದೇಶಕರುಗಳ ಮಂಡಳಿಯ ಸಂಯೋಜನೆಯಲ್ಲಿ ಆಗಿರುವ ಬದಲಾವಣೆಗಳನ್ನು ಕಾಯ್ದೆಯ ಉಪಬಂಧಗಳ ಅನುಸಾರ ಮಾಡಲಾಗಿದೆ.

ಡಿ) ಮಂಡಳಿ ಸಭೆಗಳನ್ನು ನಿಗದಿಪಡಿಸಲು ಎಲ್ಲಾ ನಿರ್ದೇಶಕರಿಗೆ ಸಾಕಷ್ಟು ರೀತಿಯಲ್ಲಿ ನೋಟೀಸ್ ನೀಡಲಾಗಿದೆ. ಕಾರ್ಯಸೂಚಿ ಮತ್ತು ಕಾರ್ಯಸೂಚಿ ಮೇಲಿನ ವಿವರವಾದ ಟಿಪ್ಪಣಿಗಳನ್ನು ಕನಿಷ್ಠ ಏಳು ದಿನಗಳ ಮುಂಚೆ ಕಳುಹಿಸಲಾಗಿದೆ. ಸಭೆಗೆ ಮುನ್ನ ಕಾರ್ಯಸೂಚಿ ಐಟಂಗಳ ಮೇಲೆ ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟನೆಗಳನ್ನು ಪಡೆಯಲು ಮತ್ತು ಕೇಳಲು ವ್ಯವಸ್ಥೆಯೊಂದು ಇರುವುದು ಮತ್ತು ಸಭೆಗೆ ಅರ್ಥಪೂರ್ಣವಾಗಿ ಭಾಗವಹಿಸಲು ಅನುಕೂಲ ಒದಗಿಸಲಾಗಿದೆ.

ಇ) ಬಹುಪಾಲು/ಅವಿರೋಧ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ಸದಸ್ಯರುಗಳಿಂದ ಯಾವುದೇ ವಿರೋಧದ ಸಂದರ್ಭಗಳು ಇರುವುದಿಲ್ಲ.

ನಾನು/ನಾವು ಮುಂದುವರಿದು ವರದಿ ಮಾಡುವುದೇನೆಂದರೆ, ಅನ್ವಯವಾಗುವ ಇತರೆ ಕಾನೂನುಗಳು, ನಿಯಮಗಳು, ನಿಬಂಧನೆಗಳು ಮತ್ತು ಮಾರ್ಗದರ್ಶನಗಳ ಅನುಸರಣೆ ಮತ್ತು ಮೇಲುಸ್ತುವಾರಿಗೆ ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆಗಳ ಅನ್ವಯ ಅವುಗಳಿಗೆ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳಿರುವವು.

ನಾನು/ನಾವು ಮುಂದುವರಿದು ವರದಿ ಮಾಡುವುದೇನೆಂದರೆ, ಲೆಕ್ಕಪರಿಶೋಧನೆಯ ಅವಧಿಯಲ್ಲಿ ಕಂಪನಿಯು:

i. ಯಾವುದೇ ಸಾರ್ವಜನಿಕ/ಹಕ್ಕಿನ/ಆದ್ಯತೆಯ ಷೇರುಗಳು/ಡಿಬೆಂಚರುಗಳು/ಸ್ಟೇಟ್ ಈಕ್ವಿಟಿ ಇತ್ಯಾದಿಯನ್ನು ನೀಡಿರುವುದಿಲ್ಲ.

ii. ಸೆಕ್ಯೂರಿಟಿಗಳ ಮರು ಖರೀದಿ/ಬಿಡಿಸಿಕೊಳ್ಳುವಿಕೆ ಅಗತ್ಯವಿರುವುದಿಲ್ಲ.

iii. ಕಂಪನಿಗಳ ಕಾಯ್ದೆ 2013ರ ಪ್ರಕರಣ 180ರ ಅನ್ವಯ ಸದಸ್ಯರುಗಳಿಂದ ಯಾವುದೇ ಪ್ರಮುಖ ತೀರ್ಮಾನಗಳನ್ನು ತೆಗೆದುಕೊಂಡಿರುವುದಿಲ್ಲ.

iv. ವಿಲೀನ/ಸೇರ್ಪಡೆ/ಮರು ನಿರ್ಮಾಣ ಇತ್ಯಾದಿ ಕಾರ್ಯ ಕೈಗೊಂಡಿರುವುದಿಲ್ಲ.

v. ವಿದೇಶಿ ತಾಂತ್ರಿಕ ಸಹಭಾಗಿತ್ವ ಮಾಡಿಕೊಂಡಿರುವುದಿಲ್ಲ.

ಸಾಮಾನ್ಯವಾಗಿ ಕಂಡುಬಂದಿರುವುದೇನೆಂದರೆ, ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ಮತ್ತು ಸಿಎಜಿ ಲೆಕ್ಕಪರಿಶೋಧನೆಗೆ ಒಳಪಟ್ಟು ಎಲ್ಲಾ ಅಗತ್ಯವಾದ ದಾಖಲೆಪತ್ರಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಿದೆ ಮತ್ತು ವಿವಿಧ ಅನ್ವಯವಾಗುವ ಕಾನೂನುಗಳನ್ನು ಅನುಸರಿಸಲು ವ್ಯವಸ್ಥೆಗಳನ್ನು ಕ್ರಮಾವಳಿಗಳನ್ನು ರೂಪಿಸಿದೆ.

ಎಸ್. ವಿಶ್ವನಾಥನ್ ಪರವಾಗಿ,
ಕಂಪನಿ ಕಾರ್ಯದರ್ಶಿಗಳು
ಸಹಿ/-
ಎಸ್. ವಿಶ್ವನಾಥನ್
ಕಂಪನಿ ಕಾರ್ಯದರ್ಶಿಗಳು
ಸಿ.ಪಿ. ನಂ.5284

ದಿನಾಂಕ:15.09.2023
ಸ್ಥಳ: ಬೆಂಗಳೂರು

ಅನುಬಂಧ-''ಎ''

ಸದಸ್ಯರುಗಳಿಗೆ,
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್,

ಮಾನ್ಯರೇ,

ಸಮ ದಿನಾಂಕದ ನಮ್ಮ ವರದಿಯನ್ನು ಸದರಿ ಪತ್ರದ ಜೊತೆಗೆ ಓದಿಕೊಳ್ಳುವುದು.

1. ಸೆಕ್ರೆಟೇರಿಯಲ್ ದಾಖಲೆ ನಿರ್ವಹಣೆಯು ಕಂಪನಿ ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಸದರಿ ಸೆಕ್ರೆಟೇರಿಯಲ್ ದಾಖಲೆಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು.

2. ಸೆಕ್ರೆಟೇರಿಯಲ್ ದಾಖಲೆಗಳ ಒಕ್ಕಣೆಗಳ ನಿಖರತೆ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ಸೂಕ್ತವಾದ ಲೆಕ್ಕಪರಿಶೋಧನೆ ಪದ್ಧತಿಗಳು ಮತ್ತು ಕ್ರಮಗಳನ್ನು ನಾವು ಅನುಸರಿಸಿದ್ದೇವೆ. ಸೆಕ್ರೆಟೇರಿಯಲ್ ದಾಖಲೆಗಳಲ್ಲಿ ಸರಿಯಾದ ಅಂಶಗಳು ಬಿಂಬಿತವಾಗಿದೆ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲು ಪರೀಕ್ಷಾರ್ಥ ಆಧಾರದ ಮೇಲೆ ಪರಿಶೀಲನೆ ಮಾಡಲಾಗಿದೆ. ನಾವು ಅನುಸರಿಸಿರುವ ಕ್ರಮಗಳು ಮತ್ತು ಪದ್ಧತಿಗಳು ನಮ್ಮ ಅಭಿಪ್ರಾಯಕ್ಕೆ ಸೂಕ್ತವಾದ ಆಧಾರ ಒದಗಿಸುತ್ತವೆಂದು ನಾವು ನಂಬಿದ್ದೇವೆ.

3. ಸರಕುಗಳು ಮತ್ತು ಸೇವಾ ತೆರಿಗೆಗಳು, ಆದಾಯ ತೆರಿಗೆ, ಸೀಮಾ ಸುಂಕ ಮತ್ತು ಕಂಪನಿಗೆ ಅನ್ವಯವಾಗುವ ಇತರೆ ಸಂಬಂಧಪಟ್ಟ ಕಾನೂನುಗಳಿಗೆ ಸಂಬಂಧಿಸಿದ ದಾಖಲೆಗಳೂ ಸೇರಿದಂತೆ ಕಂಪನಿಯ ಯಾವುದೇ ಹಣಕಾಸಿನ ದಾಖಲೆಗಳು ಮತ್ತು ಲೆಕ್ಕದ ಪುಸ್ತಕಗಳು ಸರಿಯಾಗಿರುವಿಕೆ ಮತ್ತು ಸೂಕ್ತತೆಯನ್ನು ನಾವು ಪರಿಶೀಲಿಸಿರುವುದಿಲ್ಲ.

4. ಅಗತ್ಯವಿರುವಡೆಯಲ್ಲಿ ಕಾನೂನುಗಳು, ನಿಯಮಗಳು, ಮತ್ತು ನಿಬಂಧನೆಗಳ ಅನುಸರಣೆ ಬಗ್ಗೆ ಮತ್ತು ಕಾಲಕಾಲಕ್ಕೆ ಅನ್ವಯವಾಗುವಂತೆ ಘಟನಾವಳಿಗಳನ್ನು ಕಂಪನಿ ಪ್ರತಿನಿಧಿಸಿದೆ. ಕೈಗಾರಿಕಾ ನಿರ್ದಿಷ್ಟ ಕಾನೂನುಗಳ ಅಡಿಯಲ್ಲಿನ ಅನುಸರಣೆಯನ್ನು ಕಂಪನಿ ಒದಗಿಸಿರುವ ಅನ್ವಯವಾಗುವ ಕಾನೂನುಗಳ ಪಟ್ಟಿಯ ಆಧಾರದ ಮೇಲೆ ಪರಿಶೀಲಿಸಲಾಗಿದೆ.

5. ಕಾರ್ಪೋರೇಟ್ ಮತ್ತು ಇತರೆ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಗುಣಮಟ್ಟಗಳ ಉಪಬಂಧಗಳನ್ನು ಅನುಸರಿಸುವುದು ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ಪರೀಕ್ಷಾರ್ಥ ಆಧಾರದ ಮೇಲೆ ಕ್ರಮಾನುಸರಣೆಯನ್ನು ಪರಿಶೀಲಿಸುವುದಕ್ಕೆ ಮಾತ್ರ ನಮ್ಮ ಪರೀಕ್ಷೆ ಸೀಮಿತವಾಗಿರುವುದು.

6. ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿಯು ಕಂಪನಿಯ ಮುಂದಿನ ಅಸ್ತಿತ್ವದ ಬಗ್ಗೆಯಾಗಲಿ ಅಥವಾ ಕಂಪನಿಯ ವ್ಯವಹಾರಗಳನ್ನು ಆಡಳಿತ ವರ್ಗ ನಡೆಸಿರುವ ಸಾಮರ್ಥ್ಯ ಮತ್ತು ಪರಿಣಾಮದ ಬಗ್ಗೆಯಾಗಲಿ ಭರವಸೆ ನೀಡುವುದಾಗಿರುವುದಿಲ್ಲ.

ಎಸ್. ವಿಶ್ವನಾಥನ್ ಪರವಾಗಿ,
ಕಂಪನಿ ಕಾರ್ಯದರ್ಶಿಗಳು
ಸಹಿ/-
ಎಸ್. ವಿಶ್ವನಾಥನ್
ಕಂಪನಿ ಕಾರ್ಯದರ್ಶಿಗಳು
ಸಿ.ಪಿ. ನಂ.5284

ದಿನಾಂಕ:15.09.2023
ಸ್ಥಳ: ಬೆಂಗಳೂರು

ಹತ್ತು ವರ್ಷಗಳ ಕಾರ್ಯಕ್ಷಮತೆ

ಹಿಂದಿನ ಹತ್ತು ಹಣಕಾಸಿನ ವರ್ಷಗಳ ಹಣಕಾಸಿನ ಮುಖ್ಯಾಂಶಗಳು

(ರೂ.ಲಕ್ಷಗಳಲ್ಲಿ)

ವಿವರಗಳು	2013-14	2014-15	2015-16	2016-17	2017-18	2018-19	2019-20	2020-21	2021-22	2022-23
ನಿವ್ವಳ ಮೌಲ್ಯ (ಷೇರು ಬಂಡವಾಳ ಮೀಸಲು)	23701.53	26814.97	30051.70	33190.30	33503.15	34392.26	39996.46	45228.55	51557.40	**56545.42**
ಪಾವತಿಸಿದ ಬಂಡವಾಳ	2017.66	2017.66	2017.66	2017.66	4273.48	4273.48	4273.48	4273.48	4273.48	**4273.48**
ಷೇರು ಅರ್ಜಿ ಹಣ	2255.82	2255.82	2255.82	2255.82	-	-	-	-	-	**-**
ಮೀಸಲು ಮತ್ತು ಹೆಚ್ಚಳ	19428.05	22541.49	25778.22	31172.64	29229.68	31208.48	35722.99	40955.07	47283.92	**5271.94**
ಬ್ಯಾಂಕ್‌ಗಳಿಂದ ಪಡೆದ ಸಾಲಗಳು	-	-	-	-	-	-	-	-	-	**-**
ನಿವ್ವಳ ಸ್ಥಿರಾಸ್ತಿಗಳು	4221.84	5624.66	5626.25	6225.01	6974.83	7966.36	9590.61	9687.76	9330.15	**9974.82**
ವಹಿವಾಟು	120066.32	146039.32	151490.75	161407.69	178875.91	204763.86	227065.31	276386.99	289947.45	**317978.34**
ತೆರಿಗೆಗೆ ಮುಂಚಿನ ಲಾಭ	4660.26	6052.27	5400.50	5699.87	1486.84	3237.82	4246.68	6814.70	8290.41	**8082.18**
ಲಾಭಾಂಶ	10%	10%	10%	10%	-	5%	5%	7.50%	25.86%	**42.77%**
ತೆರಿಗೆ ನಂತರದ ನಿವ್ವಳ ಗಳಿಕೆ ಪ್ರತಿ ಷೇರಿನ ಗಳಿಕೆಗೆ (ರೂ.ಗಳಲ್ಲಿ)	162.96	166.36	178.71	181.68	12.68	46.30	61.45	127.43	167.20	**142.51**
ಷೇರು ಒಂದರ ನಿವ್ವಳ ಗಳಿಕೆ (ರೂ.ಗಳಲ್ಲಿ)	1062.90	1217.21	1377.63	1644.99	783.98	830.28	935.92	1058.35	1206.45	**1323.17**

ಹಿಂದಿನ ಹತ್ತು ಹಣಕಾಸಿನ ವರ್ಷಗಳ ಸಂಕ್ಷಿಪ್ತ ಲಾಭ ಮತ್ತು ನಷ್ಟದ ಲೆಕ್ಕ

(ರೂ.ಲಕ್ಷಗಳಲ್ಲಿ)

ವಿವರಗಳು	2013-14	2014-15	2015-16	2016-17	2017-18	2018-19	2019-20	2020-21	2021-22	2022-23
ವಹಿವಾಟು	120066.32	146039.32	151490.75	161407.69	178875.91	204763.86	227065.31	276386.99	289947.45	**317978.34**
ಒಟ್ಟು ಆದಾಯ	12325.68	14919.86	15490.81	16453.84	17952.46	20742.63	22446.00	27099.20	28206.30	**31267.13**
ಮಾರಾಟ ಮತ್ತು ಆಡಳಿತಾತ್ಮಕ ವೆಚ್ಚಗಳು	6965.11	8923.90	9636.88	10433.61	15990.08	16723.59	16658.51	17839.76	17113.94	**21105.65**
ಬಡ್ಡಿ	30.76	48.68	145.35	2.44	0.90	33.52	0.33	1.30	39.22	**4.62**
ಸವಕಳಿ	280.77	291.01	255.39	285.21	341.85	721.80	1495.40	1725.69	1761.90	**1834.44**
ಮುನ್ನೇರ್ಪಾಡು/ ವಜಾ	399.05	47.72	91.36	50.60	132.79	25.90	45.08	717.74	1000.83	**245.94**
ಒಟ್ಟು	**7675.69**	**9311.31**	**10128.98**	**10771.86**	**16465.62**	**17504.81**	**18199.32**	**20284.49**	**19915.89**	**23190.65**
ತೆರಿಗೆಗೆ ಮುಂಚಿನ ಲಾಭ	4649.99	5608.55	5361.83	5681.98	1486.84	3237.82	4246.68	6814.71	8290.41	**8076.48**
ತೆರಿಗೆಗೆ ಮುನ್ನೇರ್ಪಾಡು	1372.76	2252.67	1923.22	1978.80	939.77	1153.69	1096.79	2017.85	1950.00	**2055.00**
ಮುಂದೂಡಲಾದ ತೆರಿಗೆ ಸಾಲ	(20.96)	(0.62)	(167.21)	37.48	5.22	105.33	524.04	(648.92)	(308.94)	**(71.42)**
ತೆರಿಗೆ ನಂತರದ ಲಾಭ	3298.19	3356.50	3605.82	3665.70	541.85	1978.80	2625.85	5445.78	6649.35	**6092.90**

ಹಿಂದಿನ ಹತ್ತು ಹಣಕಾಸಿನ ವರ್ಷಗಳ ಸಂಕ್ಷಿಪ್ತ ಸ್ಥಿತಿ ವಿವರಣಾ ಪಟ್ಟಿ

(ರೂ.ಲಕ್ಷಗಳಲ್ಲಿ)

ವಿವರಗಳು	2013-14	2014-15	2015-16	2016-17	2017-18	2018-19	2019-20	2020-21	2021-22	2022-23
ಸ್ವಂತ ನಿಧಿಗಳು										
ಷೇರು ಬಂಡವಾಳ	2017.66	2017.66	2017.66	2017.66	4273.48	4273.48	4273.48	4273.48	4273.48	**4273.48**
ಷೇರು ಅರ್ಜಿ ಹಣ	2255.82	2255.82	2255.82	2255.82	-	-	-	-		**-**
ಮೀಸಲು ಮತ್ತು ಹೆಚ್ಚಳ	19428.05	22541.49	25778.22	31172.64	29229.68	31208.48	35722.99	40955.07	47283.92	52271.94
ಒಟ್ಟು	**23701.53**	**26814.97**	**30051.70**	**35446.12**	**33503.16**	**35481.96**	**39996.47**	**45228.55**	**51557.40**	**56545.42**
ಸಾಲ ನಿಧಿಗಳು										
ಅಲ್ಪಾವಧಿ ಸಾಲ-ಬಡ್ಡಿ	53.88	53.88	53.88	53.88	53.88	53.88	53.88	53.88	53.88	**53.88**
ನಿಧಿಗಳ ಹೂಡಿಕೆ	53.88	53.88	53.88	53.88	53.88	53.88	53.88	53.88	53.88	**53.88**
ಒಟ್ಟು	**23755.41**	**26868.85**	**30105.58**	**35500.00**	**33557.04**	**35535.84**	**40050.35**	**45282.43**	**51611.28**	**56599.30**
ನಿಧಿಗಳ ಉಪಯೋಗ										
ಸ್ಥಿರಾಸ್ತಿಗಳು	4221.84	5624.66	5626.25	6225.01	6974.83	7966.36	9590.61	9687.76	9330.15	**9974.82**
ಹೂಡಿಕೆಗಳು	1336.06	1336.06	1336.51	3361.36	2900.13	2998.03	3173.12	3406.18	3021.36	**3002.35**
ಮುಂದೂಡಿದ ತೆರಿಗೆ ಆಸ್ತಿ (ನಿವ್ವಳ)	846.00	846.62	1013.83	976.35	971.13	865.80	341.77	990.69	1299.62	**1363.43**
ದುಡಿಮೆ ಬಂಡವಾಳ	17351.51	19061.51	22128.99	24937.28	22710.95	23705.65	26944.85	31197.80	37960.15	**42258.70**
ಒಟ್ಟು	**23755.41**	**26868.85**	**30105.58**	**35500.00**	**33557.04**	**35535.84**	**40050.35**	**45282.43**	**51611.28**	**56599.30**

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ

ವರ್ಷದ ಲೆಕ್ಕಗಳು (ಸ್ವತಂತ್ರ)

ಪರಿಷ್ಕೃತ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ

ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ಮೇಲಿನ ವರದಿ

ಅರ್ಹತಾ ಅಭಿಪ್ರಾಯ

ನಾವು **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ** (ಕಂಪನಿ) 31ನೇ ಮಾರ್ಚ್ 2023ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ಹೇಳಿಕೆ, ಇತರೆ ಸಮಗ್ರ ಆದಾಯ ಸೇರಿದಂತೆ, ನಗದು ಹರಿಯುವಿಕೆಗಳ ಹೇಳಿಕೆ ಮತ್ತು ಈ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಬದಲಾವಣೆಗಳ ಹೇಳಿಕೆ ಮತ್ತು ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ ಒಳಗೊಂಡ ಲಗತ್ತಿಸಿರುವ ಸ್ವತಂತ್ರ ಹಣಕಾಸಿನ ಹೇಳಿಕೆಯ ಲೆಕ್ಕಪರಿಶೋಧನೆ ಮಾಡಿದ್ದೇವೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ, ನಮ್ಮ ವರದಿಯ ''ಅರ್ಹತಾ ಅಭಿಪ್ರಾಯಕ್ಕೆ ಆಧಾರದ'' ವಿಭಾಗದಲ್ಲಿ ವಿವರಿಸಿರುವ ವಿಚಾರಗಳ ಪರಿಣಾಮಗಳ ಹೊರತಾಗಿ, ಮೇಲೆ ತಿಳಿಸಿರುವ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳು ಕಂಪನಿಗಳ ಕಾಯ್ದೆ 2013ರ (''ಕಾಯ್ದೆ'') ಅನ್ವಯ ಅಗತ್ಯವಾದಂತೆ ಸ್ವರೂಪದಲ್ಲಿ ಮಾಹಿತಿಯನ್ನು ನೀಡುವುದು ಮತ್ತು ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳಿಗೆ ಅನುಗುಣವಾಗಿ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ, 31ನೇ ಮಾರ್ಚ್ 2023ರಂದು ಇದ್ದಂತೆ ಕಂಪನಿಯ ವ್ಯವಹಾರದ ಪರಿಸ್ಥಿತಿ ಮತ್ತು ಅದರ ಲಾಭ, ಇತರೆ ಸಮಗ್ರ ನಷ್ಟ, ನಗದು ಹರಿಯುವಿಕೆಗಳು ಮತ್ತು ಆ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಬದಲಾವಣೆ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವುದು.

ಸಮ ದಿನಾಂಕದಂದು ನಿರ್ದೇಶಕರ ಮಂಡಳಿ ಅಳವಡಿಸಿಕೊಂಡಿರುವಂತೆ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಬೆಂಗಳೂರಿನಲ್ಲಿ ದಿನಾಂಕ 29ನೇ ನವೆಂಬರ್ 2023 ರ ಲೆಕ್ಕಪರಿಶೋಧನಾ ವರದಿ ಒಂದನ್ನು (ಮೂಲ ವರದಿ) ನೀಡಿದ್ದೆವು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143 (6)(ಎ) ಅನ್ವಯ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಅಭಿಪ್ರಾಯದ ಅನುಸಾರ, ನಾವು ಸದರಿ ಲೆಕ್ಕಪರಿಶೋಧನಾ ವರದಿಯನ್ನು ಪರಿಷ್ಕರಣೆ ಮಾಡಿದ್ದೇವೆ. ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್ ಅಡಿಯಲ್ಲಿನ ಕಲಂ (ಬಿ) ಮತ್ತು (ಡಿ) ಯಿಂದ (ಜಿ) ವರೆಗೆ ಮತ್ತು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಕಲಂ (ಬಿ) ಮತ್ತು (ಎ) ಹೊರತುಪಡಿಸಿ, ಕಂಪನಿಯ ಹಣಕಾಸಿನ ಹೇಳಿಕೆಗಳಲ್ಲಿನ ವರದಿಯಾಗಿರುವ ಅಂಕಿ ಅಂಶಗಳ ಮೇಲೆ ಪರಿಷ್ಕೃತ ವರದಿಯು ಯಾವುದೇ ಪರಿಣಾಮ ಉಂಟುಮಾಡುವುದಿಲ್ಲ. ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಅಭಿಪ್ರಾಯಗಳನ್ನು ಪರಿಗಣಿಸಲು ಸೂಕ್ತವಾಗಿ ಪರಿಷ್ಕರಣೆ ಮಾಡಿರುವ ಸದರಿ ಲೆಕ್ಕಪರಿಶೋಧನಾ ವರದಿಯು ಮೂಲ ವರದಿಯನ್ನು ರದ್ದುಗೊಳಿಸುವುದು.

ಅರ್ಹತಾ ಅಭಿಪ್ರಾಯಕ್ಕೆ ಆಧಾರ

ಎ. ವ್ಯಾಪಾರದಿಂದ ಬರಬೇಕಾಗಿರುವ ಶಿಲ್ಕುಗಳು, ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದುದು, ಇತರೆ ಪಾವತಿಗಳು ಮತ್ತು ಮುಂಗಡಗಳ ಶಿಲ್ಕುಗಳ ಬಗ್ಗೆ ದೃಢೀಕರಣೆ ಕಳುಹಿಸುವ ನೀತಿಯನ್ನು ಕಂಪನಿ ಹೊಂದಿದೆ. ಆದರೆ, ದೃಢೀಕರಣೆ ಪಡೆಯಲು ಸೂಕ್ತವಾದ ಅನುಸರಣೆ ಮಾಡಿರುವುದಿಲ್ಲ ಮತ್ತು ಲೆಕ್ಕದ ಪುಸ್ತಕಗಳೊಡನೆ ಅದನ್ನು ಸಮಂಜಸತೆ ಮಾಡಿರುವುದಿಲ್ಲ. ಕಂಪನಿಯು ವಸೂಲಾಗದ ಮತ್ತು ಸಂದೇಹಾಸ್ಪದವಾದ ಸಾಲಗಳಿಗೆ ವರ್ಷದ ಕೊನೆಯಲ್ಲಿ ಪುಸ್ತಕಗಳಲ್ಲಿ ವ್ಯವಸ್ಥೆ ಮಾಡಿರುವುದಿಲ್ಲ. ಶಿಲ್ಕುಗಳ ದೃಢೀಕರಣ ಮತ್ತು ಸಮಂಜಸತೆ ಇಲ್ಲದಿರುವುದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಹಣಕಾಸಿನ ಪರಿಣಾಮವನ್ನು ತಿಳಿಯಲು ಸಾಧ್ಯವಿಲ್ಲ.

ಬಿ. ನಾವು ಗಮನಿಸಿರುವುದೇನೆಂದರೆ (i) ಫಾರ್ಮಸ್ಯೂಟಿಕಲ್ಸ್ ಉತ್ಪನ್ನಗಳ ಆಖೈರು ತಪಶೀಲಿನ ಪ್ರಮಾಣದ ಬಗ್ಗೆ ದೃಢೀಕರಣೆ ಇಲ್ಲದಿರುವುದರಿಂದ, ರೂ. 351 ಲಕ್ಷಗಳ ಮೊತ್ತದ ಆಖೈರು ತಪಶೀಲಿನ ಪ್ರಮಾಣ ಮತ್ತು/ಅಥವಾ ಮೌಲ್ಯದ ನಿಖರತೆ ಬಗ್ಗೆ ಅಭಿಪ್ರಾಯ ತಿಳಿಸಲು ನಮಗೆ ಸಾಧ್ಯವಿರುವುದಿಲ್ಲ. (ii) ಕಂಪನಿಯು ಸದರಿ ವರ್ಷದಲ್ಲಿ ಆಮದಾದ ನದಿ ಮರಳಿನ ದಾಸ್ತಾನಿನ ಭೌತಿಕ ಪರಿಶೀಲನೆ ವರದಿಯನ್ನು ಪಡೆದುಕೊಂಡಿದ್ದು, ಅದರಲ್ಲಿ ರೂ.347.87 ಲಕ್ಷಗಳ ಮೊತ್ತದ 16565.002 ಎಂಟಿ ದಾಸ್ತಾನು ಕಡಿಮೆ ಇರುವುದು ಕಂಡುಬಂದಿದೆ. ಆದರೆ, ಹಿಂದಿನ ವರ್ಷಗಳಲ್ಲಿ ಪುಸ್ತಕಗಳಲ್ಲಿ 100% ವ್ಯವಸ್ಥೆ ಮಾಡಿದ್ದರೂ, ಸ್ಥಿತಿ ವಿವರಣ ಪಟ್ಟಿಯ ದಿನಾಂಕದಂದು ಇದರ ಬಗ್ಗೆ ಶಿಲ್ಕಿನ ದೃಢೀಕರಣ ಇರುವುದಿಲ್ಲ ಮತ್ತು ಈ ವರ್ಷದ ಅವಧಿಯಲ್ಲಿ ಯಾವುದೇ ಮಾರಾಟ ನಡೆದಿರುವುದಿಲ್ಲ.; ಕಂಪನಿಯು ಕಡಿಮೆಯಾಗಿ ಕಂಡುಬಂದಿರುವ ತಪಶೀಲನ್ನು ರದ್ದುಪಡಿಸಿರುವುದಿಲ್ಲ ಇಲ್ಲವೇ ಪುಸ್ತಕಗಳಲ್ಲಿ ಈ ಮೊದಲು ಮಾಡಿದ್ದ ಸಂಬಂಧಪಟ್ಟ ವ್ಯವಸ್ಥೆಯನ್ನು ಹಿಂಪಡೆದಿರುವುದಿಲ್ಲ. ಆದ್ದರಿಂದ ತಪಶೀಲುಗಳು ಮತ್ತು ತಪಶೀಲುಗಳಿಗೆ ವ್ಯವಸ್ಥೆ ಎರಡನ್ನೂ ರೂ.347.87 ಲಕ್ಷದ ವರೆಗೆ ಅಧಿಕವಾಗಿ ತಿಳಿಸಿದೆ.

ಸಿ. ಚಿಟ್‌ಫಂಡ್ ವಿಭಾಗಕ್ಕೆ ಸಂಬಂಧಿಸಿದಂತೆ (i) ಸೂಕ್ತವಾದ ಆಂತರಿಕ ನಿಯಂತ್ರಣ ಇಲ್ಲದಿರುವುದು, (ii) ನಿಯೋಜಿಸಿರುವ ತಂತ್ರಾಂಶದಿಂದ ನಿಖರವಾದ ಮತ್ತು ಅಗತ್ಯವಾದ ವರದಿಗಳನ್ನು ಪಡೆಯಲು ಬೆಂಬಲ ಇಲ್ಲದಿರುವುದು, (iii) ಆಫ್‌ಲೈನ್ ಶಾಖೆಗಳಿಗೆ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ಪ್ರತಿಪಾದಿತ ವ್ಯವಸ್ಥೆ ಮತ್ತು ಪುಸ್ತಕಗಳ ಸಕಾಲಿಕವಾಗಿ ಮುಚ್ಚಲು ಆಗದಿರುವುದು, (vi) ಬ್ಯಾಂಕ್ ಸಮಂಜಸತೆ ವಿವರಣೆಗಳು ಇತ್ಯಾದಿಯನ್ನು ಸಕಾಲಿಕವಾಗಿ ಸಿದ್ಧಪಡಿಸದಿರುವುದರಿಂದ ಅದು ಹಣಕಾಸಿನ ಹೇಳಿಕೆಗಳ ಮೇಲೆ

ಪರಿಣಾಮ ಉಂಟು ಮಾಡಬಹುದಾಗಿರುವುದು.

ಈ ವರ್ಷದ ಅವಧಿಯಲ್ಲಿ ಕಂಪನಿಯ ಹೊರಗುತ್ತಿಗೆ ನೌಕರನೊಬ್ಬನಿಂದ ಹಣದ ದುರುಪಯೋಗ ಮಾಡಿಕೊಂಡಿರುವ ಘಟನೆ ನಡೆದಿದೆ. ಮುಂದಿನ ಹೊಣೆಗಾರಿಕೆ ಸೇರಿದಂತೆ ರೂ.147.80 ಲಕ್ಷದ ನಷ್ಟವನ್ನು ಕಂಪನಿ ಅಂದಾಜು ಮಾಡಿದೆ ಮತ್ತು ಅದನ್ನು ಒದಗಿಸಿದೆ. ಕಂಪನಿ ಈ ಬಗ್ಗೆ ಎಫ್ಐಆರ್ ಸಲ್ಲಿಸಿದೆ ಮತ್ತು ಈ ಹಣವನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಎರಡು ಶಾಖೆಗಳ ಸಂಬಂಧದಲ್ಲಿ ಕಂಪನಿಯು ವಿಧಿ ವಿಜ್ಞಾನ ಲೆಕ್ಕಪರಿಶೋಧನೆಯನ್ನು ಸಹ ಕೈಗೊಂಡಿದೆ ಮತ್ತು ಲೆಕ್ಕಪರಿಶೋಧನೆ ವರದಿಗಾಗಿ ಕಾಯಲಾಗಿದೆ. ಅಗತ್ಯವಾದ ಮಾಹಿತಿ ಇಲ್ಲದಿರುವುದರಿಂದ, ಅದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಯಾವುದೇ ಪರಿಣಾಮ ಉಂಟಾಗುವಿಕೆಯನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.

ಡಿ. ಕಂಪನಿಯು ಈ ವರ್ಷದ ಅವಧಿಯಲ್ಲಿ ರೂ. 56.46 ಲಕ್ಷ ಮೊತ್ತದ ಬಿಪಿಪಿಐ ಪ್ರೋತ್ಸಾಹ ಧನ ಪಡೆದಿದೆ ಮತ್ತು ಇದನ್ನು ಸ್ವತಂತ್ರ ಹಣಕಾಸಿನ ಹೇಳಿಕೆಯಲ್ಲಿ ವರದಿ ಮಾಡಿದೆ. ವರ್ಷದ ಅಂದಾಜು ಮಾಡಿದ ಪ್ರೋತ್ಸಾಹ ಧನದ ಮೊತ್ತ ರೂ. 167.69 ಲಕ್ಷಗಳು. ಬಿಪಿಪಿಐ ಪ್ರೋತ್ಸಾಹ ಧನವನ್ನು ಪರಿಗಣನೆ ಮಾಡುವ ಸಂಬಂಧದಲ್ಲಿ ನಗದು ಆಧಾರದ ಲೆಕ್ಕ ನಿರ್ವಹಣೆ ಅನುಸರಿಸುವುದಾಗಿ ಕಂಪನಿ ತಿಳಿಸಿದೆ. ಆದರೆ ಇದರ ಬಗ್ಗೆ ಲೆಕ್ಕ ನಿರ್ವಹಣೆ ನೀತಿಯನ್ನು ತಿಳಿಸಿರುವುದಿಲ್ಲ. ಪಡೆಯಬಹುದಾಗಿರುವ ಅರ್ಹ ಬಿಪಿಪಿಐ ಪ್ರೋತ್ಸಾಹ ಧನ ಮತ್ತು ಪಡೆಯಲಾಗಿರುವ ಪ್ರೋತ್ಸಾಹ ಧನದ ನಡುವೆ ಉಂಟಾಗಿರುವ ರೂ. 111.23 ಲಕ್ಷಗಳ ವ್ಯತ್ಯಾಸವನ್ನು ಮಾನ್ಯಮಾಡಿರುವುದಾಗಲಿ ಅಥವಾ ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸುವುದನ್ನಾಗಲಿ ಮಾಡಿರುವುದಿಲ್ಲ.

ಇ. ಬರಬೇಕಾಗಿರುವ ಆದಾಯ ತೆರಿಗೆ ಮರುಪಾವತಿಗಳು ಮತ್ತು ವ್ಯವಸ್ಥೆ ಮಾಡಿದ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗಿದೆ ಮತ್ತು ಅಗತ್ಯ ನಮೂದುಗಳನ್ನು ಮಾಡಬೇಕಾಗಿತ್ತು. ತೆರಿಗೆ ನಿರ್ಧರಣೆ ವರ್ಷ 2012-13 ಮತ್ತು 2014-15 ಕ್ಕೆ ಪುಸ್ತಕಗಳಲ್ಲಿ ರೂ.46.88 ಲಕ್ಷ ಮೊತ್ತದ ವ್ಯವಸ್ಥೆಯು ಬಾಕಿ ಉಳಿದಿರುವುದು. ಆದರೆ ಯಾವುದೇ ಡಿಮ್ಯಾಂಡ್ ಬಾಕಿ ಇರುವುದಿಲ್ಲ. ತೆರಿಗೆ ನಿರ್ಧರಣೆ ವರ್ಷ 2013-14 ರಲ್ಲಿ ರೂ. 76.56 ಲಕ್ಷ ಮೊತ್ತವನ್ನು ಮರುಪಾವತಿಯಾಗಬಹುದಾಗಿರುವುದು ಎಂಬುದಾಗಿ ತೋರಿಸಿದೆ. ಆದರೆ ಮರುಪಾವತಿಯನ್ನು ಹಿಂದಿನ ವರ್ಷದ ಡಿಮ್ಯಾಂಡ್‌ಗೆ ಹೊಂದಾಣಿಕೆ ಮಾಡಿದೆ. ಇದನ್ನು ಕಂಪನಿ ವಿರೋಧಿಸಿರುವುದಿಲ್ಲ. ಇದರ ಸಂಯೋಜಿತ ಪರಿಣಾಮದಿಂದ ವರ್ಷದ ಲಾಭವು ರೂ.29.68 ಲಕ್ಷಗಳಷ್ಟು ಅಧಿಕವಾಗಿದೆ ಮತ್ತು ಚಾಲ್ತಿ ತೆರಿಗೆ ಆಸ್ತಿಯು ಇದೇ ಪ್ರಮಾಣದಲ್ಲಿ ಅಧಿಕವಾಗಿದೆ.

ಎಫ್. ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗದಲ್ಲಿ, ಕಂಪನಿಯು ಟೂರ್ಸ್ ಅಂಡ್ ಟ್ರಾವೆಲ್ಸ್ ಸೇವೆಗಳಿಗಾಗಿ ಕೆಲವು ಮುಂಗಡಗಳನ್ನು ಪಡೆದಿದೆ. ಕಂಪನಿಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ(ಆರ್‌ಜಿಯುಹೆಚ್ಎಸ್), ಕರ್ನಾಟಕ ಮತ್ತು ಸಂಬಂಧಪಟ್ಟ ಸೇವೆ ಪೂರೈಕೆದಾರರ ಲೆಕ್ಕಗಳನ್ನು ಸಮಂಜಸತೆ ಮಾಡಿರುವುದಿಲ್ಲ. ಕಂಪನಿಯು ಕಾಗದದ ವಿಭಾಗದಿಂದ ಆರ್‌ಜಿಯುಹೆಚ್ಎಸ್‌ಗೆ ಸರಬರಾಜುಗಳನ್ನು ಮಾಡಿದೆ. ಕಂಪನಿ ಮತ್ತು ಆರ್‌ಜಿಯುಹೆಚ್ಎಸ್ ಮತ್ತು ಸಂಬಂಧಪಟ್ಟ ಸೇವೆ ಪೂರೈಕೆದಾರರ ನಡುವೆ ವಿವಾದ ಉಂಟಾಗಿರುವುದರಿಂದ, ಆರ್‌ಜಿಯುಹೆಚ್ಎಸ್ ಮತ್ತು ಸೇವೆ ಪೂರೈಕೆದಾರರು ಸ್ವೀಕರಿಸಬೇಕಾಗಿರುವ ಮತ್ತು ಪಾವತಿ ಮಾಡಬೇಕಿರುವ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗುವುದು.. ಕಂಪನಿಯು ಈ ವಿಚಾರವಾಗಿ ರೂ. 200 ಲಕ್ಷಗಳ ಮೊತ್ತದ ವಸೂಲಾಗದ ಮತ್ತು ಸಂದೇಹಾಸ್ಪದವಾದ ಲೆಕ್ಕಕ್ಕೆ ಅವಕಾಶ ಮಾಡಿದೆ. ಸಮಂಜಸತೆ ವಿವರಣೆಯು ಇಲ್ಲದಿರುವುದರಿಂದ ಇದರಿಂದ ಉಂಟಾಗುವ ಪರಿಣಾಮವನ್ನು ತಿಳಿಯಲು ಸಾಧ್ಯವಿರುವುದಿಲ್ಲ.

ಜಿ. ಕಂಪನಿಯು ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ಆದಾಯವನ್ನು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ. ಆದರೆ, ಲೆಕ್ಕಾಚಾರದಲ್ಲಿ ತಪ್ಪುಗಳಿಂದಾಗಿ, ಈ ವರ್ಷದ ಅವಧಿಯಲ್ಲಿ ಮಾನ್ಯ ಮಾಡಿರುವ ಬಡ್ಡಿ ಆದಾಯವು ರೂ.31.54 ಲಕ್ಷದಷ್ಟು ಕಡಿಮೆಯಾಗಿದೆ.. ಇದರಿಂದಾಗಿ ಮತ್ತು ಇನ್ನಿತರೆ ತಪ್ಪುಗಳಿಂದಾಗಿ, ಚಾಲ್ತಿ ಆಸ್ತಿಗಳ ಅಡಿಯಲ್ಲಿ ನಗದು ಮತ್ತು ನಗದು ಸಮಾನತೆಗಳ ಹೊರತಾಗಿ ಬ್ಯಾಂಕ್ ಶಿಲ್ಕುಗಳನ್ನು ರೂ. 32.80 ಲಕ್ಷದಷ್ಟು ಕಡಿಮೆಯಾಗಿ ತಿಳಿಸಿದೆ.

ನಾವು ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯನ್ನು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಗುಣಮಟ್ಟಗಳ (ಎಸ್ಎಗಳು) ಅನುಸಾರ ನಡೆಸಿದ್ದೇವೆ. ಸದರಿ ಗುಣಮಟ್ಟಗಳ ಅನ್ವಯದ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ವಿಭಾಗದಲ್ಲಿನ ಲೆಕ್ಕಪರಿಶೋಧಕರ ಜವಾಬ್ದಾರಿಗಳಲ್ಲಿ ಇನ್ನೂ ವಿವರವಾಗಿ ತಿಳಿಸಿದೆ. ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ನೀತಿ ಸಂಹಿತೆ ಅನುಸಾರ ಜೊತೆಗೆ ಕಾಯ್ದೆಯ ಉಪಬಂಧಗಳು ಮತ್ತು ಇದರಡಿಯಲ್ಲಿನ ನಿಯಮಗಳ ಅನ್ವಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆಗಿನ ನಮ್ಮ ಲೆಕ್ಕಪರಿಶೋಧನೆ ಸಂಬಂಧಿಸಿದ ನೈತಿಕ ಅಗತ್ಯತೆಗಳ ಅನುಸಾರ ನಾವು ಸ್ವತಂತ್ರರಾಗಿರುವೆವು, ಮತ್ತು ಸದರಿ ಅಗತ್ಯತೆಗಳು ಮತ್ತು ನೀತಿ ಸಂಹಿತೆ ಅನುಸಾರ ನಾವು ನಮ್ಮ ಇತರೆ ನೈತಿಕ ಜವಾಬ್ದಾರಿಗಳನ್ನು ಈಡೇರಿಸಿದ್ದೇವೆ. ನಾವು ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳು ನಮ್ಮ ಅರ್ಹತಾ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು.

ಹಣಕಾಸು ಹೇಳಿಕೆಗಳು ಮತ್ತು ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಹೊರತಾದ ಮಾಹಿತಿ

ಕಂಪನಿಯ ನಿರ್ದೇಶಕರ ಮಂಡಳಿಯು ಇತರೆ ಮಾಹಿತಿ ಸಿದ್ಧಪಡಿಸಲು ಜವಾಬ್ದಾರರಾಗಿರುವರು. ಇತರೆ ಮಾಹಿತಿಯಲ್ಲಿ ಮಂಡಳಿಯ ವರದಿ, ಮಂಡಳಿಯ ವರದಿಗೆ ಅನುಬಂಧ ಒಳಗೊಂಡಿರುವುದು. ಆದರೆ ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ನಮ್ಮ ಲೆಕ್ಕಪರಿಶೋಧಕರ ವರದಿ ಸೇರಿರುವುದಿಲ್ಲ. ಸದರಿ ಲೆಕ್ಕಪರಿಶೋಧಕರ ವರದಿ ದಿನಾಂಕದ ನಂತರ ಮಂಡಳಿಯ ವರದಿಯನ್ನು ನಮಗೆ ದೊರಕಿಸಿಕೊಡುವ ನಿರೀಕ್ಷೆಯಿದೆ.

ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ಒಳಪಡಿಸಿಕೊಂಡಿರುವುದಿಲ್ಲ. ಆದ್ದರಿಂದಾಗಿ ಇದರ ಮೇಲೆ ನಾವು ಯಾವುದೇ ರೀತಿಯ ಭರವಸೆಯ ನಿರ್ಣಯ ವ್ಯಕ್ತಪಡಿಸುವುದಿಲ್ಲ.

ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಸಂಬಂಧದಲ್ಲಿ, ನಮ್ಮ ಜವಾಬ್ದಾರಿಯು ಇತರೆ ಮಾಹಿತಿಯನ್ನು ಓದುವುದಾಗಿರುತ್ತದೆ. ಹಾಗೆ ಮಾಡುವಾಗ ಇತರೆ ಮಾಹಿತಿಯು ಸ್ವತಂತ್ರ ಹಣಕಾಸಿನ ಹೇಳಿಕೆಗಳಿಗೆ ವಾಸ್ತವಿಕವಾಗಿ ಅಸಂಗತವಾಗಿರುವವೇ ಅಥವಾ ಲೆಕ್ಕ ಪರಿಶೋಧನೆಯಲ್ಲಿ ಪಡೆದಿರುವ ನಮ್ಮ ತಿಳುವಳಿಕೆಯು ಅಸಂಗತವಾಗಿರುವುದೇ ಅಥವಾ ವಾಸ್ತವಿಕವಾಗಿ ತಪ್ಪು ನೀಡಲಾಗಿದೆಯೇ ಎಂಬುದನ್ನು ಪರಿಗಣಿಸುವೆವು. ನಾವು ಮಾಡಿರುವ ಕೆಲಸದ ಆಧಾರದ ಮೇಲೆ ಸದರಿ ಇತರೆ ಮಾಹಿತಿಯು ವಾಸ್ತವಿಕವಾಗಿ ತಪ್ಪು ಹೇಳಿಕೆಯಿಂದ ಕೂಡಿರುವುದು ಎಂದು ನಾವು ನಿರ್ಣಯಿಸುವೆವು. ಹಾಗೆ ಮಾಡಿದಾಗ ನಾವು ಆ ವಾಸ್ತವಾಂಶವನ್ನು ವರದಿ ಮಾಡಬೇಕಾಗುತ್ತದೆ.

ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಯ ನಿರ್ದೇಶಕರ ಮಂಡಳಿಯು, ಕಾಯ್ದೆಯ ಪ್ರಕರಣ 133ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಮಾನದಂಡಗಳೂ ಸೇರಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕನಿರ್ವಹಣೆ ನೀತಿಗಳ ಅನುಸಾರ ಕಂಪನಿಯ ಹಣಕಾಸಿನ ಪರಿಸ್ಥಿತಿ, ಹಣಕಾಸಿನ ಕಾರ್ಯಕ್ಷಮತೆ, ಮತ್ತು ನಗದು ಹರಿಯುವಿಕೆಗಳ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಈ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಕಂಪನಿಗಳ ಕಾಯ್ದೆಯ ಪ್ರಕರಣ 134(5)ರಲ್ಲಿ ತಿಳಿಸಿರುವ ವಿಚಾರಗಳಿಗೆ ಜವಾಬ್ದಾರಿಯಾಗಿರುವುದು. ಕಂಪನಿಯ ಆಸ್ತಿಗಳನ್ನು ಸುರಕ್ಷತೆ ಮಾಡಲು ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಮಟ್ಟದಲ್ಲಿ ಲೆಕ್ಕ ನಿರ್ವಹಣೆ ದಾಖಲೆಗಳನ್ನು ನಿರ್ವಹಣೆ ಮಾಡುವುದು ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು, ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡುವುದು ಮತ್ತು ಬಳಸುವುದು; ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡುವುದು; ಮತ್ತು ವಂಚನೆ ಅಥವಾ ತಪ್ಪಿನಿಂದ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಮತ್ತು ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ನಿರೂಪಿಸಲು ಸೂಕ್ತವಾದ ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆಯನ್ನು ಖಾತರಿ ಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವ ಸಾಕಷ್ಟು ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಮಾಡಲು ಜವಾಬ್ದಾರರಾಗಿರುವರು.

ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ ನಿರ್ದೇಶಕರುಗಳ ಮಂಡಳಿಯು ಕಂಪನಿಯು ಚಲನಶೀಲ ಕಂಪನಿಯಾಗಿ ಮುಂದುವರಿಯುವ ಸಾಮರ್ಥ್ಯ ಹೊಂದಿರುವುದೇ, ಚಲನಶೀಲ ಕಂಪನಿಗೆ ಸಂಬಂದಪಟ್ಟ ಅನ್ವಯವಾಗುವ ವಿಚಾರಗಳನ್ನು ಪ್ರಕಟಪಡಿಸುವುದೇ ಮತ್ತು ಪರಿಸಮಾಪ್ತಿಗೊಳಿಸಲು ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು, ಇದನ್ನು ಮಾಡದೆ ವಾಸ್ತವವಾದ ಯಾವುದೇ ಪರ್ಯಾಯ ಉಪಾಯವಿಲ್ಲವೆಂದು ಆಡಳಿತ ಮಂಡಳಿಗೆ ಕಂಡುಬರದ ಹೊರತು, ಚಲನಶೀಲ ಕಂಪನಿಯ ಆಧಾರದ ಲೆಕ್ಕನಿರ್ವಹಣೆ ಬಳಕೆ ಮಾಡಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಜವಾಬ್ದಾರರಾಗಿರುವರು.

ನಿರ್ದೇಶಕರುಗಳ ಮಂಡಳಿಯು ಕಂಪನಿಯ ಹಣಕಾಸಿನ ವರದಿಗಾರಿಕೆ ಪ್ರಕ್ರಿಯೆಯನ್ನು ಅವಲೋಕಿಸುವ ಜವಾಬ್ದಾರಿ ಹೊಂದಿರುವರು.

ಸ್ವತಂತ್ರ ಐಎಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರು ಹೊಂದಿರುವ ಜವಾಬ್ದಾರಿಗಳು

ನಮ್ಮ ಧ್ಯೇಯವು ಸ್ವತಂತ್ರ ಹಣಕಾಸಿನ ಹೇಳಿಕೆಗಳು ಒಟ್ಟಾರೆಯಾಗಿ ವಂಚನೆ ಅಥವಾ ತಪ್ಪಿನಿಂದಾಗಲಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವಂತೆ ಸೂಕ್ತವಾದ ಭರವಸೆ ಪಡೆಯುವುದು, ಮತ್ತು ನಮ್ಮ ಅಭಿಪ್ರಾಯ ಒಳಗೊಂಡ ಲೆಕ್ಕ ಪರಿಶೋಧಕರ ವರದಿ ಒಂದನ್ನು ನೀಡುವುದು ಆಗಿರುತ್ತದೆ. ಸೂಕ್ತವಾದ ಭರವಸೆ ಅಂದರೆ ಉನ್ನತ ಮಟ್ಟದ ಭರವಸೆಯಾಗಿರುವುದು. ಆದರೆ ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ಲೆಕ್ಕಪರಿಶೋಧನೆಯು ಯಾವಾಗಲೂ ವಾಸ್ತವಿಕ ತಪ್ಪು ಹೇಳಿಕೆಗಳೇನಾದರೂ ಇದ್ದಲ್ಲಿ ಅವುಗಳನ್ನು ಪತ್ತೆ ಹಚ್ಚುವುದೆಂಬ ಬಗ್ಗೆ ಖಾತರಿಯಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉಂಟಾಗಬಹುದು. ಅವು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ, ಸದರಿ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಬಳಕೆದಾರರು ತೆಗೆದುಕೊಂಡ ಆರ್ಥಿಕ ತೀರ್ಮಾನಗಳ ಮೇಲೆ ಪ್ರಭಾವ ಬೀರುವುವು ಎಂಬುದಾಗಿ ಸಕಾರಣವಾಗಿ ನಿರೀಕ್ಷಿಸಲಾಗಿದ್ದಲ್ಲಿ ಅವು ವಾಸ್ತವಿಕವಾದವು ಎಂಬುದಾಗಿ ಪರಿಗಣಿಸಲಾಗುವುದು.

ಲೆಕ್ಕಪರಿಶೋಧನೆ ಗುಣಮಟ್ಟಗಳ (ಎಸ್‌ಎಗಳ) ಅನುಸಾರದ ಅಂಗವಾಗಿ ನಾವು ಲೆಕ್ಕಪರಿಶೋಧನೆ ಕಾರ್ಯದ ಉದ್ದಕ್ಕೂ ವೃತ್ತಿದಾಯಕ ತೀರ್ಮಾನಗಳನ್ನು ಮಾಡುವೆವು ಮತ್ತು ವೃತ್ತಿದಾಯಕ ಸಂದೇಹವನ್ನು ಅನುಸರಿಸುವೆವು. ಇದಲ್ಲದೆ ನಾವು:

- ವಂಚನೆ ಅಥವಾ ತಪ್ಪಿನ ಪ್ರಯುಕ್ತ ಸ್ವತಂತ್ರ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯಗಳನ್ನು ಗುರುತಿಸುವೆವು ಮತ್ತು ನಿರ್ಧರಣೆ ಮಾಡುವೆವು. ಅಂತಹ ಅಪಾಯಗಳನ್ನು ನಿಭಾಯಿಸಲು ಪೂರಕವಾದ ಲೆಕ್ಕ ಪರಿಶೋಧನೆ ಕ್ರಮಾವಳಿಗಳನ್ನು

ವಿನ್ಯಾಸ ಮಾಡುವೆವು ಮತ್ತು ಲೆಕ್ಕಪರಿಶೋಧನೆ ಮಾಡುವೆವು ಹಾಗೂ ನಮ್ಮ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸೂಕ್ತವಾದ ಮತ್ತು ಸಾಕಷ್ಟು ಪ್ರಮಾಣದ ಲೆಕ್ಕಪರಿಶೋಧನೆ ಪುರಾವೆ ಪಡೆಯುವೆವು. ವಂಚನೆಯಿಂದ ಉಂಟಾಗುವ ವಾಸ್ತವಿಕ ತಪ್ಪು ಹೇಳಿಕೆಯನ್ನು ಪತ್ತೆಹಚ್ಚದಿರುವ ಅಪಾಯವು, ತಪ್ಪಿನಿಂದ ಉಂಟಾಗುವ ಅಪಾಯಕ್ಕಿಂತ ತೀವ್ರವಾದುದಾಗಿರುತ್ತದೆ. ವಂಚನೆಯು ಒಳಸಂಚು, ನಕಲಿ ಪತ್ರ ಸೃಷ್ಟಿ, ಉದ್ದೇಶಪೂರ್ವಕವಾಗಿಯೇ ಬಿಟ್ಟುಬಿಡುವುದು, ತಪ್ಪು ಪ್ರಾತಿನಿಧ್ಯಗಳನ್ನು ನೀಡುವುದು ಅಥವಾ ಆಂತರಿಕ ನಿಯಂತ್ರಣವನ್ನು ಉಲ್ಲಂಘಿಸುವ ಕೃತ್ಯಗಳನ್ನು ಒಳಗೊಂಡಿರುವುದರಿಂದ ವಂಚನೆಯು ತಪ್ಪಿಗಿಂತ ತೀವ್ರ ಸ್ವರೂಪದ ಅಪಾಯವಾಗಿರುವುದು.

- ಪರಿಸ್ಥಿತಿಗಳಿಗೆ ಸೂಕ್ತವಾಗಿರುವ ಲೆಕ್ಕಪರಿಶೋಧನೆ ಕ್ರಮಾವಳಿಗಳನ್ನು ರೂಪಿಸಲು, ಲೆಕ್ಕ ಪರಿಶೋಧನೆಗೆ ಪೂರಕವಾದ ಆಂತರಿಕ ನಿಯಂತ್ರಣದ ಅರ್ಥವಂತಿಕೆ ಒಂದನ್ನು ಪಡೆಯುವೆವು. ಕಾಯ್ದೆಯ ಪ್ರಕರಣ 143(3)(i)ರ ಅನ್ವಯ, ಕಂಪನಿ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದೇ ಮತ್ತು ಆ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿದೆ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸಲು ಸಹ ನಾವು ಜವಾಬ್ದಾರರಾಗಿರುವೆವು.
- ಆಡಳಿತ ಮಂಡಳಿ ಬಳಸಿರುವ ಲೆಕ್ಕ ನಿರ್ವಹಣೆ ನೀತಿಗಳ ಸೂಕ್ತಾಸೂಕ್ತತೆ ಮತ್ತು ಲೆಕ್ಕನಿರ್ವಹಣೆ ಅಂದಾಜುಗಳ ಯುಕ್ತತೆ ಮತ್ತು ಸಂಬಂಧಪಟ್ಟ ಪ್ರಕಟಣೆಗಳ ಸೂಕ್ತತೆಗಳನ್ನು ಮೌಲ್ಯಮಾಪನ ಮಾಡುವೆವು.
- ಆಡಳಿತ ವರ್ಗವು ಚಲನಶೀಲ ಸಂಸ್ಥೆಯ ಆಧಾರದ ಲೆಕ್ಕನಿರ್ವಹಣೆ ಬಳಕೆಯ ಸೂಕ್ತತೆಗಳ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರುವುದು ಮತ್ತು, ಪಡೆದುಕೊಂಡ ಲೆಕ್ಕಪರಿಶೋಧನೆ ಪುರಾವೆಯ ಆಧಾರದ ಮೇಲೆ, ಕಂಪನಿಯು ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವ ಬಗ್ಗೆ ಗುರುತರವಾದ ಸಂದೇಹ ಸೂಚಿಸುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅನಿಶ್ಚಿತತೆ ಇರುವುದೇ ಎಂಬುದನ್ನು ತೀರ್ಮಾನಿಸುವೆವು. ವಾಸ್ತವಿಕ ಅನಿಶ್ಚಿತತೆ ಇರುವುದೆಂದು ನಾವು ತೀರ್ಮಾನಿಸಿದ್ದೇ ಆದರೆ, ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ಸಂಬಂಧಪಟ್ಟ ಘೋಷಣೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ವರದಿಯಲ್ಲಿ ನಾವು ಗಮನ ಸೆಳೆಯಬೇಕಾಗುತ್ತದೆ; ಅಥವಾ ಅಂತಹ ಘೋಷಣೆಗಳು ಸಾಕಷ್ಟು ಇಲ್ಲದಿದ್ದರೆ, ಆಗ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಯ ಮೇಲೆ ಆಧಾರಿತವಾಗಿರುವುದು. ಆದರೂ, ಮುಂದಿನ ದಿನಗಳಲ್ಲಿ ಉಂಟಾಗುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಕಂಪನಿಯು ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವುದನ್ನು ಸ್ಥಗಿತಗೊಳಿಸಬಹುದಾಗಿರುವುದು.
- ಪ್ರಕಟಣೆಗಳೂ ಸೇರಿದಂತೆ ಒಟ್ಟಾರೆ ನಿರೂಪಣೆ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಸ್ವರೂಪ ಮತ್ತು ವಿಷಯ ಒಕ್ಕಣೆಯನ್ನು ಮೌಲ್ಯಮಾಪನ ಮಾಡುವೆವು. ಮತ್ತು ಸ್ವತಂತ್ರ ಹಣಕಾಸಿನ ಹೇಳಿಕೆಗಳು ಮುಂದೆ ತಿಳಿಸಿರುವ ವ್ಯವಹಾರಗಳು ಮತ್ತು ಘಟನಾವಳಿಗಳನ್ನು ನ್ಯಾಯೋಚಿತ ನಿರೂಪಣೆಯ ರೀತಿಯಲ್ಲಿ ಪ್ರತಿನಿಧಿಸುವುದೇ ಎಂಬುದನ್ನು ಮೌಲ್ಯಮಾಪನ ಮಾಡುವೆವು.

ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಾವು ಗುರುತಿಸಿದ, ಆಂತರಿಕ ನಿಯಂತ್ರಣಗಳಲ್ಲಿನ ಯಾವುದೇ ಗಮನಾರ್ಹ ಕೊರತೆಗಳೂ ಸೇರಿದಂತೆ, ಇತರೆ ವಿಚಾರಗಳ ಜೊತೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಮಹತ್ತರವಾದ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಬಗ್ಗೆ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ತಿಳಿಸಿದ್ದೇವೆ.

ಸ್ವತಂತ್ರದ ವಿಚಾರವಾಗಿ ಸಂಬಂಧಪಟ್ಟ ನೈತಿಕ ಅಗತ್ಯತೆಗಳನ್ನು ನಾವು ಅನುಸರಿಸಿರುವ ಬಗ್ಗೆ ಹೇಳಿಕೆ ಒಂದನ್ನು ಸಹ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ಒದಗಿಸಿದ್ದೇವೆ. ಮತ್ತು ಎಲ್ಲಾ ಬಾಂಧವ್ಯಗಳು ಮತ್ತು ನಮ್ಮ ಸ್ವತಂತ್ರದ ಬಗ್ಗೆ ಒಳಪಡುವುದಾಗಿ ಸಕಾರಣವಾಗಿ ಯೋಜಿಸಿರುವ ಮತ್ತು ಅನ್ವಯವಾಗುವ ಸಂದರ್ಭ, ಸಂಬಂಧಿಸಿದ ಸುರಕ್ಷತೆಗಳ ಇತರೆ ವಿಚಾರಗಳನ್ನು ಅವರಿಗೆ ತಿಳಿಸಿದ್ದೇವೆ.

ಇತರೆ ವಿಚಾರಗಳು:

ಎ. ಸ್ವತಂತ್ರ ಹಣಕಾಸಿನ ಹೇಳಿಕೆಗಳ ಸಂಬಂಧಿಸಿದಂತೆ ಟಿಪ್ಪಣಿ ಸಂ.40 (ii) (vi) ಓದಿಕೊಂಡಂತೆ ಟಿಪ್ಪಣಿ 8ರ ಬಗ್ಗೆ ನಾವು ಗಮನ ಸೆಳೆಯುವುದೇನೆಂದರೆ, ಪುಸ್ತಕಗಳಲ್ಲಿ ಸಾರಿಗೆ ಕ್ಲೇಮ್ ಮೇಲಿನ ಜಿಎಸ್‌ಟಿ ಆರ್‌ಸಿಎಂ ರೂ.45.98ಲಕ್ಷ ಎಂಬುದಾಗಿ ನಮೂದಿಸಿದೆ. ಆದರೆ ವಾಸ್ತವಿಕವಾಗಿ ಮಾಡಿರುವ ಕ್ಲೇಮ್ ರೂ.121.42 ಲಕ್ಷ ಆಗಿದೆ. ರೂ.75.44 ಲಕ್ಷಗಳ ವ್ಯತ್ಯಾಸವನ್ನು ಈ ಮೊದಲಿನ ವರ್ಷಗಳಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಗೆ ತೆಗೆದುಕೊಂಡಿದೆ. ಕಂಪನಿಯು ಕ್ಲೇಮ್ ಅನ್ನು ಕೇಂದ್ರ ತೆರಿಗೆಯ ಸಹಾಯಕ ಆಯುಕ್ತರು, ಉತ್ತರ ವಿಭಾಗ-3, ಬೆಂಗಳೂರು ಇವರು ತಿರಸ್ಕರಿಸಿದ್ದಾರೆ. ತದನಂತರ, ಕಂಪನಿಯು ಸಲ್ಲಿಸಿದ್ದ ಮೇಲ್ಮನವಿಯನ್ನು ಸಹ ಜಿಎಸ್‌ಟಿಯ ಹೆಚ್ಚುವರಿ ಆಯುಕ್ತರು, ಅಪೀಲ್ಸ್-II ಬೆಂಗಳೂರು ಇವರು ತಿರಸ್ಕರಿಸಿರುವರು. ಈ ಬಗ್ಗೆ ಜಿಎಸ್‌ಟಿ ಮೇಲ್ಮನವಿ ಟ್ರಿಬ್ಯೂನಲ್‌ನಲ್ಲಿ ಅಥವಾ ಸೂಕ್ತ ವೇದಿಕೆಯಲ್ಲಿ ಮೇಲ್ಮನವಿ ಸಲ್ಲಿಸಲು ಕಂಪನಿ ಯೋಜಿಸಿರುವುದರಿಂದ ಬರಬೇಕಾಗಿರುವ ಮೊತ್ತದ ಬಗ್ಗೆ ಯಾವುದೇ ವ್ಯವಸ್ಥೆ ಮಾಡಿರುವುದಿಲ್ಲ.

ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆ ವರದಿ:

1.ಕಾಯ್ದೆಯ ಪ್ರಕರಣ 143ರ ಉಪ ಪ್ರಕರಣ (11) ರ ಅನ್ವಯ ಭಾರತದ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020ರ (''ಆದೇಶ'') ಅನ್ವಯ ಅಗತ್ಯವಾದಂತೆ, ಆದೇಶದ ಕಂಡಿಕೆ 3 ಮತ್ತು 4ರಲ್ಲಿ ತಿಳಿಸಿರುವ ವಿಚಾರಗಳ ಬಗ್ಗೆ ಹೇಳಿಕೆ ಒಂದನ್ನು ನಾವು ಅನುಬಂಧ-'ಎ' ರಲ್ಲಿ ತಿಳಿಸಿದ್ದೇವೆ.

2. ಕಾಯ್ದೆಯ ಪ್ರಕರಣ 143(3)ರ ಅನ್ವಯ ಅಗತ್ಯವಾದಂತೆ ನಾವು ವರದಿ ಮಾಡುವುದೇನೆಂದರೆ:

ಎ) ನಮ್ಮ ಲೆಕ್ಕಪರಿಶೋಧನೆ ಉದ್ದೇಶಕ್ಕಾಗಿ ಅಗತ್ಯವಾಗಿರುವುದಾಗಿ ನಾವು ತಿಳಿದಿರುವ ಮತ್ತು ನಂಬಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಕೇಳಿ ಪಡೆದಿದ್ದೇವೆ.

ಬಿ) ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್ ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ, ಆ ಲೆಕ್ಕದ ಪುಸ್ತಕಗಳನ್ನು ನಾವು ಪರಿಶೀಲಿಸಿದಾಗ ಕಂಡುಬಂದಿರುವುದೇನೆಂದರೆ ಕಾನೂನಿನ ಅನುಸಾರ ಅಗತ್ಯವಾದಂತೆ ಲೆಕ್ಕಗಳ ಸೂಕ್ತವಾದ ಪುಸ್ತಕಗಳನ್ನು ಇಡಲಾಗಿದೆ.

ಸಿ) ಸದರಿ ವರದಿಯಲ್ಲಿ ತಿಳಿಸಿರುವ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ಹೇಳಿಕೆಗಳು (ಇತರೆ ಸಮಗ್ರ ಆದಾಯಗಳು ಸೇರಿದಂತೆ), ನಗದು ಹರಿಯುವಿಕೆ ಹೇಳಿಕೆ ಮತ್ತು ಈಕ್ವಿಟಿಯಲ್ಲಿನ ಬದಲಾವಣೆ ಹೇಳಿಕೆಗಳು ಲೆಕ್ಕದ ಸಂಬಂಧಪಟ್ಟ ಪುಸ್ತಕಗಳ ಅನುಸಾರವಾಗಿರುವುದು.

ಡಿ) ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರ ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ ಮೇಲೆ ತಿಳಿಸಿರುವ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳು ಕಾಯ್ದೆಯ ಪ್ರಕರಣ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳಿಗೆ ಅನುಗುಣವಾಗಿರುವುದು.

ಇ) ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿ ಸೂಚನೆ ಸಂ.ಜಿ.ಎಸ್.ಆರ್.463(ಇ) ದಿನಾಂಕ:05.06.2015ರ ಅನ್ವಯ ನಿರ್ದೇಶಕರ ಅನರ್ಹತೆಯ ಸಂಬಂಧದಲ್ಲಿನ ಕಾಯ್ದೆ 2013ರ ಪ್ರಕರಣ 164(2)ರ ಉಪಬಂಧಗಳು ಅನ್ವಯವಾಗುವುದಿಲ್ಲ.

ಎಫ್) ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿ ಇರುವಿಕೆ ವಿಚಾರದಲ್ಲಿ ಮತ್ತು ಸದರಿ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವ ಬಗ್ಗೆ ತಿಳಿಯಲು 'ಅನುಬಂಧ-II ರಲ್ಲಿನ ನಮ್ಮ ಪ್ರತ್ಯೇಕ ವರದಿ ನೋಡಿ.

ಜಿ) ಸರ್ಕಾರದ ಕಂಪನಿಯಾಗಿರುವುದರಿಂದ, ಕಾಯ್ದೆಯ ಪ್ರಕರಣ 197ರ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಕಾಯ್ದೆಯ ಪ್ರಕರಣ 197(16)ರ ಅನ್ವಯ ವರದಿಗಾರಿಕೆ ಅಗತ್ಯತೆಯು ಅನ್ವಯವಾಗುವುದಿಲ್ಲ.

ಹೆಚ್) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನ್ವಯದ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವ ಇತರೆ ವಿಚಾರಗಳ ಸಂಬಂಧದಲ್ಲಿ, ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ತಿಳಿದಿರುವ ಮಾಹಿತಿಯಂತೆ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ನಾವು ತಿಳಿಸುವುದೇನೆಂದರೆ:

i) ಕಂಪನಿಯು ತನ್ನ ಹಣಕಾಸಿನ ಪರಿಸ್ಥಿತಿ ಮೇಲೆ ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯಗಳು ಉಂಟು ಮಾಡುವ ಪರಿಣಾಮವನ್ನು ಅದರ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಟಿಪ್ಪಣಿ-40ರಲ್ಲಿ ತಿಳಿಸಿದೆ.

ii) ಕಂಪನಿಯು ಜನ್ಯ ಗುತ್ತಿಗೆಗಳು ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ. ಇದರಿಂದಾಗಿ ಯಾವುದೇ ವಾಸ್ತವಿಕ ಮುಂಗಾಣ್ಕೆ ನಷ್ಟಗಳಿರುವುದಿಲ್ಲ.

iii) ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತ ಇರುವುದಿಲ್ಲ.

iv) (ಎ) ಲಿಖಿತ ರೂಪದಲ್ಲಿ ದಾಖಲು ಮಾಡುವ ಅಥವಾ ಇದಿಲ್ಲದೆ ಅರ್ಥವಂತಿಕೆಯೊಡನೆ ಮಧ್ಯವರ್ತಿಯು ಯಾವುದೇ ರೀತಿಯಲ್ಲಿ ಗುರುತಿಸಲಾಗಿರುವ ಇತರೆ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಕಂಪನಿಯಿಂದ ಅಥವಾ ಕಂಪನಿಯ ಪರವಾಗಿ (ಅಂತಿಮ ಫಲಾನುಭವಿಗಳು) ನೀಡುವ ಅಥವಾ ಹೂಡಿಕೆ ಮಾಡುವ ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಖಾತರಿ, ಭದ್ರತೆ ಅಥವಾ ಇಂತಹ ವ್ಯವಸ್ಥೆ ಒದಗಿಸುವ ಕ್ರಮದೊಡನೆ, ವಿದೇಶಿ ಸಂಸ್ಥೆಗಳು ('ಮಧ್ಯವರ್ತಿಗಳು') ಸೇರಿದಂತೆ ಯಾವುದೇ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಕಂಪನಿ ಯಾವುದೇ ಹಣವನ್ನು ಮುಂಗಡ ಅಥವಾ ಸಾಲ ಅಥವಾ ಹೂಡಿಕೆ (ಪಡೆದುಕೊಂಡಿರುವ ಹಣದಿಂದ ಅಥವಾ ಸೆಕ್ಯುರಿಟೀಸ್ ಪ್ರೀಮಿಯಂ ಅಥವಾ ಯಾವುದೇ ಇತರೆ ಮೂಲಗಳು ಅಥವಾ ರೂಪದಲ್ಲಿ ಹಣವನ್ನು) ಮಾಡಿಲ್ಲವೆಂದು ತನ್ನ ತಿಳುವಳಿಕೆ ಮತ್ತು ನಂಬಿಕೆಯಾಗಿರುವುದು ಎಂಬುದಾಗಿ ಆಡಳಿತ ಮಂಡಳಿ ತಿಳಿಸಿದೆ.

(ಬಿ) ಅದರ ತಿಳುವಳಿಕೆ ಮತ್ತು ನಂಬಿಕೆಯಂತೆ ಆಡಳಿತ ಮಂಡಳಿ ತಿಳಿಸಿರುವುದೇನೆಂದರೆ, ಲಿಖಿತ ರೂಪದಲ್ಲಿ ದಾಖಲು ಮಾಡುವ ಅಥವಾ ಇದಿಲ್ಲದೆ ಅರ್ಥವಂತಿಕೆಯೊಡನೆ ವಿದೇಶಿ ಕಂಪನಿಗಳು ಸೇರಿದಂತೆ ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳಿಂದ ('ಹಣ ನೀಡಿಕೆ ವ್ಯಕ್ತಿಗಳು') ಕಂಪನಿ ಯಾವುದೇ ಹಣ ಪಡೆದಿರುವುದಿಲ್ಲ ಮತ್ತು ಕಂಪನಿಯು ಹಣ ನೀಡಿಕೆ ವ್ಯಕ್ತಿಯಿಂದ ಅಥವಾ ಅವರ ಪರವಾಗಿ ('ಅಂತಿಮ ಫಲಾನುಭವಿಗಳು') ಯಾವುದೇ ರೀತಿಯಲ್ಲಿ ಗುರುತಿಸಿರುವ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಹಣ ಕೊಟ್ಟಿರುವುದಿಲ್ಲ ಅಥವಾ ಹೂಡಿಕೆ ಮಾಡಿರುವುದಿಲ್ಲ ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಖಾತರಿ, ಭದ್ರತೆ ಅಥವಾ ಇಂತಹ ಯಾವುದೇ ವ್ಯವಸ್ಥೆಯನ್ನು ಒದಗಿಸಿರುವುದಿಲ್ಲ; ಮತ್ತು

(ಸಿ) ಪರಿಸ್ಥಿತಿಗಳಿಗೆ ಸೂಕ್ತವಾಗಿರುವುದಾಗಿ ಮತ್ತು ನಿಖರವಾಗಿರುವುದಾಗಿ ಪರಿಗಣಿಸಿರುವಂತೆ ನಡೆಸಿರುವ

ಅಂತಹ ಲೆಕ್ಕಪರಿಶೋಧನೆ ಕ್ರಮಾವಳಿಗಳ ಆಧಾರದ ಮೇಲೆ ಮೇಲಿನ (ಎ) ಮತ್ತು (ಬಿ) ಅಡಿಯಲ್ಲಿ ತಿಳಿಸಿರುವಂತೆ ನಿಯಮ 11 (ಇ)ನ ಉಪ ಕಲಂಗಳು (i) ಮತ್ತು (ii) ರ ಅಡಿಯಲ್ಲಿನ ನಿರೂಪಣೆಗಳು ಯಾವುದೇ ವಾಸ್ತವಿಕ ತಪ್ಪು ಹೇಳಿಕೆ ಒಳಗೊಂಡಿರುವುದು ಎಂಬುದಾಗಿ ನಾವು ನಂಬುವಂತೆ ಮಾಡುವ ಯಾವುದೇ ಅಂಶಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ.

v) **ಲಾಭಾಂಶ ವಿಚಾರದಲ್ಲಿ:**

(ಎ) ಹಿಂದಿನ ವರ್ಷದಲ್ಲಿ ಪ್ರಸ್ತಾವನೆ ಮಾಡಿರುವ, ಸದರಿ ವರ್ಷದಲ್ಲಿ ಕಂಪನಿ ಘೋಷಿಸಿರುವ ಮತ್ತು ಪಾವತಿ ಮಾಡಿರುವ ಅಂತಿಮ ಲಾಭಾಂಶವು ಕಂಪನಿಗಳ ಕಾಯ್ದೆ, 2013ರ ಪ್ರಕರಣ 123ರ ಅನುಸಾರ ಇರುವುದು.

(ಬಿ) ಕಂಪನಿಯ ನಿರ್ದೇಶಕರ ಮಂಡಳಿಯು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಅಂತಿಮ ಲಾಭಾಂಶವನ್ನು ಪ್ರಸ್ತಾಪಿಸಿದ್ದು, ಅದು ಸದಸ್ಯರುಗಳಿಂದ ಅನುಮೋದನೆಯಾಗುವುದಕ್ಕೆ ಒಳಪಟ್ಟಿರುವುದು. ಪ್ರಸ್ತಾಪಿಸಿರುವ ಲಾಭಾಂಶದ ಮೊತ್ತವು ಕಂಪನಿಗಳ ಕಾಯ್ದೆ, 2013ಪ್ರಕರಣ 123ರ ಅನುಸಾರ ಇರುವುದು.

vi) ಆಡಿಟ್ ಟ್ರಯಲ್ (ಎಡಿಟ್‌ಲಾಗ್) ರೆಕಾರ್ಡಿಂಗ್‌ನ ಸೌಲಭ್ಯದ ವ್ಯವಸ್ಥೆಯುಳ್ಳ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್ ಬಳಸಿ ಲೆಕ್ಕದ ಪುಸ್ತಕಗಳ ನಿರ್ವಹಣೆ ಮಾಡಲು ಕಂಪನಿಗಳ (ಲೆಕ್ಕಪತ್ರ) ನಿಯಮಗಳು, 2014ರ ನಿಯಮ 3(1)ರ ಉಪಬಂಧವು ದಿನಾಂಕ 1ನೇ ಏಪ್ರಿಲ್ 2023ರಿಂದ ಕಂಪನಿಗೆ ಅನ್ವಯವಾಗುವುದು. ಅದರಂತೆ ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11(ಜಿ) ಅನ್ವಯ ವರದಿ ಮಾಡುವಿಕೆಯು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಅನ್ವಯವಾಗುವುದಿಲ್ಲ.

3. ಕಂಪನಿಗೆ ಅನ್ವಯವಾಗುವ, ಕಾಯ್ದೆಯ ಪ್ರಕರಣ 143(5) ರ ಅನ್ವಯ ಅಗತ್ಯವಾದಂತೆ, ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹೊರಡಿಸಿರುವ ನಿರ್ದೇಶನಗಳ ಮೇಲಿನ ವಿಚಾರಗಳನ್ನು ಲಗತ್ತಿಸಿದೆ. (''ಅನುಬಂಧ-ಸಿ'' ನೋಡಿ)

ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ :000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ :209054
ಯುಡಿಐಎನ್:23209054ಬಿಜಿಟಿಡಬ್ಲ್ಯೂಬಿಆರ್7357
ಸ್ಥಳ: ಬೆಂಗಳೂರು
ದಿನಾಂಕ: 27.12.2023

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ 'ಅನುಬಂಧ-1''

(ಸಮ ದಿನಾಂಕದ ನಮ್ಮ ವರದಿಯ 'ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿ ಭಾಗದ ಅಡಿಯಲ್ಲಿನ ಪ್ಯಾರಾಗ್ರಾಫ್ (1) ನೋಡಿ)

(i)(ಎ)(ಎ) ಸ್ವತ್ತು, ಸ್ಥಾವರ ಮತ್ತು ಉಪಕರಣದ ಗುಣಾತ್ಮಕ ವಿವರಗಳು ಮತ್ತು ಪರಿಸ್ಥಿತಿಯ ಪೂರ್ಣ ವಿವರಗಳನ್ನು ತಿಳಿಸುವ ಸೂಕ್ತ ದಾಖಲೆಗಳನ್ನು ಕಂಪನಿ ನಿರ್ವಹಣೆ ಮಾಡಿದೆ.

(ಬಿ) ಕಂಪನಿಯು ಅಗೋಚರಿತ ಆಸ್ತಿಗಳ ಪೂರ್ಣ ವಿವರ ತಿಳಿಸುವ ಸೂಕ್ತವಾದ ದಾಖಲೆಗಳನ್ನು ನಿರ್ವಹಣೆ ಮಾಡಿದೆ. ಆದರೆ, ಕಂಪನಿಯು ವರ್ಷದ ಅವಧಿಯಲ್ಲಿ ಅಗೋಚರಿತ ಆಸ್ತಿಗಳ ಉಳಿಕೆ ಮೌಲ್ಯವನ್ನು ಸವಕಳಿ ಮಾಡಿದೆ.

(ಬಿ) ಕಂಪನಿಯು ವರ್ಷದ ಅವಧಿಯಲ್ಲಿ ಸ್ಥಿರಾಸ್ತಿಗಳ ಬಗ್ಗೆ ಭೌತಿಕ ಪರಿಶೀಲನೆ ನಡೆಸಿರುವ ಬಗ್ಗೆ ವರದಿಯನ್ನು ಒದಗಿಸಿರುವುದಿಲ್ಲ. ಭೌತಿಕ ಪರಿಶೀಲನೆ ವರದಿ ಇಲ್ಲದಿರುವ ಪ್ರಯುಕ್ತ, ಭೌತಿಕ ಪರಿಶೀಲನೆ ನಡೆಸಿದ ಸಮಯದಲ್ಲಿ ಯಾವುದೇ ವ್ಯತ್ಯಾಸವನ್ನು ಗುರುತಿಸಿದ್ದೇ ಆದಲ್ಲಿ ಆ ಬಗ್ಗೆ ನಾವು ಟೀಕೆ ಟಿಪ್ಪಣಿ ಮಾಡಲು ಸಾಧ್ಯವಾಗದು.

(ಸಿ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿರುವ ವಿವರಣೆಗಳು ಮತ್ತು ನಾವು ಪರಿಶೀಲಿಸಿದ ದಾಖಲೆಗಳ ಅನ್ವಯ, ಜಮೀನು ಮತ್ತು ಕಟ್ಟಡಗಳನ್ನು ಒಳಗೊಂಡಿರುವ ಮುಕ್ತ ಹಿಡುವಳಿಯ ಸ್ಥಿರಾಸ್ತಿಗಳ ಕ್ರಯಪತ್ರಗಳನ್ನು ಕಂಪನಿಯು ಹೊಂದಿದ್ದು, ಅವು ಕಂಪನಿಯ ಹೆಸರಿನಲ್ಲಿರುವವು. ಗುತ್ತಿಗೆ ಹಿಡುವಳಿಯ ಜಮೀನಿನ ಬಗ್ಗೆ ಗುತ್ತಿಗೆ ಒಪ್ಪಂದ ಪತ್ರಗಳು ಕಂಪನಿಯ ಹೆಸರಿನಲ್ಲಿರುವವು. ಆದರೆ, ಈ ಕೆಳಕಂಡ ಗುತ್ತಿಗೆ ಹಿಡುವಳಿಯ ಜಮೀನಿನ ಸಂಬಂಧದ ಕ್ರಯಪತ್ರಗಳು ನಮ್ಮ ಪರಿಶೀಲನೆಗೆ ಲಭ್ಯವಾಗಿರುವುದಿಲ್ಲ.

ವಿವರ	ಸ್ಥಳ	ಸ್ವತ್ತಿನ ಸ್ವರೂಪ
ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್, ಇಲ್ಲಿರುವ 1ಎಕರೆ 32 ಗುಂಟೆಗಳ ಜಮೀನು	ಸರ್ವೆ ನಂ.53, ಕೋನೇನ ಅಗ್ರಹಾರ ವರ್ತೂರು, ಬೆಂಗಳೂರು ಇಲ್ಲಿರುವುದು.	ಗುತ್ತಿಗೆ ಹಿಡುವಳಿ ಜಮೀನು

(ಡಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಮತ್ತು ನಾವು ಕಂಪನಿಯ ದಾಖಲೆಗಳನ್ನು ಪರಿಶೀಲನೆ ಮಾಡಿದ ಆಧಾರದ ಮೇಲೆ, ಕಂಪನಿಯು ಈ ವರ್ಷದ ಅವಧಿಯಲ್ಲಿ ತನ್ನ ಯಾವುದೇ ಸ್ವತ್ತು, ಸ್ಥಾವರ ಮತ್ತು ಉಪಕರಣ ಅಥವಾ ಅಗೋಚರಿತ ಆಸ್ತಿಗಳ ಮರುಮೌಲ್ಯಮಾಪನ ಮಾಡಿರುವುದಿಲ್ಲ.

(ಇ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ಬೇನಾಮಿ ವ್ಯವಹಾರಗಳ (ನಿಷೇಧ) ಕಾಯ್ದೆ, 1988 (1988ರ 45) (2016ರಲ್ಲಿ ತಿದ್ದುಪಡಿಯಾಗಿರುವಂತೆ) ಮತ್ತು ಇದರಡಿಯಲ್ಲಿನ ನಿಯಮಗಳ ಅನ್ವಯ ಯಾವುದೇ ಬೇನಾಮಿ ಸ್ವತ್ತನ್ನು ಹೊಂದಿರುವ ಬಗ್ಗೆ, 31ನೇ ಮಾರ್ಚ್ 2023ರಂದು ಇದ್ದಂತೆ ಕಂಪನಿಯ ವಿರುದ್ಧ ಈ ವರ್ಷದ ಅವಧಿಯಲ್ಲಿ ಯಾವುದೇ ಕ್ರಮಾವಳಿಗಳನ್ನು ಕೈಗೊಂಡಿರುವುದಿಲ್ಲ ಅಥವಾ ಯಾವುದೇ ಕ್ರಮಾವಳಿಗಳು ಇತ್ಯರ್ಥವಾಗದೆ ಉಳಿದಿರುವುದಿಲ್ಲ.

(ii) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಆಡಳಿತ ಮಂಡಳಿಯು ಸದರಿ ವರ್ಷದ ಅವಧಿಯಲ್ಲಿ ಸೂಕ್ತವಾದ ಅಂತರಗಳಲ್ಲಿ ಸರಕಿನ ತಪಶೀಲುಗಳ ಭೌತಿಕ ಪರಿಶೀಲನೆ ನಡೆಸಿದೆ ಮತ್ತು ಈ ಪರಿಶೀಲನೆ ನಡೆಸಿದಾಗ ಯಾವುದೇ ವಾಸ್ತವಿಕ ವ್ಯತ್ಯಾಸಗಳು ಕಂಡು ಬಂದಿರುವುದಿಲ್ಲ. ಆದರೂ, ಸರಕಿನ ತಪಶೀಲಿನ ಭೌತಿಕ ಪರಿಶೀಲನೆ ಮಾಡಿರುವುದಕ್ಕೆ ಸಾಕಷ್ಟು ಪುರಾವೆ ಇಲ್ಲದಿರುವುದರಿಂದ, ಆಡಳಿತ ಮಂಡಳಿಯಿಂದ ಸರಕುಗಳ ತಪಶೀಲು ಮಾಡಲು ಅನುಸರಿಸಿರುವ ಕ್ರಮಾವಳಿಗಳು ಸಾಕಷ್ಟು ಪ್ರಮಾಣದಲ್ಲಿ ಇರುವಿಕೆ ಮತ್ತು ಸಮಯದ ಅಂತರದ ಬಗ್ಗೆ ಟೀಕೆ ಮಾಡಲು ನಮಗೆ ಸಾಧ್ಯವಿರುವುದಿಲ್ಲ.

ಆಡಳಿತ ಮಂಡಳಿಯು ನಡೆಸಿರುವ ಸರಕುಗಳ ತಪಶೀಲುಗಳ ಭೌತಿಕ ಪರಿಶೀಲನೆಯ ಬಗ್ಗೆ ದಾಖಲೆಯು ಪರಿಪೂರ್ಣವಾಗಿಲ್ಲದ ಕಾರಣ, ಭೌತಿಕ ದಾಸ್ತಾನು ಮತ್ತು ಪುಸ್ತಕಗಳ ಅನುಸಾರವಿರುವ ದಾಸ್ತಾನಿನ ನಡುವೆ ವ್ಯತ್ಯಾಸವಿರುವ ಕುರಿತು ಟೀಕೆ ಟಿಪ್ಪಣಿ ಮಾಡಲು ನಮಗೆ ಸಾಧ್ಯವಾಗದು. ಆದರೆ ಲಭ್ಯವಿರುವ ಕಡೆಗಳಲ್ಲಿ ಆಂತರಿಕ ಲೆಕ್ಕಪರಿಶೋಧನೆ ವರದಿಗಳ ಆಧಾರದ ಮೇಲೆ ಸರಕುಗಳ ತಪಶೀಲುಗಳು ಮತ್ತು ಅವುಗಳ ಮೌಲ್ಯಗಳಲ್ಲಿ ಕಂಪನಿಯು ಹೊಂದಾಣಿಕೆ ಮಾಡಿದೆ.

(ಬಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ, ಕಂಪನಿಯು ಸದರಿ ವರ್ಷದ ಅವಧಿಯಲ್ಲಿ ಯಾವುದೇ ಸಮಯದಲ್ಲಿ ಚಾಲ್ತಿ ಆಸ್ತಿಗಳ ಭದ್ರತೆಯ ಆಧಾರದ ಮೇಲೆ ಬ್ಯಾಂಕಿನಿಂದ ಅಥವಾ ಹಣಕಾಸಿನ ಸಂಸ್ಥೆಯಿಂದ ಕಂಪನಿಗೆ ಯಾವುದೇ ದುಡಿಮೆ ಬಂಡವಾಳ ಸಾಲಗಳನ್ನು ಮಂಜೂರು ಮಾಡಿರುವುದಿಲ್ಲ, ಹಾಗಾಗಿ ಆದೇಶದ ಕಲಂ 3(ii) (ಬಿ) ರ ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(iii) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಸದರಿ ವರ್ಷದ ಅವಧಿಯಲ್ಲಿ ನೌಕರರುಗಳಿಗೆ ಮುಂಗಡಗಳನ್ನು ನೀಡಿರುವುದರ ಹೊರತಾಗಿ, ಕಂಪನಿಯು ಯಾವುದೇ ಹೂಡಿಕೆ ಮಾಡಿರುವುದಿಲ್ಲ. ಯಾವುದೇ ಗ್ಯಾರಂಟಿ ನೀಡಿರುವುದಿಲ್ಲ ಮತ್ತು ಭದ್ರತೆಯುಳ್ಳ ಅಥವಾ ಭದ್ರತೆ ಇಲ್ಲದ ಸಾಲಗಳ ಸ್ವರೂಪದಲ್ಲಿ ಯಾವುದೇ ಸಾಲಗಳು ಅಥವಾ

ಮುಂಗಡಗಳನ್ನು ಯಾವುದೇ ಕಂಪನಿಗಳು, ಸಂಸ್ಥೆಗಳು, ಸೀಮಿತ ಹೊಣೆಗಾರಿಕೆಯುಳ್ಳ ಪಾಲುದಾರಿಕೆ ಸಂಸ್ಥೆಗಳಿಗೆ ಅಥವಾ ಯಾವುದೇ ಇತರೆ ವ್ಯಕ್ತಿಗಳಿಗೆ ನೀಡಿರುವುದಿಲ್ಲ. ಆದ ಪ್ರಯುಕ್ತ ಆದೇಶದ ಕಲಂ 3 (iii) ರ ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(iv) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕಂಪನಿಯು ಯಾವುದೇ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಹೂಡಿಕೆಗಳ ಸಂಬಂಧದಲ್ಲಿ ಭದ್ರತೆ ಅಥವಾ ಗ್ಯಾರಂಟಿ ನೀಡಿರುವುದಿಲ್ಲ, ಕಾಯ್ದೆಯ ಪ್ರಕರಣ 185 ಮತ್ತು 186ರ ಉಪಬಂಧಗಳನ್ನು ಅನುಸರಿಸಲಾಗಿದೆ.

(v) ಕಂಪನಿಯು ಕಂಪನಿಗಳ ಕಾಯ್ದೆ, 2013ರ ಪ್ರಕರಣ 73 ರಿಂದ 76ರವರೆಗಿನ ಉಪಬಂಧಗಳ ಅರ್ಥದ ಒಳಗೆ ಅಥವಾ ಯಾವುದೇ ಇತರೆ ಸಂಬಂಧಪಟ್ಟ ಉಪಬಂಧಗಳ ಅನ್ವಯ ಮತ್ತು ಇದರ ಅಡಿಯಲ್ಲಿ ಮಾಡಿರುವ ನಿಯಮಗಳ ಅನ್ವಯ ಸದರಿ ವರ್ಷದ ಅವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ

(vi) ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಅನುಸಾರ ತಿದ್ದುಪಡಿಯಾದಂತೆ ಕಂಪನಿಗಳ (ವೆಚ್ಚದ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳು, 2014ರ ಅನ್ವಯ ಮತ್ತು ಕಾಯ್ದೆಯ ಪ್ರಕರಣ 148(1)ರ ಅನ್ವಯ ಕೇಂದ್ರ ಸರ್ಕಾರ ನಿಗದಿಪಡಿಸಿರುವಂತೆ ಕಂಪನಿಯು ವೆಚ್ಚದ ದಾಖಲೆಗಳನ್ನು ನಿರ್ವಹಣೆ ಮಾಡಬೇಕಿರುವುದಿಲ್ಲ.

(vii) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಕಂಪನಿಯು ಸಾಮಾನ್ಯವಾಗಿ ಸರಕುಗಳು ಮತ್ತು ಸೇವಾ ತೆರಿಗೆ, ಭವಿಷ್ಯನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸೀಮಾ ಸುಂಕ, ಅಬಕಾರಿ ಸುಂಕ, ಮೌಲ್ಯವರ್ಧನೆ ತೆರಿಗೆ, ಸೆಸ್ ಮತ್ತು ಇತರೆ ಶಾಸನಬದ್ಧ ಬಾಕಿಗಳ ವಿವಾದ ರಹಿತ ಶಾಸನಬದ್ಧ ಬಾಕಿಗಳನ್ನು ಸೂಕ್ತ ಪ್ರಾಧಿಕಾರಿಗಳಿಗೆ ನಿಯಮಿತವಾಗಿ ಸಂದಾಯ ಮಾಡುತ್ತಿದೆ. ಆದರೂ, ಕೆಲವು ಶಾಸನಬದ್ಧ ಬಾಕಿಗಳನ್ನು ಸಂದಾಯ ಮಾಡುವುದರಲ್ಲಿ ಅಲ್ಪ ವಿಳಂಬವಾಗಿರುವುದು.

ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನ್ವಯ, 31ನೇ ಮಾರ್ಚ್ 2023ರಂದು ಇದ್ದಂತೆ ಕೆಳಕಂಡವುಗಳ ಹೊರತಾಗಿ, ಅವುಗಳನ್ನು ಪಾವತಿ ಮಾಡಬೇಕಿರುವ ದಿನಾಂಕದಿಂದ ಆರು ತಿಂಗಳಿಗೂ ಹೆಚ್ಚಿನ ಅವಧಿಗೆ ಬಾಕಿಯಾಗಿ ಉಳಿದಿರುವ ಅಂತಹ ಶಾಸನಬದ್ಧ ಬಾಕಿಗಳ ಸಂಬಂಧ ಯಾವುದೇ ವಿವಾದ ರಹಿತ ಮೊತ್ತಗಳು ಇರುವುದಿಲ್ಲ.

ಕಾಯಿದೆ	ಬಾಕಿಗಳ ಸ್ವರೂಪ	ಮೊತ್ತ (ರೂ. ಲಕ್ಷಗಳಲ್ಲಿ)	ಸಂಬಂಧ ಪಟ್ಟಿರುವ ಅವಧಿ
ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯಿದೆ, 1996	ಕಾರ್ಮಿಕರ ಕಲ್ಯಾಣ ಸೆಸ್	0.69	2013-14
ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯಿದೆ, 1996	ಕಾರ್ಮಿಕರ ಕಲ್ಯಾಣ ಸೆಸ್	0.23	2014-15
ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2016	ಜಿಎಸ್‌ಟಿ ಬಗ್ಗೆ ಟಿಡಿಎಸ್	0.59	2022-23

ಬಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನ್ವಯ ಕೆಳಗೆ ತಿಳಿಸಿರುವವು ಹೊರತಾಗಿ ಯಾವುದೇ ವಿವಾದ ಕಾರಣ ಸಂದಾಯ ಮಾಡದಿರುವ ಉಪ ಕಲಂ (ಎ) ರಲ್ಲಿ ಮೇಲೆ ತಿಳಿಸಿರುವ ಯಾವುದೇ ಶಾಸನಬದ್ಧ ಬಾಕಿಗಳಿರುವುದಿಲ್ಲ.

ಕ್ರ. ಸಂ.	ಕಾಯಿದೆ ಹೆಸರು	ಸ್ವರೂಪ	ಸಂಬಂಧಿಸಿದ ಅವಧಿ	ಮೊತ್ತ (ರೂ. ಲಕ್ಷಗಳಲ್ಲಿ)	ಪಾವತಿ ಮಾಡಿರುವ ಮೊತ್ತ (ರೂ. ಲಕ್ಷಗಳಲ್ಲಿ)	ವಿವಾದವು ಇತ್ಯರ್ಥವಾಗದೆ ಉಳಿದಿರುವ ವೇದಿಕೆ
1	ಹಣಕಾಸು ಕಾಯ್ದೆ, 1994	ಸೇವಾ ತೆರಿಗೆ	2005-06 ಮತ್ತು 2006-07	48.00	10.00	ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ
2	ಹಣಕಾಸು ಕಾಯ್ದೆ, 1994	ಸೇವಾ ತೆರಿಗೆ	2002-03 ಮತ್ತು 2003-04	26.00	20.00	ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ
3	ಹಣಕಾಸು ಕಾಯ್ದೆ, 1994	ಸೇವಾ ತೆರಿಗೆ	2003-04 ಮತ್ತು 2005-06	37.00	37.00	ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ
4	ಹಣಕಾಸು ಕಾಯ್ದೆ, 1994	ಸೇವಾ ತೆರಿಗೆ	2007-08 ಮತ್ತು 2008-09	36.00	10.00	ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ

5	ಹಣಕಾಸು ಕಾಯ್ದೆ, 1994	ಸೇವಾ ತೆರಿಗೆ	2013-14 ಮತ್ತು 2014-15	48.00	9.00	ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ
6	ಹಣಕಾಸು ಕಾಯ್ದೆ, 1994	ಸೇವಾ ತೆರಿಗೆ	2015-16	72.00	5.00	ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ
7	ಹಣಕಾಸು ಕಾಯ್ದೆ, 1994	ಸೇವಾ ತೆರಿಗೆ	2016-17	23.00	2.00	ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧೀಕರಣ
8	ಆದಾಯ ತೆರಿಗೆ ಕಾಯ್ದೆ, 1961	ಆದಾಯ ತೆರಿಗೆ ಕಾಯ್ದೆ ಅನ್ವಯ ತಿರಸ್ಕರಿಸಿರುವುದು	ಲೆಕ್ಕಪತ್ರದ ವರ್ಷ 2010-11	205.24		ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿಗಳು)
9	ಆದಾಯ ತೆರಿಗೆ ಕಾಯ್ದೆ, 1961	ಆದಾಯ ತೆರಿಗೆ ಕಾಯ್ದೆ ಅನ್ವಯ ತಿರಸ್ಕರಿಸುವುದು	ಲೆಕ್ಕಪತ್ರದ ವರ್ಷ 2015-16	20.75		ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿಗಳು)
10	ಆದಾಯ ತೆರಿಗೆ ಕಾಯ್ದೆ, 1961	ಆದಾಯ ತೆರಿಗೆ ಕಾಯ್ದೆ ಅನ್ವಯ ತಿರಸ್ಕರಿಸುವುದು	ಲೆಕ್ಕಪತ್ರದ ವರ್ಷ 2016-17	16.30		ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿಗಳು)
11	ಆದಾಯ ತೆರಿಗೆ ಕಾಯ್ದೆ, 1961	ಆದಾಯ ತೆರಿಗೆ ಕಾಯ್ದೆ ಅನ್ವಯ ತಿರಸ್ಕರಿಸುವುದು	ಲೆಕ್ಕಪತ್ರದ ವರ್ಷ 2017-18	102.05		ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿಗಳು)
12	ಆದಾಯ ತೆರಿಗೆ ಕಾಯ್ದೆ, 1961	ಆದಾಯ ತೆರಿಗೆ ಕಾಯ್ದೆ ಅನ್ವಯ ತಿರಸ್ಕರಿಸುವುದು ಮತ್ತು ದಂಡ ವಿಧಿಸಿರುವುದು.	ಲೆಕ್ಕಪತ್ರದ ವರ್ಷ 2018-19	2631.43		ನ್ಯಾಷನಲ್ ಫೇಸ್‌ಲೆಸ್ ಅಸೆಸ್ ಮೆಂಟ್ ಸೆಂಟರ್, ದೆಹಲಿ.

viii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನ್ವಯ ಮತ್ತು ನಾವು ಕಂಪನಿಯ ದಾಖಲೆಗಳನ್ನು ಪರಿಶೀಲಿಸಿದ ಆಧಾರದ ಮೇಲೆ, ಆದಾಯ ತೆರಿಗೆ ಕಾಯ್ದೆ, 1961ರ (1961/43) ಅನ್ವಯ ತೆರಿಗೆ ನಿರ್ಧರಣೆಯಲ್ಲಿ ಸದರಿ ವರ್ಷದ ಅವಧಿಯಲ್ಲಿ ಆದಾಯ ಎಂಬುದಾಗಿ ಒಪ್ಪಿಸಿರುವ ಅಥವಾ ಪ್ರಕಟಿಸಿದ ಈ ಹಿಂದೆ ದಾಖಲು ಮಾಡದಿದ್ದ ಆದಾಯಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯವಹಾರಗಳು ನಡೆದಿರುವುದಿಲ್ಲ

ix) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ, ಕಂಪನಿಯು ಸಾಲ ನೀಡಿಕೆದಾರರುಗಳಿಂದ ಯಾವುದೇ ಸಾಲಗಳನ್ನು ತೆಗೆದುಕೊಂಡಿರುವುದಿಲ್ಲ ಅಥವಾ ಹಣಗಳನ್ನು ಪಡೆದಿರುವುದಿಲ್ಲ. ಹಾಗಾಗಿ, ಕಲಂ 3 (ix) ರ ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಬಿ) ಯಾವುದೇ ಬ್ಯಾಂಕ್, ಹಣಕಾಸು ಸಂಸ್ಥೆ ಅಥವಾ ಯಾವುದೇ ಸಾಲ ನೀಡಿಕೆದಾರ ಕಂಪನಿಯು ಉದ್ದೇಶಪೂರ್ವಕವಾಗಿ ಸುಸ್ತಿಯಾಗಿರುವುದಾಗಿ ಘೋಷಿಸಿರುವುದಿಲ್ಲ.

(ಸಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನ್ವಯ ಕಂಪನಿಯು ಯಾವುದೇ ಅವಧಿ ಸಾಲಗಳನ್ನು ಪಡೆದಿರುವುದಿಲ್ಲ. ಆದ್ದರಿಂದಾಗಿ ಆದೇಶದ ಕಲಂ 3 (ix) (ಸಿ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ

(ಡಿ) ನಾವು ಕಂಪನಿಯ ದಾಖಲೆಗಳನ್ನು ಪರಿಶೀಲಿಸಿದ ಆಧಾರದ ಮೇಲೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಕಂಪನಿಯು ಸದರಿ ವರ್ಷದಲ್ಲಿ ಯಾವುದೇ ಹಣವನ್ನು ಸಂಗ್ರಹಿಸಿರುವುದಿಲ್ಲ. ಆದ ಪ್ರಯುಕ್ತ , ಆದೇಶದ ಕಲಂ 3 (ix)(ಡಿ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಇ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನ್ವಯ, ಕಂಪನಿಯು ತನಗಾಗಿ ಅಥವಾ ತನ್ನ ಸಹಾಯಕ ಸಂಸ್ಥೆಗಳು, ಸಹವರ್ತಿ ಸಂಸ್ಥೆಗಳು ಅಥವಾ ಜಂಟಿ ಉದ್ಯಮಗಳ ಭಾದ್ಯತೆಗಳನ್ನು ಭರಿಸಲು ಯಾವುದೇ ಸಂಸ್ಥೆಯಿಂದ ಅಥವಾ ವ್ಯಕ್ತಿಯಿಂದ ಯಾವುದೇ ಹಣವನ್ನು ಪಡೆದಿರುವುದಿಲ್ಲ.

(ಎಫ್) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ತನ್ನ ಸಹಾಯಕ ಸಂಸ್ಥೆಗಳು, ಜಂಟಿ ಉದ್ಯಮಗಳು ಅಥವಾ ಸಹವರ್ತಿ ಕಂಪನಿಗಳಲ್ಲಿ ಹೊಂದಿರುವ ಸೆಕ್ಯೂರಿಟಿಗಳನ್ನು ಈಡು ಮಾಡಿ ಸದರಿ ವರ್ಷದಲ್ಲಿ ಕಂಪನಿಯು ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ.

(x) (ಎ) ಕಂಪನಿಯು ಪ್ರಾರಂಭಿಕ ಸಾರ್ವಜನಿಕ ನೀಡಿಕೆ ಅಥವಾ ಮುಂದುವರಿದ ಸಾರ್ವಜನಿಕ ನೀಡಿಕೆ ರೂಪದಲ್ಲಿ (ಡೆಟ್ ಇನ್ಸ್‌ಟ್ರುಮೆಂಟ್ ಸೇರಿದಂತೆ) ಯಾವುದೇ ಹಣವನ್ನು ಸಂಗ್ರಹಣೆ ಮಾಡಿರುವುದಿಲ್ಲ.

(ಬಿ) ಕಂಪನಿಯು ಸದರಿ ವರ್ಷದಲ್ಲಿ ಷೇರುಗಳು ಅಥವಾ ಪರಿವರ್ತಿಸಬಲ್ಲ ಡಿಬೆಂಚರುಗಳ (ಪೂರ್ಣವಾಗಿ, ಭಾಗಶಃವಾಗಿ ಅಥವಾ ಐಚ್ಛಿಕವಾಗಿ ಪರಿವರ್ತಿಸಬಹುದಾದ) ಯಾವುದೇ ಆದ್ಯತೆಯ ಹಂಚಿಕೆ ಅಥವಾ ಖಾಸಗಿ ನೀಡಿಕೆಯನ್ನು ಮಾಡಿರುವುದಿಲ್ಲ.

(xi) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಸದರಿ ವರ್ಷದ ಅವಧಿಯಲ್ಲಿ ಚಿಟ್‌ಫಂಡ್ ವಿಭಾಗದ ಹೊರಗುತ್ತಿಗೆ ನೌಕರನೊಬ್ಬ ಹಣಕಾಸಿನ ಅವ್ಯವಹಾರ ನಡೆಸಿರುವುದನ್ನು ಕಂಪನಿ ಪತ್ತೆ ಹಚ್ಚಿದೆ. ಈ ಬಗ್ಗೆ ಕಂಪನಿ ಎಫ್‌ಐಆರ್ ಸಲ್ಲಿಸಿದ್ದು, ಕ್ರಮಾವಳಿಯು ಪ್ರಗತಿಯಲ್ಲಿದೆ. ಕಂಪನಿಯು ಚಿಟ್‌ಫಂಡ್ ವಿಭಾಗದ ಎರಡು ಶಾಖೆಗಳ ನ್ಯಾಯಿಕ ಲೆಕ್ಕ ಪರಿಶೋಧನೆಯನ್ನು ಸಹ ಕೈಗೊಂಡಿದೆ. ಕಂಪನಿಯು ಇದರ ಬಗ್ಗೆ ರೂ.147.80 ಲಕ್ಷಗಳ ವ್ಯವಸ್ಥೆ ಒಂದನ್ನು ಮಾಡಿದೆ. ಇದರ ಹೊರತಾಗಿ, ಕಂಪನಿಯಿಂದ ಯಾವುದೇ ವಂಚನೆ ಆಗಿರುವುದು ಮತ್ತು ಕಂಪನಿಗೆ ವಂಚನೆಯಾಗಿರುವುದು ವರದಿಗಾರಿಕೆಯಲ್ಲಿನ ಸದರಿ ವರ್ಷದಲ್ಲಿ ಗಮನಕ್ಕೆ ಬಂದಿರುವುದಿಲ್ಲ ಅಥವಾ ವರದಿಯಾಗಿರುವುದಿಲ್ಲ. ಆದರೂ, ಸದರಿ ವಿಚಾರವನ್ನು ಲೆಕ್ಕಪರಿಶೋಧನಾ ಸಮಿತಿಯಲ್ಲಿ ಮತ್ತು ಮಂಡಳಿ ಸಭೆಯಲ್ಲಿ ಇನ್ನೂ ಚರ್ಚಿಸಬೇಕಾಗಿದೆ.'

(ಬಿ) ವರ್ಷದ ಅವಧಿಯಲ್ಲಿ ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು), ನಿಯಮಗಳು, 2014ರ ನಿಯಮ 13ರ ಅನ್ವಯ ನಿದಿಪಡಿಸಿರುವಂತೆ ಫಾರಂ ಎಡಿಟಿ-4ರಲ್ಲಿ ಕಂಪನಿಗಳ ಕಾಯ್ದೆಯ ಪ್ರಕರಣ 143 ರ ಉಪ ಪ್ರಕರಣ (12)ರ ಅನುಸಾರ ಕೇಂದ್ರ ಸರ್ಕಾರಕ್ಕೆ ಯಾವುದೇ ವರದಿಯನ್ನು ಸಲ್ಲಿಸಿರುವುದಿಲ್ಲ.

(ಸಿ) ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಅನ್ವಯ ಸದರಿ ವರ್ಷದ ಅವಧಿಯಲ್ಲಿ ವಿಶಲ್ ಬ್ಲೋಯರ್ ದೂರುಗಳನ್ನು ಕಂಪನಿ ಪಡೆದಿರುವುದಿಲ್ಲ.

(xii) ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ್ದರಿಂದಾಗಿ ಆದೇಶದ ಕಲಂ 3 (xii)ರ ಅನ್ವಯ ವರದಿಗಾರಿಕೆಯು ಅನ್ವಯವಾಗುವುದಿಲ್ಲ.

(xiii) ನಮಗೆ ಒದಗಿಸಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ವ್ಯವಹಾರಗಳು ಅನ್ವಯವಾಗುವೆಡೆಯಲ್ಲಿ ಕಾಯ್ದೆಯ ಪ್ರಕರಣ 177 ಮತ್ತು 188ರ ಅನುಸರಣೆ ಅನುಸಾರ ಇರುವವು, ಮತ್ತು ಎಲ್ಲಾ ವ್ಯವಹಾರಗಳ ವಿವರಗಳನ್ನು ಅನ್ವಯವಾಗುವ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಅನ್ವಯ ಅಗತ್ಯವಾದಂತೆ ಹಣಕಾಸಿನ ಹೇಳಿಕೆಯಲ್ಲಿ ತಿಳಿಸಿರುವುದು.

(xiv) (ಎ) ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಅದರ ಗಾತ್ರ ಮತ್ತು ಅದರ ವ್ಯವಹಾರದ ಸ್ವರೂಪದ ಆಧಾರದ ಮೇಲೆ ಸಾಕಷ್ಟು ಪ್ರಮಾಣದ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆ ಹೊಂದಿರುವುದು.

(ಬಿ) ನಮ್ಮ ಲೆಕ್ಕಪರಿಶೋಧನೆ ಕ್ರಮಾವಳಿಗಳ ಸ್ವರೂಪ, ಸಮಯ ಮತ್ತು ಪ್ರಮಾಣವನ್ನು ನಿರ್ಧರಣೆ ಮಾಡಲು ಲೆಕ್ಕಪರಿಶೋಧನೆಯಲ್ಲಿರುವ ವರ್ಷದ ಆಂತರಿಕ ಲೆಕ್ಕಪರಿಶೋಧನೆ ವರದಿಗಳನ್ನು ನಾವು ಪರಿಗಣಿಸಿರುವೆವು.

(xv) ನಮಗೆ ಒದಗಿಸಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನ್ವಯ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ ಸದರಿ ವರ್ಷದಲ್ಲಿ ಕಂಪನಿಯು ನಿರ್ದೇಶಕರು ಅಥವಾ ಇವರೊಡನೆ ಸಂಪರ್ಕ ಹೊಂದಿರುವ ವ್ಯಕ್ತಿಗಳ ಜೊತೆ ನಗದೇತರ ವ್ಯವಹಾರಗಳನ್ನು ಮಾಡಿರುವುದಿಲ್ಲ.

(xvi) ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ಪ್ರಕರಣ 45-ಐಎ ಅನ್ವಯ ಕಂಪನಿಯನ್ನು ನೋಂದಾಯಿಸಬೇಕಾಗಿರುವುದಿಲ್ಲ ಮತ್ತು ಕಂಪನಿಯು ಸದರಿ ವರ್ಷದಲ್ಲಿ ಯಾವುದೇ ಬ್ಯಾಂಕಿಂಗ್‌ಯೇತರ ಹಣಕಾಸಿನ ಚಟುವಟಿಕೆಗಳು ಅಥವಾ ಗೃಹ ನಿರ್ಮಾಣಕ್ಕೆ ಹಣಕಾಸಿನ ನೀಡಿಕೆ ಚಟುವಟಿಕೆಗಳನ್ನು ನಡೆಸಿರುವುದಿಲ್ಲ. ಹಾಗಾಗಿ, ಆದೇಶದ ಕಲಂ 3 (xvi) (ಎ) ರಿಂದ (ಡಿ) ವರೆಗಿನ ಅನ್ವಯ ವರದಿ ಮಾಡುವಿಕೆ ಅನ್ವಯವಾಗುವುದಿಲ್ಲ.

(xvii) ನಮ್ಮ ಲೆಕ್ಕಪರಿಶೋಧನೆಗೆ ಒಳಪಟ್ಟಿರುವ ಹಣಕಾಸಿನ ವರ್ಷದ ಅವಧಿಯಲ್ಲಿ ಮತ್ತು ತಕ್ಷಣದ ಹಿಂದಿನ ಹಣಕಾಸಿನ ವರ್ಷದಲ್ಲಿ ಕಂಪನಿಯು ನಗದು ನಷ್ಟಗಳನ್ನು ಅನುಭವಿಸಿರುವುದಿಲ್ಲ.

(xviii) ಈ ವರ್ಷದ ಅವಧಿಯಲ್ಲಿ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ರಾಜೀನಾಮೆ ನೀಡಿರುವುದಿಲ್ಲ.

(xix) ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆ ಮತ್ತು ಹಣಕಾಸಿನ ಅನುಪಾತ, ಹಣಕಾಸಿನ ಆಸ್ತಿಗಳ ಕಾಲಮಾನ ಮತ್ತು ಅವು ನಗದೀಕರಣವಾಗುವ ನಿರೀಕ್ಷಿತ ದಿನಾಂಕಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ಪಾವತಿ, ಹಣಕಾಸಿನ ಹೇಳಿಕೆಗಳ ಜೊತೆಗಿನ ಇತರೆ ಮಾಹಿತಿ, ನಿರ್ದೇಶಕರ ಮಂಡಳಿ ಮತ್ತು ಆಡಳಿತ ಮಂಡಳಿ ಯೋಜನೆಗಳ ಬಗ್ಗೆಗಿನ ನಮ್ಮ ತಿಳುವಳಿಕೆ ಆಧಾರದ ಮೇಲೆ ಮತ್ತು ಊಹೆಗಳಿಗೆ ಬೆಂಬಲವಾದ ಪುರಾವೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದ ತನ್ನ ಹೊಣೆಗಾರಿಕೆಗಳನ್ನು, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಿಂದ ಒಂದು ವರ್ಷದ ಅವಧಿ ಒಳಗೆ ಅವು ಪಾವತಿಗೆ ಬಾಕಿಯಾಗುವ ಸಂದರ್ಭದಲ್ಲಿ ಕಂಪನಿಯು ತನ್ನ ಹೊಣೆಗಾರಿಕೆಗಳನ್ನು ಈಡೇರಿಸಲು ಸಮರ್ಥವಾಗಿರುವುದಿಲ್ಲ ಎಂದು ಲೆಕ್ಕಪರಿಶೋಧನೆ ವರದಿ ದಿನಾಂಕದಂದು ಯಾವುದೇ ವಾಸ್ತವಿಕ ಅನಿಶ್ಚಿತತೆಯು ಇರುವುದು ಎಂದು ನಂಬುವಂತೆ ಮಾಡುವ ವಿಚಾರವು ನಮ್ಮ ಗಮನಕ್ಕೆ ಯಾವುದೂ ಬಂದಿರುವುದಿಲ್ಲ.

(xx) (ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಮತ್ತು ನಾವು ದಾಖಲೆಗಳನ್ನು ಪರಿಶೀಲನೆ ಮಾಡಿದ ಆಧಾರದ ಮೇಲೆ, ಕಂಪನಿಯು ಸದರಿ ವರ್ಷದಲ್ಲಿ ರೂ.129.01 ಲಕ್ಷಗಳ ಪೈಕಿ ರೂ.90.66 ಲಕ್ಷಗಳನ್ನು ಖರ್ಚು ಮಾಡಿದೆ. ಕೊರತೆಯಾಗಿರುವ ಮೊತ್ತವನ್ನು ಹಿಂದಿನ ವರ್ಷಗಳಲ್ಲಿ ಮಾಡಿರುವ ಹೆಚ್ಚುವರಿ ಖರ್ಚುಗಳಿಗೆ ಹೊಂದಾಣಿಕೆ ಮಾಡಲಾಗಿದೆ. ಆದ್ದರಿಂದ ಕಂಪನಿಗಳ ಕಾಯ್ದೆಯ ಪರಿಶಿಷ್ಟ vii ರಲ್ಲಿ ನಿಗದಿಪಡಿಸಿರುವ ನಿಧಿಗೆ ಯಾವುದೇ ಮೊತ್ತದ ಹಣವನ್ನು ವರ್ಗಾವಣೆ ಮಾಡಬೇಕಿರುವುದಿಲ್ಲ.

(ಬಿ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ, ಕಂಪನಿಯು ಸಿಎಸ್ಆರ್‌ಗೆ ಸಂಬಂಧಿಸಿದಂತೆ ಯಾವುದು ಚಾಲನೆಯಲ್ಲಿರುವ ಯೋಜನೆಯನ್ನು ಹೊಂದಿರುವುದಿಲ್ಲ.

(xxi) ಸದರಿ ವರದಿಯು ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳಿಗೆ ಸಂಬಂಧಿಸಿರುವುದು, ಆದ್ದರಿಂದ ಕಲಂ xxi ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ :000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ :209054
ಯುಡಿಐಎನ್:23209054ಬಿಜಿಟಿಡಬ್ಲ್ಯೂಬಿಆರ್7357
ಸ್ಥಳ: ಬೆಂಗಳೂರು
ದಿನಾಂಕ: 27.12.2023

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-II

(ಸಮ ದಿನಾಂಕದ ನಮ್ಮ ವರದಿಯ 'ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿ' ಅಡಿಯಲ್ಲಿನ ಪ್ಯಾರಾಗ್ರಾಫ್ 2 (ಎಫ್) ನೋಡಿರಿ)

ಕಂಪನಿಗಳ ಕಾಯ್ದೆ, 2013ರ (''ಕಾಯ್ದೆ'') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ (i)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿ

ನಾವು 31ನೇ ಮಾರ್ಚ್ 2023ರಂದು ಇದ್ದಂತೆ ಮೆ॥ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು, (''ಕಂಪನಿ'') ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಲೆಕ್ಕಪರಿಶೋಧನೆಯನ್ನು ಸದರಿ ದಿನಾಂಕದಂದು ಕೊನೆಗೊಂಡ ವರ್ಷದ ಕಂಪನಿಯ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕ ಪರಿಶೋಧನೆ ಜೊತೆಗೆ ಮಾಡಿದ್ದೇವೆ.

ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ಮಂಡಳಿ ಜವಾಬ್ದಾರಿ:

ಕಂಪನಿಯ ಆಡಳಿತ ಮಂಡಳಿಯು, ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ('ಐಸಿಎಐ') ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಬಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ಜವಾಬ್ದಾರರಾಗಿರುವರು. ಈ ಜವಾಬ್ದಾರಿಗಳಲ್ಲಿ ಕಾಯ್ದೆ, ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

ಲೆಕ್ಕ ಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಮಾನದಂಡಗಳು ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬುದರ ಬಗ್ಗೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ಇರುವ ಭೌತಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯಮಾಪನವೂ ಸಹ ಒಳಗೊಂಡಿರುವುದು. ಆಯ್ಕೆ ಮಾಡಿದ ಕ್ರಮಾವಳಿಗಳು, ವಂಚನೆ ಅಥವಾ ತಪ್ಪಿನ ಪ್ರಯುಕ್ತ ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿ ಉಂಟಾಗುವ ಭೌತಿಕ ತಪ್ಪು ಹೇಳಿಕೆಯ ಅಪಾಯದ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರು ಮಾಡುವ ತೀರ್ಮಾನಗಳ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆಯು ಕಂಪನಿಯ ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಾಗಿರುವುದು ಮತ್ತು ಸೂಕ್ತವಾಗಿರುವುದೆಂದು ನಾವು ನಂಬಿರುವೆವು.

ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ.

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು: (1)ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿರುವುದು.

(2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು

(3) ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಉಪಯೋಗ ಅಥವಾ ವಿಲೇವಾರಿ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು.

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳು:

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ, ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

ಅರ್ಹತಾ ಅಭಿಪ್ರಾಯಕ್ಕೆ ಆಧಾರ

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳನುಸಾರ ಮತ್ತು ನಾವು ನಿರ್ವಹಿಸಿದ ಲೆಕ್ಕಪರಿಶೋಧನೆ ಆಧಾರದ ಮೇಲೆ ದಿನಾಂಕ: 31.03.2023 ರಂದಿನಂತೆ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ಗುರುತಿಸಲಾಗಿದೆ:

ಎ) ಕಂಪನಿಯು ತನ್ನ ಎಲ್ಲಾ ಕಾರ್ಯಾಚರಣೆ ವಿಭಾಗಗಳು ಮತ್ತು ಶಾಖೆಗಳನ್ನು ಒಳಪಡಿಸಿಕೊಳ್ಳುವ ಸಮಗ್ರವಾದ ಇಆರ್‌ಪಿ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಅದರ ಮೂರು ವಿಭಾಗಗಳಾದ ಪಾನೀಯ, ಚಿಟ್‌ಫಂಡ್ ಮತ್ತು ಕಾಗದದ ವಿಭಾಗಗಳ ಲೆಕ್ಕ ನಿರ್ವಹಣೆಯನ್ನು ಸ್ವತಂತ್ರ ಸಾಫ್ಟ್‌ವೇರ್‌ನಲ್ಲಿ ಮಾಡಲಾಗಿದೆ. ಈ ವಿಭಾಗಗಳ ಸಂಬಂಧಪಟ್ಟ ಸಾಫ್ಟ್‌ವೇರ್‌ಗಳಿಂದ ಟ್ರಯಲ್ ಬ್ಯಾಲೆನ್ಸ್‌ಗಳನ್ನು ಪಡೆದುಕೊಳ್ಳಲಾಗಿದೆ ಮತ್ತು ಅದನ್ನು ಕೈಯಿಂದ ಕ್ರೋಡೀಕರಿಸಲಾಗಿದೆ ಮತ್ತು ಪ್ರಧಾನ ಕಚೇರಿಯಲ್ಲಿ ಟ್ಯಾಲಿ ಇಆರ್‌ಪಿಯಲ್ಲಿ ಇತರೆ ವಿಭಾಗಗಳೊಡನೆ ಸಂಯೋಜನೆ ಮಾಡಿದೆ.

ಬಿ) ಕಂಪನಿಯು ನಿಯತಕಾಲಿಕ ಆಧಾರದ ಮೇಲೆ ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಭೌತಿಕ ಪರಿಶೀಲನೆ ಕಾರ್ಯಕ್ರಮ ಹೊಂದಿರುವುದಿಲ್ಲ. ಸ್ಥಿರಾಸ್ತಿಗಳ ರಿಜಿಸ್ಟರ್‌ಗಳನ್ನು ನಿಯತಕಾಲಿಕವಾಗಿ ಸಕಾಲಿಕಗೊಳಿಸಿರುವುದಿಲ್ಲ. ಭೌತಿಕ ಪರಿಶೀಲನೆ ಕಾರ್ಯಕ್ರಮ ಇಲ್ಲದಿರುವುದರಿಂದ, ಯಾವುದೇ ವ್ಯತ್ಯಾಸಗಳಿದ್ದರೆ ಅವುಗಳನ್ನು ಗುರುತಿಸಿರುವುದಿಲ್ಲ ಮತ್ತು ಸರಿಯಾಗಿ ವ್ಯವಹರಿಸಿರುವುದಿಲ್ಲ. ಇದರಿಂದ ಸರಿಯಾಗಿರದ ಸವಕಳಿ ವ್ಯವಸ್ಥೆಗೆ ಮತ್ತು ದುರ್ಬಲತೆ ನಿರ್ಧರಣೆಗೆ ಕಾರಣವಾಗುವುದು.

ಸಿ) ಕಂಪನಿಯು ನಿಯತಕಾಲಿಕ ಆಧಾರದ ಮೇಲೆ ಡೆಟಾರ್‌ಗಳು, ಕ್ರೆಡಿಟಾರ್‌ಗಳು ಮತ್ತು ಇತರೆ ವ್ಯಕ್ತಿಗಳ ಬಗ್ಗೆ ಶಿಲ್ಕಿನ ದೃಢೀಕರಣೆ ಪಡೆದುಕೊಳ್ಳಲು ಅನುಸರಣೆ ವ್ಯವಸ್ಥೆ ಹೊಂದಿರುವುದಿಲ್ಲ. ಕಂಪನಿಯು ವಸೂಲಾಗದ ಮತ್ತು ಸಂದೇಹಾಸ್ಪದವಾದ ಸಾಲಗಳ ಬಗ್ಗೆ ಅಂದಾಜು ಮಾಡಿದ/ಸಾಮಾನ್ಯವಾದ ಆಧಾರದ ಮೇಲೆ ವ್ಯವಸ್ಥೆ ಮಾಡುವುದು. ಆಂತರಿಕ ನಿಯಂತ್ರಣ ಕ್ರಮಗಳು ಇಲ್ಲದಿರುವುದರಿಂದ ಲೆಕ್ಕದ ಪುಸ್ತಕಗಳಲ್ಲಿ ನಿಖರವಲ್ಲದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತಿಳಿಸಲು ಕಾರಣವಾಗುವುದು. ಇದರಿಂದ ಕಂಪನಿಯ ಹಣಕಾಸಿನ ಫಲಿತಾಂಶಗಳ ಮೇಲೆ ಪರಿಣಾಮ ಉಂಟಾಗುವುದು.

ಡಿ) ಚಿಟ್‌ಫಂಡ್ ವಿಭಾಗದಲ್ಲಿ ಬಳಸುತ್ತಿರುವ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್ ವೆಂಡಾರ್‌ರಿಂದ ಬೆಂಬಲವಾಗಲಿ ಅಥವಾ ತಾಂತ್ರಿಕ ಸಮಸ್ಯೆಗಳನ್ನು ನಿವಾರಣೆ ಮಾಡಲು ವಾರ್ಷಿಕ ನಿರ್ವಹಣೆ ಗುತ್ತಿಗೆಗಳನ್ನು ಕಂಪನಿಯಾಗಲಿ ಹೊಂದಿರುವುದಿಲ್ಲ. ಚಿಟ್‌ಫಂಡ್ ವಿಭಾಗದ ಎರಡು ಶಾಖೆಗಳ ಹಣಕಾಸಿನ ವ್ಯವಹಾರವನ್ನು ಇನ್ನೂ ಕೈಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಅದನ್ನು ಸಾಫ್ಟ್‌ವೇರ್‌ಗೆ ಸಂಯೋಜಿಸಿರುವುದಿಲ್ಲ. ಈ ಎರಡೂ ಶಾಖೆಗಳ ಟ್ರಯಲ್ ಬ್ಯಾಲೆನ್ಸ್‌ಗಳನ್ನು ಚಿಟ್‌ಫಂಡ್ ವಿಭಾಗದ ಇತರೆ ಎಲ್ಲಾ ಶಾಖೆಗಳೊಡನೆ ಒಗ್ಗೂಡಿಸಲು ಎಕ್ಸೆಲ್ ವರ್ಕ್‌ಷೀಟ್‌ಗಳಲ್ಲಿ ಕೈಯಿಂದ ಸಿದ್ಧಪಡಿಸಲಾಗುತ್ತಿದೆ. ತದನಂತರ ಅದನ್ನು ಪ್ರಧಾನ ಕಚೇರಿ ಲೆಕ್ಕದೊಡನೆ ಟ್ಯಾಲಿ ಇಆರ್‌ಪಿಯಲ್ಲಿ ಸಂಯೋಜಿಸಲಾಗಿದೆ. ಚಿಟ್‌ಫಂಡ್ ವಿಭಾಗದಲ್ಲಿ ನಿಯತಕಾಲಿಕ ಬ್ಯಾಂಕ್ ಸಮಂಜಸತೆ ವಿವರಣೆಗಳನ್ನು ಸಿದ್ಧಪಡಿಸುವಲ್ಲಿ ವಿಳಂಬ ಉಂಟಾಗಿದೆ. ಹಣದ ದುರುಪಯೋಗ ಪತ್ತೆ ಹಚ್ಚಲು ನಿಯತಕಾಲಿಕ ಬ್ಯಾಂಕ್ ಸಮಂಜಸತೆ ವಿವರಣೆ ಸಿದ್ಧಪಡಿಸುವುದು ಪ್ರಮುಖ ಕಾರ್ಯವಾಗಿರುವುದು.

ಇ) ಬರಬೇಕಾಗಿರುವುದು ಮತ್ತು ಪಾವತಿ ಮಾಡಬೇಕಾಗಿರುವುದನ್ನು ಗ್ರಾಹಕರವಾರು ಲೆಕ್ಕಾಚಾರ ಮಾಡಿರುವುದಿಲ್ಲ. ಆದ್ದರಿಂದ

ಪೂರ್ಣಗೊಂಡ ಟೂರ್‌ಗಳ ಸಂಬಂಧದಲ್ಲಿ ಬರುವ ಆದಾಯವನ್ನು ಟೂರ್ಸ್ ಅಂಡ್ ಟ್ರಾವೆಲ್ ವಿಭಾಗದಲ್ಲಿ ಅದು ಬಂದಾಗ ಅದನ್ನು ಕಂಪನಿ ಗಣನೆ ಮಾಡಿರುವುದಿಲ್ಲ. ಇದರಿಂದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನಿಖರವಲ್ಲದ ವರದಿ ಮಾಡಲು ಆಸ್ಪದವಾಗಿಸುವುದು ಮತ್ತು ಲೆಕ್ಕದ ಪುಸ್ತಕಗಳಲ್ಲಿ ಆದಾಯವನ್ನು ಕಡಿಮೆಯಾಗಿ ತಿಳಿಸಲು ದಾರಿಯಾಗುವುದು. ನವದೆಹಲಿ ಶಾಖೆಯಲ್ಲಿ ಟೂರ್ಸ್ ಅಂಡ್ ಟ್ರಾವೆಲ್ ವ್ಯವಹಾರಕ್ಕೆ ಆದಾಯದ ಲೆಕ್ಕ ನಿರ್ವಹಣೆ ವಿಧಾನವು ತಳಮಟ್ಟದಲ್ಲಿನ ಪ್ರಧಾನ ಕಚೇರಿಯಲ್ಲಿನ ಟೂರ್ಸ್ ಅಂಡ್ ಟ್ರಾವಲ್ ವಿಭಾಗದೊಡನೆ ತಾಳೆ ಮಾಡಿ ನೋಡಿದರೆ ಅದು ನೆಟ್ ಮಟ್ಟದಲ್ಲಿರುವುದು.

ಎಫ್) ವಿವಿಧ ಸ್ವತ್ತು, ಸ್ಥಾವರ ಮತ್ತು ಉಪಕರಣ ಖರೀದಿಗೆ ಅಳವಡಿಸಿಕೊಂಡಿರುವ ಕ್ರಮಾವಳಿಯು ರೂ.5.00 ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಖರೀದಿಗೆ ಅನ್ವಯವಾಗುವ ಸಾಮಾನ್ಯ ಖರೀದಿ ಕ್ರಮಾವಳಿಗಳ ಅನುಸರಣೆ ಮಾಡಿರುವುದಿಲ್ಲ. ಇದು ಸ್ವತ್ತು, ಸ್ಥಾವರ ಮತ್ತು ಉಪಕರಣ ಪಡೆಯುವಿಕೆಯಲ್ಲಿ ಸತ್ವಯುತವಾಗಿ ಅಕ್ರಮಗಳಿಗೆ ಕಾರಣವಾಗುವುದು.

ಜಿ) ಕಂಪನಿಯು ಕಾಗದ ಮತ್ತು ಫಾರ್ಮಸ್ಯೂಟಿಕಲ್ ವಿಭಾಗಗಳಲ್ಲಿ ದಾಸ್ತಾನಿನ ಭೌತಿಕ ಪರಿಶೀಲನೆಗೆ, ಮೌಲ್ಯಮಾಪನಕ್ಕೆ ಸಾಕಷ್ಟು ಮಟ್ಟದ ವ್ಯವಸ್ಥೆ ಹೊಂದಿರುವುದಿಲ್ಲ, ಮತ್ತು ಮಾರಾಟವಾಗುತ್ತಿಲ್ಲದ/ನಿಧಾನಗತಿಯಲ್ಲಿ ಮಾರಾಟವಾಗುತ್ತಿರುವ ದಾಸ್ತಾನಿನ ಗುರುತಿಸುವುದಕ್ಕೆ ಸಹ ಕಂಪನಿ ಸಾಕಷ್ಟು ವ್ಯವಸ್ಥೆ ಹೊಂದಿರುವುದಿಲ್ಲ. ಆದ್ದರಿಂದಾಗಿ ದಾಸ್ತಾನಿನ ಮೌಲ್ಯದಲ್ಲಿ ಉಂಟಾಗುವ ಕ್ಷೀಣತೆಯನ್ನು ಸರಿಯಾಗಿ ಲೆಕ್ಕಾಚಾರ ಮಾಡಲಾಗದು. ಇದು ಲೆಕ್ಕಗಳ ಪುಸ್ತಕಗಳಲ್ಲಿ ಸರಕಿನ ತಪಶೀಲನ್ನು ಬಹುವಾಗಿ ಹೆಚ್ಚಿಗೆಯಾಗಿ ತಿಳಿಸಲು ಕಾರಣವಾಗುವುದು.

ಎಚ್) ಕಂಪನಿಯು ಚಿಟ್‌ಫಂಡ್ಸ್ (ಕರ್ನಾಟಕ) ನಿಯಮಗಳು, 1983ರ ನಿಯಮ 20(2)ರ ಅನ್ವಯ ಅಗತ್ಯವಾದಂತೆ ಫಾರಂ XI ಅನ್ನು (ಸ್ವೀಕರಣೆಗಳು ಮತ್ತು ಖರ್ಚಿನ ಲೆಕ್ಕ ಮತ್ತು ಪ್ರತ್ಯೇಕ ಚಿಟ್ ಗುಂಪುಗಳ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತಿಳಿಸುವ ವಿವರ) ರಿಜಿಸ್ಟ್ರಾರ್‌ಗೆ ಸಲ್ಲಿಸಿರುವುದಿಲ್ಲ.

'ವಾಸ್ತವಿಕ ದೌರ್ಬಲ್ಯವು' ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿನ ಕೊರತೆ, ಅಥವಾ ಕೊರತೆಗಳ ಸಂಯೋಜನೆಯಾಗಿರುವುದು. ಇದರಿಂದ ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸಿನ ವಿವರಣೆಗಳಲ್ಲಿ ವಾಸ್ತವಿಕ ತಪ್ಪು ಹೇಳಿಕೆ ನೀಡುವ ಸಕಾರಣ ಸಾಧ್ಯತೆ ಉಂಟಾಗಿರುವುದನ್ನು ಸಕಾಲಿಕ ಆಧಾರದ ಮೇಲೆ ತಡೆಯಲು ಅಥವಾ ಪತ್ತೆ ಹಚ್ಚಲು ಸಾಧ್ಯವಾಗದು.

ಅರ್ಹತಾ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಮತ್ತು ವಾಸ್ತವಿಕ ದೌರ್ಬಲ್ಯದ ಮೇಲಿನ ವಿವರಣೆಯ ಸಾಧ್ಯನೀಯ ಪರಿಣಾಮ ಹೊರತಾಗಿ ನಿಯಂತ್ರಣ ಮಾನದಂಡದ ಗುರಿಗಳನ್ನು ಸಾಧಿಸುವಲ್ಲಿ ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧವಾಗಿ, ಭಾರತದ ಲೆಕ್ಕಪರಿಶೋಧಕರ ಸಂಸ್ಥೆಯು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣಗಳ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ಸ್ಥಾಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡವು ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ 31ನೇ ಮಾರ್ಚ್ 2023 ರಂದು ಇದ್ದಂತೆ ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿ ಇರುವವು ಮತ್ತು ಈ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವವು.

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಯ ಸ್ವರೂಪ, ಸಮಯ ಮತ್ತು ಅನ್ವಯ ಮಾಡಿರುವ ಲೆಕ್ಕಪರಿಶೋಧನಾ ಪರೀಕ್ಷೆಗಳನ್ನು ನಿರ್ಧರಣೆ ಮಾಡಿ ಮೇಲೆ ವಿವರಿಸಿರುವಂತೆ ನಾವು ಗುರುತಿಸಿರುವ ಮತ್ತು ವರದಿ ಮಾಡಿರುವ ವಾಸ್ತವಿಕ ದೌರ್ಬಲ್ಯವನ್ನು ನಾವು ಪರಿಗಣಿಸಿದ್ದೇವೆ ಮತ್ತು ಸದರಿ ವಾಸ್ತವಿಕ ದೌರ್ಬಲ್ಯಗಳು, ಮೇಲೆ ತಿಳಿಸಿರುವಂತೆ ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯಕ್ಕೆ ಧಕ್ಕೆ ಉಂಟು ಮಾಡಿವೆ. ಆದ್ದರಿಂದಾಗಿ ನಾವು ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಅರ್ಹತಾ ಅಭಿಪ್ರಾಯಗಳನ್ನು ನೀಡಿದ್ದೇವೆ.

ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ :000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ :209054
ಯುಡಿಐಎನ್:23209054ಬಿಜಿಟಿಡಬ್ಲ್ಯೂಬಿಆರ್7357
ಸ್ಥಳ: ಬೆಂಗಳೂರು
ದಿನಾಂಕ: 27.12.2023

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-III

ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಹೊರಡಿಸಿರುವ ನಿರ್ದೇಶನಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ, 2013(''ಕಾಯ್ದೆ'') ರ ಪ್ರಕರಣ 143(5)ರ ಅನ್ವಯ ವರದಿ

ಕ್ರ.ಸಂ.	ನಿರ್ದೇಶನಗಳು	ಅನುಸರಣೆ
1.	ಕಂಪನಿಯು ಲೆಕ್ಕನಿರ್ವಹಣೆಯ ಎಲ್ಲಾ ವ್ಯವಹಾರಗಳನ್ನು ಐಟಿ ಸಿಸ್ಟಮ್ ಮೂಲಕ ನಡೆಸಲು ವ್ಯವಸ್ಥೆಯನ್ನು ಹೊಂದಿರುವುದೇ? ಹೌದಾದಲ್ಲಿ, ಲೆಕ್ಕ ನಿರ್ವಹಣೆ ವ್ಯವಹಾರಗಳನ್ನು ಐಟಿ ಸಿಸ್ಟಮ್ ಹೊರಗೆ ನಡೆಸಿದರೆ, ಅದರಿಂದ ಉಂಟಾಗುವ ಹಣಕಾಸಿನ ಪರಿಣಾಮಗಳ ಜೊತೆಗೆ ಲೆಕ್ಕಗಳ ಸಮಗ್ರತೆ ಮೇಲೆ ಉಂಟಾಗುವ ಪರಿಣಾಮಗಳನ್ನು ತಿಳಿಸಿ.	ಹೌದು, ಕಂಪನಿಯು ಐಟಿ ಸಿಸ್ಟಮ್ ಒಂದನ್ನು ಹೊಂದಿದೆ. ಕಂಪನಿಯು ಕ್ರೋಡೀಕರಣ ಮತ್ತು ವರದಿಗಾರಿಕೆಗೆ ಟ್ಯಾಲಿ ಇಆರ್‌ಪಿ ಅನ್ನು ಬಳಸುವುದು. ಆದರೂ, ಪಾನೀಯ, ಚಿಟ್‌ಫಂಡ್ ಮತ್ತು ಕಾಗದ ವಿಭಾಗಗಳು ಬೇರೆ ಬೇರೆ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್ ಬಳಸುತ್ತಿರುವವು ಮತ್ತು ಇದನ್ನು ಟ್ಯಾಲಿ ಇಆರ್‌ಪಿಗೆ ಸಂಯೋಜನೆ ಮಾಡಿರುವುದಿಲ್ಲ. ಈ ವಿಭಾಗಗಳು ಟ್ರಯಲ್ ಬ್ಯಾಲೆನ್ಸ್ ಅನ್ನು ಸಂಬಂಧಪಟ್ಟ ಸಾಫ್ಟ್‌ವೇರ್‌ನಿಂದ ಪಡೆದುಕೊಳ್ಳುತ್ತಿವೆ ಮತ್ತು ಅದನ್ನು ಕ್ರೋಡೀಕರಣ ಮಾಡಲು ಮತ್ತು ವರದಿ ಮಾಡಲು ಪ್ರಧಾನ ಕಚೇರಿ ಟ್ಯಾಲಿ ಇಆರ್‌ಪಿ ಸಾಫ್ಟ್‌ವೇರ್‌ಗೆ ಕೈಯಿಂದ ನಮೂದು ಮಾಡಿದೆ. ವ್ಯವಹಾರದ ವಿವರಗಳು ನಿರ್ದಿಷ್ಟ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್‌ನಲ್ಲಿ ಇರುವವು. ಚಿಟ್‌ಫಂಡ್ ವಿಭಾಗವು 2 ಶಾಖೆಗಳನ್ನು ಹೊರತುಪಡಿಸಿ, ಡಾಟಾವನ್ನು ಬೇರೆ ಬೇರೆ ಸಾಫ್ಟ್‌ವೇರ್‌ನಲ್ಲಿ (ಟ್ಯಾಲಿ ಇಆರ್‌ಪಿಯಲ್ಲಿ ಅಲ್ಲ) ನಿರ್ವಹಣೆ ಮಾಡಿದೆ. 2 ಶಾಖೆಗಳಲ್ಲಿ ಪುಸ್ತಕಗಳನ್ನು ಕೈಯಿಂದ ನಿರ್ವಹಣೆ ಮಾಡಿರುವವು. ಮೇಲಿನ 2 ಶಾಖೆಗಳ ಟ್ರಯಲ್ ಬ್ಯಾಲೆನ್ಸ್ ಅನ್ನು ಚಿಟ್‌ಫಂಡ್ ಸಾಫ್ಟ್‌ವೇರ್‌ನಿಂದ ಟ್ರಯಲ್ ಬ್ಯಾಲೆನ್ಸ್ ಎಕ್ಸ್‌ಟ್ರಾ ಕ್ಟ್ ಜೊತೆ ಕೈಯಿಂದ ಕ್ರೋಡೀಕರಿಸಿದೆ. ಚಿಟ್‌ಫಂಡ್ ವಿಭಾಗದಲ್ಲಿನ ಸದರಿ ಕ್ರೋಡೀಕರಣದ ನಂತರ, ಟ್ರಯಲ್ ಬ್ಯಾಲೆನ್ಸ್ ಅನ್ನು ಕ್ರೋಡೀಕರಣಕ್ಕೆ ಪ್ರಧಾನ ಕಚೇರಿಗೆ ಹಂಚಿಕೊಂಡಿದೆ.
2	ಸಾಲ ಮರು ಪಾವತಿ ಮಾಡಲು ಕಂಪನಿಯು ಅಸಮರ್ಥವಾದ ಕಾರಣ ಹಾಲಿಯಿರುವ ಸಾಲವನ್ನು ಯಾವುದೇ ಪುನರ್ ರೂಪಿಸಿರುವಿಕೆ ಇರುವುದೇ ಅಥವಾ ಋಣಗಳು/ಸಾಲಗಳು/ಬಡ್ಡಿ ಇತ್ಯಾದಿಯನ್ನು ಕಂಪನಿಗೆ ಸಾಲ ನೀಡಿಕೆದಾರರು ಮನ್ನಾ/ವಜಾ ಮಾಡಿರುವ ಪ್ರಕರಣಗಳಿರುವವೆ? ಹೌದಾದರೆ, ಅದರಿಂದ ಉಂಟಾಗುವ ಹಣಕಾಸಿನ ಪರಿಣಾಮವನ್ನು ತಿಳಿಸುವುದು. ಅಂತಹ ಪ್ರಕರಣಗಳನ್ನು ಸರಿಯಾಗಿ ಲೆಕ್ಕ ಮಾಡಲಾಗಿರುವುದೇ (ಒಂದು ವೇಳೆ ಸಾಲ ನೀಡಿಕೆದಾರರು ಸರ್ಕಾರದ ಕಂಪನಿಯಾಗಿದ್ದರೆ, ಆಗ ಈ ನಿರ್ದೇಶನವು ಸಾಲ ನೀಡಿಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಿಗೂ ಅನ್ವಯವಾಗುವುದು)	ಕಂಪನಿಯು ಯಾವುದೇ ಸಾಲದ ಸೌಲಭ್ಯಗಳನ್ನು ಪಡೆದಿರುವುದಿಲ್ಲ.
3	ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಪಡೆದಿರುವ /ಪಡೆಯಬಹುದಾಗಿರುವ ಹಣಗಳನ್ನು (ಅನುದಾನಗಳು) ಸಬ್ಸಿಡಿ ಇತ್ಯಾದಿ) ಸರಿಯಾಗಿ ಲೆಕ್ಕ ಮಾಡಲಾಗಿರುವುದೇ? ಅದರ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಬಳಕೆ ಮಾಡಲಾಗಿರುವುದೇ? ಮಾರ್ಗ ಬದಲಾವಣೆಯ ಪ್ರಕರಣಗಳ ಪಟ್ಟಿ ಮಾಡಿ	ಕಂಪನಿಯು ಈ ವರ್ಷದ ಅವಧಿಯಲ್ಲಿ ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ಯಾವುದೇ ಹಣಗಳನ್ನು (ಅನುದಾನಗಳು/ಸಬ್ಸಿಡಿ ಇತ್ಯಾದಿ) ಪಡೆದಿರುವುದಿಲ್ಲ.

	ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು:	
(ಎ)	ಅನುಬಂಧ-1ರಲ್ಲಿ ಲಗತ್ತಿಸಿರುವ ನಗದು ಮತ್ತು ಬ್ಯಾಂಕ್ ಶಿಲ್ಕುಗಳ ಬಗ್ಗೆ ಎಲ್ಲಾ ಐಟಂಗಳನ್ನು ಲೆಕ್ಕಪರಿಶೋಧಕರು ಪರಿಶೀಲಿಸಿರುವರೇ? ನಿರ್ದಿಷ್ಟವಾದ ಅನುಸರಣೆ ಮಾಡಿರದ ಪ್ರಕರಣವಿದ್ದಲ್ಲಿ, ಅದನ್ನು ವರದಿ ಮಾಡಲಾಗಿರುವುದೇ?	ಅನುಬಂಧ-1 ನೋಡಿ. ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಿರ್ದಿಷ್ಟವಾಗಿ ಅನುಸರಣೆ ಮಾಡಿರದ ಯಾವುದೇ ಪ್ರಕರಣ ಕಂಡು ಬಂದಿರುವುದಿಲ್ಲ.
(ಬಿ)	ದುರುಪಯೋಗ/ವಂಚನೆ ಪ್ರಕರಣಗಳ ಬಗ್ಗೆ ವ್ಯವಹರಿಸಲು ಕಂಪನಿಯು ಪರಿಣಾಮಕಾರಿ ವ್ಯವಸ್ಥೆ ಒಂದನ್ನು ಹೊಂದಿರುವುದೇ ಮತ್ತು ಯಾವುದೇ ಇದ್ದಲ್ಲಿ ಅಂತಹ ನಷ್ಟಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಸೂಕ್ತವಾಗಿ ಲೆಕ್ಕ ಮಾಡಲಾಗಿರುವುದೇ? ಅನಿಶ್ಚಿತ ಶೀರ್ಷಿಕೆಯ ಅಡಿಯಲ್ಲಿ ಕಂಪನಿಯು ಯಾವುದೇ ವಿವರಿಸದಿರುವ ಶಿಲ್ಕುಗಳನ್ನು ಮತ್ತು ಲೆಕ್ಕಗಳನ್ನು ಕಾರ್ಯಾಚರಣೆ ಮಾಡಿರುವುದೇ ಎಂಬುದರ ಬಗ್ಗೆ ಅಭಿಪ್ರಾಯ ತಿಳಿಸಿರುವುದೇ.	ಚಿಟ್‌ಫಂಡ್ ವಿಭಾಗದ ಹೊರತಾಗಿ, ಕಂಪನಿ ವ್ಯವಹರಿಸಲು ಪರಿಣಾಮಕಾರಿಯಾದ ಒಂದು ವ್ಯವಸ್ಥೆ ಹೊಂದಿರುವುದು. ಚಿಟ್‌ಫಂಡ್ ವಿಭಾಗದಲ್ಲಿ ಈ ಬಗ್ಗೆ ಅಭಿಪ್ರಾಯ ತಿಳಿಸಲು ಅಗತ್ಯವಾದ ವರದಿಗಳು ಮತ್ತು ಡಾಟಾವನ್ನು ನಾವು ಪಡೆದಿರುವುದಿಲ್ಲ. ಕಂಪನಿಯು ಹಿಂದಿನ ವರ್ಷಗಳಲ್ಲಿ ರೂ.871.75ಲಕ್ಷಗಳ ಒಟ್ಟಾರೆ ಮೊತ್ತದ ಸಂಚಯನವಾದ ಚಿಟ್ ನಿಶ್ಚಿತ ಶಿಲ್ಕುಗಳನ್ನು ಹೊಂದಿರುವುದು.
(ಸಿ)	ಕಂಪನಿಯು ಅದರ ಮಾರಾಟ ಚಟುವಟಿಕೆಗಳ ಸಂಬಂಧದಲ್ಲಿ ಬಾಕಿಗಳ ವಸೂಲಿಗೆ ಪರಿಣಾಮಕಾರಿಯಾದ ವ್ಯವಸ್ಥೆ ಒಂದನ್ನು ಹೊಂದಿರುವುದೆ ಮತ್ತು ಬಾಕಿಗಳನ್ನು ವಸೂಲಿ ಮಾಡಿರುವುದನ್ನು ಲೆಕ್ಕದ ಪುಸ್ತಕಗಳಲ್ಲಿ ಸೂಕ್ತವಾಗಿ ದಾಖಲು ಮಾಡಲಾಗಿರುವುದೇ?	(ಎ) ಕಂಪನಿಯು ಕಾಗದದ ವಿಭಾಗದಲ್ಲಿ ಹೊರತುಪಡಿಸಿ, ಉಳಿದಂತೆ ಬಾಕಿಗಳ ವಸೂಲಿಗೆ ಪರಿಣಾಮಕಾರಿಯಾದ ವ್ಯವಸ್ಥೆ ಹೊಂದಿದೆ. ಕಾಗದದ ವಿಭಾಗದಲ್ಲಿ ಬಹುಪಾಲು ಪ್ರಕರಣಗಳಲ್ಲಿ ಇನ್‌ವಾಯ್ಸ್‌ನಲ್ಲಿ ನಿಗದಿಪಡಿಸಿರುವ ಕ್ರೆಡಿಟ್ ಅವಧಿ ಒಳಗೆ ಸಾಲಗಾರರಿಂದ ವಸೂಲಿ ಮಾಡಿರುವುದಿಲ್ಲ. ಪರೀಕ್ಷಾರ್ಥ ತಪಾಸಣೆ ಆಧಾರದ ಮೇಲೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಆಧಾರದ ಮೇಲೆ, ನಾವು ವರದಿ ಮಾಡುವುದೇನೆಂದರೆ, ವಸೂಲಾಗದೆ ಉಳಿದಿರುವ ಬಾಕಿಗಳು ಮತ್ತು ಇವುಗಳ ವಸೂಲಾತಿಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಸರಿಯಾಗಿ ದಾಖಲು ಮಾಡಿದೆ. ಆದರೂ, ಶಿಲ್ಕುಗಳ ದೃಢೀಕರಣೆಗಳನ್ನು ಸಾಲಗಾರರುಗಳಿಂದ ಪಡೆದುಕೊಂಡಿರುವುದಿಲ್ಲ.

''ಅನುಬಂಧ-1''

ಕ್ರಸಂ.	ಪರಿಶೀಲನೆ ಪಟ್ಟಿಯಲ್ಲಿನ ಐಟಂಗಳು	ಷರಾ
1.	ಎಲ್ಲಾ ಬ್ಯಾಂಕ್ ಖಾತೆಗಳು/ಸಾವಧಿ ಠೇವಣಿಗಳನ್ನು ಬ್ಯಾಂಕುಗಳಲ್ಲಿ ತೆರೆಯಲಾಗಿರುವುದೆ/ಸೂಕ್ತ ಅಧಿಕಾರ ನೀಡಿಕೆ ಮತ್ತು ಅನುಮೋದನೆಗಳು ಮೇಲೆ ತಿಳಿಸಿರುವ ಅಧಿಕಾರಗಳ ನೀಡಿಕೆ ಅನುಸಾರ ಇರುವುದೇ?	ಹೌದು
2	ಬ್ಯಾಂಕ್ ಸಮಂಜಸತೆ ವಿವರಗಳನ್ನು ಸಿದ್ಧಪಡಿಸುವ ನಿಯತಕಾಲಿಕ ವ್ಯವಸ್ಥೆ ಇರುವುದೇ ಮತ್ತು ಅವುಗಳನ್ನು ಲೆಕ್ಕಪರಿಶೋಧನೆ ಮಾಡಲು ಪರಿಶೀಲನೆಗೆ ಹಾಜರುಪಡಿಸಲಾಗಿತ್ತೇ ?	ಹೌದು, ಆದರೆ ಬ್ಯಾಂಕ್ ಸಮಂಜಸತೆ ವಿವರಣೆ ಸಿದ್ಧಪಡಿಸುವುದರಲ್ಲಿ ವಿಳಂಬವಾಗಿದೆ.
3	ಪ್ರಧಾನ ಮತ್ತು ಎಲ್ಲಾ ಸಹಾಯಕ ಬ್ಯಾಂಕ್ ಖಾತೆಗಳ ಬ್ಯಾಂಕ್ ಸಮಂಜಸತೆ ಮಾಡಲಾಗಿರುವುದೆ?	ಹೌದು
4	ಬ್ಯಾಂಕ್ ಖಾತೆಗಳ ಕಾರ್ಯಾಚರಣೆಗೆ ಏಕ ಸಹಿದಾರರಿಗೆ ಅಧಿಕಾರ ನೀಡಲಾಗಿರುವುದೆ?	ಇಲ್ಲ, ಇದರ ಹೊರತಾಗಿ ನೀಡಿರುವ ಅಧಿಕಾರದ ಅನ್ವಯ ಒಬ್ಬರೆ ಬ್ಯಾಂಕ್ ಖಾತೆಗಳನ್ನು ಕಾರ್ಯಾಚರಣೆ ಮಾಡಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿದೆ.
5	ಸಾವಧಿ ಠೇವಣಿಗಳ ಪೂರ್ಣ ಅವಧಿಯ ಬಡ್ಡಿಯನ್ನು ಲೆಕ್ಕದ ಪುಸ್ತಕಗಳಲ್ಲಿ ಸೇರಿಸಲಾಗಿರುವುದೆ?	ಹೌದು
6	ನಗದು ಹಣದ ಭೌತಿಕ ಪರಿಶೀಲನೆಯನ್ನು ನಿಯತಕಾಲಿಕವಾಗಿ ಮಾಡಲಾಗಿದೆಯೆ?	ಹೌದು
7	ಸ್ಥಿತಿ ವಿವರಣಾ ಪಟ್ಟಿಯಲ್ಲಿ ತೋರಿಸಿರುವ ಕೈಯಲ್ಲಿರುವ ನಗದಿನ ವಿವರ ನಗದು ಹಣದ ಭೌತಿಕ ಪರಿಶೀಲನೆ ಸರ್ಟಿಫಿಕೇಟ್ ಜೊತೆ ಹೊಂದಾಣಿಕೆಯಾಗಿರುವುದೆ?	ಹೌದು
8	ಠೇವಣಿ ಮೊತ್ತ , ಅವಧಿ ಮುಗಿಯುವ ದಿನಾಂಕಗಳು, ಬಡ್ಡಿ ದರ ಮತ್ತು ಬಡ್ಡಿ ಪಾವತಿ ದಿನಾಂಕಗಳನ್ನು ತೋರಿಸುವ ನಿಶ್ಚಿತ ಠೇವಣಿಗಳ ರಿಜಿಸ್ಟರ್ ಇರುವುದೆ?	ಯಾವುದೇ ರಿಜಿಸ್ಟರ್ ನಿರ್ವಹಣೆ ಮಾಡಿಲ್ಲ. ಆದರೆ, ವಿವರಗಳನ್ನು ಎಕ್ಸೆಲ್ ಅಪ್ಲಿಕೇಷನ್‌ನಲ್ಲಿ ನಿರ್ವಹಣೆ ಮಾಡಿದೆ.
9	ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿಯನ್ನು ನಿಗದಿತ ದಿನಾಂಕಗಳಲ್ಲಿ ಪಡೆದಿರುವ ಬಗ್ಗೆ ಖಾತರಿಪಡಿಸುವ ಅನುಸರಣೆ ವ್ಯವಸ್ಥೆ ಇರುವುದೆ?	ಹೌದು
10	ನಿಶ್ಚಿತ ಠೇವಣಿಗಳ ಪಕ್ವತೆಯಾದ ಮೊತ್ತವನ್ನು ಯಾವುದೇ ವಿಳಂಬವಿಲ್ಲದೆ ವರ್ಗಾವಣೆ ಮಾಡಿರುವ ಬಗ್ಗೆ ಖಾತರಿಪಡಿಸುವ ಅನುಸರಣೆ ವ್ಯವಸ್ಥೆ ಇರುವುದೆ?	ಹೌದು, ಚಿಟ್ ಫಂಡ್ ವಿಭಾಗದಲ್ಲಿ ಚಿಟ್ ಗ್ರೂಪ್ ಮುಕ್ತಾಯ ವಿಳಂಬವಾಗಿರುವೆಡೆಗಳಲ್ಲಿ ಎಫ್‌ಡಿಗಳನ್ನು ನವೀಕರಿಸಿದೆ.
11	ಎಲ್ಲಾ ಖಾತೆಗಳ ಅಂದರೆ ಎಸ್‌ಬಿ ಖಾತೆಗಳು, ಚಾಲ್ತಿ ಖಾತೆಗಳು ಮತ್ತು ನಿಶ್ಚಿತ ಠೇವಣಿಗಳ ಬಗ್ಗೆ ಬ್ಯಾಂಕುಗಳಿಂದ ಬ್ಯಾಂಕ್ ದೃಢೀಕರಣೆ ವಿವರಗಳನ್ನು ನಿಯತಕಾಲಿಕವಾಗಿ ಪಡೆಯಲಾಗಿರುವುದೆ?	ಹೌದು, ಆದರೂ ಕಂಪನಿಯು ಎಸ್‌ಬಿ ಖಾತೆಗಳನ್ನು ಹೊಂದಿರುವುದಿಲ್ಲ.
12	ಎಲ್ಲಾ ಬ್ಯಾಂಕ್ ಶಿಲ್ಕುಗಳ ಸಂಬಂಧ ಶಿಲ್ಕುಗಳ ದೃಢೀಕರಣೆಯು ಬ್ಯಾಂಕ್ ವಿವರಗಳ ಜೊತೆ ಹೊಂದಾಣಿಕೆಯಾಗುವವೆ?	ಕಂಪನಿಯು ಬ್ಯಾಂಕುಗಳಿಂದ ನಿಯತಕಾಲಿಕ ದೃಢೀಕರಣೆ ಪಡೆಯುವ ಮತ್ತು ಬ್ಯಾಂಕ್ ಸಮಂಜಸತೆ ವಿವರಗಳನ್ನು ಸಿದ್ಧಪಡಿಸುವ ಅಭ್ಯಾಸ ಹೊಂದಿದೆ. ಕಂಡುಬಂದಿರುವ ಕೆಲವು ವ್ಯತ್ಯಾಸಗಳನ್ನು ಸೂಕ್ತವಾಗಿ ಸರಿಪಡಿಸಿದೆ.
13	ನಿಶ್ಚಿತ ಠೇವಣಿಗಳು ಮತ್ತು ನಿಶ್ಚಿತ ಠೇವಣಿಗಳ ರಿಜಿಸ್ಟರ್ ಅನ್ವಯ ಬಡ್ಡಿಯು ಬ್ಯಾಂಕ್ ನೀಡಿದ ದೃಢೀಕರಣೆ/ಸರ್ಟಿಫಿಕೇಟ್ ಜೊತೆ ಹೊಂದಾಣಿಕೆಯಾಗುವುದೆ?	ಹೌದು, ತಿಳಿಸಿರುವಂತೆ ಕಂಪನಿ ಎಫ್.ಡಿ. ವಿವರಗಳನ್ನು ಎಕ್ಸೆಲ್ ಅಪ್ಲಿಕೇಷನ್‌ನಲ್ಲಿ ನಿರ್ವಹಿಸುವುದು. ಇದು ಎಫ್.ಡಿ.ಗಳು ಮತ್ತು ಸಂಚಯನವಾದ ಬಡ್ಡಿಗೆ ಹೊಂದಾಣಿಕೆಯಾಗುವುದು.

14	ಬ್ಯಾಂಕುಗಳಿಂದ ಪಡೆದಿರುವ ದೃಢೀಕರಣ ವಿವರಣೆಗಳು ಅಧಿಕೃತವಾಗಿರುವುದೇ ಮತ್ತು ಬ್ಯಾಂಕಿನ ಲೆಟರ್ ಹೆಡ್‌ನಲ್ಲಿ ಇರುವುದೆ?	ಹೌದು
15	ಮೇಲಿನ ಪರಿಶೀಲನೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿದ್ದರೆ, ಅದನ್ನು ಮುಂದಿನ ವರ್ಷದಲ್ಲಿ ಹೊಂದಾಣಿಕೆ ಮಾಡಲಾಗಿರುವುದೆ? ಎಂಬುದನ್ನು ಪರಿಶೀಲಿಸಿ	ಹೌದು, ಪಾಯಿಂಟ್ ನಂ.12 ಅನ್ನು ನೋಡಿ.
16	ಪರಿಶೀಲನೆ ತಪಾಸಣೆಯಲ್ಲಿ ಬ್ಯಾಂಕುಗಳಿಂದ ಬಾಹ್ಯ ದೃಢೀಕರಣ ವಿವರಗಳನ್ನು ಪಡೆಯಲಾಗಿರುವುದೆ? ಹಾಗಿದ್ದರೆ ಅದರ ವಿವರ ನೀಡಿ	ಕಂಪನಿಯು ಬ್ಯಾಂಕುಗಳಿಂದ ದೃಢೀಕರಣೆಗಳನ್ನು ಪಡೆದಿದೆ ಮತ್ತು ಅದನ್ನು ನಾವು ಪರಿಶೀಲಿಸಿರುವೆವು.
17	ಶಾಸನಬದ್ಧ ಲೆಕ್ಕಪರಿಶೋಧಕರು ಆಂತರಿಕ ಹಣಕಾಸಿನ ನಿಯಂತ್ರಣಗಳ ವರದಿಯಲ್ಲಿ ಮೇಲೆ ತಿಳಿಸಿರುವ ತಪ್ಪುಗಳನ್ನು ಬಹಿರಂಗಪಡಿಸಿರುವರೆ? ಇಲ್ಲದಿದ್ದರೆ, ಲೆಕ್ಕಪರಿಶೋಧನೆ ವಿಚಾರಣೆ ಹೊರಡಿಸಲಾಗಿತ್ತೆ ?	ಹೌದು, ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ನಮ್ಮ ವರದಿಯ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್‌ನ ಕಲಂ ''ಡಿ'' ನೋಡಿ.

2022-23ನೇ ವರ್ಷದ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಯಲ್ಲಿನ ಆರೋಪಕ್ಕೆ ಉತ್ತರಗಳು

(ಅರ್ಹತಾ ಅಭಿಪ್ರಾಯಕ್ಕೆ ಆಧಾರ-ಲೆಕ್ಕಪರಿಶೋಧನೆ ವರದಿ ಪುಟ ಸಂಖ್ಯೆ 1 ಮತ್ತು 2 ನೋಡಿ)

ಲೆಕ್ಕಪರಿಶೋಧನೆ ಪ್ರಶ್ನೆ	ಕಂಪನಿಯ ಉತ್ತರ
ಎ. ಕಂಪನಿಯ ವ್ಯಾಪಾರದಿಂದ ಬರಬೇಕಾದುದು, ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದುದು, ಇತರೆ ಪಾವತಿ ಮಾಡಬೇಕಾಗಿರುವುದು ಮತ್ತು ಮುಂಗಡಗಳ ಬಗ್ಗೆ ಶಿಲ್ಕಿನ ದೃಢೀಕರಣ ಕಳುಹಿಸುವ ನೀತಿಯನ್ನು ಹೊಂದಿದೆ. ಆದರೆ ದೃಢೀಕರಣ ಪಡೆಯುವ ಬಗ್ಗೆ ಮತ್ತು ಅದನ್ನು ಲೆಕ್ಕದ ಪುಸ್ತಕಗಳ ಜೊತೆ ಸಮಂಸತೆ ಮಾಡುವ ಸೂಕ್ತ ಅನುಸರಣೆ ಇರುವುದಿಲ್ಲ. ಕಂಪನಿಯು ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳಿಗೆ ವರ್ಷದ ಕೊನೆಯಲ್ಲಿ ಪುಸ್ತಕಗಳಲ್ಲಿ ವ್ಯವಸ್ಥೆ ಮಾಡಿದೆ. ಶಿಲ್ಕಿನ ದೃಢೀಕರಣ ಮತ್ತು ಸಮಂಜಸತೆ ಮಾಡದಿರುವುದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗಬಹುದಾದ ಹಣಕಾಸಿನ ಪರಿಣಾಮ ತಿಳಿಯಲಾಗದು.	ಕಂಪನಿಯು 31ನೇ ಮಾರ್ಚ್ 2023 ರಂದು ಇದ್ದಂತೆ ಸಂಡ್ರಿ ಕ್ರೆಡಿಟಾರ್ಸ್, ಸಂಡ್ರಿ ಡೆಟರ್ಸ್ ಮತ್ತು ವ್ಯಾಪಾರ ಸಹವರ್ತಿಗಳ ಲೆಕ್ಕಗಳ ಸಂಬಂಧ ಶಿಲ್ಕಿನ ದೃಢೀಕರಣೆ ಕಳುಹಿಸಿದೆ. ಇದಕ್ಕಾಗಿ ನಮಗೆ ಭಾಗಶಃ ಸ್ಥಿರೀಕರಣ ಬಂದಿದೆ.
ಬಿ. ನಾವು ಗಮನಿಸಿರುವುದೇನೆಂದರೆ (i) ಫಾರ್ಮಸ್ಯುಟಿಕಲ್ ಉತ್ಪನ್ನಗಳ ತಪಶೀಲಿನ ಬಗ್ಗೆ ಸರಿಯಾದ ದಾಖಲೆಗಳನ್ನು ನಿರ್ವಹಣೆ ಮಾಡಿರುವುದಿಲ್ಲ / ಸಕಾಲಿಕಗೊಳಿಸಿರುವುದಿಲ್ಲ. ಮತ್ತು ನಮಗೆ ಸಲ್ಲಿಸಿರುವುದಿಲ್ಲ. ಆಡಳಿತ ಮಂಡಳಿ ನಡೆಸುತ್ತಿರುವ ನಿಯತಕಾಲಿಕ ಭೌತಿಕ ಪರಿಶೀಲನೆ ಮತ್ತು ಸಮಂಜಸತೆ ಕಾರ್ಯದಲ್ಲಿ ಅಸಂಗತತೆ ಇರುವುದು ನಮಗೆ ಕಂಡುಬಂದಿದೆ. ಫಾರ್ಮಸ್ಯುಟಿಕಲ್ ಉತ್ಪನ್ನಗಳ ಬಗ್ಗೆ ಜಿಎಸ್‌ಟಿ ಲೆಕ್ಕಾಚಾರವನ್ನು ಮಾಸಿಕ ಮುಕ್ತಾಯದ ನಂತರ ಅಂದಾಜಿನ ಮೇಲೆ ಮಾಡಿದೆ. ಫಾರ್ಮಸ್ಯುಟಿಕಲ್ ಉತ್ಪನ್ನಗಳ ಆಖೈರು ತಪಶೀಲಿನ ಪ್ರಮಾಣದ ಬಗ್ಗೆ ದೃಢೀಕರಣೆ ಇಲ್ಲದ ಕಾರಣ ರೂ.351.00 ಲಕ್ಷ ಮೊತ್ತದ ಆಖೈರು ತಪಶೀಲಿನ ಪ್ರಮಾಣ ಮತ್ತು / ಅಥವಾ ಆಖೈರು ತಪಶೀಲಿನ ಮೌಲ್ಯದ ನಿಖರತೆ ಬಗ್ಗೆ ತಿಳಿಸಲು ನಮಗೆ ಸಾಧ್ಯವಿಲ್ಲ	ವಿಭಾಗವು ಮಾರಾಟ ಮಳಿಗೆಗಳ ಲೆಕ್ಕಪರಿಶೋಧನೆ ಕಾರ್ಯ ನಡೆಸಲು ಸಹವರ್ತಿ ಲೆಕ್ಕಪರಿಶೋಧಕರನ್ನು ನೇಮಕ ಮಾಡಿದೆ ಮತ್ತು ಅವರು ತ್ರೈಮಾಸಿಕ ಆಧಾರದ ಮೇಲೆ ಲೆಕ್ಕಪರಿಶೋಧನೆ ಮಾಡಿದ್ದಾರೆ. ಇದರಲ್ಲಿ ದಾಸ್ತಾನಿನ, ಖರೀದಿಗಳ ಮಾರಾಟದ, ಹಣ ಸಂದಾಯಗಳ ಮತ್ತು ಅವಧಿ ಮುಗಿದ ದಾಸ್ತಾನಿನ ಭೌತಿಕ ಪರಿಶೀಲನೆಯೂ ಸೇರಿರುವುದು. ಮೇಲೆ ತಿಳಿಸಿರುವ ವಿಚಾರಗಳ ಜೊತೆಗೆ, ಸಂಸ್ಥೆಯಲ್ಲಿನ ಸಮರ್ಪಿತ ಲೆಕ್ಕಪರಿಶೋಧನೆಯ ಒಂದು ತಂಡವೂ ಸಹ ಇರುವುದು. ಇದು ತೀರಾ ಹತ್ತಿರದ ಅಂತರಗಳಲ್ಲಿ ಮಾರಾಟ ಮಳಿಗೆಗಳ ದಿಢೀರ್ ಲೆಕ್ಕಪರಿಶೋಧನೆ ಮಾಡುವುದು ಮತ್ತು ಯಾವುದೇ ಕೊರತೆಗಳು ಕಂಡು ಬಂದರೆ ಅದನ್ನು ಆಡಳಿತ ಮಂಡಳಿಗೆ ವರದಿ ಮಾಡುವುದು. ಈ ರೀತಿಯಾಗಿ, ಫಾರ್ಮಸ್ಯುಟಿಕಲ್ ಉತ್ಪನ್ನಗಳ ತಪಶೀಲಿನ ಬಗ್ಗೆ ಸೂಕ್ತ ನಿಯಂತ್ರಣ ಹೊಂದಿರುವುದು. ಜಿಎಸ್‌ಟಿ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ವಿಭಾಗವು ಮಾರಾಟ ಮಳಿಗೆಗಳಿಂದ ತೆರಿಗೆವಾರು ವಿಭಜನೆಯೊಡನೆ ಎಕ್ಸೆಲ್ ನಮೂನೆಯಲ್ಲಿ ಪ್ರತಿದಿನ ಮಾರಾಟದ ವಿವರಗಳನ್ನು ಪಡೆಯುವುದು. ಇದು ಕ್ರೋಢೀಕರಣವಾದುದಾಗಿರುವುದು ಮತ್ತು ಅದನ್ನು ಪ್ರಧಾನ ಕಚೇರಿಗೆ ಸಲ್ಲಿಸುವುದು. ಈಗ ವಿಭಾಗವು ಜಿಎಸ್‌ಟಿ ದೂರಿನ ವರದಿ ಒಂದನ್ನು (ಸಾಫ್ಟ್‌ವೇರ್ ಡೆವಲಪರ್ ಜೊತೆಗೂಡಿ) ತಯಾರಿಸಿದೆ ಮತ್ತು ಅದನ್ನು ಫಾರ್ಮ ಸಾಫ್ಟ್‌ವೇರ್ ಜೊತೆ ಸಂಯೋಜಿಸಿದೆ. ಈ ಹೊಸ ಮಾದರಿಯು ನವೆಂಬರ್ 2023ರ ತಿಂಗಳಿನ ಅವಧಿಯಲ್ಲಿ ಎಲ್ಲಾ ಮಾರಾಟ ಮಳಿಗೆಗೆ ಅಳವಡಿಕೆಯಾಗಿದೆ. ಈಗ, ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವ ಸಾಫ್ಟ್‌ವೇರ್ ವಿಧಾನ ಬಳಸಿ ಜಿಎಸ್‌ಟಿ ಲೆಕ್ಕಾಚಾರ ಮತ್ತು ವರದಿಗಳನ್ನು ಸೃಜಿಸಲಾಗುತ್ತಿದೆ.
(ii) ಕಂಪನಿಯು ಈ ವರ್ಷದ ಅವಧಿಯಲ್ಲಿ ಆಮದಾದ ನದಿ ಮರಳಿನ ದಾಸ್ತಾನಿನ ಭೌತಿಕ ಪರಿಶೀಲನೆ ವರದಿ ಪಡೆದಿದೆ. ಇದರಲ್ಲಿ ರೂ.347.87 ಲಕ್ಷಗಳ ಮೊತ್ತದ 16565.002 ಎಂಟಿ ಕಡಿಮೆ ಇರುವುದು ಕಂಡು ಬಂದಿದೆ. ಆದರೂ, ಹಿಂದಿನ ವರ್ಷಗಳಲ್ಲಿ ಪುಸ್ತಕಗಳಲ್ಲಿ 100% ಅವಕಾಶ ಮಾಡಿದ್ದರೂ, ಸ್ಥಿತಿ ವಿವರಣೆ ಪಟ್ಟಿ ದಿನಾಂಕದಂದು ಇದರ ಶಿಲ್ಕಿನ ದೃಢೀಕರಣೆ ಮಾಡಿರುವುದಿಲ್ಲ ಮತ್ತು ಈ ವರ್ಷದಲ್ಲಿ ಯಾವುದೇ ಮಾರಾಟ ನಡೆದಿರುವುದಿಲ್ಲ. ಕಡಿಮೆಯಾಗಿ ಕಂಡು ಬಂದ ತಪಶೀಲನ್ನು ಕಂಪನಿ ವಜಾ ಮಾಡಿರುವುದಾಗಲಿ ಅಥವಾ ಪುಸ್ತಕಗಳಲ್ಲಿ ಈ ಹಿಂದೆ ಮಾಡಿದ್ದ ಸಂಬಂಧಿತ ವ್ಯವಸ್ಥೆಯನ್ನು ಹಿಂಪಡೆಯುವುದನ್ನಾಗಲಿ ಕಂಪನಿ ಮಾಡಿರುವುದಿಲ್ಲ. ಆದ್ದರಿಂದಾಗಿ ತಪಶೀಲುಗಳು ಮತ್ತು ತಪಶೀಲುಗಳಿಗೆ ಮಾಡಿರುವ ಅವಕಾಶ ಈ ಎರಡನ್ನೂ ರೂ.347.87 ಲಕ್ಷಗಳಷ್ಟು ಹೆಚ್ಚಿಗೆಯಾಗಿ ತಿಳಿಸಿದೆ.	ಮರಳಿನ ವಿಭಾಗವು 2021-22 ಮತ್ತು 2022-23ರ ವರ್ಷದಲ್ಲಿ ಯಾವುದೇ ವ್ಯವಹಾರ ನಡೆಸಿರುವುದಿಲ್ಲ. ಪುಸ್ತಕಗಳಲ್ಲಿ ಹಾಲಿಯಿರುವ ಬಾಕಿಯು ಸಿಂಧುವಾಗಿರುವುದು. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ದಿನಾಂಕ:16ನೇ ಡಿಸೆಂಬರ್ 2022ರಂದು ಕೃಷ್ಣಪಟ್ಟಂ ಬಂದರಿಗೆ ಭೇಟಿ ನೀಡಿ ದಾಸ್ತಾನು ಪರಿಶೀಲಿಸಿರುವರು. ತಪಶೀಲು ಸರಕನ್ನು ಫ್ರಸ್ಟಮ್ ವಿಧಾನದ ಮೇಲೆ ಪ್ರಮಾಣದ ಅಂದಾಜು ಲೆಕ್ಕಾಚಾರ ಮಾಡಿರುವುದರಿಂದ, ಇಡೀ ಸರಕನ್ನು / ಸಾಕಷ್ಟು ಪ್ರಮಾಣದ ಸರಕನ್ನು ನಾವು ಮಾರಾಟ ಮಾಡದ ಹೊರತು ಸರಿಯಾದ ಕೊರತೆಯನ್ನು ಗುರುತಿಸಲು ನಮಗೆ ಸಾಧ್ಯವಾಗದು.

ಸಿ. ಚಿಟ್‌ಫಂಡ್ ವಿಭಾಗಕ್ಕೆ ಸಂಬಂಧಿಸಿದಂತೆ, (i) ಸರಿಯಾದ ಆಂತರಿಕ ನಿಯಂತ್ರಣ ಕ್ರಮಗಳು ಇಲ್ಲದಿರುವುದರಿಂದ; (ii)ನಿಯೋಜಿಸಿರುವ ಸಾಫ್ಟ್‌ವೇರ್‌ನಿಂದ ನಿಖರವಾದ ಮತ್ತು ಅಗತ್ಯವಾದ ವರದಿಗಳನ್ನು ಸೃಜನೆ ಮಾಡಲು ಬೆಂಬಲ ಇಲ್ಲದಿರುವುದರಿಂದ; (iii) ಹೊರಗಿನ ಶಾಖೆಗಳಲ್ಲಿ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ನಿರೂಪಿತ ವ್ಯವಸ್ಥೆ ಮತ್ತು ಪುಸ್ತಕಗಳ ಸಕಾಲಿಕ ಮುಚ್ಚುವಿಕೆ ಪ್ರಕ್ರಿಯೆ ಇಲ್ಲದಿರುವುದರಿಂದ (iv) ಬ್ಯಾಂಕ್ ಸಮಂಜಸತೆ ವಿವರಣೆ ಇತ್ಯಾದಿಯನ್ನು ಸಕಾಲಿಕವಾಗಿ ಸಿದ್ದಪಡಿಸದಿರುವುದರಿಂದ ಇವು ಹಣಕಾಸಿನ ಹೇಳಿಕೆಗಳ ಮೇಲೆ ಪರಿಣಾಮ ಉಂಟು ಮಾಡಬಹುದಾಗಿರುತ್ತದೆ. ಸದರಿ ವರ್ಷದಲ್ಲಿ ಕಂಪನಿಯ ಹೊರಗುತ್ತಿಗೆ ನೌಕರನೊಬ್ಬನು ಹಣದ ದುರುಪಯೋಗ ಮಾಡಿಕೊಂಡಿರುವ ಘಟನೆ ನಡೆದಿದೆ. ಕಂಪನಿಯು ಮುಂದಿನ ದಿನಗಳಲ್ಲಿನ ಹೊಣೆಗಾರಿಕೆಗಳು ಸೇರಿದಂತೆ ರೂ.147.80ಲಕ್ಷಗಳ ನಷ್ಟವನ್ನು ಅಂದಾಜು ಮಾಡಿದೆ. ಮತ್ತು ಅದನ್ನು ಒದಗಿಸಿದೆ. ಹಣ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಕಂಪನಿ ಎಫ್‌ಐಆರ್ ಸಲ್ಲಿಸಿದೆ ಮತ್ತು ಅದನ್ನು ವಸೂಲು ಮಾಡಲು ಕ್ರಮಗಳನ್ನು ಕೈಗೊಂಡಿದೆ. ಕಂಪನಿಯು ಎರಡು ಶಾಖೆಗಳ ಬಗ್ಗೆ ಫೋರೆನ್ಸಿಕ್ ಆಡಿಟ್ ಕೈಗೊಂಡಿದೆ ಮತ್ತು ಲೆಕ್ಕಪರಿಶೋಧನೆ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ಅಗತ್ಯವಾದ ಮಾಹಿತಿ ಇಲ್ಲದಿರುವುದರಿಂದ, ಹಣಕಾಸಿನ ಹೇಳಿಕೆ ಮೇಲೆ ಯಾವುದೇ ಪರಿಣಾಮ ಉಂಟಾಗಿರುವುದರ ಬಗ್ಗೆ ತಿಳಿಯಲು ಆಗದು.	(i) ವಿಭಾಗವು ಸೂಕ್ತ ಆಂತರಿಕ ನಿಯಂತ್ರಣ ವ್ಯವಸ್ಥೆ ಸುಧಾರಿಸಲು ವಿವಿಧ ಕ್ರಮಗಳನ್ನು ಕೈಗೊಂಡಿದೆ. (ii) ಸಾಫ್ಟ್‌ವೇರ್‌ನ ವಿಚಾರವನ್ನು ಪ್ರತಿಯೊಂದು ಫೋರಂ ಮುಂದೆ ತರಲಾಗಿದೆ ಮತ್ತು ಪ್ರಸ್ತುತ ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಯು ಈಗ ತಾಂತ್ರಿಕ ಪರಿಶೀಲನೆಯಲ್ಲಿದೆ. (iii) ಶಿವಮೊಗ್ಗ ಮತ್ತು ಕೆಂಗೇರಿ ಶಾಖೆಗಳಲ್ಲಿ ಪ್ರಸ್ತುತ ಸ್ವತಂತ್ರ ಸಾಫ್ಟ್‌ವೇರ್ ಸ್ಥಾಪನೆ ವಿಚಾರವಾಗಿ ಮಾಡಿರುವ ಅಕ್ಷೇಪಣೆ ಬಗ್ಗೆ ತಿಳಿಸುವುದೇನೆಂದರೆ, ಆ ಕಾರ್ಯವನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಸಂಭವವಿರುವುದು. (iv)ಲೆಕ್ಕಗಳ ಸಮಂಜಸತೆಯು ನವೆಂಬರ್ 2023ರವರೆಗೆ ಪೂರ್ಣಗೊಳ್ಳುವಿಕೆ ಸಮೀಪದಲ್ಲಿರುವುದು ಮತ್ತು ಕೆಲವೇ ದಿನಗಳಲ್ಲಿ ಅಪ್‌ಡೇಟ್ ಮಾಡುವ ಸಂಭವವಿರುವುದು. ಹಣಕಾಸಿನ ದುರುಪಯೋಗದ ಪರಿಣಾಮವು ಉಂಟಾಗಿರುವುದನ್ನು ಈಗಾಗಲೇ ಹಣಕಾಸಿನ ವರ್ಷ 2022-23ಕ್ಕೆ ಮಾಡಿರುವ ವ್ಯವಸ್ಥೆಗಳ ಅಡಿಯಲ್ಲಿ ತರಲಾಗಿದೆ ಮತ್ತು ಯಾವುದೇ ಹೆಚ್ಚಿನ ಅವಕಾಶ ಮಾಡಬೇಕಾದ ಅಗತ್ಯತೆ ಇದ್ದರೆ ಅದನ್ನು ಫೋರೆನ್ಸಿಕ್ ಅಡಿಟ್‌ನ ಅಂತಿಮ ವರದಿಯ ಆಧಾರದ ಮೇಲೆ ಪರಿಶೀಲಿಸಲಾಗುವುದು.
ಡಿ. ಕಂಪನಿಯು ಈ ವರ್ಷದ ಅವಧಿಯಲ್ಲಿ ರೂ.56.46 ಲಕ್ಷಗಳ ಬಿಪಿಪಿಐ ಪ್ರೋತ್ಸಾಹಧನ ಪಡೆದಿದೆ ಮತ್ತು ಇದನ್ನು ಸ್ವತಂತ್ರ ಹಣಕಾಸಿನ ಹೇಳಿಕೆಯಲ್ಲಿ ವರದಿ ಮಾಡಿದೆ. ವರ್ಷದ ಅಂದಾಜು ಮಾಡಲಾದ ಪ್ರೋತ್ಸಾಹಧನದ ಮೊತ್ತ ರೂ.167.69 ಲಕ್ಷ. ಕಂಪನಿಯು ಇದರ ಬಗ್ಗೆ ನಗದು ಆಧಾರಿತ ಲೆಕ್ಕ ನಿರ್ವಹಣೆ ನೀತಿ ಅನುಸರಿಸುತ್ತಿರುವುದಾಗಿ ತಿಳಿಸಿದೆ. ಪಡೆಯಬಹುದಾಗಿರುವ ಅರ್ಹ ಬಿಪಿಪಿಐ ಪ್ರೋತ್ಸಾಹಧನ ಮತ್ತು ಪಡೆದ ಪ್ರೋತ್ಸಾಹಧನದ ನಡುವಿನ ರೂ.111.23 ಲಕ್ಷಗಳ ವ್ಯತ್ಯಾಸವನ್ನು ಹಣಕಾಸಿನ ಹೇಳಿಕೆಯಲ್ಲಿ ಮಾನ್ಯಮಾಡಿರುವುದಾಗಲಿ ಅಥವಾ ತಿಳಿಸುವುದನ್ನಾಗಲಿ ಮಾಡಿರುವುದಿಲ್ಲ.	ದಿನಾಂಕ:01.04.2020 ರಿಂದ ಜಾರಿಗೆ ಬಂದಿರುವ ಬಿಪಿಪಿಐನ ಮಾರ್ಗಸೂಚಿಗಳಲ್ಲಿನ ಬದಲಾವಣೆಗಳ ಅನ್ವಯ, ಜೆಎಎಸ್ ಮಾರಾಟ ಮಳಿಗೆಗಳ ಖರೀದಿ ಮೇಲೆ ಬಿಪಿಪಿಐ 15% ನಂತೆ ಪ್ರೋತ್ಸಾಹಧನ ನೀಡುತ್ತಿದೆ. ಇದನ್ನು ತಿಂಗಳು ಒಂದಕ್ಕೆ ರೂ.0.15 ಲಕ್ಷಗಳಿಗೆ ನಿರ್ಬಂಧಿಸಿದೆ ಮತ್ತು ಮಾರಾಟ ಮಳಿಗೆ ಒಂದಕ್ಕೆ ರೂ.5.00 ಲಕ್ಷಗಳವರೆಗೆ ಮಿತಿ ವಿಧಿಸಿದೆ. ಹಣಕಾಸಿನ ವರ್ಷ 2020-21ರ ಅವಧಿಯಲ್ಲಿ ಕಂಪನಿಯು ರೂ.82.49ಲಕ್ಷದ ಮೊತ್ತವನ್ನು ಮತ್ತು ಹಣಕಾಸಿನ ವರ್ಷ 2021-22ರ ಅವಧಿಯಲ್ಲಿ ರೂ.44.32 ಲಕ್ಷದ ಮೊತ್ತವನ್ನು ಪ್ರೋತ್ಸಾಹಧನವಾಗಿ ಪಡೆದಿದೆ. ಸಾಫ್ಟ್‌ವೇರ್ ಮೂಲಕ ಬಿಪಿಪಿಐ ಕೇಂದ್ರ ಕಚೇರಿಗೆ ಸಂಪರ್ಕ ಹೊಂದಿರುವ ಸರಬರಾಜುದಾರರುಗಳಿಂದ ನೇರವಾಗಿ ಮಾಡಿದ ಖರೀದಿಗಳ ಬಗ್ಗೆ ಬಿಪಿಪಿಐ ಮಾಹಿತಿ ಪಡೆಯುವುದರಿಂದ, ಈ ಮೊತ್ತವನ್ನು ಸ್ವೀಕರಣೆ ಆಧಾರದ ಮೇಲೆ ಪುಸ್ತಕಗಳಲ್ಲಿ ಲೆಕ್ಕಕ್ಕೆ ಸೇರಿಸಿದೆ. ಹಣಕಾಸಿನ ವರ್ಷ 2022-23ರಲ್ಲಿ ಕಂಪನಿಯು ರೂ.56.46ಲಕ್ಷಗಳ ಪ್ರೋತ್ಸಾಹಧನ ಪಡೆದಿದೆ. ಇದನ್ನು ಮತ್ತೆ ಸ್ವೀಕಾರದ ಆಧಾರದ ಮೇಲೆ ಲೆಕ್ಕಕ್ಕೆ ಸೇರಿಸಿದೆ. ಯೋಜನೆ ಅಡಿಯಲ್ಲಿರುವಂತೆ ಸಾಫ್ಟ್‌ವೇರ್ ಮೂಲಕ ಬಿಪಿಪಿಐ ಕೇಂದ್ರ ಕಚೇರಿಗೆ ಸಂಪರ್ಕಿಸಿರುವ, ಹೆಸರು ಸೇರ್ಪಡೆಯಾಗಿರುವ ತಮ್ಮ ಸರಬರಾಜುದಾರರುಗಳಿಂದ ನೇರವಾಗಿ ಖರೀದಿ ವಿವರಗಳನ್ನು ಬಿಪಿಪಿಐ ಪಡೆಯುವುದರಿಂದ, ಪಡೆಯಬಹುದಾಗಿರುವ ಪ್ರೋತ್ಸಾಹಧನದ ಯಾವುದೇ ಅಂದಾಜನ್ನು ವಿಭಾಗದ ಪುಸ್ತಕಗಳಲ್ಲಿ ಮಾಡಿರುವುದಿಲ್ಲ. ಮುಂದುವರಿದು, ಬಿಪಿಪಿಐ ಪ್ರೋತ್ಸಾಹಧನದ ರೂಪದಲ್ಲಿ ಬಿಪಿಪಿಐ ನೀಡುವ ವಾಸ್ತವಿಕ ಮೊತ್ತವು ತಿಳಿದಿರುವುದಿಲ್ಲ. ಹಾಗಾಗಿ ಪುಸ್ತಕಗಳಲ್ಲಿ ತಾತ್ಕಾಲಿಕ ನಮೂದನ್ನು ಸೃಷ್ಟಿಸಿರುವುದಿಲ್ಲ.

ಇ. ಬರಬೇಕಾಗಿರುವ ಆದಾಯ ತೆರಿಗೆ ಮರುಪಾವತಿಗಳು ಮತ್ತು ಈ ಬಗ್ಗೆ ಮಾಡಿರುವ ಅವಕಾಶದ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗುತ್ತದೆ ಮತ್ತು ಅಗತ್ಯ ನಮೂದುಗಳನ್ನು ಮಾಡಬೇಕಾಗುತ್ತದೆ. ತೆರಿಗೆ ನಿರ್ಧರಣೆ ವರ್ಷ 2012-13 ಮತ್ತು 2014-15ರ ಸಾಲಿನಲ್ಲಿ ಪುಸ್ತಕಗಳಲ್ಲಿ ರೂ.48.88 ಲಕ್ಷಗಳ ಮೊತ್ತದ ಬಾಕಿಯಿರುವುದು. ಅದರೆ ಯಾವುದೇ ಡಿಮ್ಯಾಂಡ್ ಬಾಕಿಯಿರುವುದಿಲ್ಲ. ತೆರಿಗೆ ನಿರ್ಧರಣೆ ವರ್ಷ 2013-14ಕ್ಕೆ ರೂ.76.56 ಲಕ್ಷಗಳನ್ನು ಮರುಪಾವತಿಯಾಗಬೇಕಿರುವುದು ಎಂದು ತಿಳಿಸಿದೆ. ಅದರೆ ಮರುಪಾವತಿಯನ್ನು ಹಿಂದಿನ ವರ್ಷಗಳ ಡಿಮ್ಯಾಂಡ್ ಗೆ ಹೊಂದಾಣಿಕೆ ಮಾಡಿದೆ. ಇದನ್ನು ಕಂಪನಿ ಆಕ್ಸೆಪಿಸಿರುವುದಿಲ್ಲ. ಇದರ ಸಂಯೋಜಿತ ಪರಿಣಾಮದಿಂದ ವರ್ಷದ ಲಾಭವು ರೂ.29.68 ಲಕ್ಷಗಳಷ್ಟು ಹೆಚ್ಚಾಗುವುದು ಮತ್ತು ಚಾಲ್ತಿ ತೆರಿಗೆ ಆಸ್ತಿಗಳು ಇದೇ ಪ್ರಮಾಣದಷ್ಟು ಹೆಚ್ಚಳವಾಗಿದೆ.	ಹಣಕಾಸಿನ ವರ್ಷ 2012-13(ಲೆಕ್ಕಪತ್ರದ ವರ್ಷ 2013-14)ಕ್ಕೆ ವಸೂಲಿ ಮಾಡಬಹುದಾದ ಆದಾಯ ತೆರಿಗೆ ರೂ.76.56ಲಕ್ಷ ಎಂಬುದಾಗಿ ಪುಸ್ತಕಗಳಲ್ಲಿ ತಿಳಿಸಿದೆ. ನಾವು ನಮ್ಮ ಬ್ಯಾಂಕ್ ಖಾತೆಗೆ ಮರುಪಾವತಿ ಪಡೆದಿರುವುದಿಲ್ಲ. ಆದಾಯ ತೆರಿಗೆ ಇಲಾಖೆಯಿಂದ ವಿವರಗಳನ್ನು ಪಡೆಯುವ ಪ್ರಕ್ರಿಯೆಯಲ್ಲಿ ನಾವು ತೊಡಗಿದ್ದೇವೆ. ಮೇಲ್ಮನವಿಯಲ್ಲಿರುವ ವಿವಿಧ ತೆರಿಗೆ ನಿರ್ಧರಣೆ ವರ್ಷಗಳ ಡಿಮ್ಯಾಂಡ್ ಪರವಾಗಿ ಮರುಪಾವತಿಯನ್ನು ಹೊಂದಾಣಿಕೆ ಮಾಡಬಹುದಾದ ಸಾಧ್ಯತೆಯಿದೆ. 2023-24ರ ವರ್ಷದ ಅವಧಿಯಲ್ಲಿ ಸಮಂಜಸತೆ ನಂತರ ಯಾವುದೇ ಇದ್ದಲ್ಲಿ ಅಂತಹ ಅಗತ್ಯ ನಮೂದುಗಳನ್ನು ಪುಸ್ತಕದಲ್ಲಿ ಮಾಡಲಾಗುವುದು.
ಎಫ್. ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗದಲ್ಲಿ, ಕಂಪನಿಯು ಟೂರ್ಸ್ ಅಂಡ್ ಟ್ರಾವೆಲ್ಸ್ ಸೇವೆಗಳಿಗಾಗಿ ಕೆಲವು ಮುಂಗಡಗಳನ್ನು ಪಡೆದಿದೆ. ಕಂಪನಿಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಕರ್ನಾಟಕ ಮತ್ತು ಸಂಬಂಧಪಟ್ಟ ಸೇವಾ ಪೂರೈಕೆದಾರರುಗಳ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಿತ್ತು. ಕಂಪನಿಯು ಕಾಗದದ ವಿಭಾಗದಿಂದ ಆರ್‌ಜಿಯುಎಚ್‌ಎಸ್‌ಗೆ ಸರಬರಾಜುಗಳನ್ನು ಸಹ ಮಾಡಿದೆ. ಕಂಪನಿ ಮತ್ತು ಆರ್‌ಜಿಯುಎಚ್‌ಎಸ್ ಹಾಗೂ ಸಂಬಂಧಪಟ್ಟ ಸೇವೆ ಪೂರೈಕೆದಾರರ ನಡುವೆ ವಿವಾದಗಳು ಉಂಟಾಗಿರುವುದರಿಂದ, ಆರ್‌ಜಿಯುಎಚ್‌ಎಸ್ ಮತ್ತು ಸೇವೆ ಪೂರೈಕೆದಾರರುಗಳ ಬರಬೇಕಾಗಿರುವ ಮತ್ತು ಪಾವತಿ ಮಾಡಬೇಕಾಗಿರುವ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗಿರುತ್ತದೆ. ಕಂಪನಿಯು ಈ ವಿಚಾರದಲ್ಲಿ ವಸೂಲಾಗದ ಮತ್ತು ಸಂದೇಹಾಸ್ಪದವಾದ ಸಾಲಗಳಿಗೆ ರೂ.200 ಲಕ್ಷಗಳ ಮೊತ್ತದ ವ್ಯವಸ್ಥೆ ಮಾಡಿದೆ. ಸಮಂಜಸತೆ ವಿವರಣೆಗಳು ಇಲ್ಲದಿರುವ ಪ್ರಯುಕ್ತ ಇದರಿಂದ ಉಂಟಾಗಬಹುದಾದ ಪರಿಣಾಮವನ್ನು ತಿಳಿಯಲಾಗದು.	ಯೋಜನೆಯು ಬಹಳ ಹಿಂದೆಯೇ ಪೂರ್ಣಗೊಂಡಿರುವುದರಿಂದ, ಇದಕ್ಕೆ ಸಂಬಂಧಿಸಿದ ಲೆಕ್ಕಗಳು ಇತ್ಯರ್ಥವಾಗದಿರುವ ಪ್ರಮುಖ ಯೋಜನೆಗೆ ಸಂಬಂಧಿಸಿದ ಲೆಕ್ಕಗಳನ್ನು ಸಮಂಜಸತೆ ಮಾಡುವಂತೆ ಕೋರಿ ಈ ವಿಭಾಗವು ಅನೇಕ ಪತ್ರಗಳನ್ನು ಬರೆದಿದೆ, ಅನೇಕ ಇ-ಮೇಲ್‌ಗಳನ್ನು ಕಳುಹಿಸಿದೆ ಮತ್ತು ಅನೇಕ ವೇಳೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ (ಆರ್‌ಜಿಯುಎಚ್‌ಎಸ್) ಇಲ್ಲಿಗೆ ಭೇಟಿ ಮಾಡಿದೆ ಹಾಗೂ ಅಗಿನ ಉಪ ಕುಲಪತಿಗಳೂ, ಕುಲಸಚಿವರು ಮತ್ತು ಮೇಲ್ವಿಚಾರಣೆ ಅಧಿಕಾರಿಗಳು/ಲೆಕ್ಕಪತ್ರದ ವಿಭಾಗದೊಡನೆ ಸಭೆ ನಡೆಸಿದೆ. 2021-22ರ ವರ್ಷದ ಅವಧಿಯಲ್ಲಿ, ಕಂಪನಿಯು ಮೇಲೆ ತಿಳಿಸಿರುವ ವ್ಯವಹಾರದ ಬಗ್ಗೆ ಕಂಪನಿಯು ರೂ.200.00 ಲಕ್ಷಗಳ ಮೊತ್ತದ ವ್ಯವಸ್ಥೆ ಮಾಡಿದೆ. 2023-24ರ ವರ್ಷದ ಅವಧಿಯಲ್ಲಿ ಈ ಬಗ್ಗೆ ಸಮಂಜಸತೆ ಮಾಡಲಾಗುವುದು ಮತ್ತು ಲೆಕ್ಕದ ಪುಸ್ತಕಗಳಲ್ಲಿ ಅಗತ್ಯ ನಮೂದುಗಳನ್ನು ಮಾಡುವುದು.
ಜಿ. ಕಂಪನಿಯು ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ಆದಾಯವನ್ನು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ. ಆದರೆ, ಲೆಕ್ಕಾಚಾರ ಮಾಡುವುದರಲ್ಲಿ ತಪ್ಪುಗಳು ಉಂಟಾಗಿರುವುದರಿಂದ, ಸದರಿ ವರ್ಷದಲ್ಲಿ ಮಾನ್ಯ ಮಾಡಿರುವ ಬಡ್ಡಿ ಆದಾಯವು ರೂ.31.54 ಲಕ್ಷಗಳಷ್ಟು ಕಡಿಮೆಯಾಗಿರುವುದು. ಈ ಕಾರಣದಿಂದ ಮತ್ತು ಇತರೆ ತಪ್ಪುಗಳಿಂದ ಚಾಲ್ತಿ ಆಸ್ತಿಗಳ ಅಡಿಯಲ್ಲಿನ ನಗದು ಮತ್ತು ನಗದು ಸಮಾನತೆಗಳು ಹೊರತಾದಂತೆ ಬ್ಯಾಂಕ್ ಶಿಲ್ಕುಗಳನ್ನು ರೂ.32.80 ಲಕ್ಷಗಳ ಮೊತ್ತದಷ್ಟು ಕಡಿಮೆಯಾಗಿ ತಿಳಿಸಿದೆ.	ಈ ವ್ಯತ್ಯಾಸವು ಹಲವಾರು ವರ್ಷಗಳಿಂದ ಸಂಚಯನವಾದ ಅಂಕಿಗಳಾಗಿರುವವು. ಕೆಲವು ನಿಶ್ಚಿತ ಠೇವಣಿಗಳ ವಿಚಾರದಲ್ಲಿ ಎಕ್ಸೆಲ್ ಶೀಟ್‌ನಲ್ಲಿನ ಫಾರ್ಮುಲದಲ್ಲಿನ ತಪ್ಪಿನಿಂದಾಗಿ ಈ ತಪ್ಪು ಉಂಟಾಗಿದೆ. ಚಿಟ್‌ಫಂಡ್ ವಿಭಾಗದಲ್ಲಿ ವಿವಿಧ ಚಿಟ್ ಗ್ರೂಪ್‌ನ (ಸಣ್ಣ ಅಂಕಿಗಳು ಸೇರಿದಂತೆ) 1200ಕ್ಕೂ ಹೆಚ್ಚಿನ ಶಾಸನಬದ್ಧ ನಿಶ್ಚಿತ ಠೇವಣಿಗಳನ್ನು ಹೊಂದಿರುವುದರಿಂದ ಈ ರೀತಿಯ ತಪ್ಪುಗಳು ಉಂಟಾಗಿವೆ. ಇದನ್ನು ಈಗ ಸಮಂಜಸತೆ ಮಾಡಲಾಗಿದೆ ಮತ್ತು ಹಣಕಾಸಿನ ವರ್ಷ 2023-24ರಲ್ಲಿ ಅಗತ್ಯ ನಮೂದುಗಳನ್ನು ಮಾಡಲಾಗುವುದು.



ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ''ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ'' ನೀಡಿದ ರೂ.2.00 ಕೋಟಿ ಮೊತ್ತದ ಚೆಕ್ ಅನ್ನು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಎಂಎಸ್‌ಐಎಲ್‌ನ ಅಧ್ಯಕ್ಷರೂ ಆದ ಶ್ರೀ ಎಂ.ಬಿ.ಪಾಟೀಲ್‌ರವರು ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಗೆ ಹಸ್ತಾಂತರಿಸಿದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಸೆಲ್ವಕುಮಾರ್, ಭಾ.ಆ.ಸೇ, ಎಂಎಸ್‌ಐಎಲ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮನೋಜ್‌ಕುಮಾರ್ ಭಾ.ಆ.ಸೇ, ಮತ್ತು ಎಂಎಸ್‌ಐಎಲ್‌ನ ಹಿರಿಯ ಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿರುವರು.

2023ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇದರ ಹಣಕಾಸಿನ ಹೇಳಿಕೆಗಳ ಬಗ್ಗೆ 2013ರ ಕಂಪನಿಗಳ ಕಾಯ್ದೆಯ ಪ್ರಕರಣ 143(6)(ಬಿ)ರ ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆಗಳು

2013ರ ಕಂಪನಿಗಳ ಕಾಯ್ದೆಯಡಿಯಲ್ಲಿ (ಕಾಯ್ದೆ) ನಿಗದಿಪಡಿಸಿರುವ ಹಣಕಾಸು ವರದಿ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2023ಕ್ಕೆ** ಕೊನೆಗೊಂಡ ವರ್ಷಕ್ಕೆ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪ್ರಕರಣ 139(5)ರನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಂದ ನೇಮಕಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಬಗೆಗಿನ ಗುಣಮಟ್ಟದ ಅನುಸಾರ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ, ಕಾಯ್ದೆಯ ಪ್ರಕರಣ 143ರ ಅನ್ವಯ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೊಣೆಯಾಗಿರುತ್ತಾರೆ. **ದಿನಾಂಕ 27ನೇ ಡಿಸೆಂಬರ್ 2023ರ** ಅವರ ಪರಿಷ್ಕೃತ ಲೆಕ್ಕಪರಿಶೋಧನೆ ವರದಿಯಂತೆ ಅವರಿಂದ ಇದನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ. ಸದರಿ ವರದಿಯು **ದಿನಾಂಕ 29ನೇ ನವೆಂಬರ್ 2023 ರ** ನಮ್ಮ ಈ ಮೊದಲಿನ ಲೆಕ್ಕಪರಿಶೋಧನೆ ವರದಿಯನ್ನು ರದ್ದು ಮಾಡಿರುವುದು.

ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಪರವಾಗಿ, ನಾನು **31ನೇ ಮಾರ್ಚ್ 2023ಕ್ಕೆ** ಕೊನೆಗೊಂಡ ವರ್ಷದ **''ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು''ನ** ಹಣಕಾಸು ಹೇಳಿಕೆಗಳ ಬಗ್ಗೆ ಕಾಯ್ದೆಯ ಪ್ರಕರಣ 143(6)(ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಬಳಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿ ವಿಚಾರಣೆಗಳಿಗೆ ಮತ್ತು ಕೆಲವು ಆಯ್ದ ಲೆಕ್ಕಪತ್ರಗಳ ದಾಖಲೆಗಳ ಪರಿಶೀಲನೆಗೆ ಸೀಮಿತವಾಗಿರುತ್ತದೆ.

ಪೂರಕ ಲೆಕ್ಕಪರಿಶೋಧನೆ ಅವಧಿಯಲ್ಲಿ ತಿಳಿಸಿದ ನನ್ನ ಕೆಲವು ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಒತ್ತು ನೀಡಲು '**ಶಾಸನಬದ್ಧ ಲೆಕ್ಕಪರಿಶೋಧಕರ ವರದಿ**'ಯಲ್ಲಿ ಮಾಡಿರುವ ಪರಿಷ್ಕರಣೆಗಳ ಹಿನ್ನೆಲೆಯಲ್ಲಿ ಇದರ ಮೇಲೆ ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ಕಾಯ್ದೆಯ ಪ್ರಕರಣ 143(6)(ಬಿ) ಅನ್ವಯ ನಾನು ಯಾವುದೇ ಹೆಚ್ಚಿನ ಟೀಕೆಗಳನ್ನು ಮಾಡುವುದಿಲ್ಲ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ
ಪರವಾಗಿ ಮತ್ತು ಹೆಸರಿನಲ್ಲಿ
ಸಹಿ/-
(ವಿಮಲೇಂದ್ರ ಎ.ಪಟ್ವರ್ಧನ್)
ಕಾರ್ಯನಿರತ ಅಕೌಂಟೆಂಟ್ ಜನರಲ್ (ಆಡಿಟ್-II)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ : 12.01.2024

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

CIN:U85110KA1966SGC001612

31ನೇ ಮಾರ್ಚ್ 2023ರಂದು ಇದ್ದಂತೆ ಸ್ವತಂತ್ರ ಸ್ಥಿತಿ ವಿವರಣಾ ಪಟ್ಟಿ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
i.	**ಆಸ್ತಿಗಳು**			
	ಚಾಲ್ತಿಯೇತರ ಆಸ್ತಿಗಳು			
	(ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ	2	4,796.96	3,938.37
	(ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ	3	592.83	397.04
	(ಸಿ) ಹೂಡಿಕೆ ಸ್ವತ್ತುಗಳು	4	3,847.40	3,965.64
	(ಡಿ) ಇತರೆ ಅಗೋಚರ ಆಸ್ತಿಗಳು	5		0.85
	(ಇ) ಬಳಕೆ ಹಕ್ಕಿನ ಆಸ್ತಿಗಳು	5ಎ	737.64	1,028.26
	(ಎಫ್) ಹಣಕಾಸಿನ ಆಸ್ತಿಗಳು			
	(i) ಹೂಡಿಕೆಗಳು	6	3,002.35	3,021.36
	(ii) ಇತರೆ ಹಣಕಾಸಿನ ಆಸ್ತಿಗಳು	7	16,590.89	12,437.45
	(iii) ಚಾಲ್ತಿಯೇತರ ಬ್ಯಾಂಕ್ ಶಿಲ್ಕುಗಳು	12	4,170.72	1,414.74
	(ಜಿ) ಮುಂದೂಡಿದ ತೆರಿಗೆ ಆಸ್ತಿಗಳು (ನಿವ್ವಳ)	29	1,363.43	1,299.62
	(ಎಚ್) ಇತರೆ ಚಾಲ್ತಿಯೇತರ ಆಸ್ತಿಗಳು	8	68.60	597.40
	ಒಟ್ಟು ಚಾಲ್ತಿಯೇತರ ಆಸ್ತಿಗಳು		**35,170.82**	**28,100.73**
	ಚಾಲ್ತಿ ಆಸ್ತಿಗಳು			
	(ಎ) ತಪಶೀಲುಗಳು	9	15,062.08	14,449.87
	(ಬಿ) ಹಣಕಾಸಿನ ಆಸ್ತಿಗಳು			
	(i) ವ್ಯಾಪಾರದಿಂದ ಬರಬೇಕಾಗಿರುವುದು	10	3,912.11	8,404.24
	(ii) ನಗದು ಮತ್ತು ನಗದು ಸಮಾನಗಳು	11	4,181.43	8,409.14
	(iii) ಮೇಲಿನ (ii) ಹೊರತಾಗಿ ಬ್ಯಾಂಕ್ ಶಿಲ್ಕುಗಳು	12	20,287.90	15,633.87
	(iv) ಇತರೆ ಹಣಕಾಸಿನ ಆಸ್ತಿಗಳು	7	12,365.78	10,746.12
	(ಸಿ) ಇತರೆ ಚಾಲ್ತಿ ಆಸ್ತಿಗಳು	8	7,406.21	5,550.35
	(ಡಿ) ಮಾರಾಟಕ್ಕೆ ಇಟ್ಟಿರುವ ಆಸ್ತಿಗಳು	30	5.00	5.00
	(ಇ) ಚಾಲ್ತಿ ತೆರಿಗೆ ಆಸ್ತಿ (ನಿವ್ವಳ)	8ಎ	437.44	1,148.68
	ಒಟ್ಟು ಚಾಲ್ತಿ ಆಸ್ತಿಗಳು		**63,657.95**	**64,347.26**
	ಒಟ್ಟು ಆಸ್ತಿಗಳು		**98,828.77**	**92,447.99**

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
ii	**ಈಕ್ವಿಟಿ ಮತ್ತು ಹೊಣೆಗಾರಿಕೆಗಳು**			
	ಈಕ್ವಿಟಿ			
	(ಎ) ಈಕ್ವಿಟಿ ಷೇರು ಬಂಡವಾಳ	13	4,273.48	4,273.48
	(ಬಿ) ಇತರೆ ಈಕ್ವಿಟಿ	14	52,271.94	47,283.91
	ಒಟ್ಟು ಈಕ್ವಿಟಿ		**56,545.42**	**51,557.39**
	ಹೊಣೆಗಾರಿಕೆಗಳು			
	ಚಾಲ್ತಿಯೇತರ ಹೊಣೆಗಾರಿಕೆಗಳು			
	(ಎ) ಹಣಕಾಸಿನ ಹೊಣೆಗಾರಿಕೆಗಳು			
	(i) ಗುತ್ತಿಗೆ ಹೊಣೆಗಾರಿಕೆಗಳು	15	342.75	462.31
	(ii) ಇತರೆ ಹಣಕಾಸಿನ ಹೊಣೆಗಾರಿಕೆಗಳು	15	17,706.03	9,553.23
	(ಬಿ) ವ್ಯವಸ್ಥೆಗಳು	16	1,508.83	1,478.86
	(ಸಿ) ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು (ಒಟ್ಟು)	29		
	(ಸಿ) ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳು	17	–	–
	ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು		**19,557.61**	**11,494.40**
	ಚಾಲ್ತಿ ಹೊಣೆಗಾರಿಕೆಗಳು			
	(ಎ) ಹಣಕಾಸು ಹೊಣೆಗಾರಿಕೆಗಳು			
	(i) ವ್ಯಾಪಾರ ಸಂಬಂಧ ಪಾವತಿ ಮಾಡಬೇಕಾಗಿರುವುದು	18		
	(ಎ) ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಒಟ್ಟು ಬಾಕಿಯಿರುವ ಮೊತ್ತ		2,647.61	514.52
	(ಬಿ) ಮೇಲಿನ (i)(ಎ) ಹೊರತಾಗಿ ಒಟ್ಟು ಬಾಕಿಯಿರುವ ಮೊತ್ತ		8,317.74	9,593.35
	(ii) ಗುತ್ತಿಗೆ ಹೊಣೆಗಾರಿಕೆಗಳು	15	382.77	619.57
	(iii) ಇತರೆ ಹಣಕಾಸಿನ ಹೊಣೆಗಾರಿಕೆಗಳು	15	9,756.79	17,280.30
	(ಬಿ) ಇತರೆ ಚಾಲ್ತಿ ಹೊಣೆಗಾರಿಕೆಗಳು	17	1,361.55	1,006.65
	(ಸಿ) ವ್ಯವಸ್ಥೆಗಳು	16	**259.28**	**381.81**
	ಒಟ್ಟು ಚಾಲ್ತಿ ಹೊಣೆಗಾರಿಕೆಗಳು		**22,725.74**	**29,396.20**
	ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು		**98,828.77**	**92,447.99**

ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು 1.2

ಮೇಲೆ ಉಲ್ಲೇಖಿಸಿರುವ ಒಡಗೂಡಿದ ಟಿಪ್ಪಣಿಗಳು ಹಣಕಾಸು ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುತ್ತದೆ.

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/–
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/–
ಎಂ.ಬಿ.ಪಾಟೀಲ
ಅಧ್ಯಕ್ಷರು
ಡಿನ್ ಸಂಖ್ಯೆ : 02558869

ಸಹಿ/–
ಎ.ಎಂ. ಚಂದ್ರಪ್ಪ
ಮುಖ್ಯ ಹಣಕಾಸು ಅಧಿಕಾರಿ

ಸಹಿ/–
ಮನೋಜ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/–
ಶ್ರೀದೇವಿ ಬಿ.ಎನ್
ಕಂಪನಿ ಕಾರ್ಯದರ್ಶಿ

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

CIN:U85110KA1966SGC001612

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ಸ್ವತಂತ್ರ ವಿವರಣಾ ಪಟ್ಟಿ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
	ಮುಂದುವರೆಯುತ್ತಿರುವ ಕಾರ್ಯಾಚರಣೆಗಳು			
	ಕಾರ್ಯಾಚರಣೆಗಳಿಂದ ಬಂದ ಆದಾಯ	19	282,499.26	260,863.56
	ಇತರೆ ಆದಾಯ	20	3,094.28	1,875.95
	ಒಟ್ಟು ಆದಾಯ		**285,593.54**	**262,739.51**
	ಖರ್ಚುಗಳು			
	ಬಳಸಿರುವ ಸಾಮಗ್ರಿಗಳ ಬೆಲೆ	21	1,767.00	1,359.01
	ವ್ಯಾಪಾರದ ಸರಕಿನ ಖರೀದಿ	22	252,556.60	236,138.70
	ಸಿದ್ಧಪಡಿಸಿದ ಸರಕುಗಳ ಮತ್ತು ವ್ಯಾಪಾರಿ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು	23	(523.75)	(2,007.48)
	ನೌಕರರ ಸೌಲಭ್ಯ ವೆಚ್ಚಗಳು	24	1,860.32	2,043.25
	ಹಣಕಾಸಿನ ವೆಚ್ಚಗಳು	25	179.92	162.13
	ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು	26	1,834.44	1,761.90
	ದುರ್ಬಲತೆ ನಷ್ಟಗಳು	28		
	ಇತರೆ ಖರ್ಚುಗಳು	27	**19,839.72**	**17,956.09**
	ಒಟ್ಟು ಖರ್ಚುಗಳು		**277,514.25**	**257,413.60**
	ಮುಂದುವರೆಯುತ್ತಿರುವ ಕಾರ್ಯಾಚರಣೆಗಳ ಅಸಾಧಾರಣ ಐಟಂಗಳು ಮತ್ತು ತೆರಿಗೆಗೆ ಮುನ್ನ ಲಾಭ		**8,079.29**	**5,325.91**
	ಅಸಾಧಾರಣ ಐಟಂಗಳು	41		**(3,460.54)**
	ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಂದ ತೆರಿಗೆಗೆ ಮುನ್ನ ಲಾಭ		**8,079.29**	**8,786.45**
	ತೆರಿಗೆ ಖರ್ಚುಗಳು	29		
	(1) ಚಾಲ್ತಿ ತೆರಿಗೆ		2,019.71	1,950.00
	(2) ಮುಂದೂಡಿದ ತೆರಿಗೆ		(65.72)	(308.94)
	(3) ಹಿಂದಿನ ಅವಧಿಗಳಿಗೆ ಸಂಬಂಧಿಸಿದಂತೆ ತೆರಿಗೆಗೆ ಹೊಂದಾಣಿಕೆ		35.29	
	ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಬಂದ ವರ್ಷದ ಲಾಭ		**6,090.01**	**7,145.39**
	ಸ್ಥಗಿತವಾದ ಕಾರ್ಯಾಚರಣೆಗಳು	30		
	ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ ವರ್ಷದ ತೆರಿಗೆ ಪಾವತಿಗೆ ಮುನ್ನಿನ ಲಾಭ /(ನಷ್ಟ)		(2.81)	(0.90)
	ಸ್ಥಗಿತಗೊಂಡ ಕಾರ್ಯಾಚರಣೆಗಳ ತೆರಿಗೆ ಆದಾಯ /(ಖರ್ಚು)			
	ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ವರ್ಷದಲ್ಲಿ ಆದ ಲಾಭ/(ನಷ್ಟ)		**(2.81)**	**(0.90)**
	ವರ್ಷದ ಲಾಭ		**6,087.20**	**7,144.49**

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
	ಇತರೆ ಸಮಗ್ರ ಆದಾಯ			
	ಎ) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳು	31		
	ಇತರೆ ಸಮಗ್ರ ಆದಾಯದ ಮೂಲಕ ಈಕ್ವಿಟಿ ಸಾಧನಗಳ ಮೇಲೆ ನಿವ್ವಳ(ನಷ್ಟ) /ಲಾಭ		(19.00)	(384.82)
	ಆದಾಯ ತೆರಿಗೆ ಪರಿಣಾಮ		4.78	–
	ನಿರೂಪಿತ ಸೌಲಭ್ಯ ಯೋಜನೆಗಳ ಮೇಲಿನ ಮರುಮಾಪನ ಮಾಡಿದ ಲಾಭಗಳು/ (ನಷ್ಟಗಳು)		26.61	(110.32)
	ಆದಾಯ ತೆರಿಗೆ ಪರಿಣಾಮ		(6.69)	
	ವರ್ಷದ ಒಟ್ಟು ಇತರೆ ಸಮಗ್ರ ಆದಾಯ, ತೆರಿಗೆಯ ನಿವ್ವಳ		**5.70**	**(495.14)**
	ವರ್ಷದ ಒಟ್ಟು ಸಮಗ್ರ ಆದಾಯ		**6,092.90**	**6,649.35**
	ನಿರಂತರ ಕಾರ್ಯಾಚರಣೆಯ ಷೇರು ಒಂದರ ಗಳಿಕೆಗಳು	32		
	ಮೂಲ (ರೂ)		142.51	167.20
	ದ್ರವೀಕೃತ (ರೂ)		142.51	167.20
	ಸ್ಥಗಿತಗೊಂಡ ಕಾರ್ಯಾಚರಣೆ ಬಗ್ಗೆ ಷೇರು ಒಂದರ ಗಳಿಕೆ	32		
	ಮೂಲ (ರೂ)		(0.07)	(0.02)
	ದ್ರವೀಕೃತ (ರೂ)		(0.07)	(0.02)
	ಮುಂದುವರಿದ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಷೇರು ಒಂದರ ಗಳಿಕೆಗಳು	32		
	ಮೂಲ (ರೂ)		142.44	167.18
	ದ್ರವೀಕೃತ (ರೂ)		142.44	167.18

ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು 1.2
ಒಡಗೂಡಿದ ಟಿಪ್ಪಣಿಗಳು ಹಣಕಾಸು ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುತ್ತದೆ.

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/–
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/–	ಸಹಿ/–
ಎಂ.ಬಿ.ಪಾಟೀಲ	ಮನೋಜ್‌ಕುಮಾರ್
ಅಧ್ಯಕ್ಷರು	ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ : 02558869	ಡಿನ್ ಸಂಖ್ಯೆ :09379177
ಸಹಿ/–	ಸಹಿ/–
ಎ.ಎಂ. ಚಂದ್ರಪ್ಪ	ಶ್ರೀದೇವಿ ಬಿ.ಎನ್
ಮುಖ್ಯ ಹಣಕಾಸು ಅಧಿಕಾರಿ	ಕಂಪನಿ ಕಾರ್ಯದರ್ಶಿ

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

CIN:U85110KA1966SGC001612

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ನಗದು ಹರಿವಿನ ವಿವರ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುತ್ತವೆ)

ವಿವರಗಳು	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆ		
ಲಾಭ ಮತ್ತು ನಷ್ಟದ ಹೇಳಿಕೆ ಅನ್ವಯ ತೆರಿಗೆಗೆ ಮತ್ತು ಅಸಾಧಾರಣ ಐಟಂಗಳ ಮುನ್ನ ಲಾಭ	**8,076.48**	**8,785.55**
ಇವುಗಳಿಗೆ ಹೊಂದಾಣಿಕೆ:		
ಲಾಭಾಂಶ	(280.69)	(78.82)
ಮುಂದೆ ಅಗತ್ಯವಿಲ್ಲದ ಸಂದೇಹಾಸ್ಪದ ಸಾಲಗಳಿಗೆ ವ್ಯವಸ್ಥೆ	(131.13)	(15.32)
ಬಡ್ಡಿ ಆದಾಯ	(1,270.79)	(858.39)
ಸ್ವತ್ತು , ಸ್ಥಾವರ ಮತ್ತು ಉಪಕರಣ ಮಾರಾಟದಿಂದ ಬಂದ ಲಾಭ	(6.11)	(1.67)
ಬಾಡಿಗೆ	(855.40)	(666.76)
ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು	1,834.45	1,761.90
ಹಣಕಾಸಿನ ವೆಚ್ಚಗಳು	179.92	162.13
ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳು		
ಸಂದೇಹಾಸ್ಪದವಾದ ಸಾಲಗಳು ಮತ್ತು ಮುಂಗಡಗಳಿಗೆ ಅವಕಾಶಗಳು	245.94	1,000.83
ಇತರೆ ಹಣಕಾಸಿನ ಆಸ್ತಿಗಳ ಮೌಲ್ಯದಲ್ಲಿನ ದುರ್ಬಲತೆ ನಷ್ಟ	6.83	44.13
ಪ್ರತಿಪಾದಿತ ಸೌಲಭ್ಯ ಯೋಜನೆಗಳ ಮರು ಮಾಪನ ಲಾಭ (ನಷ್ಟಗಳು)	26.61	(110.32)
ಅಸಾಧಾರಣ ಐಟಂಗಳು		3,460.54
ಡೆಟಾರ್ ಪಿವೈ ಪರಿಣಾಮ		
ಜಂಟಿ ವ್ಯವಸ್ಥೆಗಳಿಂದ ಬಂದ ಲಾಭದ ಪಾಲು		
ದುಡಿಮೆ ಬಂಡವಾಳ ಬದಲಾವಣೆಗೆ ಮುನ್ನ ಕಾರ್ಯಾಚರಣೆ ಲಾಭ	**7,826.13**	**13,483.80**
ದುಡಿಮೆ ಬಂಡವಾಳದಲ್ಲಿನ ಬದಲಾವಣೆಗಳು		
ಇವುಗಳಗಳಲ್ಲಿನ ಹೆಚ್ಚಳ/(ಇಳಿಕೆ) ಹೊಂದಾಣಿಕೆಗಳು		
ವ್ಯಾಪಾರದಿಂದ ಬರಬೇಕಾಗಿರುವುದು	4,623.26	(3,751.38)
ಸರಕಿನ ತಪಶೀಲು	(612.21)	(1,794.78)
ಇತರೆ ಆಸ್ತಿಗಳು	(1,327.06)	(1,806.36)
ಇತರೆ ಹಣಕಾಸಿನ ಆಸ್ತಿಗಳು	(5,527.18)	(2,301.97)
ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು	857.48	1,951.59
ಇತರೆ ಹೊಣೆಗಾರಿಕೆಗಳು	259.19	(6,919.40)
ಇತರೆ ಹಣಕಾಸಿನ ಹೊಣೆಗಾರಿಕೆಗಳು	662.14	5,532.04
ವ್ಯವಸ್ಥೆಗಳು	**(92.55)**	**36.94**
ಕಾರ್ಯಾಚರಣೆಗಳಿಂದ ಉತ್ಪತ್ತಿಯಾಗಿರುವ ನಗದು	**6,669.20**	**4,430.49**
ಪಾವತಿಸಿದ ತೆರಿಗೆ, ನಿವ್ವಳ	(1,986.15)	(2,490.51)
ಕಾರ್ಯಾಚರಣೆ ಚಟುವಟಿಕೆಗಳಿಂದ ಉತ್ಪತ್ತಿಯಾಗಿರುವ ನಿವ್ವಳ ನಗದು	**4,683.05**	**1,939.98**

ವಿವರಗಳು	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
ಬಿ. ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು		
ಸ್ವತ್ತು , ಸ್ಥಾವರ ಮತ್ತು ಉಪಕರಣ ಖರೀದಿ (ಬಂಡವಾಳ ಮುಂಗಡಗಳು ಸೇರಿದಂತೆ)	(2,093.24)	(1,407.70)
ಸರ್ಕಾರದ ಅನುದಾನ		
ನಗದು ಮತ್ತು ನಗದು ಸಮಾನತೆಗಳು ಹೊರತಾದ ಬ್ಯಾಂಕ್ ಶಿಲ್ಕುಗಳ ಚಲನೆ	(7,410.01)	887.45
ಸ್ವತ್ತು , ಸ್ಥಾವರ ಮತ್ತು ಉಪಕರಣ ಮಾರಾಟದಿಂದ ಬಂದ ಹಣ	27.10	5.07
ಹೂಡಿಕೆಗಳ (ಖರೀದಿ/ಮಾರಾಟ/ಜಂಟಿ ವ್ಯವಸ್ಥೆಗಳಿಂದ ಬಂದ ಲಾಭದ ಪಾಲು		(0.01)
ಹೂಡಿಕೆ ಆದಾಯ (ಹೂಡಿಕೆ ಸ್ವತ್ತಿನ ಮೇಲಿನ ಬಾಡಿಗೆ ಆದಾಯ)	855.40	451.64
ಪಡೆದಿರುವ ಬಡ್ಡಿ	1,241.65	845.62
ಪಡೆದಿರುವ ಲಾಭಾಂಶ	280.69	78.82
ಹೂಡಿಕೆ ಚಟುವಟಿಕೆಗಳಲ್ಲಿ (ಬಳಸಿರುವ) / ಉತ್ಪತ್ತಿಯಾಗಿರುವ ನಿವ್ವಳ ನಗದು	**(7,098.41)**	**860.89**
ಸಿ.ಹಣಕಾಸಿನ ಚಟುವಟಿಕೆಗಳಿಂದ ಆದ ನಗದು ಹರಿವು		
ಪಾವತಿಸಿದ ಹಣಕಾಸಿನ ವೆಚ್ಚ	(76.08)	(39.18)
ಗುತ್ತಿಗೆ ಪಾವತಿಯ ಆಸಲು ಎಲಿಮೆಂಟ್	(631.08)	(794.72)
ಪಾವತಿ ಮಾಡಿದ ಲಾಭಾಂಶ	(1,105.19)	(320.51)
ಪಾವತಿ ಮಾಡಿದ ಲಾಭಾಂಶ ವಿತರಣೆ ತೆರಿಗೆ		
ಹಣಕಾಸಿನ ಚಟುವಟಿಕೆಗಳಲ್ಲಿ ಬಳಸಿದ ನಿವ್ವಳ ನಗದು	**(1,812.35)**	**(1,154.40)**
ನಗದು ಮತ್ತು ನಗದು ಸಮಾನತೆಗಳಲ್ಲಿನ ನಿವ್ವಳ ಬದಲಾವಣೆ	**(4,227.71)**	**1,646.47**
ವರ್ಷದ ಆರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು	8,409.14	6,762.67
ವರ್ಷದ ಕೊನೆಯಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು	**4,181.43**	**8,409.14**
ಇದರೊಡಗಿನ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವವು 1.2		

ಹಣಕಾಸಿನ ಚಟುವಟಿಕೆಗಳಿಂದ ಉಂಟಾದ ಹೊಣೆಗಾರಿಕೆಗಳಲ್ಲಿನ ಬದಲಾವಣೆ

ವಿವರಗಳು	01.04.2022	ನಗದು ಹರಿವು	ಇತರೆ	31.3.2023
ಗುತ್ತಿಗೆ ಹೊಣೆಗಾರಿಕೆ	1,081.88	(631.08)	274.73	725.52
ವಿವರಗಳು	**01.04.2021**	**ನಗದು ಹರಿವು**	**ಇತರೆ**	**31.3.2022**
ಗುತ್ತಿಗೆ ಹೊಣೆಗಾರಿಕೆ	1,397.26	(794.72)	479.34	1,081.88

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-	ಸಹಿ/-	ಸಹಿ/-
ಎಂ.ಬಿ.ಪಾಟೀಲ	ಎ.ಎಂ. ಚಂದ್ರಪ್ಪ	ಮನೋಜ್‌ಕುಮಾರ್
ಅಧ್ಯಕ್ಷರು	ಮುಖ್ಯ ಹಣಕಾಸು ಅಧಿಕಾರಿ	ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ : 02558869		ಡಿನ್ ಸಂಖ್ಯೆ :09379177
	ಸಹಿ/-	ಸಹಿ/-
		ಶ್ರೀದೇವಿ ಬಿ.ಎನ್
		ಕಂಪನಿ ಕಾರ್ಯದರ್ಶಿ

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

CIN:U85110KA1966SGC001612

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಈಕ್ವಿಟಿಯಲ್ಲಿನ ಬದಲಾವಣೆಗಳ ಸ್ವತಂತ್ರ ಹೇಳಿಕೆ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

ಎ.ಈಕ್ವಿಟಿ ಷೇರು ಬಂಡವಾಳ	
ವಿವರಗಳು	ಮೊತ್ತ
01ನೇ ಏಪ್ರಿಲ್ 2021 ರಂದು ಇದ್ದಂತೆ ಶಿಲ್ಕು	**4,273.48**
2021-22ರ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು	
31.03.2022 ರಂದು ಇದ್ದಂತೆ ಶಿಲ್ಕು	**4,273.48**
2022-23ರ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು	
31.03.2023 ರಂದು ಇದ್ದಂತೆ ಶಿಲ್ಕು	**4,273.48**

ಬಿ. ಇತರೆ ಈಕ್ವಿಟಿ						
ವಿವರಗಳು	ಮೀಸಲುಗಳು ಮತ್ತು ಹೆಚ್ಚುವರಿ ನಿಧಿ			ಇತರೆ ಸಮಗ್ರ ಆದಾಯ		ಒಟ್ಟು
	ಸಾಮಾನ್ಯ ಮೀಸಲುಗಳು	ಉಳಿಸಿ ಕೊಂಡಿರುವ ಗಳಿಕೆಗಳು	ಹಂಚಿಕೆ ಬಾಕಿಯಿರುವ ಷೇರು ಅರ್ಜಿ ಹಣ	ಈಕ್ವಿಟಿ ಸಾಧನಗಳ ನ್ಯಾಯೋಚಿತ ಮೌಲ್ಯಮಾಪನ	ನಿರೂಪಿತ ಸೌಲಭ್ಯ ಯೋಜನೆಗಳ ಮರು ಮಾಪನ	
01.04.2021 ರಂದು ಇದ್ದಂತೆ ಶಿಲ್ಕು	**19,125.69**	**22,371.53**	–	**49.84**	**(591.99)**	**40,955.07**
ವರ್ಷದ ಲಾಭ	–	7144.49	–	–	–	7,144.49
ಉಳಿಸಿಕೊಂಡಿರುವ ಗಳಿಕೆಗಳಿಂದ ವರ್ಗಾವಣೆ★	816.48	(816.48)	–	–	–	–
ಲಾಭಾಂಶ (ಟಿಪ್ಪಣಿ 33 ನೋಡಿ)	–	(320.51)	–	–	–	(320.51)
ಒಟ್ಟು ಸಮಗ್ರ ಆದಾಯ	–		–	(384.82)	(110.32)	(495.14)
31.03.2022 ರಲ್ಲಿದ್ದ ಶಿಲ್ಕು	**19,942.17**	**28,379.03**	–	**(334.98)**	**(702.31)**	**47,283.92**
ವರ್ಷದ ಲಾಭ	–	6,087.20	–	–	–	6,087.20
ಉಳಿಸಿಕೊಂಡಿರುವ ಗಳಿಕೆಗಳಿಂದ ವರ್ಗಾವಣೆ★	928.21	(928.21)	–	–	–	–
ಲಾಭಾಂಶ (ಟಿಪ್ಪಣಿ 33 ನೋಡಿ)	–	(1,105.19)	–	–	–	(1,105.19)
ಒಟ್ಟು ಸಮಗ್ರ ಆದಾಯ	–		–	(14.22)	19.92	5.70
31.03.2023ರಲ್ಲಿದ್ದ ಶಿಲ್ಕು	**20,870.39**	**32,432.82**	–	**(349.20)**	**(682.40)**	**52,271.94**

★ ಚಿಟ್ ಫಂಡ್ ವಿಭಾಗದ ಒಟ್ಟಾರೆ ಲಾಭದ 10% ಅನ್ನು ಪ್ರತಿವರ್ಷ ಸಾಮಾನ್ಯ ಮೀಸಲು ನಿಧಿಗೆ ವರ್ಗಾವಣೆ ಮಾಡಿದೆ.

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-	ಸಹಿ/-
ಎಂ.ಬಿ.ಪಾಟೀಲ	ಮನೋಜ್‌ಕುಮಾರ್
ಅಧ್ಯಕ್ಷರು	ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ : 02558869	ಡಿನ್ ಸಂಖ್ಯೆ :09379177
ಸಹಿ/-	ಸಹಿ/-
ಎ.ಎಂ. ಚಂದ್ರಪ್ಪ	ಶ್ರೀದೇವಿ ಬಿ.ಎನ್
ಮುಖ್ಯ ಹಣಕಾಸು ಅಧಿಕಾರಿ	ಕಂಪನಿ ಕಾರ್ಯದರ್ಶಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿಯ ಸಾರಾಂಶ:

1. ಕಂಪನಿ ಅವಲೋಕನ ಮತ್ತು ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳು

1.1 ಕಂಪನಿ ಅವಲೋಕನ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಉದ್ಯಮವಾಗಿರುವುದು. ಇದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳ ವ್ಯವಹಾರ ನಡೆಸುತ್ತಿರುವುದು. ಇದು ಒಂದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಪ್ರಾರಂಭವಾಗಿದೆ. ಕಂಪನಿಯ ನೋಂದಾಯಿತ ಕಚೇರಿಯು ಬೆಂಗಳೂರು, ಕರ್ನಾಟಕ, ಭಾರತದಲ್ಲಿ ಇದೆ. ಕಂಪನಿಯು ಪ್ರಾರಂಭವಾದ ಸಮಯದಿಂದ ರಾಷ್ಟ್ರೀಯ ಅಸ್ತಿತ್ವದೊಡನೆ ಪ್ರಮುಖವಾಗಿ ಮಾರುಕಟ್ಟೆ ಶಕ್ತಿಯಾಗಿ ಬೆಳೆದಿದೆ. ಇದು ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ಜಾಲಬಂಧ ಹೊಂದಿರುವುದರ ಜೊತೆಗೆ, ದೇಶದಲ್ಲಿನ ಕೆಲವು ಪ್ರಮುಖ ಮೆಟ್ರೋಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಾದ ವಿದೇಶಿ ಮದ್ಯದ ವ್ಯಾಪಾರ ಮತ್ತು ವ್ಯವಹಾರ, ಚಿಟ್ ಫಂಡ್‌ಗಳನ್ನು ನಡೆಸುವುದು, ಕಾಗದದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಮತ್ತು ಆಮದಾದ ಮರಳಿನ ವ್ಯಾಪಾರ, ಫಾರ್ಮಸ್ಯೂಟಿಕಲ್, ಕೈಗಾರಿಕೆ ಮತ್ತು ಗ್ರಾಹಕರ ಉತ್ಪನ್ನಗಳ ಮಾರಾಟ ಮತ್ತು ಸೇವೆಗಳ ವ್ಯವಹಾರವನ್ನು ನಡೆಸುತ್ತಿರುವುದು.

1.2 ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಿಕೆಗೆ ಆಧಾರ:

(i) ಅನುಸರಣೆ ಹೇಳಿಕೆ :

ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಮಾಡಿರುವ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ) ನಿಯಮಗಳು, 2015 ಓದಿಕೊಂಡಂತೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 133ರ ಅನ್ವಯ ಪ್ರಕಟಿಸಿರುವಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ (ಐಎನ್‌ಡಿ ಎಎಸ್) ಅನ್ವಯ ಕಂಪನಿಯ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದೆ. ಕಂಪನಿಯು ನಿರೂಪಿಸಿದ ಅವಧಿಗಳಲ್ಲಿ ಲೆಕ್ಕ ನಿರ್ವಹಣೆ ನೀತಿಗಳನ್ನು ಏಕ ರೀತಿಯಲ್ಲಿ ಅಳವಡಿಸಿದೆ.

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳನ್ನು ನಿರ್ದೇಶಕರ ಮಂಡಳಿಯು 29.11.2023 ರಂದು ಅಧಿಕೃತಗೊಳಿಸಿದೆ ಮತ್ತು ನೀಡಲು ಅನುಮೋದಿಸಿದೆ.

(ii) ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಗೆ ಆಧಾರ:

ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಕೆಲವು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಹೊರತಾಗಿ, ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಐತಿಹಾಸಿಕ ವೆಚ್ಚದ ಅನ್ವಯ ಸಿದ್ಧಪಡಿಸಲಾಗಿದೆ:

ಐತಿಹಾಸಿಕ ವೆಚ್ಚ ಸಾಮಾನ್ಯವಾಗಿ ಸರಕುಗಳು ಮತ್ತು ಸೇವೆಗಳ ವಿನಿಮಯಕ್ಕಾಗಿ ನೀಡುವ ಬೆಲೆಯ ನ್ಯಾಯೋಚಿತ ಮೌಲ್ಯದ ಮೇಲೆ ಆಧಾರಿತವಾಗಿರುವುದು.

ನ್ಯಾಯೋಚಿತ ಮೌಲ್ಯವು ಒಂದು ಆಸ್ತಿಯ ಮಾರಾಟದಿಂದ ಬರುವ ಬೆಲೆ ಅಥವಾ ಗಣನೆಯ ದಿನಾಂಕದಂದು ಮಾರುಕಟ್ಟೆ ಪಾಲುದಾರರ ನಡುವೆ ನಡೆಯುವ ಕ್ರಮಬದ್ಧ ವಹಿವಾಟುಗಳಲ್ಲಿ ಋಣಭಾರದ ವರ್ಗಾವಣೆಗಾಗಿ ಸಂದಾಯ ಮಾಡುವ ಮೊತ್ತವಾಗಿರುತ್ತದೆ. ಸದರಿ ಬೆಲೆಯು ನೇರವಾಗಿ ಒಳಪಡಿಸಬಹುದಾಗಿರುವುದು ಅಥವಾ ಇನ್ನೊಂದು ಮೌಲ್ಯಮಾಪನ ತಂತ್ರದ ಮೂಲಕ ಅಂದಾಜು ಮಾಡುವುದೋ ಅಥವಾ ಬಿಡುವುದನ್ನು ಪರಿಗಣಿಸಲಾಗದು. ಒಂದು ಆಸ್ತಿಯ ಅಥವಾ ಹೊಣೆಗಾರಿಕೆಯ ನ್ಯಾಯೋಚಿತ ಬೆಲೆಯ ಅಂದಾಜು ಮಾಡುವಾಗ ಕಂಪನಿ ಆಸ್ತಿ ಅಥವಾ ಹೊಣೆಗಾರಿಕೆ ಅಂದಾಜು ಲೆಕ್ಕಾಚಾರಕ್ಕಾಗಿ ಅನುಸರಿಸುವ ಲಕ್ಷಣಗಳನ್ನೇ ಒಂದು ವೇಳೆ ಮಾರುಕಟ್ಟೆ ಪಾಲುದಾರರು ಅನುಸರಿಸುತ್ತಿದ್ದಲ್ಲಿ ಕಂಪನಿಯು ಅವುಗಳನ್ನು ಮಾಪನ ದಿನದಂದು ಗಣನೆಗೆ ತೆಗೆದುಕೊಳ್ಳುವುದು. ನ್ಯಾಯೋಚಿತ ಮೌಲ್ಯವನ್ನು ಗಣನೆಗಾಗಿ ಮತ್ತು/ಅಥವಾ ಬಹಿರಂಗಪಡಿಸುವ ಉದ್ದೇಶಕ್ಕಾಗಿ ಈ ಹಣಕಾಸು ಹೇಳಿಕೆಗಳಲ್ಲಿ ಷೇರು ಆಧಾರಿತ ಪಾವತಿ ವಹಿವಾಟುಗಳನ್ನು ಹೊರತುಪಡಿಸಿ ಆ ಲಕ್ಷಣಗಳ ಆಧಾರದ ಮೇಲೆ ನಿರ್ಧರಿಸಲಾಗುವುದು. ಏಕೆಂದರೆ ಷೇರು ಆಧಾರಿತ ಪಾವತಿ ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 102 ಷೇರು ಆಧಾರಿತ ಪಾವತಿ ವ್ಯಾಪ್ತಿಯಲ್ಲಿ ಬರುತ್ತವೆ. ಗುತ್ತಿಗೆ (ಲೀಸಿಂಗ್) ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 117ರ ಗುತ್ತಿಗೆಗಳು ವ್ಯಾಪ್ತಿಯೊಳಗೆ ಬರುತ್ತವೆ ಮತ್ತು ಅಳತೆ ಮಾಪನಗಳು ನ್ಯಾಯೋಚಿತ ಮೌಲ್ಯದೊಂದಿಗೆ ಕೆಲವು ಸಾಮ್ಯತೆಗಳನ್ನು ಹೊಂದಿರುತ್ತವೆ. ಆದರೆ ಅವುಗಳ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-2 ತಪಶೀಲುಗಳಲ್ಲಿನ ನಿವ್ವಳ ಲಭಿಸಬಹುದಾದ ಮೌಲ್ಯ ಅಥವಾ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 36ರಲ್ಲಿನ ಆಸ್ತಿಗಳ ದುರ್ಬಲತೆ ಬಳಕೆಯಲ್ಲಿರುವ ಮೌಲ್ಯದಂತೆ ನ್ಯಾಯೋಚಿತ ಮೌಲ್ಯಗಳಾಗಿರುವುದಿಲ್ಲ.

ಇದರೊಂದಿಗೆ ಹಣಕಾಸು ವರದಿಗಾರಿಕೆ ಉದ್ದೇಶಕ್ಕಾಗಿ ನ್ಯಾಯೊಚಿತ ಮೌಲ್ಯಮಾಪನಗಳನ್ನು ಹಂತ (ಮಟ್ಟ) 1,2 ಅಥವಾ 3 ಗಳೆಂದು ವಸ್ತುಗಳು ಯಾವ ಹಂತದ ನ್ಯಾಯೋಚಿತ ಮೌಲ್ಯಮಾಪನಗಳಿಗೆ ಸೇರ್ಪಡೆಗೊಳ್ಳುವುವು ಎಂಬುದರ ಆಧಾರದ ಮೇಲೆ ವಿಂಗಡಿಸಲಾಗಿದೆ ಮತ್ತು ವಸ್ತುಗಳ ಪ್ರಾಮುಖ್ಯತೆಯು ಒಟ್ಟಾರೆಯಾಗಿ ಯಾವ ನ್ಯಾಯೋಚಿತ ಮೌಲ್ಯಮಾಪಕಗಳಿಗೆ ಅನ್ವಯಿಸುತ್ತವೆ ಎಂಬುದರ ಆಧಾರದಲ್ಲಿಮಾಡಲಾಗಿದೆ. ಅವುಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:

ಹಂತ-1 : ಸಕ್ರಿಯ ಮಾರುಕಟ್ಟೆಗಳಲ್ಲಿ ಹಣಕಾಸು ಸಾಧನಗಳಿಗೆ ನಮೂದಿತ ದರಗಳು (ಹೊಂದಾಣಿಕೆ ಮಾಡಿರದ್ದು)

ಹಂತ-2: ಸಕ್ರಿಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಿಡದಿರುವ ಹಣಕಾಸು ಸಾಧನಗಳ ನ್ಯಾಯೋಚಿತ ಬೆಲೆಯನ್ನು ಸಂಸ್ಥೆಯ ನಿರ್ದಿಷ್ಟ ಅಂದಾಜುಗಳ ಮೇಲೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಅವಲಂಬಿತವಾಗುವ ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸುವ ಮೌಲ್ಯಮಾಪನ ತಂತ್ರಗಳನ್ನು ಉಪಯೋಗಿಸುವ ಮೂಲಕ ನಿರ್ಧರಿಸಲಾಗುತ್ತದೆ.

ಹಂತ-3: ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಆಧಾರಿಸಿರದ ಆಸ್ತಿಗಳು ಅಥವಾ ಹೊಣೆಗಾರಿಕೆ ಸಲಕರಣೆಗಳು. (ಅಂತರ್ಗತವಾಗದಿರುವ ಸಲಕರಣೆಗಳು)

(iii) ಅಂದಾಜು ಬಳಕೆ :

ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಕಾರ್ಯವು ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿರುವುದು. ಇದು ವರದಿಗಾರಿಕೆಯ ಅವಧಿ ಕೊನೆಯಲ್ಲಿದ್ದಂತೆ, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟಿರುವ ಶಿಲ್ಕುಗಳ ಮೇಲೆ ಮತ್ತು ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಪ್ರಕಟಣೆಗಳ ಮೇಲೆ ಹಾಗೂ ಸದರಿ ಅವಧಿಯಲ್ಲಿನ ಆದಾಯ ಮತ್ತು ಖರ್ಚುಗಳ ತಿಳಿಸಲಾದ ಮೊತ್ತಗಳ ಮೇಲೆ ಪರಿಣಾಮ ಉಂಟು ಮಾಡುವ ಅಂದಾಜುಗಳು ಮತ್ತು ಊಹೆಗಳನ್ನು ಕಂಪನಿಯ ಆಡಳಿತ ಮಂಡಳಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ವೇಳೆಯಲ್ಲಿ ಮಾಡಬೇಕಾಗುತ್ತದೆ. ಈ ಅಂದಾಜುಗಳು ಆಡಳಿತ ಮಂಡಳಿಯು ಚಾಲ್ತಿ ಘಟನಾವಳಿಗಳು ಮತ್ತು ಕ್ರಮಗಳ ಬಗ್ಗೆ ಹೊಂದಿರುವ ಪರಿಜ್ಞಾನದ ಮೇಲೆ ಆಧಾರಿತವಾದವುಗಳಾಗಿದ್ದರೂ, ಮುಂದಿನ ಅವಧಿಗಳಲ್ಲಿ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಸದರಿ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆ ತಲೆದೋರುವುದು. ಅಂದಾಜುಗಳಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಲಾಗಿದೆ. ಏಕೆಂದರೆ ಆಡಳಿತ ಮಂಡಳಿಯು ಅಂದಾಜುಗಳನ್ನು ಮಾಡಿದ ಸನ್ನಿವೇಶಗಳಲ್ಲಿನ ಬದಲಾವಣೆ ಬಗ್ಗೆ ಎಚ್ಚರ ವಹಿಸುತ್ತದೆ. ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳನ್ನು ಒಳಗೊಂಡ ಮಹತ್ತರ ಲೆಕ್ಕ ನಿರ್ವಹಣೆ ಅಂದಾಜುಗಳಿಗೆ ಅಗತ್ಯವಿರುವ ಲೆಕ್ಕ ನಿರ್ವಹಣಾ ನೀತಿಗಳ ಅನ್ವಯಿಕೆಯನ್ನು ಮತ್ತು ಈ ಹಣಕಾಸು ಹೇಳಿಕೆಗಳಲ್ಲಿ ಊಹೆಗಳ ಬಳಕೆಯನ್ನು ಟಿಪ್ಪಣಿ 1.3 ಮತ್ತು 1.4ರಲ್ಲಿ ಬಹಿರಂಗಪಡಿಸಿದೆ.

(iv) ಕಂಪನಿ ಇನ್ನೂ ಅಳವಡಿಸಿಕೊಂಡಿರದ ಹೊಸ ಲೆಕ್ಕನಿರ್ವಹಣೆ ಗುಣಮಟ್ಟಗಳು ಮತ್ತು ತಿದ್ದುಪಡಿಗಳು

ಕಾಲಕಾಲಕ್ಕೆ ಹೊರಡಿಸಿದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳ ಅನ್ವಯ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ(ಎಂಸಿಎ) ಹೊಸ ಗುಣಮಟ್ಟಗಳನ್ನು ಅಥವಾ ಹಾಲಿಯಿರುವ ಗುಣಮಟ್ಟಗಳಿಗೆ ತಿದ್ದುಪಡಿಗಳನ್ನು ಪ್ರಕಟಿಸಿದೆ. ದಿನಾಂಕ 31ನೇ ಮಾರ್ಚ್, 2023ರಂದು ಎಂಸಿಎಯು ಈ ಕೆಳಕಂಡತೆ ಕಂಪನಿಗಳ (ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟಗಳು) ತಿದ್ದುಪಡಿ ನಿಯಮಗಳು, 2023 ಅನ್ನು ತಿದ್ದುಪಡಿ ಮಾಡಿದೆ.

ಎ. ಐಎನ್‌ಡಿ ಎಎಸ್ 12, ಆದಾಯ ತೆರಿಗೆಗಳು-ಸದರಿ ತಿದ್ದುಪಡಿಯು ಪ್ರಾರಂಭಿಕ ಮಾನ್ಯತೆ ವಿನಾಯ್ತಿಯ ಅವಕಾಶವನ್ನು ಕಡಿಮೆಗೊಳಿಸಿದೆ. ಹಾಗಾಗಿ ಇದು ತಾತ್ಕಾಲಿಕ ವ್ಯತ್ಯಾಸಗಳನ್ನು ಸಮತೋಲನಗೊಳಿಸಲು ಮತ್ತು ಪರಿಹರಿಸಲು ಅವಕಾಶ ನೀಡುವ ವ್ಯವಹಾರಗಳಿಗೆ ಅನ್ವಯವಾಗುವುದಿಲ್ಲ. ಸದರಿ ತಿದ್ದುಪಡಿಗೆ ಚಾಲನೆ ನೀಡುವ ದಿನಾಂಕವು 1ನೇ ಏಪ್ರಿಲ್ 2023 ರಂದು ಆನಂತರ ಪ್ರಾರಂಭವಾಗುವ ವಾರ್ಷಿಕ ಅವಧಿಗಳಾಗಿರುವವು. ಕಂಪನಿಯು ತಿದ್ದುಪಡಿಯ ಮೌಲ್ಯಮಾಪನ ಮಾಡಿರುವುದು ಮತ್ತು ಇದರಿಂದ ಅದರ ಸ್ವತಂತ್ರ ಹಣಕಾಸಿನ ಹೇಳಿಕೆ ಮೇಲೆ ಯಾವುದೇ ಪರಿಣಾಮ ಉಂಟಾಗಿರುವುದಿಲ್ಲ.

ಬಿ. ಐಎನ್‌ಡಿ ಎಎಸ್1-ಹಣಕಾಸಿನ ಹೇಳಿಕೆಗಳ ನಿರೂಪಣೆ-ಈ ತಿದ್ದುಪಡಿಯಿಂದ ಸಂಸ್ಥೆಗಳು ಅವರ ಮಹತ್ತರವಾದ ಲೆಕ್ಕನಿರ್ವಹಣೆ ನೀತಿಗಳ ಬದಲಾಗಿ ಅವರ ವಾಸ್ತವಿಕ ಲೆಕ್ಕನಿರ್ವಹಣೆ ನೀತಿಗಳನ್ನು ಪ್ರಕಟಿಸಬೇಕಾಗುತ್ತದೆ. ಈ ತಿದ್ದುಪಡಿ ಅಳವಡಿಕೆ ಜಾರಿಗೆ ಬರುವ ದಿನಾಂಕ 1ನೇ ಏಪ್ರಿಲ್ 2023 ರಂದು ಅಥವಾ ಆನಂತರ ಪ್ರಾರಂಭವಾದ ವಾರ್ಷಿಕ ಅವಧಿಗಳಾಗಿರುವವು. ಕಂಪನಿಯು ಈ ತಿದ್ದುಪಡಿಯನ್ನು ಮೌಲ್ಯಮಾಪನ ಮಾಡಿರುವುದು ಮತ್ತು ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಈ ತಿದ್ದುಪಡಿಯು ಮಹತ್ತರವಾದ ಪರಿಣಾಮ ಉಂಟು ಮಾಡಿದೆ.

ಸಿ. ಐಎನ್‌ಡಿ ಎಎಸ್ 8-ಲೆಕ್ಕ ನಿರ್ವಹಣೆ ನೀತಿಗಳು, ಲೆಕ್ಕ ನಿರ್ವಹಣೆ ಅಂದಾಜುಗಳು ಮತ್ತು ತಪ್ಪುಗಳಲ್ಲಿ ಬದಲಾವಣೆಗಳು-ಈ ತಿದ್ದುಪಡಿಯು 'ಲೆಕ್ಕನಿರ್ವಹಣೆ ಅಂದಾಜುಗಳ' ಸೂತ್ರ ಒಂದನ್ನು ಪರಿಚಯಿಸಿದೆ ಮತ್ತು ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿನ ಬದಲಾವಣೆಗಳಿಂದ ಲೆಕ್ಕ ನಿರ್ವಹಣೆ ನೀತಿಗಳ ಬದಲಾವಣೆಯನ್ನು ಗುರುತಿಸಲು ಸಂಸ್ಥೆಗಳಿಗೆ ನೆರವಾಗಲು ಐಎನ್‌ಡಿ ಎಎಸ್ 8ಕ್ಕೆ ತಿದ್ದುಪಡಿಯನ್ನು ಒಳಪಡಿಸಲಾಗಿದೆ. ಈ ತಿದ್ದುಪಡಿ ಅಳವಡಿಕೆ ಜಾರಿಗೆ ಬರುವ ದಿನಾಂಕವು 1ನೇ ಏಪ್ರಿಲ್ 2023 ರಂದು ಅಥವಾ ಆನಂತರ ಪ್ರಾರಂಭವಾಗುವ ವಾರ್ಷಿಕ ಅವಧಿಗಳಾಗಿರುವವು. ಕಂಪನಿಯು ತಿದ್ದುಪಡಿಯನ್ನು ಮೌಲ್ಯಮಾಪನ ಮಾಡಿದೆ ಮತ್ತು ಇದರಿಂದ ಅದರ ಸ್ವತಂತ್ರ ಹಣಕಾಸಿನ ಹೇಳಿಕೆ ಮೇಲೆ ಯಾವುದೇ ಪರಿಣಾಮ ಉಂಟು ಮಾಡುವುದಿಲ್ಲ.

ಡಿ. ಐಎನ್‌ಡಿ ಎಎಸ್ 102, ಷೇರು ಆಧಾರಿತ ಪಾವತಿಗಳು, ಐಎನ್‌ಡಿ ಎಎಸ್ 103, ವ್ಯಾಪಾರ ವ್ಯವಹಾರ ಸಂಯೋಜನೆಗಳು, ಐಎನ್‌ಡಿ

ಎಎಸ್ 109, ಹಣಕಾಸಿನ ಸಾಧನಗಳು, ಐಎನ್‌ಡಿ ಎಎಸ್ 115, ಗ್ರಾಹಕರೊಡನಿನ ಗುತ್ತಿಗೆಯಿಂದ ಬಂದ ಆದಾಯದಲ್ಲಿನ ಇತರೆ ತಿದ್ದುಪಡಿಗಳು ಸಂಬಂಧಿಸಿದ ಐಎನ್‌ಡಿ ಎಎಸ್‌ನ ಬಗ್ಗೆ ಅತ್ಯುತ್ತಮ ಸ್ಪಷ್ಟನೆ ನೀಡಲು ಇವುಗಳು ಪ್ರಮುಖವಾಗಿ ಸಂಪಾದಕೀಯ ಸ್ವರೂಪದ್ದಾಗಿರುವವು.

(v) ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳು:

ಎ. ಚಾಲ್ತಿಗೆ ಪ್ರತಿಯಾಗಿ ಚಾಲ್ತಿಯೇತರ ವರ್ಗೀಕರಣ:

ಕಂಪನಿ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಚಾಲ್ತಿ/ಚಾಲ್ತಿಯೇತರ ವರ್ಗೀಕರಣದ ಆಧಾರದಲ್ಲಿ ಪ್ರಸ್ತುತಪಡಿಸಿದೆ:

(i) ಒಂದು ಆಸ್ತಿಯು ಈ ಕೆಳಕಂಡಂತಿದ್ದರೆ ಆಗ ಅದನ್ನು ಚಾಲ್ತಿ ಆಸ್ತಿ ಎಂದು ವರ್ಗೀಕರಣ ಮಾಡಲಾಗಿದೆ;

- ಸಾಮಾನ್ಯ ಕಾರ್ಯಾಚರಣೆ ಆವರ್ತನದಲ್ಲಿ ನಗದೀಕರಣವಾಗಲಿರುವ ನಿರೀಕ್ಷೆಯಲ್ಲಿರುವುದು ಅಥವಾ ಮಾರಾಟ ಮಾಡಲು ಉದ್ದೇಶಿಸಿರುವುದು ಅಥವಾ ಬಳಸಲ್ಪಡುವುದು.
- ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ವರದಿಯ ಅವಧಿಯ ನಂತರ 12 ತಿಂಗಳೊಳಗಾಗಿ ನಗದಾಗುವುದೆಂದು ನಿರೀಕ್ಷಿಸುವುದು. ಅಥವಾ
- ವರದಿ ಅವಧಿಯ ನಂತರ ಕನಿಷ್ಠ 12 ತಿಂಗಳಲ್ಲಿ ವಿನಿಮಯ ಗೊಳಿಸುವುದಕ್ಕೆ ಅಥವಾ ಹೊಣೆಗಾರಿಕೆ ಇತ್ಯರ್ಥಗೊಳಿಸಲು ಬಳಸಲು ಯಾವುದೇ ನಿರ್ಬಂಧ ಇರದ ನಗದು ಅಥವಾ ನಗದು ಸಮಾನವಾದುದು.

(ii) ಇನ್ನುಳಿದ ಎಲ್ಲ ಆಸ್ತಿಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(iii) ಒಂದು ಹೊಣೆಗಾರಿಕೆಯನ್ನು ಅದು ಕೆಳಕಂಡಂತಿದ್ದಾಗ ಚಾಲ್ತಿ ಎಂದು ವರ್ಗೀಕರಣ ಮಾಡಲಾಗಿರುತ್ತದೆ;

- ಅದು ಸಾಮಾನ್ಯ ಕಾರ್ಯಾಚರಣೆಯ ವಿಧಾನದಲ್ಲಿ ಇತ್ಯರ್ಥ ಗೊಳಿಸಲಾಗುವುದೆಂದು ನಿರೀಕ್ಷಿಸಿರುವುದು;
- ಅದನ್ನು ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ವರದಿ ಅವಧಿಯ ನಂತರ 12 ತಿಂಗಳೊಳಗಾಗಿ ಇತ್ಯರ್ಥ ಗೊಳಿಸಬೇಕಾಬೇಕಾಗಿರುವುದು, ಅಥವಾ
- ವರದಿಯ ಅವಧಿಯ ನಂತರ ಕನಿಷ್ಠ 12 ತಿಂಗಳವರೆಗೆ ಹೊಣೆಗಾರಿಕೆಯ ಇತ್ಯರ್ಥವನ್ನು ಮುಂದೂಡಲು ಬೇಷರತ್ ಹಕ್ಕು ಇಲ್ಲದಿರುವುದು.

(iv) ಇನ್ನುಳಿದ ಎಲ್ಲ ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(v) ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಆಸ್ತಿಗಳು ಮತ್ತು ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

ಕಂಪನಿ ತನ್ನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಆಸ್ತಿಗಳೆಂದು ವರ್ಗೀಕರಣ ಮಾಡುವ ಉದ್ದೇಶದಿಂದ ಕಾರ್ಯಾಚರಣೆಆವರ್ತನವನ್ನು ಒಂದುವರ್ಷ ಎಂದು ದೃಢೀಕರಿಸಿದೆ. ಇದನ್ನುಸೇವೆಯಸ್ವರೂಪಮತ್ತು ಅಭಿವೃದ್ಧಿಯ ಉದ್ದೇಶಕ್ಕಾಗಿ ಆಸ್ತಿಯ ಸ್ವಾಧೀನಪಡಿಸಿಕೊಳ್ಳಲಾದ ಹಾಗೂ ಅವುಗಳಿಂದ ಲಭ್ಯವಾಗ ಬಹುದಾದ ನಗದು ಅಥವಾ ನಗದು ಸಮಾನಗಳ ನಡುವಿನ ಸಮಯಗಳ ಆಧಾರದ ಮೇಲೆ ಮಾಡಲಾಗಿದೆ. ಚಿಟ್ ವ್ಯವಹಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಇದರಲ್ಲಿ ಸೇರಿರುವುದಿಲ್ಲ. ಇದರ ಆವರ್ತನ ಅದರ ಅವಧಿ ಮೇಲೆ ಆಧಾರಿತವಾಗಿದೆ. 40 ತಿಂಗಳುಗಳನ್ನು ಅದರ ಅವರ್ತನವೆಂದು ಪರಿಗಣಿಸಿದೆ. ಇದು ಅತ್ಯಂತ ಜನಪ್ರಿಯ ಚಿಟ್ ಅವಧಿಯಾಗಿರುವುದು.

ಬಿ. ವಿದೇಶಿ ಕರೆನ್ಸಿ ವಹಿವಾಟು:

ಕಾರ್ಯಾಚರಣೆ ಮತ್ತು ನಿರೂಪಣೆ ಕರೆನ್ಸಿ:

ಹಣಕಾಸು ಹೇಳಿಕೆಗಳನ್ನು ಭಾರತೀಯ ರೂಪಾಯಿಗಳಲ್ಲಿ (ರೂ.) ಪ್ರಸ್ತುತಪಡಿಸಲಾಗಿದೆ. ಇದು ಕಂಪನಿಯಕಾರ್ಯಾಚರಣೆಯಲ್ಲಿರುವ ಮತ್ತು ಪ್ರಸ್ತುತಪಡಿಸುವಿಕೆ ಕರೆನ್ಸಿ ಕೂಡ ಆಗಿದೆ.

(ಎ) ಆರಂಭಿಕ ಮಾನ್ಯತೆ:

ವಿದೇಶಿ ಕರೆನ್ಸಿ ವಹಿವಾಟುಗಳನ್ನು ಚಾಲನೆಯಲ್ಲಿರುವ ಹಣ (Currency) ದಲ್ಲಿ ದಾಖಲಿಸಲಾಗಿದೆ. ಇದನ್ನು ವಹಿವಾಟಿನ ದಿನಾಂಕದಂದು ಚಾಲನಾ ಹಣ ಮತ್ತು ವಿದೇಶಿ ಹಣಗಳ ನಡುವಿನ ವಿನಿಮಯ ದರ ಅನುಸರಿಸಿ ದಾಖಲಿಸಲಾಗಿದೆ.

(ಬಿ) ಪರಿವರ್ತನೆ:

ವಿದೇಶಿ ಕರೆನ್ಸಿ ಹಣಕಾಸಿನ ಅಂಶಗಳನ್ನು ವಹಿವಾಟಿನ ದಿನಾಂಕದಂದು ಮುಕ್ತಾಯ ದರವನ್ನು ಪರಿಗಣನೆಗೆ ತೆಗೆದುಕೊಂಡು ಚಾಲನಾ ಹಣಕ್ಕೆ ಪರಿವರ್ತಿಸಲಾಗಿದೆ.

ಹಣಕಾಸೇತರ ಅಂಶಗಳನ್ನು ವಿದೇಶಿ ಕರೆನ್ಸಿಯಲ್ಲೇ ಕೆಳಕಂಡಂತೆ ನಮೂದಿಸಲಾಗಿದೆ.

ಈ ಅಂಶಗಳು–ಐತಿಹಾಸಿಕ ಬೆಲೆ ಹೊಂದಿದ್ದು, ಆ ಬಗ್ಗೆ ವಹಿವಾಟು ದಿನಾಂಕದಂದು ಇದ್ದ ವಿದೇಶಿ ವಿನಿಮಯ ದರವನ್ನು ಪರಿಗಣಿಸಿ ವರದಿ ಮಾಡಲಾಗಿದೆ. ಮತ್ತು

– ನ್ಯಾಯೋಚಿತ ಮೌಲ್ಯ ಹೊಂದಿರುವ ಅಥವಾ ಇದೇ ರೀತಿಯಲ್ಲಿ ವಿದೇಶಿ ಹಣದಲ್ಲಿ ಮೌಲ್ಯನಿರ್ಧರಣೆ ಮಾಡುವ ಅವಧಿಯಲ್ಲಿ

ಚಾಲನೆಯಲ್ಲಿದ್ದ ವಿನಿಮಯ ದರವನ್ನು ಪರಿಗಣಿಸಿ ಮೌಲ್ಯ ನಿರ್ಧರಣೆ ಮಾಡಲಾಗಿದೆ.

ವರದಿ ಮಾಡುವ ದಿನಾಂಕದಂದು ಇದ್ದಂತೆ ಹಣಕಾಸು ಸಾಮಗ್ರಿಗಳ ಇತ್ಯರ್ಥ ಅಥವಾ ಮರು ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಕಂಡು ಬರುವ ವಿನಿಮಯ ವ್ಯತ್ಯಾಸಗಳನ್ನು ಅಂದರೆ ಈ ಸಾಮಗ್ರಿಗಳ ಮೌಲ್ಯವನ್ನು ಮೊದಲು ದಾಖಲು ಮಾಡಿದಾಗ ಇದ್ದ ವಿನಿಮಯ ದರ ಮತ್ತು ವರದಿ ಮಾಡುವ ದಿನಾಂಕದಂದು ಇದ್ದ ವಿನಿಮಯ ದರಗಳ ನಡುವಿನ ವ್ಯತ್ಯಾಸವನ್ನು ಅವು ಉಂಟಾದ ವರ್ಷದಲ್ಲಿ ಗುರುತಿಸಲಾಗಿದೆ ಮತ್ತು ಆ ಕುರಿತು ಸದರಿ ವಸ್ತುಗಳು ಇದ್ದ ವರ್ಷದ ಲಾಭ ಅಥವಾ ನಷ್ಟದ ಹೇಳಿಕೆಯಲ್ಲಿ ನಮೂದಿಸಲಾಗಿದೆ.

ಸಿ) ಆದಾಯ ಗುರುತಿಸುವಿಕೆ:

ಕಂಪನಿ ತನ್ನ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ರೂಪಿಸುವಾಗ ಕೆಳಕಂಡ ಲೆಕ್ಕ ನಿರ್ವಹಣಾ ನೀತಿಯನ್ನು ಅನುಸರಿಸಿದೆ:

ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯ

ಕಂಪನಿಯು ಐಎನ್‌ಡಿ ಎಎಸ್ 115ರಲ್ಲಿ ಗೊತ್ತುಪಡಿಸಲಾದ ಕೆಳಕಂಡ 5 ಹಂತಗಳ ಮಾದರಿಯನ್ನು ಆಧರಿಸಿ ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯವನ್ನು ಮಾನ್ಯ ಮಾಡಿದೆ:

ಹಂತ:1 ಗ್ರಾಹಕರೊಂದಿಗಿನ ಗುತ್ತಿಗೆ (ಗಳು) ಯನ್ನು ಗುರುತಿಸುವುದು:

ಒಂದು ಗುತ್ತಿಗೆಯನ್ನು ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ವ್ಯಕ್ತಿಗಳ ನಡುವೆ ಉಂಟಾದ ಒಪ್ಪಂದವೆಂದು ನಿರೂಪಿಸಿದ್ದು, ಅದು ಜಾರಿಗೊಳಿಸಬಹುದಾದ ಹಕ್ಕು ಮತ್ತು ಬಾಧ್ಯತೆಗಳನ್ನು ಸೃಜಿಸುತ್ತದೆ ಮತ್ತು ಪ್ರತಿಯೊಂದು ಗುತ್ತಿಗೆಯು ಪೂರೈಸಬೇಕಾಗಿರುವ ಅರ್ಹತೆ, ಮಾನದಂಡವನ್ನು ರೂಪಿಸುತ್ತದೆ ಎಂದು ವ್ಯಾಖ್ಯಾನಿಸಲಾಗಿದೆ.

ಹಂತ:2- ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ದಕ್ಷತೆಗಳನ್ನು ಗುರುತಿಸುವುದು: ಒಂದು ಕಾರ್ಯ ನಿರ್ವಹಣಾ ದಕ್ಷತೆ ಬಾಧ್ಯತೆಯು ಗ್ರಾಹಕರೊಂದಿಗಿನ ಒಂದು ಗುತ್ತಿಗೆಯಲ್ಲಿ ಸರಕು ಅಥವಾ ಸೇವೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದಾಗಿ ಆಶ್ವಾಸನೆ ಇರುವುದು.

ಹಂತ: 3 - ವಹಿವಾಟಿನ ಬೆಲೆ ನಿರ್ಧರಣೆ: ತಾನು ವಚನವಿತ್ತಂತೆ ಗ್ರಾಹಕರಿಗೆ ವರ್ಗಾವಣೆ ಮಾಡುವ ಸರಕುಗಳು ಅಥವಾ ಸೇವೆಗೆ ವಿನಿಮಯವಾಗಿ ಕಂಪನಿ ಪಡೆಯಲರ್ಹವಾದುದೆಂದು ಪರಿಗಣಿಸುವ ಮೊತ್ತವಾಗಿರುತ್ತದೆ. ಇದು ಮೂರನೇ ವ್ಯಕ್ತಿಯ ಪರವಾಗಿ ಪಡೆದ ಮೊತ್ತವನ್ನು ಹೊರತುಪಡಿಸಿರುತ್ತದೆ.

ಹಂತ: 4- ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಗೆ ಹಂಚಿಕೆ ಮಾಡಲಾದ ವಹಿವಾಟು ಬೆಲೆ: ಒಂದು ಗುತ್ತಿಗೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯನಿರ್ವಹಣಾ ಬಾಧ್ಯತೆ ಇದ್ದಲ್ಲಿ, ಕಂಪನಿ ತಾನು ತೃಪ್ತಿಕರವಾಗಿ ನಿರ್ವಹಿಸುವ ಪ್ರತಿ ಕಾರ್ಯ ನಿರ್ವಹಣಾ ಬಾಧ್ಯತೆಗೆ ವಿನಿಮಯವಾಗಿ ಪಡೆಯಲರ್ಹವೆಂದು ಕಂಪನಿ ಪರಿಗಣಿಸುವ ಮೊತ್ತದಲ್ಲಿ ಪ್ರತಿ ಕಾರ್ಯನಿರ್ವಹಣಾ ಬಾಧ್ಯತೆಗೆ ವಹಿವಾಟು ಬೆಲೆಯನ್ನು ಹಂಚಿಕೆ ಮಾಡುವುದು.

ಹಂತ: 5- ಸಂಸ್ಥೆಯು ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಆದಾಯವನ್ನು ಮಾನ್ಯ ಮಾಡುವುದು:

ಕೆಳಕಂಡ ಯಾವುದಾದರೊಂದು ಮಾನದಂಡವನ್ನು ಪೂರೈಸಿದಲ್ಲಿ ಕಂಪನಿ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸುವುದು ಮತ್ತು ಕಾಲಾನಂತರ ಆದಾಯವನ್ನು ಮಾನ್ಯ ಮಾಡುತ್ತದೆ.

(1) ಕಂಪನಿ ನಿರ್ವಹಿಸುತ್ತಾ ಪೂರೈಸಿದ ಕಾರ್ಯನಿರ್ವಹಣೆಯಿಂದ ಗ್ರಾಹಕನು ಪ್ರಯೋಜನ ಬಳಸಿಕೊಳ್ಳುವುದು ಮತ್ತು ಉಪಯೋಗವನ್ನು ಏಕಕಾಲಕ್ಕೆ ಬಳಸಿಕೊಳ್ಳುವುದು ಅಥವಾ

(2) ಕಂಪನಿಯ ಕಾರ್ಯನಿರ್ವಹಣೆಯು ಗ್ರಾಹಕನಿಗೆ ಆಸ್ತಿ ಸೃಜಿಸುವುದು ಅಥವಾ ಗ್ರಾಹಕನ ನಿಯಂತ್ರಣದಲ್ಲಿರುವ ಆಸ್ತಿಯನ್ನು ಹೆಚ್ಚಿಸುವುದು. ಅದು ಆಸ್ತಿಯ ಸೃಷ್ಟಿ ಅಥವಾ ವೃದ್ಧಿ ಎಂದು ಪರಿಗಣಿತ ಅಥವಾ

(3) ಕಂಪನಿಯ ಕಾರ್ಯನಿರ್ವಹಣೆಯು ಕಂಪನಿಯ ಪರ್ಯಾಯ ಬಳಕೆಯಾಗಿ ಒಂದು ಆಸ್ತಿಯನ್ನು ಸೃಜಿಸದಿದ್ದರೆ ಮತ್ತು ಸಂಸ್ಥೆಯು ಕಾರ್ಯನಿರ್ವಹಣೆ ಪೂರ್ಣಗೊಂಡ ದಿನಾಂಕಕ್ಕೆ ಹಣ ಪಾವತಿಗೆ ಜಾರಿಗೊಳಿಸಬೇಕಾದ ಹಕ್ಕು ಹೊಂದಿದ್ದರೆ.

ಕಾರ್ಯನಿರ್ವಹಣಾ ಬಾಧ್ಯತೆಗಳಿಗೆ ಮೇಲ್ಕಂಡ ಯಾವುದಾದರೊಂದು ಷರತ್ತು ಪೂರೈಸದಿದ್ದಲ್ಲಿ ಯಾವ ಸಮಯದಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸಲಾಗುವುದೋ ಆಗ ಆದಾಯವನ್ನು ಮಾನ್ಯ ಮಾಡಲಾಗುವುದು.

ಆದಾಯವನ್ನು ಒಡಂಬಡನೆಯ ರೂಪದಲ್ಲಿ ವ್ಯಾಖ್ಯಾನಿಸಲಾದ ಹಣ ಪಾವತಿ ಷರತ್ತುಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ತೆರಿಗೆ ಮತ್ತು ಕರಗಳನ್ನು ಹೊರತುಪಡಿಸಿ ಸ್ವೀಕರಿಸಲಾದ ಅಥವಾ ಸ್ವೀಕಾರಾರ್ಹವಾಗಿರುವ ಪರಿಗಣಿತ ಮೊತ್ತದ ನ್ಯಾಯೋಚಿತ ಮೌಲ್ಯಕ್ಕನುಗುಣವಾಗಿ ಲೆಕ್ಕ ಹಾಕಲಾಗಿದೆ.

ಬಾಡಿಗೆ ಆದಾಯ:

ಕಾರ್ಯಾಚರಣೆ ಗುತ್ತಿಗೆಗಳಿಂದ ಬರುವ ಬಾಡಿಗೆ ಆದಾಯ-'ಕೆ'- ಗುತ್ತಿಗೆಗಳು ನೋಡಿ.

ಲಾಭಾಂಶದ ಆದಾಯ

ಲಾಭಾಂಶದಿಂದ ಬರುವ ಆದಾಯವನ್ನು ಕಂಪನಿ ಪಾವತಿಯನ್ನು ಸ್ವೀಕರಿಸುವ ಹಕ್ಕನ್ನು ಸ್ಥಾಪಿಸಿದಾಗ ಮಾನ್ಯ ಮಾಡಲಾಗಿದೆ. ಲಾಭಾಂಶದ ಜೊತೆಗೆ ಸಂಯೋಜನೆಗೊಂಡ ಆರ್ಥಿಕ ಸೌಲಭ್ಯಗಳು ಕಂಪನಿಗೆ ಬರುವುದು ಮತ್ತು ಲಾಭಾಂಶದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಲಾಗುವುದು.

ಬಡ್ಡಿ ಆದಾಯ:

ಒಂದು ಹಣಕಾಸು ಆಸ್ತಿಯಿಂದ ಬರುವ ಬಡ್ಡಿ ಆದಾಯವನ್ನು ಯಾವಾಗ ಅದರ ಆರ್ಥಿಕ ಲಾಭಗಳು ಕಂಪನಿಗೆ ಸೇರಬಹುದಾಗಿದ್ದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಆದಾಯದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಬಹುದಾಗಿದೆ. ಬಾಕಿ ಇರುವ ಅಸಲು ಮೊತ್ತಕ್ಕೆ ಜಾರಿಯಲ್ಲಿರುವ ಬಡ್ಡಿದರವನ್ನು ಅನ್ವಯಿಸಿದನ್ನು ಅನುಸರಿಸಿ ಅವಧಿ ಅನುಪಾತಾಧಾರಿತದಲ್ಲಿ ಬಡ್ಡಿಯು ಸಂಚಯವಾಗುತ್ತದೆ.

ವಿಳಂಬಿತ ಸ್ವೀಕೃತಿಗಳು, ರದ್ದತಿ/ಮುಟ್ಟುಗೋಲಾದ ಆದಾಯಗಳ ಮೇಲಿನ ಬಡ್ಡಿ ಮತ್ತು ಗ್ರಾಹಕರಿಂದ ವರ್ಗಾವಣೆ ಶುಲ್ಕಗಳನ್ನು ಅಂತಿಮ ಸಂಗ್ರಹಣೆ ಸಂಶಯಾತ್ಮಕವಾಗಿರುವ ಪ್ರಕರಣಗಳು ಮತ್ತು ಕೆಳಗೆ ಪಟ್ಟಿ ಮಾಡಿರುವ ಸಂದರ್ಭಗಳನ್ನು ಹೊರತುಪಡಿಸಿ ಸಂಚಯ ಆಧಾರಿತದಲ್ಲಿ ಪರಿಗಣಿಸಲಾಗಿದೆ:

ನಗದು ಆಧಾರದ ಮೇಲೆ ಆದಾಯ ಗುರುತಿಸುವಿಕೆ

ಕೆಳಕಂಡ ಐಟಂಗಳಿಗೆ ಹೊರತಾಗಿ ಗಳಿಕೆಯನ್ನು ಸಂಚಯನದ ಆಧಾರದ ಮೇಲೆ ಮಾನ್ಯ ಮಾಡಿದೆ. ಕೆಳಕಂಡ ಐಟಂಗಳ ಬಗ್ಗೆ, ಹಣ ನಗದಾಗುವುದು ಅನಿಶ್ಚಿತವಾಗಿರುವುದರಿಂದ ನಗದು ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ:

(i) **ಚಿಟ್ ಕಾರ್ಯಾಚರಣೆಗಳು**

ಚಿಟ್ ಕಾರ್ಯಾಚರಣೆಯಿಂದ ಬರುವ ಎಲ್ಲ ರೀತಿಯ ಆದಾಯಗಳು ನಗದು ಆಧಾರಿತವಾಗಿವೆ.

(ii) ಕರ ಸಾಲ/ಜಾರಿಯಲ್ಲಿರುವ ವಿದೇಶಿ ವಾಣಿಜ್ಯ ನೀತಿಯ ವಿವಿಧ ಉತ್ತೇಜನ ಯೋಜನೆಗಳಡಿ ವಿನಾಯಿತಿ, ತೆರಿಗೆ ಸಾಲ, ಆದಾಯ ತೆರಿಗೆ, ಸೇವಾ ತೆರಿಗೆ/ಮಾರಾಟ ತೆರಿಗೆ/ವ್ಯಾಟ್/ಜಿಎಸ್‌ಟಿ ಮತ್ತು ಅವುಗಳ ಮೇಲಿನ ಬಡ್ಡಿ ಇತ್ಯಾದಿಯ ಮರುಪಾವತಿ.

(iii) ಅವಧಿ ಮೀರಿದ ವಸೂಲಾತಿಗಳ ಮೇಲಿನ ಬಡ್ಡಿ.

(iv) ಪೂರೈಕೆದಾರರು/ಖಾತರಿದಾರರು ಸಮಾಪ್ತಿಗೊಂಡ ಹಾನಿಗಳು.

ಆದಾಯದ ಇತರೆ ಐಟಂಗಳನ್ನು ಸ್ವೀಕರಿಸುವ ಹಕ್ಕು ಉಂಟಾದಾಗ ಪರಿಗಣಿಸಿದೆ.

ಡಿ) ಸರಕುಗಳ ತಪಶೀಲುಗಳು:

ಈ ಸರಕುಗಳನ್ನು ಬೆಲೆಯ ಕಡಿಮೆ ಮಟ್ಟದಲ್ಲಿ ಮತ್ತು ನಿವ್ವಳ ನಗದೀಕರಣ ಮೌಲ್ಯಗಳಲ್ಲಿ ನಿರ್ಧರಣೆ ಮಾಡಿದೆ. ಅನುಪಯುಕ್ತ ಮತ್ತು ಉಪ ಉತ್ಪನ್ನಗಳನ್ನು ನಿವ್ವಳ ನಗದೀಕರಣ ಮೌಲ್ಯದಲ್ಲಿ ಮೌಲ್ಯ ನಿರ್ಣಯ ಮಾಡಿದೆ. ನಿವ್ವಳ ನಗದೀಕರಣದ ಮೌಲ್ಯವು ಸಾಮಾನ್ಯ ವ್ಯವಹಾರದ ಸಮಯದಲ್ಲಿ ಅಂದಾಜು ಮಾಡಿದ ಮಾರಾಟ ಬೆಲೆ ಆಗಿರುತ್ತದೆ. ಪೂರ್ಣಗೊಳಿಸುವಿಕೆಯ ಅಂದಾಜು ಮೌಲ್ಯ ಮತ್ತು ಮಾರಾಟ ಮಾಡಲು ಅಗತ್ಯವಿರುವ ಅಂದಾಜು ಬೆಲೆಯನ್ನು ಕಳೆಯಲಾಗಿದೆ.

ತಪಶೀಲು ಸರಕುಗಳನ್ನು ಈ ಕೆಳಕಂಡಂತೆ ಮೌಲ್ಯ ನಿರ್ಣಯ ಮಾಡಿದೆ:

(i) **ಕಚ್ಚಾ ಸಾಮಗ್ರಿಗಳು:** ಕಚ್ಚಾ ಸಾಮಗ್ರಿಗಳ ವೆಚ್ಚವು ಖರೀದಿ ಬೆಲೆ ಮತ್ತು ಸರಕುಗಳನ್ನು ಹಾಲಿ ಸ್ಥಳಕ್ಕೆ ಮತ್ತು ಹಂತಕ್ಕೆ ಸಾಗಿಸಲು ಉಂಟಾದ ವೆಚ್ಚಗಳನ್ನು ಒಳಗೊಂಡಿರುತ್ತದೆ. ಬೆಲೆಯನ್ನು ಕಾಗದದ ವಿಭಾಗದಲ್ಲಿ ಸರಾಸರಿ ತೂಕದ ಆಧಾರದ ಮೇಲೆ ನಿರ್ಧರಣೆ ಮಾಡಲಾಗಿದೆ.

(ii) **ಸಿದ್ಧಪಡಿಸಿದ ಸರಕುಗಳು ಮತ್ತು ಪ್ರಗತಿಯಲ್ಲಿರುವ ಕಾರ್ಯಗಳು:** ವೆಚ್ಚವು ಸಾಮಗ್ರಿಗಳ ನೇರ ಬೆಲೆ ಮತ್ತು ಕಾರ್ಮಿಕ ವೆಚ್ಚ ಮತ್ತು ಸಾಮಾನ್ಯ ಕಾರ್ಯಾಚರಣೆ ಆಧಾರದಲ್ಲಿ ಅಂದರೆ ತರಲು ಉಂಟಾಗುವ ವೆಚ್ಚ ಹೊರತುಪಡಿಸಿ ಅವುಗಳ ಮೇಲಿನ ತಯಾರಿಕಾ ವೆಚ್ಚ ಒಳಗೊಂಡಿರುತ್ತದೆ. ಸರಾಸರಿ ತೂಕದ ಮೇಲೆ ಬೆಲೆ ನಿರ್ಧರಣೆ ಮಾಡಲಾಗುತ್ತದೆ. ಕಾಗದದ ವಿಭಾಗದ ಸಂಬಂಧ ಪರಿವರ್ತನೆಗಾರರಿಗೆ ನೀಡಿರುವ ಕಚ್ಚಾ ಸಾಮಗ್ರಿಗಳು, ಮತ್ತು ಬಳಕೆ ವಸ್ತುಗಳನ್ನು ಪರಿವರ್ತನಾಗಾರರಿಂದ ನೋಟ್ ಪುಸ್ತಕಗಳನ್ನು ಸ್ವೀಕರಿಸುವಾಗ ಸಿದ್ಧಪಡಿಸಿದ ಸರಕು ಎಂದು ಪರಿಗಣಿಸಲಾಗುತ್ತದೆ.

(iii) ಮದ್ಯದ ದಾಸ್ತಾನಿನ ಮೌಲ್ಯಮಾಪನಕ್ಕಾಗಿ ಸಾಗಾಣಿಕೆ ಆಗಮನ ಸರಕನ್ನು ಪರಿಗಣಿಸಿರುವುದಿಲ್ಲ ಮತ್ತು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ವಿಧಿಸಿದೆ.

(iv) ಅನುಪಯುಕ್ತ ಸರಕುಗಳು, ನಿಧಾನಗತಿಯ ಮತ್ತು ದೋಷಪೂರಿತ ಸರಕುಗಳನ್ನು ಗುರುತಿಸಿದೆ ಮತ್ತು ನಿವ್ವಳ ವಾಸ್ತವೀಕರಣದ ಮೌಲ್ಯಕ್ಕೆ ದಾಖಲಿಸಿದೆ.

ಇ) ಸ್ವತ್ತು , ಸ್ಥಾವರ ಮತ್ತು ಉಪಕರಣ(ಪಿಪಿಇ):

ಗುರುತಿಸುವಿಕೆ ಮತ್ತು ಮಾಪನ

ಸ್ವತ್ತು , ಸ್ಥಾವರ ಮತ್ತು ಉಪಕರಣವನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದು ಬೆಲೆಯಲ್ಲಿ ಮಾಪನ ಮಾಡಲಾಗಿದೆ. ಈ ಬೆಲೆಯಲ್ಲಿ ಆಸ್ತಿಯ ಸ್ವಾಧೀನಕ್ಕೆ ನೇರವಾಗಿ ಅನ್ವಯಿಸಬಹುದಾದ ಖರ್ಚುಗಳೂ ಸೇರಿರುವವು. ಅರ್ಹತಾ ಆಸ್ತಿಗಳ ನಿರ್ಮಾಣಕ್ಕೆ ನೇರವಾಗಿ ಅನ್ವಯಿಸಬಹುದಾದ ಸಮಾನ್ಯ ಮತ್ತು ನಿರ್ದಿಷ್ಟ ಸಾಲದ ವೆಚ್ಚವನ್ನು ಬೆಲೆಯ ಭಾಗವಾಗಿ ಬಂಡವಾಳೀಕರಿಸಲಾಗಿದೆ.

ಸವಕಳಿ ಮತ್ತು ಉಪಯುಕ್ತ ಜೀವಿತಾವಧಿ

ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಸವಕಳಿ/ಅಮಾರ್ಟೈಜೇಷನ್ ಅನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ

ಜೀವಿತಾವಧಿ ಅನ್ವಯ ಆಸ್ತಿಯ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಿದೆ ಮತ್ತು ಸೂಕ್ತವಾಗಿದ್ದಲ್ಲಿ ಅನುಗುಣವಾಗಿ ಹೊಂದಾಣಿಕೆ ಮಾಡಿದೆ.

ವಿವರಗಳು	ಜೀವಿತಾವಧಿ-ವರ್ಷಗಳಲ್ಲಿ
ಕಟ್ಟಡ	60
ಅಗ್ನಿಶಾಮಕ ಉಪಕರಣ	10
ವಿದ್ಯುತ್ ಉಪಕರಣ	10
ಪೀಠೋಪಕರಣ ಮತ್ತು ಅಳವಡಿಕೆಗಳು	10
ವಾಹನಗಳು	8
ಪೀಠೋಪಕರಣ ಮತ್ತು ಅಳವಡಿಕೆಗಳು-ಮದ್ಯ	5
ನಿರ್ವಹಣೆ ಉಪಕರಣ	5
ತೂಕದ ಯಂತ್ರಗಳು	5
ಕಚೇರಿ ಉಪಕರಣ	5
ಕಂಪ್ಯೂಟರ್‌ಗಳು	3
ಗುತ್ತಿಗೆದಾರಿಕೆ ಆಸ್ತಿಗಳು/ ಗುತ್ತಿಗೆದಾರಿಕೆ ಕಟ್ಟಡಗಳ ಅಭಿವೃದ್ಧಿ	ಪ್ರಾಥಮಿಕ ಗುತ್ತಿಗೆ ಅವಧಿಯಲ್ಲಿ-ಜಮೀನಿಗೆ ಹೊರತಾಗಿ

ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

ತಾಂತ್ರಿಕ ಪರಿಣತರು ಮಾಡಿರುವ ತಾಂತ್ರಿಕ ನಿರ್ಧರಣೆ ಮತ್ತು ಆಡಳಿತ ಮಂಡಳಿ ಅಂದಾಜಿನ ಆಧಾರದ ಮೇಲೆ ಮದ್ಯದ ಮಾರಾಟ ಮಳಿಗೆಗಳಲ್ಲಿರುವ ಪೀಠೋಪಕರಣ ಮತ್ತು ಅಳವಡಿಕೆಗಳ ಅಂದಾಜು ಮಾಡಿದ ಜೀವಿತಾವಧಿ ಉಪಯುಕ್ತತೆಯಲ್ಲಿ ಸವಕಳಿ ಮಾಡಿದೆ. ಇದು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಜೀವಿತಾವಧಿಯಿಂದ ಭಿನ್ನವಾಗಿವೆ. ಸದರಿ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿಯು ಅವುಗಳನ್ನು ಬಳಸಲಿರುವ ಅವಧಿಯಲ್ಲಿ ವಾಸ್ತವಿಕವಾಗಿದ್ದು, ನ್ಯಾಯೋಚಿತ ಅಂದಾಜನ್ನು ಆಡಳಿತ ಮಂಡಳಿ ನಂಬುವುದು.

ಅಮಾನ್ಯತೆ

ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಯಾವುದೇ ಬಾಬ್ತು ಅದರ ಮಹತ್ತರ ಭಾಗವು ಆರಂಭದಲ್ಲಿ ಮಾನ್ಯ ಮಾಡಿದ್ದನ್ನು ಅದರ ವಿಲೇವಾರಿ, ಅಥವಾ ಅದರ ಬಳಕೆಯಿಂದ ಅಥವಾ ವಿಲೇವಾರಿಯಿಂದ ಮುಂದೆ ಯಾವುದೇ ಆರ್ಥಿಕ ಲಾಭ ಇಲ್ಲ ಎಂದು ಪರಿಗಣಿಸಿದಾಗ ಅದನ್ನು ಅಮಾನ್ಯಗೊಂಡ ಬಾಬ್ತು ಎಂದು ಪರಿಗಣಿಸಲಾಗುವುದು. ಸ್ವತ್ತಿನ ಅಮಾನ್ಯೀಕರಣದಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟವನ್ನು (ಇದನ್ನು ನಿವ್ವಳ ವಿಲೇವಾರಿಯಿಂದ ಬರುವ ಮೊತ್ತ ಮತ್ತು ಸ್ವತ್ತು ಹೊಂದಿರುವ ಮೊತ್ತದ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಸ್ವತ್ತು ಅಮಾನ್ಯಗೊಂಡಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

ಎಫ್) ಅಗೋಚರಿತ ಆಸ್ತಿಗಳು:

ಮಾನ್ಯತೆ ಮತ್ತು ಮಾಪನ

ಪ್ರತ್ಯೇಕವಾಗಿ ಸ್ವಾಧೀನ ಮಾಡಿಕೊಂಡಿರುವ ಅಗೋಚರಿತ ಆಸ್ತಿ (ಸಾಫ್ಟ್‌ವೇರ್) ಗಳನ್ನು ಅವುಗಳ ಸ್ವಾಧೀನತೆಯ ವೆಚ್ಚದ ಬೆಲೆಯಲ್ಲಿ ಮಾಪನ ಮಾಡಿದೆ. ಬೆಲೆಯು ಖರೀದಿ ಬೆಲೆ, ಬಂಡವಾಳೀಕರಣ ಮಾನದಂಡವನ್ನು ಪೂರೈಸಿದ್ದಲ್ಲಿ ಸಾಲದ ವೆಚ್ಚ ಮತ್ತು ನೇರವಾಗಿ ಅನ್ವಯಿಸಬಹುದಾದ ಅಥವಾ ಕಾರಣೀಭೂತವಾಗಬಹುದಾದ ವೆಚ್ಚಗಳಾದ ಅಂದರೆ ಸ್ವತ್ತನ್ನು ಉದ್ದೇಶಿತ ಬಳಕೆಗಾಗಿ ಕಾರ್ಯ ನಿರ್ವಹಿಸುವ ಸ್ಥಿತಿಗೆ ತರಲು ತಗಲುವ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ವ್ಯಾಪಾರಿ ಕಡಿತ, ರಿಯಾಯಿತಿಗಳನ್ನು ಕಡಿತಗೊಳಿಸಿ ಖರೀದಿ ಬೆಲೆಯನ್ನು ಪರಿಗಣಿಸಿದೆ.

ಪ್ರಾರಂಭಿಕ ಮಾನ್ಯತೆ ಅನುಸರಿಸಿ ಅಗೋಚರಿತ ಆಸ್ತಿಗಳನ್ನು ಯಾವುದೇ ಸಂಚಯನವಾಗಿರುವ ಅಮಾರ್ಟೈಜೇಷನ್ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಪರಿಗಣಿಸಿದೆ.

ಬಂಡವಾಳೀಕರಣಗೊಂಡ ತಂತ್ರಾಂಶಗಳ ವೆಚ್ಚವನ್ನು ಅವುಗಳನ್ನು ಸ್ವಾಧೀನಗೊಳಿಸಿಕೊಂಡ ದಿನಾಂಕದಿಂದ ನೇರ ಮಾರ್ಗದ ವಿಧಾನದಿಂದ 6 ವರ್ಷಗಳ ಅವಧಿಯಲ್ಲಿ ಅಮಾರ್ಟೈಜೇಷನ್ ಮಾಡಲಾಗಿದೆ.

ಅಗೋಚರ ಆಸ್ತಿಯ ಅಮಾನ್ಯತೆಯಿಂದ ಉಂಟಾಗುವ ಲಾಭ ಅಥವಾ ನಷ್ಟಗಳನ್ನು ಸದರಿ ಆಸ್ತಿಯ ಹೊಂದಿರುವ ಮೊತ್ತ ಮತ್ತು ವಿಲೇವಾರಿಯಿಂದ ಲಭ್ಯವಾಗುವ ನಿವ್ವಳ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಮಾಪನ ಮಾಡಲಾಗುವುದು ಮತ್ತು ಆಸ್ತಿಯ ಅಮಾನ್ಯಗೊಳಿಸಿದಾಗ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದು.

ಅಗೋಚರಿತ ಆಸ್ತಿಗಳ ಉಳಿಕೆ ಮೌಲ್ಯ, ಉಪಯುಕ್ತ ಜೀವಿತಾವಧಿ ಮತ್ತು ಅಮಾರ್ಟೈಜೇಷನ್ ವಿಧಾನಗಳನ್ನು ಪ್ರತಿ ವರದಿ ಮಾಡುವ ದಿನಾಂಕದ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಸೂಕ್ತವೆಂದು ಅನ್ನಿಸಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗುತ್ತದೆ.

ಜಿ. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

ಪ್ರಗತಿಯಲ್ಲಿರುವ ಬಂಡವಾಳ ಹೂಡಿಕೆ ಕಾಮಗಾರಿಯನ್ನು ನಿರ್ಮಾಣದ ಅವಧಿಯಲ್ಲಿ ಮಾಡಿದ ವೆಚ್ಚ, ಅರ್ಹತಾ ಆಸ್ತಿಗಳ ಸ್ವಾಧೀನಕ್ಕಾಗಿ ತರಲಾದ ಸಾಲದ ಮೇಲಿನ ಬಡ್ಡಿ ಮತ್ತು ಸ್ಥಿರ

ಬಳಕೆಯ ದಿನಾಂಕವನ್ನು ಮುಂದಿನ ಅವಧಿಯಲ್ಲಿ ಯೋಜನಾ ಅನುಷ್ಠಾನ ಸಂಬಂಧಿಸಿದ ಕಾರ್ಯಗಳಿಗಾಗಿ ಉಂಟಾದ ವೆಚ್ಚಗಳಲ್ಲಿ ತಿಳಿಸಲಾಗುತ್ತದೆ. ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕಕ್ಕೆ ಬಾಕಿಯಿದ್ದ ಪಿಪಿಇ ಖರೀದಿ/ಸ್ವಾಧೀನದ ಬಗ್ಗೆ ಕೊಟ್ಟಿರುವ ಬಂಡವಾಳ ಮುಂಗಡಗಳನ್ನು ಇತರ ಚಾಲ್ತಿಯೇತರ ಆಸ್ತಿಗಳೆಂದು ಪ್ರತ್ಯೇಕವಾಗಿ ನಮೂದಿಸಲಾಗಿದೆ.

ಎಚ್. ಹೂಡಿಕೆ ಆಸ್ತಿ

ಹೂಡಿಕೆ ಆಸ್ತಿಗಳು, ಅಂದರೆ ಬಾಡಿಗೆ ಗಳಿಸಲು ಹೊಂದಿರುವ ಆಸ್ತಿಗಳು ಮತ್ತು / ಅಥವಾ ಬಂಡವಾಳ ವೃದ್ಧಿಗಾಗಿ (ಆ ಉದ್ದೇಶಕ್ಕಾಗಿ ನಿರ್ಮಾಣ ಹಂತದಲ್ಲಿರುವ ಆಸ್ತಿಯೂ ಸೇರಿದಂತೆ) ಇರುವ ಆಸ್ತಿಗಳು. ಹೂಡಿಕೆ ಆಸ್ತಿಗಳನ್ನು ಆರಂಭದಲ್ಲಿ ವ್ಯವಹಾರ ವೆಚ್ಚವೂ ಸೇರಿದಂತೆ ಒಟ್ಟು ವೆಚ್ಚದಲ್ಲಿ ಲೆಕ್ಕ ಹಾಕಲಾಗಿದೆ. ಬಾಡಿಗೆ ಗಳಿಸಲು ಕಾರ್ಯಾಚರಣೆಯಲ್ಲಿರುವ ಗುತ್ತಿಗೆಗಳಡಿ ಅಥವಾ ಬಂಡವಾಳ ವೃದ್ಧಿ ಉದ್ದೇಶಕ್ಕಾಗಿ ಹೊಂದಿರುವುವುಗಳನ್ನು ಹೂಡಿಕೆ ಆಸ್ತಿಗಳೆಂದು ಪರಿಗಣಿಸಲಾಗಿದೆ. ಆರಂಭದ ಮಾನ್ಯತೆಯ ನಂತರ ಕಂಪನಿ ಹೂಡಿಕೆ ಆಸ್ತಿಯನ್ನು ತಗುಲಿದ ವೆಚ್ಚದಲ್ಲಿ ಮಾಪನ ಮಾಡುವುದು.

ಹೂಡಿಕೆ ಆಸ್ತಿಗಳನ್ನು ಅವುಗಳ ವಿಲೇವಾರಿ ಮೇರೆಗೆ ಅಥವಾ ಶಾಶ್ವತವಾಗಿ ಹೂಡಿಕೆ ಆಸ್ತಿಗಳನ್ನು ಬಳಕೆಯಿಂದ ಹಿಂಪಡೆದಾಗ ಮತ್ತು ವಿಲೇವಾರಿಯ ನಂತರ ಮುಂದೆ ಅದರಿಂದ ಯಾವುದೇ ಆರ್ಥಿಕ ಲಾಭ ಇಲ್ಲವೆಂದಾಗ ಅಮಾನ್ಯ ಮಾಡಲಾಗುತ್ತದೆ. ಅಮಾನ್ಯಗೊಂಡ ಆಸ್ತಿಯಿಂದ ಯಾವುದೇ ಲಾಭ ಅಥವಾ ನಷ್ಟಗಳನ್ನು (ಆಸ್ತಿ ಹೊಂದಿರುವ ಮೌಲ್ಯ ಮತ್ತು ಅದರ ವಿಲೇವಾರಿಯಿಂದ ಬಂದ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಆಸ್ತಿಯ ಅಮಾನ್ಯಗೊಳಿಸಿದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗಿದೆ.

ಹೂಡಿಕೆ ಆಸ್ತಿಗಳನ್ನು ಅವುಗಳು ಸೇರಿದ ಆಸ್ತಿಯ ವರ್ಗ ಮತ್ತು ಆ ವರ್ಗದ ಆಸ್ತಿಗಳಿಗೆ ಗೊತ್ತುಪಡಿಸಿದ ಜೀವಿತಾವಧಿಯನುಸಾರ ಸವಕಳಿಗೊಳಿಸಲಾಗಿದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ – II ರಲ್ಲಿ ನಿರ್ದಿಷ್ಟಪಡಿಸಿರುವ ಆಸ್ತಿಯ ಉಪಯುಕ್ತತೆ ಜೀವಿತಾವಧಿ ಆಧಾರದ ಮೇಲೆ ನೇರ ಮಾರ್ಗದ ವಿಧಾನದಲ್ಲಿ ಸವಕಳಿ/ ಅಮಾರ್ಟೈಜೇಷನ್ ಮಾಡಿದೆ. ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ – IIರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಗಳ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಲಾಗುವುದು ಮತ್ತು ಸೂಕ್ತವಾಗಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗಿದೆ.

ಕಟ್ಟಡಗಳ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿ 60 ವರ್ಷಗಳು. ಹೂಡಿಕೆ ಸ್ಥಿತಿನ ನ್ಯಾಯೋಚಿತ ಮೌಲ್ಯವನ್ನು ಟಿಪ್ಪಣಿಗಳಲ್ಲಿ ತಿಳಿಸಿದೆ. ಮಾನ್ಯತೆ ಹೊಂದಿದ ಬಾಹ್ಯ ಸ್ವತಂತ್ರ ಮೌಲ್ಯಮಾಪಕರಿಂದ ಮಾಡಿದ ವಾರ್ಷಿಕ ಮೌಲ್ಯಮಾಪನದ ಆಧಾರದ ಮೇಲೆ ನ್ಯಾಯೋಚಿತ ಮೌಲ್ಯಗಳನ್ನು ನಿರ್ಧರಣೆ ಮಾಡಿದೆ.

ಐ) ಹಣಕಾಸಿನ ವೆಚ್ಚಗಳು:

ಹಣಕಾಸಿನ ವೆಚ್ಚದಲ್ಲಿ ಗುತ್ತಿಗೆ ಮೇಲಿನ ಬಡ್ಡಿ ವೆಚ್ಚ ಮತ್ತು ಇತರೆ ಹಣಕಾಸಿನ ಹೊಣೆಗಾರಿಕೆಗಳು, ಬ್ಯಾಂಕ್ ಶುಲ್ಕಗಳು ಮತ್ತು ಖಾತರಿ ಕಮಿಷನ್ ಒಳಗೊಂಡಿರುವುದು. ಎಲ್ಲಾ ಹಣಕಾಸಿನ ವೆಚ್ಚಗಳನ್ನು ಅವು ಉಂಟಾದ ಅವಧಿಯಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

ಜೆ) ನಗದು ಮತ್ತು ನಗದು ಸಮಾನಗಳು:

ಸ್ಥಿತಿ ವಿವರಣಾ ಪಟ್ಟಿಯಲ್ಲಿನ ನಗದು ಮತ್ತು ನಗದು ಸಮಾನಗಳು, ಬ್ಯಾಂಕ್‌ಗಳಲ್ಲಿನ ನಗದು, ಕೈಯಲ್ಲಿರುವ ನಗದು ಮತ್ತು ಮೂಲತಃ 3 ತಿಂಗಳು ಅಥವಾ ಕಡಿಮೆ ಪಕ್ವತೆ ಅವಧಿಯ ಅಲ್ಪಾವಧಿ ಠೇವಣಿಗಳು ಒಳಗೊಂಡಿವೆ. ಈ ಠೇವಣಿಗಳು ಅವುಗಳ ಮೌಲ್ಯದಲ್ಲಿ ಯಾವುದೇ ಮಹತ್ತರ ಬದಲಾವಣೆಯಾಗದ ಅಪಾಯವಿಲ್ಲದಿರುವಿಕೆಗೆ ಒಳಪಟ್ಟಿರುತ್ತವೆ.

ಕೆ) ಗುತ್ತಿಗೆಗಳು:

ಕಂಪನಿಯು ಪ್ರತಿ ಗುತ್ತಿಗೆ ಅಥವಾ ವ್ಯವಸ್ಥೆಯನ್ನು ಅದು ಐಎನ್‌ಡಿ ಎಎಸ್ 116 ಅನ್ವಯ ಪ್ರತಿಪಾದಿಸಿರುವಂತೆ ಗುತ್ತಿಗೆ ಎಂಬುದಾಗಿ ಅರ್ಹತೆ ಪಡೆದಿರುವುದೇ ಎಂಬುದನ್ನು ಮೌಲ್ಯಮಾಪನ ಮಾಡುವುದು.

ಕಂಪನಿಯು ಗುತ್ತಿಗೆದಾರನಾಗಿ

ಕಂಪನಿಯು ಅಂಗಡಿಗಳು ಮತ್ತು ಕಚೇರಿಗಳನ್ನು ಗುತ್ತಿಗೆಗೆ ಪಡೆಯಲು ವ್ಯವಸ್ಥೆಯೊಂದನ್ನು ಮಾಡಿಕೊಳ್ಳುವುದು. ಅಂತಹ ವ್ಯವಸ್ಥೆಗಳು ಸಾಮಾನ್ಯವಾಗಿ ನಿಗದಿತ ಅವಧಿಯದಾಗಿರುವವು. ಆದರೆ ವಿಸ್ತರಣೆ ಅಥವಾ ರದ್ದತಿ ಆಯ್ಕೆಯನ್ನು ಹೊಂದಿರಬಹುದು. ಕಾಂಟ್ರಾಕ್ಟ್ ಅದರ ಪ್ರಾರಂಭದಲ್ಲಿ ಗುತ್ತಿಗೆಯನ್ನು ಹೊಂದಿರುವುದೇ ಎಂಬುದನ್ನು ಕಂಪನಿ ನಿರ್ಧರಣೆ ಮಾಡುವುದು. ಕಾಂಟ್ರಾಕ್ಟ್ ಕೆಳಕಂಡವುಗಳಿಗೆ ಹಕ್ಕುಗಳನ್ನು ನೀಡುವುದಾಗಿದ್ದರೆ ಆಗ ಕಾಂಟ್ರಾಕ್ಟ್ ಗುತ್ತಿಗೆಯನ್ನು ಒಳಗೊಂಡಿರುತ್ತದೆ. –

ಎ) ಗುರುತಿಸಿದ ಆಸ್ತಿಯ ಬಳಕೆಯ ನಿಯಂತ್ರಣ

ಬಿ) ಗುರುತಿಸಿದ ಆಸ್ತಿಯ ಬಳಕೆಯಿಂದ ಬರುವ ಎಲ್ಲಾ ಆರ್ಥಿಕ ಅನುಕೂಲಗಳನ್ನು ಗಣನೀಯವಾಗಿ ಪಡೆಯುವುದು; ಮತ್ತು

ಸಿ) ಗುರುತಿಸಿದ ಆಸ್ತಿಯ ಬಳಕೆಯ ನಿರ್ದೇಶನ ನೀಡಿಕೆ.

ಕಂಪನಿಯು ಗುತ್ತಿಗೆ ಅವಧಿಯನ್ನು ಗುತ್ತಿಗೆಯ ರದ್ದುಪಡಿಸಲಾಗದ ಅವಧಿಯಾಗಿ ನಿರ್ಧರಣೆ ಮಾಡುವುದು. ಇದರ ಜೊತೆ ಜೊತೆಗೆ ಕಂಪನಿಯು ತನ್ನ ಆಯ್ಕೆಯನ್ನು ಚಲಾಯಿಸಲು ಸಕಾರಣೀಯ ನಿಶ್ಚಿತತೆಯಿರುವುದರಿಂದ ಗುತ್ತಿಗೆಯನ್ನು ವಿಸ್ತರಣೆ ಮಾಡಲು ಆಯ್ಕೆ ಒಂದರಿಂದ ಅಂತಹ ವಿಸ್ತರಣೆ ಮಾಡಬಹುದಾದ ಅವಧಿಯನ್ನು ಒಳಪಡಿಸಬಹುದಾಗಿರುತ್ತದೆ.

ಕಂಪನಿ ಹನ್ನೆರಡು ತಿಂಗಳುಗಳಿಗೂ ಕಡಿಮೆ ಅವಧಿಯ ಗುತ್ತಿಗೆಗಳು (ಅಲ್ಪಾವಧಿ ಗುತ್ತಿಗೆಗಳು) ಮತ್ತು ಕಡಿಮೆ ಮೌಲ್ಯದ ಆಸ್ತಿಗಳು ಹೊರತಾಗಿ ಗುತ್ತಿಗೆ ಕಾಂಟ್ರಾಕ್ಟ್‌ನ ಪ್ರಾರಂಭದಲ್ಲಿ ಆಸ್ತಿಯನ್ನು ಅದರ ಬೆಲೆಯಲ್ಲಿ ಮತ್ತು ಸಂಬಂಧಪಟ್ಟ ಗುತ್ತಿಗೆ ಹೊಣೆಗಾರಿಕೆಯಂತೆ ಬಳಕೆ ಹಕ್ಕನ್ನು (ಆರ್‌ಒಯು) ಪರಿಗಣಿಸುವುದು. ಸದರಿ ಅಲ್ಪಾವಧಿಯ ಮತ್ತು ಕಡಿಮೆ ಮೌಲ್ಯದ ಗುತ್ತಿಗೆಗಳಿಗೆ, ಕಂಪನಿ ಗುತ್ತಿಗೆ ಪಾವತಿಗಳನ್ನು ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಕಾರ್ಯಾಚರಣೆ ಖರ್ಚುಗಳಾಗಿ ಪರಿಗಣಿಸುವುದು.

ಬಳಕೆ ಹಕ್ಕಿನ ಆಸ್ತಿಯ ಬೆಲೆಯು ಗುತ್ತಿಗೆ ಬಾಧ್ಯತೆಯ ಪ್ರಾರಂಭಿಕ ಮಾಪನದ ಮೊತ್ತ , ಗುತ್ತಿಗೆ ಪ್ರಾರಂಭಿಕ ದಿನಾಂಕದಲ್ಲಿ ಅಥವಾ ಅದಕ್ಕೂ ಮುನ್ನ ಮಾಡಿದ ಯಾವುದೇ ಗುತ್ತಿಗೆ ಪಾವತಿಗಳು ಜೊತೆಗೆ ಯಾವುದೇ ಪ್ರಾರಂಭಿಕ ನೇರ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ಗುತ್ತಿಗೆ ಪ್ರೋತ್ಸಾಹ ಧನಗಳನ್ನು ಪಡೆದಿದ್ದರೆ ಅದನ್ನು ಇದರಲ್ಲಿ ಕಳೆದಿರುತ್ತದೆ. ತದನಂತರ ಬಳಕೆ ಹಕ್ಕಿನ ಆಸ್ತಿಗಳನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಯಾವುದೇ ಸಂಚಯನವಾದ ದುರ್ಬಲತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಮಾಪನ ಮಾಡಿದೆ. ಬಳಕೆ ಹಕ್ಕಿನ ಆಸ್ತಿಗಳನ್ನು ಅತಿ ಕಡಿಮೆಯ ಗುತ್ತಿಗೆ ಅವಧಿಯಲ್ಲಿ ಅಥವಾ ಬಳಕೆ ಹಕ್ಕಿನ ಆಸ್ತಿಯ ಉಪಯುಕ್ತತೆ ಜೀವಿತಾವಧಿ ದಿನಾಂಕದಿಂದ ಪ್ರಾರಂಭಿಸಿ ನೇರ ಮಾರ್ಗದ ವಿಧಾನವನ್ನು ಬಳಸಿ ಸವಕಳಿ ಲೆಕ್ಕ ಹಾಕಲಾಗಿದೆ. ಬಳಕೆ ಹಕ್ಕಿನ ಆಸ್ತಿಗಳ ಅಂದಾಜು ಮಾಡಿದ ಉಪಯುಕ್ತತೆ ಜೀವಿತಾವಧಿಯನ್ನು ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಸಂಬಂಧ ಮಾಡಿದ ಅದೇ ಆಧಾರದಲ್ಲಿ ನಿರ್ಧರಣೆ ಮಾಡಲಾಗಿದೆ.

ಕಂಪನಿಯು ಬಳಕೆ ಹಕ್ಕಿನ ಆಸ್ತಿಯು ದುರ್ಬಲಗೊಂಡಿರುವುದೇ ಎಂಬುದನ್ನು ನಿರ್ಧರಣೆ ಮಾಡಲು ಮತ್ತು ಹಣಕಾಸೇತರ ಆಸ್ತಿಗಳ ದುರ್ಬಲತೆಯಲ್ಲಿ ವಿವರಿಸಿರುವಂತೆ ಯಾವುದೇ ಗುರುತಿಸಿದ ದುರ್ಬಲತೆ ನಷ್ಟವನ್ನು ಲೆಕ್ಕ ಮಾಡಲು ಐಎನ್‌ಡಿ ಎಎಸ್ 36 ಅನ್ನು ಅನ್ವಯ ಮಾಡುವುದು.

ಗುತ್ತಿಗೆಯ ಪ್ರಾರಂಭದಲ್ಲಿನ ಗುತ್ತಿಗೆ ಬಾಧ್ಯತೆಗಳಿಗಾಗಿ, ಆ ದಿನಾಂಕದಲ್ಲಿ ಪಾವತಿ ಮಾಡಿರದ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಗುತ್ತಿಗೆ ಬಾಧ್ಯತೆಯನ್ನು ಕಂಪನಿ ಮಾಪನ ಮಾಡುವುದು. ಗುತ್ತಿಗೆಯಲ್ಲಿ ಅಂತರ್ಗತವಾಗಿರುವ ಬಡ್ಡಿದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಬಹುದಾಗಿದ್ದರೆ ಅದನ್ನು ಬಳಸಿ ಗುತ್ತಿಗೆ ಪಾವತಿಯನ್ನು ಕಳೆಯಲಾಗಿದೆ. ಬಡ್ಡಿ ದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಿರದಿದ್ದರೆ, ಆಸ್ತಿಯ ಸ್ವರೂಪ ಮತ್ತು ಸ್ಥಳ, ಸಮಾನ ಭದ್ರತೆ, ಮಾರುಕಟ್ಟೆ ನಿಯಮಗಳು ಮತ್ತು ನಿಬಂಧನೆಗಳು, ಇದೇ ರೀತಿಯ ಆರ್ಥಿಕ ಪರಿಸ್ಥಿತಿಯಲ್ಲಿ ಅನ್ವಯವಾಗುವಿಕೆಯ ಅಂಶಗಳ ಪರಿಗಣನೆ ಸೇರಿದಂತೆ, ಹಣವನ್ನು ಪಡೆಯಲು ಕಂಪನಿ ಪಾವತಿ ಮಾಡಬೇಕಿರುವ ಹೆಚ್ಚಳ ಮಾಡಿದ ಹಣ ಪಡೆಯುವಿಕೆ ದರ ಬಳಸಿ ಗುತ್ತಿಗೆ ಪಾವತಿಗಳನ್ನು ಕಳೆಯಲಾಗಿದೆ.

ಪ್ರಾರಂಭಿಕ ದಿನಾಂಕದ ನಂತರ ಗುತ್ತಿಗೆ ಹೊಣೆಗಾರಿಕೆಯ ಮೊತ್ತವು ಬಡ್ಡಿಯ ಸಂಚಯನ ಬಿಂಬಿಸಲು ಹೆಚ್ಚಳಗೊಂಡಿದೆ ಮತ್ತು ಮಾಡಿದ ಗುತ್ತಿಗೆ ಪಾವತಿಯಿಂದ ಕಡಿಮೆಯಾಗಿದೆ.

ಕಂಪನಿ ಬಳಕೆ ಹಕ್ಕಿನ ಆಸ್ತಿಗಳಿಗೆ ಹೊಂದಾಣಿಕೆಯಾಗಿ ಗುತ್ತಿಗೆ ಬಾಧ್ಯತೆಯ ಮರು ಮಾಪನದ ಮೊತ್ತವನ್ನು ಪರಿಗಣಿಸಿದೆ. ಬಳಕೆ ಹಕ್ಕಿನ ಆಸ್ತಿಯ ವಾಹಕ ಮೊತ್ತವು ಶೂನ್ಯಕ್ಕೆ ಇಳಿಕೆಯಾಗಿರುವ ಸಂದರ್ಭದಲ್ಲಿ ಮತ್ತು ಗುತ್ತಿಗೆ ಬಾಧ್ಯತೆಯ ಮಾಪನದಲ್ಲಿ ಇನ್ನೂ ಇಳಿಕೆಯಾಗುವುದಿದ್ದರೆ ಆಗ ಕಂಪನಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮರು-ಮಾಪನದ ಯಾವುದೇ ಉಳಿಕೆಯಾಗಿರುವ ಮೊತ್ತವನ್ನು ಪರಿಗಣಿಸುವುದು.

ಗುತ್ತಿಗೆ ಬಾಧ್ಯತೆ ಪಾವತಿಗಳನ್ನು ನಗದು ಹರಿವಿನ ಹೇಳಿಕೆಯಲ್ಲಿ ಹಣ ನೀಡಿಕೆ ಚಟುವಟಿಕೆಗಳಲ್ಲಿ ಬಳಸಿದ ನಗದು ಎಂಬುದಾಗಿ ವರ್ಗೀಕರಿಸಲಾಗಿದೆ.

ಕಂಪನಿ ಗುತ್ತಿಗೆ ನೀಡಿಕೆದಾರರಾಗಿ:

ಕಂಪನಿ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳನ್ನು ಹಣಕಾಸಿನ ಅಥವಾ ಕಾರ್ಯಾಚರಣೆಯಾಗುತ್ತಿರುವ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಎಲ್ಲಾ ಅಪಾಯಗಳು ಮತ್ತು ಅನುಕೂಲಗಳನ್ನು ಗಣನೀಯವಾಗಿ ಗುತ್ತಿಗೆದಾರರಿಗೆ ವರ್ಗಾಯಿಸಿರುವ ಗುತ್ತಿಗೆ ಕಾಂಟ್ರಾಕ್ಟ್‌ಗಳನ್ನು ಹಣಕಾಸಿನ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಿದೆ. ಉಳಿದೆಲ್ಲ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳೆಂದು ವರ್ಗೀಕರಿಸಿದೆ.

ಕಂಪನಿ ಮಧ್ಯವರ್ತಿ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳಿಗೆ ಕಂಪನಿ ಪ್ರಧಾನ ಗುತ್ತಿಗೆ ಮತ್ತು ಉಪಗುತ್ತಿಗೆ ಎಂಬುದಾಗಿ ಎರಡು ಪ್ರತ್ಯೇಕ ಕಾಂಟ್ರಾಕ್ಟ್‌ಗಳ ಲೆಕ್ಕಾಚಾರ ಮಾಡಿದೆ. ಉಪ ಗುತ್ತಿಗೆಗಳನ್ನು ಪ್ರಧಾನ ಗುತ್ತಿಗೆಯಿಂದ ಬರುವ ಉಪಯೋಗದ ಹಕ್ಕಿನ ಆಸ್ತಿಯ ಉಲ್ಲೇಖ ಮಾಡುವ ಮೂಲಕ ಹಣಕಾಸಿನ ಗುತ್ತಿಗೆ ಅಥವಾ ಕಾರ್ಯಾಚರಣೆ ಗುತ್ತಿಗೆ ಎಂಬುದಾಗಿಯೂ ಮುಂದುವರಿದ ವರ್ಗೀಕರಣ ಮಾಡಿದೆ.

ಎಲ್) ನೌಕರರ ಸೌಲಭ್ಯಗಳು:

ನಿರೂಪಿತ ವಂತಿಗೆ ಯೋಜನೆ:

ಕಂಪನಿಯ ನಿರೂಪಿತ ವಂತಿಗೆ ಯೋಜನೆಗಳು–ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ವಿವಿಧ ಉಪಬಂಧಗಳ ಕಾಯ್ದೆ, 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಮತ್ತು ನಿವೃತ್ತಿ ಸೌಲಭ್ಯ ಆಗಿರುತ್ತವೆ. ಇವುಗಳಿಗೆ ಕಂಪನಿ ವಂತಿಗೆಗಳನ್ನು ನೀಡುವುದರ ಹೊರತಾಗಿ ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ, ಇಎಸ್ಐಗೆ ಮತ್ತು ನಿವೃತ್ತಿ ಯೋಜನೆಗೆ ಕಂಪನಿಯ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ. ನಿವೃತ್ತಿಗೆ ಸಂಬಂಧಿಸಿದ ಆಸ್ತಿಯನ್ನು ಟ್ರಸ್ಟ್ ಒಂದು ನಿರ್ವಹಿಸುತ್ತಿದ್ದು ಅದು ಭಾರತೀಯ ಜೀವ ವಿಮಾ ನಿಗಮದಲ್ಲಿ ಹೂಡಿಕೆ ಮಾಡುತ್ತಿದೆ.

ಮರಣ ಪರಿಹಾರ ನಿಧಿ:

ಮರಣ ಪರಿಹಾರ ನಿಧಿಯ ಬಗ್ಗೆ ಕಂಪನಿ ಹೊಂದಿರುವ ಹೊಣೆಗಾರಿಕೆಯನ್ನು ವರದಿಗಾರಿಕೆ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ.

ನಿರೂಪಿತ ಸೌಲಭ್ಯ ಯೋಜನೆ:

ಕಂಪನಿಯು ಗ್ರ್ಯಾಚ್ಯುಟಿ ಕಾಯ್ದೆ 1972ರನ್ವಯ ಗ್ರ್ಯಾಚ್ಯುಟಿ ಪಾವತಿಗಾಗಿ ನಿರೂಪಿತ ಸೌಲಭ್ಯ ಯೋಜನೆಯನ್ನು ಹೊಂದಿದೆ. ಗ್ರ್ಯಾಚ್ಯುಟಿ ಯೋಜನೆಯು ನೌಕರರ ನಿವೃತ್ತಿಗೆ ನಿಗದಿಯಾಗಿರುವ ವಯೋಮಾನದ ಸೇವಾ ಅವಧಿಯಲ್ಲಿ 5 ವರ್ಷ ಅಥವಾ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ ಒಟ್ಟಾಗಿ ಹಣಕಾಸು ಪಾವತಿ ಸೌಲಭ್ಯ ಒದಗಿಸುತ್ತದೆ. ಅಂಗವಿಕಲತೆ ಅಥವಾ ಸೇವೆಯಿಂದ ವಜಾ ಆದಲ್ಲಿ ಅಂತಹ ಸಿಬ್ಬಂದಿಯವರಿಗೆ ಅವರು ಕಂಪನಿಯೊಂದಿಗೆ ಅದುವರೆಗೂ ಸೇವೆ ಸಲ್ಲಿಸಿದ ವರ್ಷಗಳು ಮತ್ತು ಸಂಬಂಧಪಟ್ಟ ಸಿಬ್ಬಂದಿಯವರು ಪಡೆದ ಕೊನೆಯ ತಿಂಗಳ ವೇತನ ಅಂಶಗಳನ್ನು ಪರಿಗಣಿಸಿ ಗ್ರ್ಯಾಚ್ಯುಟಿಯನ್ನು ಪಾವತಿ ಮಾಡಲಾಗುತ್ತದೆ. ಭಾರತೀಯ ಜೀವ ವಿಮಾ ನಿಗಮ ನಿರ್ವಹಿಸುತ್ತಿರುವ ಎಂಎಸ್ಐಎಲ್ ನೌಕರರ ನಿವೃತ್ತಿ ನಿಧಿ ಟ್ರಸ್ಟ್‌ಗೆ ಕಂಪನಿ ವಂತಿಗೆ ನೀಡುತ್ತದೆ.

ಕಂಪನಿಯು ಹೊಣೆಗಾರಿಕೆಯನ್ನು (ಯೋಜಿತ ಘಟಕ ಸಾಲ ವಿಧಾನವನ್ನು ಬಳಸಿ) ಪ್ರತಿ ವರದಿ ಅವಧಿಯ ಕೊನೆಯಲ್ಲಿ ವಿಮಾಗಣನ ಮೌಲ್ಯಮಾಪನದಿಂದ ನಿರ್ಧರಣೆ ಮಾಡಲಾಗುತ್ತಿದೆ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವನ್ನು ಭವಿಷ್ಯದ ಅಂದಾಜು ನಗದು ಚಲಾವಣೆಯನ್ನು ಸಂಬಂಧಿತ ಬಾಧ್ಯತೆಯ ಅಂದಾಜು ಅವಧಿಯನ್ನು ಹೊಂದಿರುವ ಸರ್ಕಾರದ ಬಾಂಡುಗಳಿಂದ ವರದಿಯ ವರ್ಷದ ಕೊನೆಯಲ್ಲಿ ಲಭ್ಯವಾಗುವ ಮಾರುಕಟ್ಟೆ ಫಲಿತಾಂಶಗಳಿಗೆ ಸಂಬಂಧಿಸಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ನಿವ್ವಳ ಬಡ್ಡಿ ವೆಚ್ಚವನ್ನು ನಿರೂಪಿತ ಸೌಲಭ್ಯ ಬಾಧ್ಯತೆಯನ್ನು ನಿವ್ವಳ ಬಾಕಿ ಮತ್ತು ಯಾವುದಾದರೂ ಯೋಜನೆ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯಗಳಿಗೆ ಕಡಿತ ದರ (ಸೋಡಿ) ಅನ್ವಯಿಸಿ ಲೆಕ್ಕ ಹಾಕಲಾಗುತ್ತಿದೆ. ಈ ವೆಚ್ಚವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನೌಕರರ ಸೌಲಭ್ಯ ವೆಚ್ಚದಲ್ಲಿ ಸೇರಿಸಲಾಗುತ್ತದೆ.

ಗ್ರ್ಯಾಚ್ಯುಟಿ ಯೋಜನೆಯ ಸಂಬಂಧಿತ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಬಾಧ್ಯತೆ ಅಥವಾ ಆಸ್ತಿಯು ವರದಿ ಅವಧಿಯ ಕೊನೆಯಲ್ಲಿ ಯಾವುದಾದರೂ ಯೋಜನಾ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯವನ್ನು ಕಳೆದು ಉಂಟಾಗುವ ಮೌಲ್ಯವೇ ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವಾಗುತ್ತದೆ.

ವಿಮಾಗಣನಾ ಅಂದಾಜುಗಳಲ್ಲಿ ಅನುಭವ, ಹೊಂದಾಣಿಕೆ ಮತ್ತು ಮಾರ್ಪಾಟುಗಳಿಂದ ಉಂಟಾಗುವ ಲಾಭ ಮತ್ತು ನಷ್ಟಗಳ ಮರು ಮಾಪನವನ್ನು ಅವುಗಳು ಉದ್ಭವಿಸುವ ಅವಧಿಯಲ್ಲಿ ಮಾನ್ಯ ಮಾಡಲಾಗುತ್ತದೆ. ಇದನ್ನು ನೇರವಾಗಿ ಇತರ ಸಮಗ್ರ ಆದಾಯದಲ್ಲಿ ಮತ್ತು ಲಾಭ ಅಥವಾ ನಷ್ಟದಲ್ಲಿ ಎಂದಿಗೂ ಮರು ವರ್ಗೀಕರಣ ಮಾಡುವುದಿಲ್ಲ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯದಲ್ಲಿ ಯೋಜನಾ ತಿದ್ದುಪಡಿ ಅಥವಾ ಸ್ಥಗಿತತೆಯಿಂದ ಉಂಟಾಗುವ ಬದಲಾವಣೆಯನ್ನು ತಕ್ಷಣವೇ ಲಾಭ ಮತ್ತು ನಷ್ಟ ಹೇಳಿಕೆಯಲ್ಲಿ ಹಿಂದಿನ ಸೇವಾ ವೆಚ್ಚವೆಂದು ಮಾನ್ಯಮಾಡಲಾಗುತ್ತದೆ.

ಗಳಿಕೆ ರಜೆಗಳು:

ಕಂಪನಿಯ ನೀತಿನಿಯಮಾನುಸಾರ ನೌಕರರು ಉಪಯೋಗಿಸದೇ ಜಮೆಯಾಗುವ ರಜೆಗಳನ್ನು ಮುಂದಿನ ಸೇವಾ ಅವಧಿಗೆ ಮುಂದುವರಿಸಿಕೊಂಡು ಹೋಗಬಹುದು ಮತ್ತು ಬಳಸಿಕೊಳ್ಳಬಹುದು ಅಥವಾ ನಗದು ಪರಿಹಾರ ಪಡೆದುಕೊಳ್ಳಬಹುದಾಗಿದೆ. ಪರಿಹಾರಿತ ಗೈರುಹಾಜರಿಯು ನೌಕರರು ಸೇವೆ ಸಲ್ಲಿಸುವ ಅವಧಿಯ ಕೊನೆಯಾದ ನಂತರ 12 ತಿಂಗಳೊಳಗಾಗಿ ಬಾಕಿ ಇರುತ್ತವೆ. ಆ ಸೌಲಭ್ಯವನ್ನು ಪ್ರಸಕ್ತ ನೌಕರರ ಸೌಲಭ್ಯ ಎಂದು ವರ್ಗೀಕರಣ ಮಾಡಲಾಗುವುದು. ಕಂಪನಿ ಆ ತೆರನಾದ ಪರಿಹಾರಿತ ಗೈರುಹಾಜರಿಯನ್ನು ನೌಕರರು ಸೇವೆ ಸಲ್ಲಿಸುವ ವರ್ಷದಲ್ಲಿ ತನ್ನ ಬಾಧ್ಯತೆಯೆಂದು ಪರಿಗಣಿಸುತ್ತದೆ. ಅದು ನೌಕರರ ಹಕ್ಕನ್ನು ವೃದ್ಧಿಸುತ್ತದೆ.

ಇದರೊಡಗಿನ ಸದರಿ ಬಾಧ್ಯತೆಯನ್ನು ಸಂಗ್ರಹಿತ ಪರಿಹಾರಿತ ಗೈರುಹಾಜರಿಗಳ ನಿರೀಕ್ಷಿತ ವೆಚ್ಚ ಬಳಕೆಯಾಗದ ರಜಾ ಹಕ್ಕಿನ ಪರಿಣಾಮವಾಗಿ ಹೆಚ್ಚುವರಿ ಮೊತ್ತವಾಗಿ ಪಾವತಿ ಮಾಡಬೇಕಾಗಿದೆ ಎಂದು ವರದಿಯ ಅವಧಿಯಂದಿನಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಕಂಪನಿಯ ಋಣಭಾರವನ್ನು ವಿಮಾಗಣವಾಗಿ (ಯೋಜಿತ ಘಟಕ ಸಾಲ ವಿಧಾನ ಬಳಸಿ) ಪ್ರತಿ ವರದಿ ಮಾಡುವ ಅವಧಿಯ ಕೊನೆಯಲ್ಲಿ ನಿರ್ಧರಣೆ ಮಾಡಲಾಗಿದೆ.

ಇತರೆ ಅಲ್ಪಾವಧಿ ಸೌಲಭ್ಯಗಳು:

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷಿಯಾ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿ ಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

ಅಲ್ಪಾವಧಿ ನೌಕರರ ಸೌಲಭ್ಯಗಳು ಕಾರ್ಯನಿರ್ವಹಣಾ ಬೋನಸ್ ಸೇರಿದಂತೆ ನೌಕರರ ವೆಚ್ಚಗಳೆಂದು ನೌಕರರು ಸಲ್ಲಿಸುವ ಸೇವಾ ಅವಧಿಗೆ ಪಾವತಿ ಮಾಡಿದ ಅಥವಾ ಮಾಡಬೇಕಾದ ಮೊತ್ತದ ಆಧಾರದಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯ ಪಟ್ಟಿಯಲ್ಲಿ ಮಾನ್ಯ ಮಾಡಲಾಗುತ್ತದೆ.

ಎಂ. ತೆರಿಗೆ ವೆಚ್ಚಗಳು:

ಆದಾಯ ತೆರಿಗೆಗಳು

ಆದಾಯ ತೆರಿಗೆ ವೆಚ್ಚಗಳು ಚಾಲ್ತಿಯಲ್ಲಿ ಪಾವತಿ ಮಾಡಬೇಕಾದ ತೆರಿಗೆ ಮತ್ತು ಮುಂದೂಡಿದ ತೆರಿಗೆಗಳ ಒಟ್ಟು ಮೊತ್ತವಾಗಿವೆ.

ಚಾಲ್ತಿ ತೆರಿಗೆಗಳು

ಚಾಲ್ತಿ ತೆರಿಗೆಯು ಆದಾಯ ತೆರಿಗೆ ಕಾಯ್ದೆ 1961ರ ಉಪಬಂಧಗಳನುಸಾರ ಮತ್ತು ಅನ್ವಯಿತ ತೆರಿಗೆ ದರಗಳನುಸಾರ ಆ ವರ್ಷದ ತೆರಿಗೆ ವಿಧಿಸಬಹುದಾದ ಲಾಭದ ಮೊತ್ತ ಆಧರಿಸಿ ನಿರ್ಧರಣೆ ಮಾಡಿರುವ ಪಾವತಿ ಮಾಡಬೇಕಾದ ತೆರಿಗೆ ಮೊತ್ತವಾಗಿರುತ್ತದೆ. ಅಂತೆಯೇ ಇತರ ದೇಶಗಳಲ್ಲಿ ಕಂಪನಿ ಕಾರ್ಯನಿರ್ವಹಿಸಿ ಅಲ್ಲಿ ತೆರಿಗೆ ವಿಧಿಸಬಹುದಾದ ಆದಾಯ ಗಳಿಸಿದಲ್ಲಿ ಆದೇಶದಲ್ಲಿ ಅನ್ವಯಿಸುವ ತೆರಿಗೆ ಕಾನೂನುಗಳನುಸಾರ ಚಾಲ್ತಿ ತೆರಿಗೆ ಪಾವತಿ ಮಾಡಬೇಕಾಗುವುದು.

ಕಂಪನಿ ಚಾಲ್ತಿ ತೆರಿಗೆ ಆಸ್ತಿ ಮತ್ತು ಚಾಲ್ತಿ ತೆರಿಗೆ ಋಣ ಬಾಧ್ಯತೆಗಳನ್ನು ನಿರುಕ್ತಿಗೊಳಿಸಿದೆ. ಇಲ್ಲಿ ಕಂಪನಿ ಕಾನೂನಾತ್ಮಕವಾಗಿ ಪರಿಗಣಿತ ಮೊತ್ತಗಳನ್ನು ಚಾಲನೆಗೊಳಪಡಿಸಿ ಜಾರಿಗೊಳಿಸುವ ಹಕ್ಕು ಹೊಂದಿದೆ ಮತ್ತು ಅದು ನಿವ್ವಳ ಆಧರಿತದಲ್ಲಿ ಇತ್ಯರ್ಥಪಡಿಸುವ ಅಥವಾ ಏಕಕಾಲಕ್ಕೆ ಆಸ್ತಿಯನ್ನು ಹೊಂದಲು ಮತ್ತು ಋಣಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಉದ್ದೇಶಿಸುತ್ತದೆ.

ಮುಂದೂಡಿದ ತೆರಿಗೆ:

ಮುಂದೂಡಿದ ತೆರಿಗೆಗಳನ್ನು ಆಸ್ತಿಗಳ ವಾಹಕ ಮೊತ್ತಗಳು ಮತ್ತು ಋಣಬಾಧ್ಯತೆಗಳ ನಡುವಿನ ತಾತ್ಕಾಲಿಕ ವ್ಯತ್ಯಾಸಗಳೆಂದು ಹಣಕಾಸು ಹೇಳಿಕೆಗಳಲ್ಲಿ ಮತ್ತು ತೆರಿಗೆ ವಿಧಿಸಬಹುದಾದ ಲಾಭದ ಗಣನೆಯಲ್ಲಿ ಉಪಯೋಗಿಸುವ ಸಮನ್ವಯಿಕ ತೆರಿಗೆ ಆಧಾರಗಳಲ್ಲಿ ಮಾನ್ಯ ಮಾಡಲಾಗುತ್ತದೆ. ಮುಂದೂಡಿದ ತೆರಿಗೆ ಬಾಧ್ಯತೆಗಳನ್ನು ಸಾಮಾನ್ಯವಾಗಿ ಎಲ್ಲ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳೆಂದು ಗುರುತಿಸಲಾಗುತ್ತದೆ. ಮುಂದೂಡಿದ ತೆರಿಗೆ ಆಸ್ತಿಗಳನ್ನು ಸಾಮಾನ್ಯವಾಗಿ ಎಲ್ಲಾ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗಾಗಿ ತೆರಿಗೆ ವಿಧಿಸಬಹುದಾದ ಲಾಭಗಳು ಲಭ್ಯವಾಗಲಿದ್ದು ಅವುಗಳಿಗೆ ಪ್ರತಿಯಾಗಿ ಆ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಿಕೊಳ್ಳಲು ಸಾಧ್ಯ ಎಂದು ಮಾನ್ಯ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ವರದಿ ಮಾಡುವ ಪ್ರತಿ ಅವಧಿಯ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಮುಂದೆ ಅದು ಉಂಟಾಗಬಹುದೆಂದು ಊಹಿಸುವುದಕ್ಕಿಲ್ಲ ಎನ್ನುವ ಮಟ್ಟಿಗೆ ಕಡಿತಗೊಳಿಸಲಾಗುತ್ತದೆ. ಏಕೆಂದರೆ ಸಾಕಷ್ಟು ತೆರಿಗೆ ವಿಧಿಸಬಹುದಾದ ಲಾಭವು ಲಭ್ಯವಿದ್ದು ಪೂರ್ಣ ತೆರಿಗೆ ಕಡಿತಕ್ಕೆ ಅವಕಾಶ ಅಥವಾ ವಸೂಲಿ ಮಾಡಬೇಕಾದ ಆಸ್ತಿಯ ಭಾಗ ಲಭ್ಯವಿರುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಬಾಧ್ಯತೆಗಳನ್ನು ಬಾಧ್ಯತೆಗಳು ಇತ್ಯರ್ಥಗೊಳಿಸಲಾದ ಅವಧಿಯಲ್ಲಿ ಅನ್ವಯವಾಗಬಹುದೆಂದು ನಿರೀಕ್ಷಿಸಿದ ತೆರಿಗೆ ದರಗಳಲ್ಲಿ ಅಥವಾ ಆಸ್ತಿಯ ನಗದೀಕರಣದ ಅಥವಾ ಹಾಲಿ ಇರುವ ತೆರಿಗೆದರ (ತೆರಿಗೆ ಕಾನೂನುಗಳು) ಅಥವಾ ತದನಂತರ ವರದಿ ಅವಧಿಯ ಕೊನೆಯಲ್ಲಿ ರೂಪಿಸುವ ಕಾನೂನುಗಳನ್ನು ಆಧರಿಸಿ ಮಾಪನ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಬಾಧ್ಯತೆಗಳು ಒಂದು ವೇಳೆ ಚಾಲ್ತಿ ತೆರಿಗೆ ಬಾಧ್ಯತೆಗಳಿಗೆ ಪ್ರತಿಯಾಗಿ ಚಾಲ್ತಿ ತೆರಿಗೆ ಆಸ್ತಿಗಳನ್ನು ರೂಪಿಸಲು ಕಾನೂನಾತ್ಮಕ ಹಕ್ಕು ಅಸ್ತಿತ್ವದಲ್ಲಿದ್ದಲ್ಲಿ ಮತ್ತು ಮುಂದೂಡಿದ ತೆರಿಗೆಗಳು. ಅದೇ ತೆರಿಗೆ ವಿಧಿಸಬಹುದಾದ ಸಂಸ್ಥೆ ಮತ್ತು ಅದೇ ತೆರಿಗೆ ಪ್ರಾಧಿಕಾರಕ್ಕೆ ಸಂಬಂಧಿಸಿದಲ್ಲಿ ನಿರುಕ್ತಿಗೊಳ್ಳುತ್ತವೆ.

ಒಂದು ಅವಧಿಯ ಚಾಲ್ತಿ ಮತ್ತು ಮುಂದೂಡಿದ ತೆರಿಗೆ:

ಚಾಲ್ತಿ ಮತ್ತು ಮುಂದೂಡಿದ ತೆರಿಗೆಯನ್ನು ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಬರುವ ಬಾಬ್ತುಗಳಿಗೆ ಸಂಬಂಧಿಸಿದಂತಹ ಪ್ರಕರಣದಲ್ಲಿ ಚಾಲ್ತಿ ಮತ್ತು ಮುಂದೂಡಿದ ತೆರಿಗೆಗಳನ್ನು ಸಹ ಕ್ರಮವಾಗಿ ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಮಾನ್ಯ ಮಾಡಿರುವುದನ್ನು ಹೊರತುಪಡಿಸಿ ಕಂಪನಿಯ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಲಾಗುತ್ತದೆ.

ಎನ್) ಪ್ರತಿ ಷೇರಿನ ಗಳಿಕೆಗಳು:

ಷೇರು ಒಂದರ ಮೂಲ ಗಳಿಕೆಗಳನ್ನು , ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಗೆ ನಿವ್ವಳ ಲಾಭ ಅಥವಾ ನಷ್ಟವನ್ನು, (ಕಾರಣವಾಗಬಹುದಾದ ತೆರಿಗೆ ಕಡಿತದ ನಂತರ) ಆ ಅವಧಿ

ಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗಿದೆ. ಈ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಸಂಬಂಧಿಸಿತ ಸಂಪನ್ಮೂಲಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಬದಲಾಯಿಸಿದ ಪೋಟೆನ್ಶಿಯಲ್ ಈಕ್ವಿಟಿ ಷೇರುಗಳ ಪರಿವರ್ತನೆಯನ್ನು ಹೊರತುಪಡಿಸಿ ಬೋನಸ್ ನೀಡಿಕೆಗೆ ಹೊಂದಾಣಿಕೆ ಮಾಡಲಾಗಿದೆ.

ಷೇರು ಒಂದರ ಕ್ಷೀಣಿಸಿದ ಗಳಿಕೆಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು ಮತ್ತು ಈ ಅವಧಿಯಲ್ಲಿ ಬಾಕಿಯಿರುವ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಎಲ್ಲಾ ಕ್ಷೀಣಿಸುವ ಪೊಟೆನಿಷಿಯಲ್ ಈಕ್ವಿಟಿ ಷೇರುಗಳಿಗೆ ಹೊಂದಾಣಿಕೆ ಮಾಡಿದೆ.

ಪ್ರತಿ ಷೇರಿನ ಕ್ಷೀಣಿಸಿದ ಗಳಿಕೆಯು ಪ್ರತಿ ಷೇರಿನ ಮೂಲ ಗಳಿಕೆಯ ನಿರ್ಧಾರಣೆಗೆ ಬಳಸಿದ ಸಂಖ್ಯೆಗೆ ಕೆಳಕಂಡವುಗಳನ್ನು ಪರಿಗಣಿಸಲು ಹೊಂದಾಣಿಕೆಯಾಗುತ್ತದೆ.

(i) ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದೊಂದಿಗೆ ಬಡ್ಡಿ ಮತ್ತು ಇತರ ಹಣಕಾಸು ವೆಚ್ಚಗಳ ಸಂಯೋಜನೆಗಳ ಆದಾಯ ತೆರಿಗೆಯ ನಂತರದ ಪರಿಣಾಮ ಮತ್ತು

(ii) ಎಲ್ಲಾ ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದ ಪರಿವರ್ತನೆಯನ್ನು ಊಹಿಸಿ ಮಾಪನ ಮಾಡಿದ ಸರಾಸರಿ ಬಾಕಿ ಇರಬಹುದಾದ ಹೆಚ್ಚುವರಿ ಈಕ್ವಿಟಿ ಷೇರುಗಳು

ಓ) ವ್ಯವಸ್ಥೆಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳು:

ಕಂಪನಿಯು ಹಿಂದಿನ ಘಟನಾವಳಿಗಳ ಪರಿಣಾಮವಾಗಿ ಪ್ರಸಕ್ತದಲ್ಲಿ ಪೂರೈಸಬೇಕಾಗಿರುವ ಬಾಧ್ಯತೆಯನ್ನು (ಕಾನೂನಾತ್ಮಕ ಅಥವಾ ರಚನಾತ್ಮಕ) ಹೊಂದಿದ್ದಲ್ಲಿ ಆಗ ಅದಕ್ಕಾಗಿ ಅವಕಾಶಗಳನ್ನು ಮಾನ್ಯ ಮಾಡಲಾಗಿದೆ. ಆ ರೀತಿಯ ಬಾಧ್ಯತೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯವಿದ್ದು, ಈ ಬಗ್ಗೆ ವಿಶ್ವಾಸನೀಯವಾಗಿ ಅಂದಾಜು ಮಾಡಬಹುದಾಗಿದೆ.

ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದಿನಂತೆ ಪ್ರಸಕ್ತ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಅಗತ್ಯವೆಂದು ಪರಿಗಣಿಸಿರುವ ಮೊತ್ತವು ಅತ್ಯುತ್ತಮ ಅಂದಾಜು ಮೊತ್ತ ಎಂದು ಬಾಧ್ಯತೆಯನ್ನು ಆವರಿಸಿಕೊಂಡಿರುವ ಅಪಾಯ ಮತ್ತು ಅನಿಶ್ಚಿತತೆಗಳನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಮಾಡಲಾಗಿದೆ. ಪ್ರಸಕ್ತ ಬಾಧ್ಯತೆಯನ್ನು ಇತ್ಯರ್ಥಪಡಿಸಲು ನಗದು ಚಲಾವಣೆಯನ್ನು ಬಳಸಿ ಅಂದಾಜಿಸಿದ ಮುನ್ನೇರ್ಪಾಡುಗಳನ್ನು ಮಾಪನ ಮಾಡಿದಾಗ ಅದರ ವಾಹಕ ಮೊತ್ತವು ಆ ನಗದು ಚಲಾವಣೆಯ ಪ್ರಸಕ್ತ ಮೌಲ್ಯವಾಗಿರುತ್ತದೆ. (ಯಾವಾಗ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿರುವುದು).

ಒಂದು ವೇಳೆ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿದ್ದಲ್ಲಿ, ಮುನ್ನೇರ್ಪಾಡುಗಳನ್ನು ಮುಂದಿನ ನಿರೀಕ್ಷಿತ ನಗದು ಚಲಾವಣೆಯನ್ನು ತೆರಿಗೆ ಪೂರ್ವ ದರದಲ್ಲಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ಇದು ಹಣದ ಸಮಯ ಮೌಲ್ಯದ ಮಾರುಕಟ್ಟೆ ಅಂದಾಜುಗಳನ್ನು ಮತ್ತು ಬಾಧ್ಯತೆಗೆ ನಿರ್ದಿಷ್ಟವಾದ ಅಪಾಯಗಳನ್ನು ಬಿಂಬಿಸುತ್ತದೆ. ಕಾಲಾವಧಿಯ ಕಾರಣದಿಂದಾಗಿ ಮುನ್ನೇರ್ಪಾಡುಗಳ ಹೆಚ್ಚಳವನ್ನು ಬಡ್ಡಿ ವೆಚ್ಚವೆಂದು ಮಾನ್ಯ ಮಾಡಲಾಗಿದೆ.

ಗುರುತರ ಜವಾಬ್ದಾರಿಯುಳ್ಳ ಗುತ್ತಿಗೆಗಳಡಿ ಉಂಟಾಗುವ ಪ್ರಸಕ್ತ ಬಾಧ್ಯತೆಗಳನ್ನು ಮುನ್ನೇರ್ಪಾಡುಗಳೆಂದು ಮಾನ್ಯ ಮಾಡಲಾಗಿದೆ ಮತ್ತು ಮಾಪನ ಮಾಡಲಾಗಿದೆ.. ಒಂದು ಗುರುತರ ಗುತ್ತಿಗೆಯನ್ನು ಒಂದು ಗುತ್ತಿಗೆಯಡಿ ಇರುವ ಬಾಧ್ಯತೆಗಳನ್ನು ಪೂರೈಸಲು ತಡೆಯಲಸಾಧ್ಯವಾದ ವೆಚ್ಚದ ಮೊತ್ತವು ಆ ಗುತ್ತಿಗೆಯಿಂದ ಬರಬಹುದೆಂದು ನಿರೀಕ್ಷಿಸಲಾದ ಹಣಕಾಸು ಲಾಭಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ಗುರುತರ ಜವಾಬ್ದಾರಿಗಳ ಗುತ್ತಿಗೆ ಎಂದು ಪರಿಗಣಿಸಲಾಗುತ್ತದೆ.

ಸ್ಥಗಿತಗೊಳಿಸುವ ವೆಚ್ಚಗಳನ್ನು ಬಾಧ್ಯತೆಯ ಇತ್ಯರ್ಥವಾಗಿ ವೆಚ್ಚದ ಅತ್ಯುತ್ತಮ ಅಂದಾಜು ಎಂದು ಪರಿಗಣಿಸಲಾಗುವುದು ಅಥವಾ ಬಾಧ್ಯತೆಯನ್ನು ಮೂರನೇ ವ್ಯಕ್ತಿಗೆ ವರ್ಗಾಯಿಸುವುದು. ಬಾಧ್ಯತೆಗಳ ಸ್ಥಗಿತಗೊಳಿಸುವ ಮುನ್ನೇರ್ಪಾಡುಗಳನ್ನು ವ್ಯವಸ್ಥೆಯ ಆರಂಭದಲ್ಲೇ ಗುರುತಿಸಬೇಕಾಗುತ್ತದೆ. ವ್ಯವಸ್ಥೆಗಳ ಕೊನೆಯಲ್ಲಿ ಭರಿಸಬೇಕಾದ ಅಂದಾಜು ವೆಚ್ಚಗಳನ್ನು ಮರಳಿ ಪಡೆಯುವ ಮಾರುಕಟ್ಟೆ ದರ ಬಳಸಿ ಅದರ ಪ್ರಸಕ್ತ ಮೌಲ್ಯಕ್ಕೆ ಕಡಿತಗೊಳಿಸಲಾಗಿದೆ.

ಕೆಲವು ಅಥವಾ ಎಲ್ಲ ಹಣಕಾಸು ಲಾಭಗಳ ಸೌಲಭ್ಯಗಳನ್ನು ಇತ್ಯರ್ಥಗೊಳಿಸಬೇಕಾದಲ್ಲಿ ಮೂರನೇ ವ್ಯಕ್ತಿ ಸಂಸ್ಥೆಯಿಂದ ಮರುವಸೂಲಿ ಮಾಡುವ ಅವಕಾಶವನ್ನು ನಿರೀಕ್ಷಿಸಲಾಗುತ್ತದೆ. ಹಾಗೆ ಪಡೆಯಬಹುದಾದ ಮೊತ್ತವು ಒಂದು ವೇಳೆ ಮರು ಭರಿಸುವಿಕೆಯ ಮೊತ್ತವು ಪಡೆಯಲಾಗುವುದು ಎಂದು ಬಹುತೇಕ ಖಚಿತವಾಗಿದ್ದಲ್ಲಿ ಆಸ್ತಿ ಎಂದು ಮಾನ್ಯ ಮಾಡಲಾಗಿದೆ ಮತ್ತು ಆ ಪಡೆಯಬಹುದಾದ ಮೊತ್ತವನ್ನು ವಿಶ್ವಾಸನೀಯವಾಗಿ ಮಾಪನ ಮಾಡಲಾಗಿದೆ.

ಸಂಭಾವ್ಯ ಬಾಧ್ಯತೆಗಳನ್ನು ಕೆಳಕಂಡ ಸನ್ನಿವೇಶಗಳಿದ್ದಲ್ಲಿ ಬಹಿರಂಗಪಡಿಸಲಾಗಿದೆ:

- ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನಾವಳಿಯಿಂದ ಉಂಟಾಗಿದ್ದಲ್ಲಿ, ಆ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯತೆ ಕಂಡು ಬರುವ ಸಾಧ್ಯತೆಗಳು ಇಲ್ಲದಿರುವಾಗ
- ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನೆಯಿಂದ ಉಂಟಾಗಿದ್ದು ಬಾಧ್ಯತೆಯ ವಿಶ್ವಾಸನೀಯ ಅಂದಾಜು ಮಾಡಲು ಸಾಧ್ಯವಾಗದಿದ್ದಾಗ ಮತ್ತು

- ಹಿಂದಿನ ಘಟನಾವಳಿಗಳಿಂದ ಉಂಟಾಗಬಹುದಾದ ಬಾಧ್ಯತೆಗಳಲ್ಲಿ ಸಂಪನ್ಮೂಲಗಳ ರವಾನೆ ಸಾಧ್ಯತೆಗಳು ಕ್ಷೀಣವಾಗಿಲ್ಲ ದಿದ್ದಲ್ಲಿ;

ಸಂಭಾವ್ಯ ಆಸ್ತಿಗಳನ್ನು ಆರ್ಥಿಕ ಲಾಭಗಳ ಒಳಹರಿವಿಕೆಯ ಸಾಧ್ಯತೆಗಳಿದ್ದಾಗ ಲೆಕ್ಕ ನಿರ್ವಹಣಾ ವಿಭಾಗಕ್ಕೆ ಟಿಪ್ಪಣಿಗಳ ಮೂಲಕ ಹಣಕಾಸು ಹೇಳಿಕೆಗಳಲ್ಲಿ ತೋರಿಸಲಾಗುತ್ತದೆ.

ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಮುನ್ನೇರ್ಪಾಡುಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳ ಕುರಿತು ಪರಿಶೀಲಿಸಲಾಗಿದೆ.

ಪಿ) ಹಣಕಾಸು ಸಾಧನಗಳು

ಹಣಕಾಸು ಆಸ್ತಿಗಳು:

ಆರಂಭಿಕ ಮಾನ್ಯತೆ ಮತ್ತು ಮಾಪನ:

ಎಲ್ಲಾ ಆರ್ಥಿಕ ಹಣಕಾಸು ಆಸ್ತಿಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಆ ಹಣಕಾಸು ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದ ವ್ಯವಹಾರದ ವೆಚ್ಚವನ್ನು ಹೊಂದಾಣಿಕೆ ಮಾಡಲಾಗಿದೆ.

ತದನಂತರದ ಮಾಪನ

ಋಣ ಸಾಧನಗಳು

ಋಣಸಾಧನಗಳು ಅಪಮೌಲ್ಯಗೊಳಿಸಿದ ವೆಚ್ಚದಲ್ಲಿ:

ಒಂದು ಋಣ ಸಾಧನವನ್ನು ವ್ಯವಹಾರದ ಮಾದರಿಯ ವ್ಯಾಪ್ತಿಯಲ್ಲಿ ಅಂದರೆ ಒಪ್ಪಂದವಾದ ನಗದು ಹರಿವಿಕೆಯ ಸಂಗ್ರಹಣೆಗಾಗಿ ಆಸ್ತಿಯ ಹೊಂದುವ ಉದ್ದೇಶಕ್ಕಾಗಿ ಆಸ್ತಿಯನ್ನು ಹಿಡಿದಿಟ್ಟಿದ್ದಲ್ಲಿ ಅದನ್ನು ತದನಂತರ ಅಮಾರ್ಟೈಸ್ ಬೆಲೆಯಲ್ಲಿ ಮಾಪನ ಮಾಡಲಾಗುತ್ತದೆ ಮತ್ತು ಗುತ್ತಿಗೆಗಾರಿಕೆಯ ಹಣಕಾಸು ಆಸ್ತಿಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಹರಿವಿಕೆಗೆ ಅವಕಾಶ ಒದಗಿಸುತ್ತದೆ. ಅವುಗಳು ಇಡಿಯಾಗಿ ಬಾಕಿ ಇರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತವೆ.

ಆರಂಭದ ಮಾಪನದ ನಂತರ ಅಂತಹ ಹಣಕಾಸು ಆಸ್ತಿಗಳನ್ನು, ಪರಿಣಾಮಕಾರಿ ಬಡ್ಡಿ ದರವನ್ನು (ಇಐಆರ್) ಉಪಯೋಗಿಸಿಕೊಂಡು ಅಪಮೌಲ್ಯೀಕರಣ ವೆಚ್ಚ ವಿಧಾನದಲ್ಲಿ ಮಾಪನ ಮಾಡಲಾಗಿದೆ. ಅಪಮೌಲ್ಯೀಕರಣ ವೆಚ್ಚವನ್ನು ಪರಿಣಾಮಕಾರಿ ಬಡ್ಡಿ ದರದ ಅವಿಭಾಜ್ಯ ಭಾಗಗಳಾದ ಯಾವುದೇ ಸೋಡಿ, ಸ್ವಾಧೀನದ ಮೇಲೆ ಪ್ರೀಮಿಯಂ ಮತ್ತು ಶುಲ್ಕಗಳು ಅಥವಾ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಲಾಗಿದೆ. ಪರಿಣಾಮಕಾರಿ ಬಡ್ಡಿ ದರದ ಅಪಮೌಲ್ಯೀಕರಣವು ಲಾಭ ಅಥವಾ ನಷ್ಟದಲ್ಲಿನ ಹಣಕಾಸು ಆದಾಯದಲ್ಲಿ ಒಳಗೊಂಡಿದೆ. ನಿಶ್ಚಲತೆಯಿಂದ ಉಂಟಾದ ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯ ಹೊಂದಿರುವ ಋಣ ಸಾಧನಗಳು (FVTOCI)

ಒಂದು ಋಣ ಸಾಧನವನ್ನು ತದನಂತರದಲ್ಲಿ ಒಂದು ವೇಳೆ ಅದನ್ನು ವ್ಯವಹಾರದ ಮಾದರಿ ವ್ಯಾಪ್ತಿಯಲ್ಲಿ ಹಿಡಿದಿಟ್ಟಿದಲ್ಲಿ ಅದನ್ನು ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ಇದರ ಉದ್ದೇಶ ಒಪ್ಪಂದವಾದ ನಗದು ಚಲಾವಣೆ ಮತ್ತು ಹಣಕಾಸು ಆಸ್ತಿಗಳ ಮಾರಾಟ ಎರಡನ್ನು ಸಾಧಿಸುವುದು ಮತ್ತು ಆಸ್ತಿಯ ಗುತ್ತಿಗೆಗಾರಿಕೆಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಚಲಾವಣೆಗೆ ಅವಕಾಶ ಒದಗಿಸುತ್ತವೆ. ಅವುಗಳು ಸಂಪೂರ್ಣವಾಗಿ ಬಾಕಿ ಇರುವ ಅಸಲು ಮೊತ್ತದ ಮೇಲಿನ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತವೆ. ನ್ಯಾಯೋಚಿತ ಮೌಲ್ಯ ಚಲನವಲನಗಳನ್ನು ಇತರ ಸಮಗ್ರ ಆದಾಯದಲ್ಲಿ (OCI) ಮಾನ್ಯ ಮಾಡಲಾಗಿದೆ.

ಋಣಸಾಧನಗಳು ಲಾಭ ಮತ್ತು ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ: (FVTPL)

ಎಫ್‌ವಿಟಿಪಿಎಲ್ ಋಣಸಾಧನೆಗಳಿಗೆ ಒಂದು ಉಳಿಕೆ ಪ್ರವರ್ಗವಾಗಿರುತ್ತದೆ. ಯಾವುದೇ ಋಣಸಾಧನವು ಅಪಮೌಲ್ಯೀಕರಣದ ವೆಚ್ಚ ಅಥವಾ ಎಫ್‌ವಿಒಸಿಐ ರೂಪದಲ್ಲಿ ಪ್ರವರ್ಗೀಕರಣ ಮಾಡಲು ಬೇಕಾದ ಅರ್ಹತೆಗಳನ್ನು ಪೂರೈಸದಿದ್ದಲ್ಲಿ ಅದನ್ನು ಎಫ್‌ವಿಟಿಪಿಎಲ್ ಎಂದು ವರ್ಗೀಕರಣ ಮಾಡಲಾಗಿರುತ್ತದೆ. ಎಫ್‌ವಿಟಿಪಿಎಲ್ ವ್ಯಾಪ್ತಿಗೆ ಒಳಪಟ್ಟ ಎಲ್ಲ ಋಣಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾದ ಎಲ್ಲಾ ಮಾರ್ಪಾಡುಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

ಈಕ್ವಿಟಿ ಹೂಡಿಕೆಗಳು:

ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 109ರ ವ್ಯಾಪ್ತಿಯಲ್ಲಿ ಎಲ್ಲಾ ಈಕ್ವಿಟಿ ಹೂಡಿಕೆಗಳು, ಹಣಕಾಸು ಸಾಧನಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ವಾಣಿಜ್ಯೋದ್ದೇಶಕ್ಕಾಗಿ ಮತ್ತು ಸಂಭಾವ್ಯ ಪರಿಗಣನೆಗೊಳಗಾಗಿ ಹೊಂದಿರುವ ಈಕ್ವಿಟಿ ಸಾಧನಗಳನ್ನು ವ್ಯವಹಾರ ಸಂಯೋಜನೆಯಲ್ಲಿ ಸ್ವಾಧೀನಕಾರರಿಂದ ಮಾನ್ಯ ಮಾಡಲಾಗಿದೆ. ಇದಕ್ಕೆ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 103, ವ್ಯವಹಾರ ಸಂಯೋಜನೆ (Business Combination) ಅನ್ವಯಿಸುತ್ತದೆ. ಇವುಗಳನ್ನು ಎಫ್‌ವಿಟಿಪಿಎಲ್‌ಗೆ ವರ್ಗೀಕರಣ ಮಾಡಲಾಗಿದೆ. ಎಲ್ಲ ಇತರ ಈಕ್ವಿಟಿ ಸಾಧನಗಳನ್ನು ಕಂಪನಿ ಇತರ ಸಮಗ್ರ ಆದಾಯದಲ್ಲಿ ಪ್ರಸ್ತುತಪಡಿಸಲು ಕಂಪನಿ ರದ್ದುಪಡಿಸಲಾಗದ ಆಯ್ಕೆಯನ್ನು ನ್ಯಾಯೋಚಿತ ಮೌಲ್ಯದಲ್ಲಿ ತದನಂತರದ ಬದಲಾವಣೆಗಳೊಂದಿಗೆ ಮಾಡಿಕೊಳ್ಳಬಹುದಾಗಿದೆ.

ಕಂಪನಿ ಈ ರೀತಿಯ ಆಯ್ಕೆಯನ್ನು ಸಾಧನ ನಂತರ ಸಾಧನ ಆಧಾರದಲ್ಲಿ ಮಾಡಿಕೊಳ್ಳುತ್ತದೆ. ಈ ವರ್ಗೀಕರಣವು ಆರಂಭದ ಮಾನ್ಯತೆಯ ಮೇರೆಗೆ ಮಾಡಿಕೊಂಡಿದೆ ಮತ್ತು ರದ್ದುಪಡಿಸಲಾಗದಂತಿದೆ.

ಕಂಪನಿಯು ಒಂದು ವೇಳೆ ಒಂದು ಈಕ್ವಿಟಿ ಸಾಧನವನ್ನು ಎಫ್ ವಿಓಸಿಐಗೆ ವರ್ಗೀಕರಣ ಮಾಡಲು ತೀರ್ಮಾನಿಸಿದಲ್ಲಿ ಆಗ ಸಾಧನದ ಎಲ್ಲ ನ್ಯಾಯೋಚಿತ ಮೌಲ್ಯಗಳು ಮಾರ್ಪಾಡಾಗುತ್ತವೆ. ಇದು ಲಾಭಾಂಶ, ದುರ್ಬಲತೆಯ ಲಾಭಗಳು ಅಥವಾ ನಷ್ಟಗಳನ್ನು ಹೊರತಾಗಿಸಿದೆ. ಮತ್ತು ವಿದೇಶಿ ವಿನಿಮಯದ ಲಾಭಗಳು ಮತ್ತು ನಷ್ಟಗಳನ್ನು ಇತರ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಲಾಗಿದೆ.

ಇತರ ಸಮಗ್ರ ಆದಾಯ ಮೊತ್ತಗಳನ್ನು, ಹೂಡಿಕೆ ಮಾರಾಟ ಮಾಡಿದಾಗಲೂ ಕೂಡ ಲಾಭ ಮತ್ತು ನಷ್ಟದ ಹೇಳಿಕೆಗೆ ಮರು ಆವರ್ತನ ಮಾಡಲಾಗುವುದಿಲ್ಲ.

ಎಫ್‌ವಿಟಿಪಿಎಲ್ ಪ್ರವರ್ಗದಲ್ಲಿ ಸೇರಿಸಲ್ಪಟ್ಟ ಈಕ್ವಿಟಿ ಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿರುವ ಎಲ್ಲಾ ಬದಲಾವಣೆಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

ಹಣಕಾಸು ಆಸ್ತಿಗಳ ಅಮಾನ್ಯತೆ:

ಒಂದು ಹಣಕಾಸು ಆಸ್ತಿಯನ್ನು ಆ ಆಸ್ತಿಯಿಂದ ಪಡೆಯಬೇಕಾದ ನಗದು ಚಲಾವಣೆ (ಹರಿವಿಕೆ) ಹಕ್ಕುಗಳು ಸ್ಥಗಿತಗೊಂಡಾಗ ಅಥವಾ ಕಂಪನಿ ಆಸ್ತಿಯಿಂದ ಬರಬೇಕಾಗಿರುವ ನಗದು ಹರಿವಿಕೆ ಸ್ವೀಕರಿಸುವ ತನ್ನ ಹಕ್ಕುಗಳನ್ನು ವರ್ಗಾವಣೆ ಮಾಡಿದಾಗ ಪ್ರಧಾನವಾಗಿ ಅಮಾನ್ಯ ಮಾಡಲಾಗುತ್ತದೆ.

ಒಂದು ವೇಳೆ ಕಂಪನಿ ಆಸ್ತಿಯ ಮಾಲೀಕತ್ವವನ್ನು ವರ್ಗಾವಣೆ ಮಾಡದೇ ಅಥವಾ ಮಾಲೀಕತ್ವದ ಗಣನೀಯ ಅಪಾಯ ಮತ್ತು ಅನುಕೂಲತೆಗಳನ್ನು ಉಳಿಸಿಕೊಳ್ಳದೇ ಮತ್ತು ವರ್ಗಾವಣೆಯಾದ ಆಸ್ತಿಯ ಮೇಲೆ ನಿಯಂತ್ರಣ ಮುಂದುವರಿಸಿದಲ್ಲಿ, ಕಂಪನಿ ಆಸ್ತಿಯ ಮೇಲೆ ತನಗಿರುವ ಆಸಕ್ತಿಯನ್ನು ಮತ್ತು ಅದು ಪಾವತಿ ಮಾಡಬೇಕಾಗಿರುವ ಮೊತ್ತಗಳ ಋಣಬಾಧ್ಯತೆಯನ್ನು ಮಾನ್ಯ ಮಾಡುತ್ತದೆ ಎಂದರ್ಥ.

ಕಂಪನಿಯು ವರ್ಗಾವಣೆ ಮಾಡಿದ ಹಣಕಾಸಿನ ಆಸ್ತಿಯ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಅನುಕೂಲಗಳನ್ನು ಗಣನೀಯವಾಗಿ ಉಳಿಸಿಕೊಂಡಿದ್ದರೆ, ಕಂಪನಿಯು ಹಣಕಾಸಿನ ಆಸ್ತಿಯನ್ನು ಮಾನ್ಯ ಮಾಡುವುದನ್ನು ಮುಂದುವರಿಸುವುದು ಹಾಗೂ ಪಡೆದುಕೊಂಡ ಹಣಕ್ಕೆ ಸಮಾನಾಂತರ ಸಾಲವನ್ನು ಮಾನ್ಯ ಮಾಡುವುದು.

ಒಂದು ಹಣಕಾಸು ಆಸ್ತಿಯ ಅದರ ಪೂರ್ಣ ಪ್ರಮಾಣದಲ್ಲಿ ಅಥವಾ ಇಡಿಯಾಗಿ ಅಮಾನ್ಯತೆಯ ಮೇರೆಗೆ ಆಸ್ತಿಯ ವಾಹಕ ಮೊತ್ತ ಮತ್ತು ಸ್ವೀಕರಿಸಿದ ಪರಿಗಣಿತ ಮೊತ್ತ ಮತ್ತು ಸ್ವೀಕರಿಸಬಹುದಾದ ಮೊತ್ತದ ನಡುವೆ ವ್ಯತ್ಯಾಸ ಹಾಗೂ ಸಮಗ್ರ ಆದಾಯದಲ್ಲಿ ಗುರುತಿಸಲಾದ ಸಂಚಿತ ಲಾಭ ಅಥವಾ ನಷ್ಟ ಹಾಗೂ ಈಕ್ವಿಟಿಯಲ್ಲಿ ಸಂಚಯಗೊಂಡ ಮೊತ್ತಗಳನ್ನು ಲಾಭ ಮತ್ತು ನಷ್ಟದಲ್ಲಿ ಮಾನ್ಯ ಮಾಡಲಾಗಿದೆ.

ಕ್ಯೂ) ಹಣಕಾಸು ಹೊಣೆಗಾರಿಕೆಗಳು

ಆರಂಭದ ಮಾನ್ಯತೆ:

ಎಲ್ಲಾ ಹಣಕಾಸಿನ ಹೊಣೆಗಾರಿಕೆಗಳನ್ನು ಪ್ರಾರಂಭಿಕವಾಗಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿಲ್ಲದ (FVPL) ಹಣಕಾಸಿನ ಬಾಧ್ಯತೆಗಳ ವಿಚಾರಕ್ಕೆ ನೇರವಾಗಿ ಅನ್ವಯಿಸಬಹುದಾದ ವ್ಯವಹಾರ ವೆಚ್ಚಗಳನ್ನು ಪ್ರಾರಂಭಿಕ ಮಾನ್ಯತೆಯಲ್ಲಿ ನ್ಯಾಯೋಚಿತ ಮೌಲ್ಯಕ್ಕೆ ಸೇರಿಸಿದೆ.

ತದನಂತರದ ಮಾಪನ:

ಹಣಕಾಸಿನ ಹೊಣೆಗಾರಿಕೆಗಳನ್ನು, ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ತದನಂತರ ಮಾಪನ ಮಾಡಿರುವ ವ್ಯವಹಾರದ ಸಂಯೋಜನೆಯಲ್ಲಿ ಮಾನ್ಯ ಮಾಡಿರುವ ಸಂಭಾವ್ಯತೆ ಪರಿಗಣನೆ ಹೊರತುಪಡಿಸಿ, ತದನಂತರ ಅನ್ವಯವಾಗುವ ಬಡ್ಡಿ ವಿಧಾನ ಬಳಸಿ ಅಮಾರ್ಟೈಸ್ಡ್ ಬೆಲೆಯಲ್ಲಿ ಪರಿಗಣಿಸಿದೆ. ಸ್ಥಿತಿ ವಿವರಣ ಪಟ್ಟಿ ದಿನಾಂಕದಿಂದ ಒಂದು ವರ್ಷದ ಒಳಗೆ ಪಕ್ವವಾಗುವ ವ್ಯಾಪಾರದ ಬಗ್ಗೆ ಮತ್ತು ಇತರೆ ಪಾವತಿಗಳಿಗೆ, ಈ ಸಾಧನಗಳ ಅಲ್ಪಕಾಲಿಕ ಪಕ್ವತೆಯಿಂದಾಗಿ ನ್ಯಾಯೋಚಿತ ಮೌಲ್ಯದ ವಾಹಕ ಮೊತ್ತವು ಅಂದಾಜಿನದಾಗಿರುತ್ತದೆ.

ಹಣಕಾಸು ಹೊಣೆಗಾರಿಕೆಗಳ ಅಮಾನ್ಯತೆ:

ಒಂದು ಹಣಕಾಸು ಹೊಣೆಗಾರಿಕೆಗಳನ್ನು ಋಣಭಾರ ಬಾಧ್ಯತೆಯಡಿ ಹೊಣೆಗಾರಿಕೆಯನ್ನು ಬಿಡುಗಡೆಗೊಳಿಸಿದಲ್ಲಿ ಅಥವಾ ರದ್ದುಪಡಿಸಿದಲ್ಲಿ ಅಥವಾ ಅವಧಿ ಮುಗಿದಿದ್ದಲ್ಲಿ ಅಮಾನ್ಯತೆ ಮಾಡಲಾಗುತ್ತದೆ. ಹಾಲಿ ಹಣಕಾಸು ಋಣಬಾಧ್ಯತೆಯನ್ನು ಬದಲಿಸಿ ಅದೇ ಸಾಲಿನಿಂದ ಗಣನೀಯವಾದ ಬೇರೆ ಷರತ್ತುಗಳೊಂದಿಗೆ ಅಥವಾ ಹಾಲಿ ಬಾಧ್ಯತೆಯ ಷರತ್ತುಗಳಲ್ಲಿ ಸಾಕಷ್ಟು ಮಾರ್ಪಾಟುಗಳೊಂದಿಗೆ ಮತ್ತೊಂದು ಹಣಕಾಸು ಋಣಬಾಧ್ಯತೆ ಉಂಟು ಮಾಡಿದಾಗ ಅಂತಹ ವಿನಿಮಯ ಅಥವಾ ಮಾರ್ಪಾಟು, ಮೂಲ ಋಣಬಾಧ್ಯತೆಯ ಅಮಾನ್ಯತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಹೊಸ ಬಾಧ್ಯತೆಯ ಮಾನ್ಯತೆಯಾಗಿರುತ್ತದೆ. ಈ ಎರಡು ಬಗೆಯ ಋಣಬಾಧ್ಯತೆಗಳ ವಾಹಕ ಮೊತ್ತಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

ಹಣಕಾಸು ಸಾಧನಗಳನ್ನು ಸ್ಥಗಿತಗೊಳಿಸುವಿಕೆ:

ಹಣಕಾಸು ಆಸ್ತಿಗಳು ಮತ್ತು ಹಣಕಾಸು ಋಣಬಾಧ್ಯತೆಗಳನ್ನು ಒಂದು ವೇಳೆ ಮಾನ್ಯ ಮಾಡಿದ ಮೊತ್ತಗಳನ್ನು ಸ್ಥಗಿತಗೊಳಿಸಲು ಪ್ರಸ್ತುತ ಜಾರಿಗೊಳಿಸಬಹುದಾದ ಕಾನೂನಾತ್ಮಕ ಹಕ್ಕು ಹೊಂದಿದ್ದಲ್ಲಿ ಮತ್ತು ನಿವ್ವಳ ಆಧಾರದಲ್ಲಿ ಏಕಕಾಲಕ್ಕೆ ಆಸ್ತಿಯ ಸಾಕಾರಕ್ಕೆ ಮತ್ತು ಋಣಬಾಧ್ಯತೆಗಳ ಇತ್ಯರ್ಥದ ಉದ್ದೇಶ ಹೊಂದಿದ್ದಲ್ಲಿ

ಸ್ಥಗಿತಗೊಳಿಸಲಾಗುತ್ತದೆ ಮತ್ತು ನಿವ್ವಳ ಮೊತ್ತವನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ವರದಿ ಮಾಡಲಾಗುತ್ತದೆ.

ಆರ್) ಹಣಕಾಸು ಆಸ್ತಿಗಳ ಕ್ಷೀಣತೆ:

ಕಂಪನಿ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟ(ಇಸಿಎಲ್) ಮಾದರಿ ಬಳಸಿ ನಷ್ಟ ಪರಿಹಾರ ಭತ್ಯೆಗಳನ್ನು ಮಾನ್ಯ ಮಾಡುತ್ತದೆ. ಈ ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯೀಕರಣ ಮಾಡಿರುವುದಿಲ್ಲ. ಮಹತ್ತರವಾದ ಹಣಕಾಸು ಅಂಶವನ್ನು ಒಳಗೊಂಡಿರದ ವ್ಯಾಪಾರದಿಂದ ಬರಬಹುದಾದ ನಷ್ಟ ಪರಿಹಾರ ಭತ್ಯೆಗಳನ್ನು ನಿರೀಕ್ಷಿತ ಸಾಲ ನಷ್ಟದ ಜೀವಿತಾವಧಿಗೆ ಸಮನಾದ ಮೊತ್ತಕ್ಕೆ ಮಾಪನ ಮಾಡಲಾಗಿದೆ. ಇತರ ಎಲ್ಲ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟವನ್ನು 12ತಿಂಗಳಿಗೆ ಇಸಿಎಲ್‌ಗೆ ಸಮನಾಗಿರುವಂತೆ ಮಾಪನ ಮಾಡಿದೆ. ಒಂದು ವೇಳೆ ಸಾಲದ ಅಪಾಯದ ಆರಂಭದಲ್ಲಿ ಗುರುತಿಸಿದ್ದಕ್ಕಿಂತ ಮಹತ್ತರವಾದ ಏರಿಕೆ ಕಂಡುಬಂದಲ್ಲಿ ಆಗ ಅಂತಹ ಪ್ರಕರಣಗಳನ್ನು ಜೀವಿತಾವಧಿ ಇಸಿಎಲ್ ನಂತೆ ಮಾಪನ ಮಾಡಲಾಗಿದೆ. ನಿರೀಕ್ಷಿತ ಸಾಲ ನಷ್ಟದ ಮೊತ್ತವು (ಅಥವಾ ಪ್ರತಿಲೋಮ) ವರದಿ ಮಾಡುವ ದಿನಾಂಕದಂದಿನಂತೆ ನಷ್ಟ ಪರಿಹಾರ ಭತ್ಯೆಗಳು ಹೊಂದಾಣಿಕೆಗಾಗಿ ಅಗತ್ಯವಿದ್ದು, ಮಾನ್ಯ ಮಾಡಬೇಕಾಗಿರುವ ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಕ್ಷೀಣತೆ ಲಾಭ ಅಥವಾ ನಷ್ಟ ಎಂದು ಮಾನ್ಯ ಮಾಡಲಾಗಿದೆ.

ಎಸ್) ಹಣಕಾಸೇತರ ಆಸ್ತಿಗಳ ಕ್ಷೀಣತೆ:

ಪ್ರತಿ ವರದಿ ಅವಧಿಯ ಕೊನೆಯಲ್ಲಿ ಕಂಪನಿ ತನ್ನ ಎಲ್ಲ ಗೋಚರಿತ ಮತ್ತು ಅಗೋಚರಿತ ಆಸ್ತಿಗಳ ವಾಹಕ ಮೊತ್ತಗಳನ್ನು ಪರಿಶೀಲಿಸಿ ಅವುಗಳಲ್ಲಿ ಯಾವುದಾದರೂ ಕ್ಷೀಣತೆ ನಷ್ಟವನ್ನು ಎದುರಿಸುತ್ತದೆ ಎಂಬುದನ್ನು ನಿರ್ಧರಣೆ ಮಾಡುತ್ತದೆ. ಒಂದು ವೇಳೆ ಅಂತಹ ಯಾವುದಾದರೂ ಲಕ್ಷಣ ಕಂಡು ಬಂದಲ್ಲಿ ಆ ಆಸ್ತಿಯ ಮರು ಪಡೆಯಬಹುದಾದ ಮೊತ್ತವನ್ನು ಕ್ಷೀಣತೆ ನಷ್ಟದ ಪ್ರಮಾಣ ನಿರ್ಧರಿಸಲು (ಯಾವುದೇ ಇದ್ದಲ್ಲಿ) ಅಂದಾಜು ಮಾಡಲಾಗುತ್ತದೆ.

ಯಾವುದೇ ಒಂದು ಆಸ್ತಿಯ ಪಡೆಯಬಹುದಾದ ಮೊತ್ತದ ಅಂದಾಜೀಕರಣ ಸಾಧ್ಯವಿಲ್ಲದಿದ್ದಲ್ಲಿ, ಕಂಪನಿ ಆ ಆಸ್ತಿಗೆ ಸಂಬಂಧಪಟ್ಟ ನಗದು ಸೃಜಿಸುವ ಘಟಕದ ಪಡೆಯಬಹುದಾದ ಮೊತ್ತವನ್ನು ಅಂದಾಜು ಮಾಡುತ್ತದೆ. ಅದರಲ್ಲಿ ಹಂಚಿಕೆಯ ಸಕಾರಣಾತ್ಮಕ ಮತು ಸುಸ್ಥಿರ ಆಧಾರಗಳನ್ನು ಗುರುತಿಸುವಂತಿರಬೇಕು. ಸಾಂಸ್ಥಿಕ ಆಸ್ತಿಗಳನ್ನು ಸಹ ಬಿಡಿಯಾದ ನಗದು ಸೃಜಿಸುವ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ಅಥವಾ ಅದಾಗದಿದ್ದಲ್ಲಿ ಅವುಗಳನ್ನು ನಗದು ಸೃಜಿಸುವ ಘಟಕಗಳ ಅತ್ಯಂತ ಸಣ್ಣ ಗುಂಪುಗಳಿಗೆ ಹಂಚಿಕೆ ಮಾಡಲಾಗಿದ್ದು, ಆ ಮೂಲಕ ಸಕಾರಾಣಾತ್ಮಕ ಮತ್ತು ಸುಸ್ಥಿರ ಹಂಚಿಕೆಯ ನೆಲೆಯನ್ನು ಗುರುತಿಸಲು ಸಾಧ್ಯ .

ಪಡೆಯಬಹುದಾದ ಮೊತ್ತವು ನ್ಯಾಯೋಚಿತ ಮೌಲ್ಯವನ್ನು ಮೀರಿದ್ದು, ಮಾರಾಟ ಮಾಡಲು ಕಡಿಮೆ ವೆಚ್ಚ ಮತ್ತು ಬಳಕೆಯ ಮೌಲ್ಯವು ಕಡಿಮೆಯಾಗಿದ್ದು, ಬಳಕೆಯಲ್ಲಿರುವ ಮೌಲ್ಯದ ಅಂದಾಜುವಿಕೆಯಲ್ಲಿ ಅಂದಾಜಿತ ಭವಿಷ್ಯದ ನಗದು ಚಲಾವಣೆಗಳನ್ನು ಅವುಗಳ ಅಪ್ರಸಕ್ತ ಮೌಲ್ಯಕ್ಕೆ ತೆರಿಗೆ ಪೂರ್ವ ಸೋಡಿ ದರ ಅನ್ವಯಿಸಿ ಕಡಿತಗೊಳಿಸಲಾಗುತ್ತಿದೆ. ಇದು ಹಣದ ಸಮಯ ಮೌಲ್ಯ ಮತ್ತು ಆಸ್ತಿಗೆ ನಿರ್ದಿಷ್ಟವಾದ ಅಪಾಯಗಳ ಚಾಲ್ತಿ ಮಾರುಕಟ್ಟೆ ಲೆಕ್ಕಾಚಾರಗಳನ್ನು ಬಿಂಬಿಸುತ್ತಿದ್ದು, ಅದಕ್ಕಾಗಿ ಭವಿಷ್ಯದ ನಗದು ಚಲಾವಣೆಗಳ ಅಂದಾಜುಗಳನ್ನು ಸರಿದೂಗಿಸಿರುವುದಿಲ್ಲ.

ಆಸ್ತಿಯ (ಅಥವಾ ನಗದು ಸೃಜಿಸುವ ಘಟಕ) ಪಡೆಯಬಹುದಾದ ಮೊತ್ತವು ಅದು ಹೊಂದಿರುವ ಮೊತ್ತಕ್ಕಿಂತ ಕಡಿಮೆ ಅಂದಾಜು ಮಾಡಿದ್ದಲ್ಲಿ ಆಸ್ತಿಯ (ಅಥವಾ ನಗದು ಸೃಜಿಸುವ ಘಟಕ) ವಾಹಕ ಮೊತ್ತವನ್ನು ಪಡೆಯಬಹುದಾದ ಮೊತ್ತಕ್ಕೆ ಇಳಿಸಲಾಗಿರುತ್ತದೆ. ಕುಗ್ಗಿಸುವಿಕೆ ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ತಕ್ಷಣವೇ ಮಾನ್ಯ ಮಾಡಲಾಗಿರುತ್ತದೆ. ಇಲ್ಲದಿದ್ದಲ್ಲಿ ಸಂಬಂಧಿತ ಆಸ್ತಿಯು ಮರು ಮೌಲ್ಯೀಕರಣದ ಮೊತ್ತ ಹೊಂದಿದ್ದಲ್ಲಿ ಅಂತಹ ಪ್ರಕರಣದಲ್ಲಿ ಕ್ಷೀಣತೆ ನಷ್ಟವನ್ನು ಮರು ಮೌಲ್ಯೀಕರಣದ ಇಳಿಕೆ ಎಂದು ಪರಿಗಣಿಸಲಾಗಿರುತ್ತದೆ.

ತದನಂತರ ಕ್ಷೀಣತೆಯ ನಷ್ಟವು ಪ್ರತಿಲೋಮಗೊಂಡಾಗ ಆಸ್ತಿಯ ವಾಹಕ ಮೊತ್ತವು (ಅಥವಾ ನಗದು ಸೃಜಿಸುವ ಘಟಕ) ಅದರ ಹಿಂಪಡೆಯಬಹುದಾದ ಮೊತ್ತದ ಪರಿಷ್ಕೃತ ಅಂದಾಜಿಗೆ ಏರಿಕೆಯಾಗಿರುತ್ತದೆ. ಆದರೆ ಏರಿಕೆಯಾದ ವಾಹಕ ಮೊತ್ತವು ಹಿಂದಿನ ವರ್ಷಗಳಲ್ಲಿನ ಆಸ್ತಿಯ (ಅಥವಾ ನಗದು ಸೃಜನೆ ಘಟಕ) ಕುಗ್ಗುವಿಕೆಯ ನಷ್ಟವಿಲ್ಲದಿದ್ದಲ್ಲಿ ನಿರ್ಧರಣೆ ಮಾಡಬಹುದಾಗಿದ್ದು, ವಾಹಕ ಮೊತ್ತವನ್ನು ಮೀರುವುದಿಲ್ಲ. ನಿಶ್ಚಲತೆ; ಕುಗ್ಗಿಸುವಿಕೆ ನಷ್ಟದ ವ್ಯತಿರಿಕ್ತತೆಯನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ತಕ್ಷಣವೇ ಮಾನ್ಯ ಮಾಡಲಾಗುತ್ತದೆ. ಇಲ್ಲದಿದ್ದಲ್ಲಿ ಸಂಬಂಧಿತ ಆಸ್ತಿಯ ಮರು ಮೌಲ್ಯೀಕರಣದ ಮೊತ್ತ ಹೊಂದಿದ್ದಲ್ಲಿ ಅಂತಹ ಪ್ರಕರಣದಲ್ಲಿ ಕ್ಷೀಣತೆ ನಷ್ಟದ ವ್ಯತಿರಿಕ್ತತೆಯನ್ನು ಮರು ಮೌಲ್ಯೀಕರಣದ ಏರಿಕೆ ಎಂದು ಪರಿಗಣಿಸಲಾಗುತ್ತಿದೆ.

ಟಿ) ನಗದು ಹರಿಯುವಿಕೆ ಹೇಳಿಕೆ:

ನಗದು ಹರಿಯುವಿಕೆಯನ್ನು ಪರೋಕ್ಷ ವಿಧಾನ ಬಳಸಿ ವರದಿ ಮಾಡಲಾಗಿರುತ್ತದೆ. ಆ ಮೂಲಕ ನಗದು ರಹಿತ ರೀತಿಯ ವ್ಯವಹಾರಗಳು ಯಾವುದೇ ಮುಂದೂಡಿಕೆಗಳು ಅಥವಾ ಹಿಂದಿನ ಕಾರ್ಯಾಚರಣೆಯ ನಗದು ಸ್ವೀಕೃತಿ ಅಥವಾ ಪಾವತಿಗಳು ಸೇರುವಿಕೆಗಳು ಮತ್ತು ಹೂಡಿಕೆಗೆ ಅಥವಾ ಹಣಕಾಸು ನಗದು ಚಲಾವಣೆಗಳೊಂದಿಗೆ ಸಂಬಂಧಿಸಿದ ಆದಾಯ ಅಥವಾ ವೆಚ್ಚಗಳ ಅಂಶಗಳ ಪರಿಣಾಮಗಳಿಗಾಗಿ ಆ ಅವಧಿಯ ಲಾಭವನ್ನು ಹೊಂದಾಣಿಕೆ ಮಾಡಲಾಗಿರುತ್ತದೆ. ಕಂಪನಿಯ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ಕಾರ್ಯಚಟುವಟಿಕೆಗಳಿಂದ ಬರುವ ನಗದನ್ನು ಪ್ರತ್ಯೇಕಗೊಳಿಸಲಾಗಿರುತ್ತದೆ.

(ಯು) ವರದಿ ಮಾಡುವ ದಿನಾಂಕದ ನಂತರದ ಘಟನೆಗಳು:

ಆಸ್ತಿಗಳು ಮತ್ತು ಬಾಧ್ಯತೆಗಳನ್ನು ವರದಿಗಾರಿಕೆ ಅವಧಿಯ ನಂತರ ಉದ್ಭವಿಸುವ ಘಟನೆಗಳಿಗಾಗಿ ಹೊಂದಾಣಿಕೆ ಮಾಡಲಾಗಿರುತ್ತದೆ. ಇದು ವರದಿ ಅವಧಿಯ ಕೊನೆಯಲ್ಲಿ ಉಂಟಾಗುವ ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ಮೊತ್ತಗಳ ಅಂದಾಜಿಕೆಗೆ ಸಹಕಾರಿಯಾಗಿ ಹೆಚ್ಚುವರಿ ಸಾಕ್ಷ್ಯವನ್ನು ಒದಗಿಸುತ್ತವೆ.

ವರದಿಯ ಅವಧಿಯ ನಂತರ ಕಂಪನಿಯಿಂದ ಘೋಷಿಸಲಾಗುವ ಲಾಭಾಂಶವನ್ನು ವರದಿ ಅವಧಿಯ ಕೊನೆಯಲ್ಲಿ ಬಾಧ್ಯತೆ ಎಂದು ಪರಿಗಣಿಸಲಾಗುವುದಿಲ್ಲ. ವರದಿಯ ಅವಧಿಯ ನಂತರ ಆದರೆ ಹಣಕಾಸು ಹೇಳಿಕೆಗಳನ್ನು ಹೊರಡಿಸುವುದಕ್ಕಿಂತ ಮುಂಚೆ ಘೋಷಿತ ಲಾಭಾಂಶಗಳನ್ನು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಯಾವುದೇ ಹೊಣೆಗಾರಿಕೆ ಬಾಧ್ಯತೆ ಇರದಿರುವುದರಿಂದ ಬಾಧ್ಯತೆ ಎಂದು ಪರಿಗಣಿಸಿರುವುದಿಲ್ಲ. ಅಂತಹ ಲಾಭಾಂಶಗಳನ್ನು ಹಣಕಾಸು ಹೇಳಿಕೆಗಳ ಟಿಪ್ಪಣಿಗಳಲ್ಲಿ ತೋರಿಸಲಾಗಿರುತ್ತದೆ.

(ವಿ) ವಿಶೇಷ ಬಾಬ್ತುಗಳು:

	ಪ್ರತಿ ಪಾದಿತ ಸೌಲಭ್ಯ ಯೋಜನೆಗಳ ಬಗ್ಗೆ ಮರು-ಮಾಪನ ಲಾಭಗಳು (ನಷ್ಟಗಳು)	26.62	(110.32)
		7.61	**(495.14)**
	ಆದಾಯ ತೆರಿಗೆಯ ಪರಿಣಾಮ	1.91	-
		5.70	**(495.14)**

32	ಷೇರು ಒಂದರ ಗಳಿಕೆಗಳು		
	ಕೆಳಕಂಡ ವಿವರಣೆಯು ಲಾಭವನ್ನು ಮತ್ತು ಮೂಲ ಮತ್ತು ದ್ರವೀಕೃತ ಇಪಿಎಸ್ ಲೆಕ್ಕಾಚಾರದಲ್ಲಿ ಬಳಸಿರುವ ಷೇರಿನ ಅಂಕಿ ಅಂಶಗಳನ್ನು ಬಿಂಬಿಸುವುದು.		
	ಕಂಪನಿಯ ಈಕ್ವಿಟಿದಾರರುಗಳಿಗೆ ಅನ್ವಯಿಸಬಹುದಾದ ಲಾಭ		
	ಮುಂದುವರಿಯುತ್ತಿರುವ ಕಾರ್ಯಾಚರಣೆಗಳು	6,090.01	7,145.39
	ಸ್ಥಗಿತಗೊಂಡಿರುವ ಕಾರ್ಯಾಚರಣೆ	(2.81)	(0.90)
	ಒಟ್ಟು	**6,087.20**	**7,144.49**
	ಮೂಲ ಮತ್ತು ದ್ರವೀಕೃತ ಇಪಿಎಸ್‌ಗೆ ಬಳಸಿರುವ ಷೇರುಗಳ ಸಂಖ್ಯೆ	4,273,477	4,273,477
	ಮುಂದುವರಿಯುತ್ತಿರುವ ಕಾರ್ಯಾಚರಣೆಗಳ ಸಂಬಂಧದ ಷೇರು ಒಂದರ ಗಳಿಕೆಗಳು		
	ಮೂಲ (ರೂ.)	142.51	167.20
	ದ್ರವೀಕೃತ (ರೂ.)	142.51	167.20
	ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಲ್ಲಿನ ಷೇರು ಒಂದರ ಗಳಿಕೆಗಳು		
	ಮೂಲ (ರೂ.)	(0.07)	(0.02)
	ದ್ರವೀಕೃತ (ರೂ.)	(0.07)	(0.02)
	ಮುಂದುವರಿಯುತ್ತಿರುವ ಮತ್ತು ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಲ್ಲಿ ಷೇರು ಒಂದರ ಗಳಿಕೆಗಳು		
	ಮೂಲ (ರೂ.)	**142.44**	**167.18**
	ದ್ರವೀಕೃತ (ರೂ.)	**142.44**	**167.18**

33	ಪಾವತಿ ಮಾಡಿರುವ ಲಾಭಾಂಶ		
	ಈಕ್ವಿಟಿ ಷೇರುಗಳ ಬಗ್ಗೆ ಪಾವತಿ ಮಾಡಿರುವ ನಗದು ಲಾಭಾಂಶಗಳು:		
	ಲಾಭಾಂಶ	1,105.19	320.51
	ಲಾಭಾಂಶ ವಿತರಣೆ ಮೇಲಿನ ತೆರಿಗೆ		–

ಮಂಡಳಿಯು ಈಕ್ವಿಟಿ ಷೇರು ಒಂದಕ್ಕೆ 30% ನಂತೆ ಲಾಭಾಂಶ ಪಾವತಿಸಲು ಉದ್ದೇಶಿಸಿದೆ. ಇದರಿಂದ ರೂ.1824.44ಲಕ್ಷ ಹೊರ ಹರಿವನ್ನು ಹೊಂದುವುದು. ಉದ್ದೇಶಿತ ಲಾಭಾಂಶವು ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆಗೆ ಒಳಪಟ್ಟಿರುವುದು ಮತ್ತು 31ನೇ ಮಾರ್ಚ್ 2023ರಂದು ಇದ್ದಂತೆ ಹೊಣೆಗಾರಿಕೆ ಎಂಬುದಾಗಿ ಮಾನ್ಯ ಮಾಡಿರುವುದಿಲ್ಲ.

34	ನೌಕರರ ಸೌಲಭ್ಯಗಳು		
i.	ಐಎನ್‌ಡಿ ಎಎಸ್ 19ರ ಅನ್ವಯ ನೌಕರರ ಸೌಲಭ್ಯಗಳ ಪ್ರಕಟಣೆ		
	ವಿವರಗಳು	31ನೇ ಮಾರ್ಚ್ 2023 ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
	ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆ-ಗ್ರಾಚ್ಯುಟಿ	(63.21)	9.22
	ಪರಿಹಾರಿತ ಗೈರು ಹಾಜರಿಗಳಿಗೆ ಹೊಣೆಗಾರಿಕೆ	474.70	650.48
	ಮರಣ ಪರಿಹಾರ ನಿಧಿಗೆ (ಡಿಆರ್‌ಎಫ್) ಹೊಣೆಗಾರಿಕೆ	93.13	104.37
	ಒಟ್ಟು ನೌಕರರ ಸೌಲಭ್ಯ ಹೊಣೆಗಾರಿಕೆಗಳು	**504.61**	**764.06**
	ಚಾಲ್ತಿಯೇತರ	352.50	395.08
	ಚಾಲ್ತಿ	152.11	368.98

ii. ಸ್ಥಿತಿ ವಿವರಣೆ ಪಟ್ಟಿಯಲ್ಲಿ ಮಾನ್ಯ ಮಾಡಿರುವ ಮೊತ್ತ – ವಿಮಾಗಣನೆ ಮೌಲ್ಯಮಾಪನದ ಅನ್ವಯ

ವಿವರಗಳು	ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ		ಪರಿಹಾರಿತ ಗೈರುಹಾಜರಿ-ಪ್ರತಿಪಾದಿತ ವಂತಿಗೆ ಯೋಜನೆ		ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ	
	2022-23	**2021-22**	**2022-23**	**2021-22**	**2022-23**	**2021-22**
ವರ್ಷದ ಕೊನೆಯಲ್ಲಿದ್ದ ಹೊಣೆಗಾರಿಕೆಯ ಪ್ರಸಕ್ತ ಮೌಲ್ಯ	793.85	1,016.28	474.70	650.48	93.13	104.37
ವರ್ಷದ ಕೊನೆಯಲ್ಲಿದ್ದ ಯೋಜನೆ ಆಸ್ತಿಗಳ ನ್ಯಾಯೋಚಿತ ಮೌಲ್ಯ	857.06	1,007.06				
ನಿಧಿಗಳ ಸ್ಥಿತಿಗತಿ	63.21	(9.22)	(474.70)	(650.48)	(93.13)	(104.37)
ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗಣನೆ ಮಾಡಿರುವ ಆಸ್ತಿ / (ಹೊಣೆಗಾರಿಕೆಗಳು)	**63.21**	**(9.22)**	**(474.70)**	**(650.48)**	**(93.13)**	**(104.37)**

iii. ನಿವ್ವಳ ಪ್ರತಿಪಾದಿತ ಹೊಣೆಗಾರಿಕೆಯ ಸಮನ್ವಯತೆ – ಹೊಣೆಗಾರಿಕೆಯ ಪ್ರಸಕ್ತ ಮೌಲ್ಯದಲ್ಲಿನ ಬದಲಾವಣೆ

ವಿವರಗಳು	ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ		ಪರಿಹಾರಿತ ಗೈರುಹಾಜರಿ-ಪ್ರತಿಪಾದಿತ ವಂತಿಗೆ ಯೋಜನೆ		ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ	
	2022-23	**2021-22**	**2022-23**	**2021-22**	**2022-23**	**2021-22**
ವರ್ಷದ ಆರಂಭದಲ್ಲಿದ್ದ ಹೊಣೆಗಾರಿಕೆಯ ಪ್ರಸಕ್ತ ಮೌಲ್ಯ	1,016.28	1,173.42	650.48	811.01	104.37	98.18
ಬಡ್ಡಿ ವೆಚ್ಚ	54.33	59.46	–	–	6.86	5.73
ಚಾಲ್ತಿ ಸೇವಾ ವೆಚ್ಚ	26.50	32.39	70.67	36.21	6.73	7.54
ಹಿಂದಿನ ಸೇವಾ ವೆಚ್ಚ			–	–		
ಪಾವತಿಸಿದ ಸೌಲಭ್ಯ	(291.28)	(374.72)	(246.45)	(196.74)	(20.95)	(12.58)
ಹೊಣೆಗಾರಿಕೆಗಳ ಮರು ಮಾಪನ	–	–	–	–	–	–
ಇತರೆ ಸಮಗ್ರ ಆದಾಯದ ವಿವರದಲ್ಲಿ ಮಾನ್ಯ ಮಾಡಿರುವ ಹೊಣೆಗಾರಿಕೆ ಮೇಲಿನ ವಿಮಾಗಣನ ನಷ್ಟ/(ಲಾಭ)	(11.98)	125.73	–	–	(3.88)	5.49
ವರ್ಷದ ಕೊನೆಯಲ್ಲಿರುವ ಶಿಲ್ಕು	**793.85**	**1,016.28**	**474.70**	**650.48**	**93.13**	**104.37**

iv. ಯೋಜನೆ ಆಸ್ತಿಗಳ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ

ವಿವರಗಳು	ಗ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ		ಪರಿಹಾರಿತ ಗೈರುಹಾಜರಿ-ಪ್ರತಿಪಾದಿತ ವಂತಿಗೆ ಯೋಜನೆ		ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ	
	2022-23	2021-22	2022-23	2021-22	2022-23	2021-22
ವರ್ಷದ ಆರಂಭದಲ್ಲಿ ಯೋಜನಾ ಆಸ್ತಿಗಳ ನ್ಯಾಯೋಚಿತ ಮೌಲ್ಯ	1,007.06	1,269.00	–	–	–	–
ಬಡ್ಡಿ ವೆಚ್ಚ			–	–	–	–
ಉದ್ಯೋಗದಾತರ ವಂತಿಗೆ	74.45	31.21	–	–	–	–
ಸೌಲಭ್ಯಗಳ ಪಾವತಿ	(291.28)	(374.72)	–	–	–	–
ಯೋಜನೆ ಆಸ್ತಿಗಳ ಮೇಲಿನ ಗಳಿಕೆ ಯೋಜನೆ ಆಸ್ತಿಗಳ ಮೇಲಿನ ವಾಸ್ತವಿಕ ಗಳಿಗೆ ಹೊರತಾಗಿ	56.08	66.16	–	–	–	–
ಹೊಣೆಗಾರಿಕೆ ಮೇಲಿನ ವಿಮಾಗಣನ ಲಾಭ/(ನಷ್ಟ)	10.76	15.41	–	–	–	–
ವರ್ಷದ ಕೊನೆಯಲ್ಲಿ ಇದ್ದಂತೆ ಶಿಲ್ಕು	**857.06**	**1,007.06**	–	–	–	–

v. ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿರುವ ಖರ್ಚು

ವಿವರಗಳು	ಗ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ		ಪರಿಹಾರಿತ ಗೈರುಹಾಜರಿ-ಪ್ರತಿಪಾದಿತ ವಂತಿಗೆ ಯೋಜನೆ		ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ	
	2022-23	2021-22	2022-23	2021-22	2022-23	2021-22
ಚಾಲ್ತಿ ಸೇವಾ ವೆಚ್ಚ	26.50	32.39	70.67	36.21	6.73	7.54
ಹಿಂದಿನ ಸೇವಾ ವೆಚ್ಚ	–	–	–	–	–	–
ಹೊಣೆಗಾರಿಕೆಯ ಮರು ಮಾಪನ	–	–	–	–	–	–
ನಿವ್ವಳ ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆಗಳ ಮೇಲಿನ ನಿವ್ವಳ ಬಡ್ಡಿ	(1.75)	(6.70)	–	–	6.86	5.73
ತೆರಿಗೆಗೆ ಮುನ್ನ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿರುವ ಖರ್ಚುಗಳು	**24.76**	**25.69**	**70.67**	**36.21**	**13.59**	**13.28**

vi. ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿರುವ ಮರು ಮಾಪನ

ವಿವರಗಳು	ಗ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ		ಪರಿಹಾರಿತ ಗೈರುಹಾಜರಿಗಳು-ಪ್ರತಿಪಾದಿತ ವಂತಿಗೆ ಯೋಜನೆ		ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ	
	2022-23	2021-22	2022-23	2021-22	2022-23	2021-22
ಹೊಣೆಗಾರಿಕೆಯಲ್ಲಿನ ವಿಮಾಗಣನ ನಷ್ಟ/(ಲಾಭ)	(22.74)	110.32	–	–	(3.88)	5.49

ಹಣ ಪೂರೈಕೆಯಿಲ್ಲದ ಹೊಣೆಗಾರಿಕೆಗಳ ಮೇಲಿನ ಹೊಣೆಗಾರಿಕೆಯ ವಿಮಾಗಣನ ನಷ್ಟ (ಲಾಭ)ಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಮಾನ್ಯ ಮಾಡಿರುವುದಿಲ್ಲ.

vii. ಆಸ್ತಿಗಳು

ಗ್ಯಾಚ್ಯುಟಿ ಆಸ್ತಿಗಳನ್ನು ಭಾರತೀಯ ಜೀವ ವಿಮಾ ನಿಗಮ ನಿರ್ವಹಿಸುವುದು.

viii. ಊಹೆಗಳು:

ಪ್ರತಿಪಾದಿತ ಸೌಲಭ್ಯ ಯೋಜನೆಗಳ ಯೋಜನಾ ಆಸ್ತಿಗಳು ಮತ್ತು ಯೋಜನಾ ಹೊಣೆಗಾರಿಕೆಗಳು ಹಾಗೂ ನಿವೃತ್ತಿ ನಂತರದ ಸೌಲಭ್ಯಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಅವುಗಳ ನ್ಯಾಯೋಚಿತ ಮೌಲ್ಯದಲ್ಲಿ ನಿರೂಪಿಸುವ ಧ್ಯೇಯದಿಂದ ಐಎನ್‌ಡಿ ಎಎಸ್ 19ರ ಅಡಿಯಲ್ಲಿ ಊಹೆಗಳನ್ನು ಮೌಲ್ಯಮಾಪನ ದಿನಾಂಕದಲ್ಲಿದ್ದ ಮಾರುಕಟ್ಟೆ ಸ್ಥಿತಿಗಳ ಬಗ್ಗೆ ಗಮನಹರಿಸಿ ಮಾಡಲಾಗಿದೆ. ಮಹತ್ತರವಾದ ವಿಮಾಗಣನ ಊಹೆಗಳು ಈ ಕೆಳಕಂಡಂತಿರುವುದು:

ವಿವರಗಳು	ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ		ಪರಿಹಾರಿತ ಗೈರುಹಾಜರಿಗಳು-ಪ್ರತಿಪಾದಿತ ವಂತಿಗೆ ಯೋಜನೆ		ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ	
	2022-23	2021-22	2022-23	2021-22	2022-23	2021-22
ರಿಯಾಯಿತಿ ದರ	7.31%	6.24%	7.31%	6.24%	7.31%	6.24%
ಸಂಬಳ ಹೆಚ್ಚಳ ದರ	7.00%	7.00%	7.00%	7.00%	0.00%	0.00%
ಆಸ್ತಿಗಳ ಮೇಲಿನ ನಿರೀಕ್ಷಿತ ಗಳಿಕೆ	6.24%	6.03%	0.00%	0.00%	0.00%	0.00%
ಸವಕಳಿ ದರ	10.00%	10.00%	10.00%	10.00%	1.00%	1.00%

ix. ಸೂಕ್ಷ್ಮತೆ ವಿಶ್ಲೇಷಣೆ

ವಿವರಗಳು	31ನೇ ಮಾರ್ಚ್ 2023ರಂದು ಇದ್ದಂತೆ		31ನೇ ಮಾರ್ಚ್ 2022ರಂದು ಇದ್ದಂತೆ	
	ಹೆಚ್ಚಳ	ಇಳಿಕೆ	ಹೆಚ್ಚಳ	ಇಳಿಕೆ
ಗ್ರ್ಯಾಚ್ಯುಟಿ				
ರಿಯಾಯಿತಿ ದರ (100 bps ಚಲನೆ)	(19.61)	20.99	(22.16)	23.53
ಸಂಬಳ ಹೆಚ್ಚಳ ದರ (100 bps ಚಲನೆ)	15.53	(15.63)	17.62	(17.55)
ಸವಕಳಿ ದರ (100 bps ಚಲನೆ)	(0.09)	0.09	(1.01)	1.03
ಪರಿಹಾರಿತ ಗೈರುಹಾಜರಿಗಳು				
ರಿಯಾಯಿತಿ ದರ (100 bps ಚಲನೆ)	(20.77)	22.52	(22.85)	24.50
ಸಂಬಳ ಹೆಚ್ಚಳ ದರ (100 bps ಚಲನೆ)	21.50	(20.92)	21.83	(20.76)
ಸವಕಳಿ ದರ (100 bps ಚಲನೆ)	(0.88)	0.95	(1.73)	1.83
ಮರಣ ಪರಿಹಾರ ನಿಧಿ				
ರಿಯಾಯಿತಿ ದರ (100 bps ಚಲನೆ)	(2.12)	2.27	(1.97)	2.11
ಸಂಬಳ ಹೆಚ್ಚಳ ದರ (100 bps ಚಲನೆ)	2.32	(2.43)	2.27	(2.24)
ಸವಕಳಿ ದರ (100 bps ಚಲನೆ)	0.58	(0.61)	0.04	(0.05)

MSIL

ಅಪಾಯಕ್ಕೆ ಒಳಪಡಿಸುವಿಕೆಯ ಬಗ್ಗೆ ವಿವರ

ಮೌಲ್ಯಮಾಪನವನ್ನು ಪೂರ್ವ ನಿರ್ಧರಿತ ಊಹೆಗಳ ಕೆಲವೊಂದು ಮೂಲ ಆಧಾರದ ಮೇಲೆ ಮಾಡಲಾಗಿದೆ. ಇದು ಕಾಲಾಂತರದಲ್ಲಿ ವ್ಯತ್ಯಾಸವಾಗಬಹುದಾಗಿರುತ್ತದೆ. ಹಾಗಾಗಿ ಮೇಲೆ ತಿಳಿಸಿರುವ ಸೌಲಭ್ಯಗಳನ್ನು ಒದಗಿಸುವಲ್ಲಿ ಕಂಪನಿಯು ವಿವಿಧ ಅಪಾಯಗಳಿಗೆ ಒಳಪಡುವುದು. ಅವುಗಳು ಈ ಕೆಳಕಂಡಂತಿರುವವು:

ಬಡ್ಡಿ ದರದ ಅಪಾಯ	ಯೋಜನೆಯು ಬಡ್ಡಿದರಗಳಲ್ಲಿ ಇಳಿಕೆಯಾಗುವ ಅಪಾಯಕ್ಕೆ ಕಂಪನಿಯನ್ನು ಒಳಪಡಿಸುವುದು. ಬಡ್ಡಿದರಗಳು ಕಡಿಮೆಯಾಗುವರಿಂದ ಮೇಲಿನ ಸೌಲಭ್ಯ ಒದಗಿಸುವ ಅಂತಿಮ ವೆಚ್ಚದಲ್ಲಿ ಹೆಚ್ಚಳ ಉಂಟಾಗುತ್ತದೆ. ಇದರಿಂದ ಹೊಣೆಗಾರಿಕೆ ಮೌಲ್ಯ ಹೆಚ್ಚಳವಾಗುತ್ತದೆ (ಹಣಕಾಸಿನ ಹೇಳಿಕೆಯಲ್ಲಿ ತೋರಿಸಿರುವಂತೆ)
ದ್ರವೀಕರಣ ಅಪಾಯ	ಇದು ಕಂಪನಿಯು ಅಲ್ಪಾವಧಿ ಸೌಲಭ್ಯ ಪಾವತಿ ಮಾಡಲು ಆಗದ ಅಪಾಯ ಉಂಟು ಮಾಡುತ್ತದೆ. ಹೊಣೆಗಾರಿಕೆ ಈಡೇರಿಸಲು ಸಾಕಷ್ಟು ನಗದು/ನಗದು ಸಮಾನತೆಗಳು ಲಭ್ಯವಿಲ್ಲದಿರುವುದರಿಂದ ಅಥವಾ ಸಕಾಲದಲ್ಲಿ ಮಾರಾಟ ಮಾಡಲಾಗದ ದ್ರವೀಕೃತ ಆಸ್ತಿಗಳನ್ನು ಹೊಂದಿರುವ ಪ್ರಯುಕ್ತ ಇದು ಉಂಟಾಗುತ್ತದೆ.
ಸಂಬಳ ಹೆಚ್ಚಳ ಅಪಾಯ	ಮೇಲೆ ತಿಳಿಸಿರುವ ಸೌಲಭ್ಯ ಯೋಜನೆಯ ಪ್ರಸಕ್ತದ ಮೌಲ್ಯವನ್ನು ಮುಂದಿನ ದಿನಗಳಲ್ಲಿ ಯೋಜನೆಯಲ್ಲಿ ಪಾಲ್ಗೊಳ್ಳುವವರ ಸಂಬಳ ಹೆಚ್ಚಳ ದರದ ಊಹೆಯೊಡನೆ ಲೆಕ್ಕಾಚಾರ ಮಾಡಲಾಗಿದೆ. ಹೊಣೆಗಾರಿಕೆಯ ಪ್ರಸಕ್ತದ ಮೌಲ್ಯ ನಿರ್ಧರಣೆ ಮಾಡಲು ಬಳಸಿರುವ ಸಂಬಳದಲ್ಲಿ ಹೆಚ್ಚಳವಾದ ದರದಿಂದ ಯೋಜನೆಗೆ ಒಳಪಡುವವರಿಗೆ ಮುಂದಿನ ದಿನಗಳಲ್ಲಿ ಸಂಬಳ ಹೆಚ್ಚಳ ದರದಲ್ಲಿ ಬದಲಾವಣೆ ಮಾಡಿದರೆ ಅದರಿಂದ ಯೋಜನೆಯ ಹೊಣೆಗಾರಿಕೆ ಮೇಲೆ ಹೆಚ್ಚು ಹೊರೆ ಬೀಳುತ್ತದೆ.
ಜನಸಂಖ್ಯೆ ಅಪಾಯ	ಕಂಪನಿಯ ಹೊಣೆಗಾರಿಕೆಯ ಬಗ್ಗೆ ಮೌಲ್ಯಮಾಪನ ಮಾಡುವಾಗ ಕೆಲವೊಂದು ಮರಣ ಪ್ರಮಾಣ ಮತ್ತು ಕ್ಷೀಣತೆ ಊಹೆಗಳನ್ನು ಬಳಸಿರುತ್ತದೆ. ಆದರೆ ಊಹೆಗೆ ಹೋಲಿಸಿದರೆ ವಾಸ್ತವಿಕ ಅನುಭವವು ತೀರಾ ಬಿಗಡಾಯಿಸಿದ ಅಪಾಯಕ್ಕೆ ಕಂಪನಿ ಒಳಗಾಗಿರುತ್ತದೆ.
ನಿಯಂತ್ರಕ ಅಪಾಯ	ಗ್ರ್ಯಾಚ್ಯುಟಿ ಸೌಲಭ್ಯಗಳನ್ನು ಗ್ರ್ಯಾಚ್ಯುಟಿ ಪಾವತಿ ಕಾಯ್ದೆ, 1972ರ (ಕಾಲಕಾಲಕ್ಕೆ ತಿದ್ದುಪಡಿಯಾದಂತೆ) ಅಗತ್ಯತೆ ಅನುಸಾರ ಪಾವತಿ ಮಾಡಲಾಗುತ್ತದೆ. ಹೆಚ್ಚಿನ ಪ್ರಮಾಣದ ಗ್ರ್ಯಾಚ್ಯುಟಿ ಪಾವತಿ ಮಾಡಬೇಕಾಗುವಂತೆ ನಿಬಂಧನೆಗಳ ಬದಲಾವಣೆಯಾಗುವ ಅಪಾಯಗಳು ಇಲ್ಲಿರುತ್ತವೆ. (ಉದಾಹರಣೆಗೆ, ಗ್ರ್ಯಾಚ್ಯುಟಿಯ ಗರಿಷ್ಠ ಹೊಣೆಗಾರಿಕೆ ರೂ.20 ಲಕ್ಷಗಳಿಗೆ ಹೆಚ್ಚಳವಾಗಿದೆ)
ಹೂಡಿಕೆ ಅಪಾಯ	ಯಾವುದೇ ನಿರ್ದಿಷ್ಟ ಹೂಡಿಕೆಯ ಮೇಲೆ ನಿರೀಕ್ಷಿಸಿರುವ ಗಳಿಕೆಗೆ ಸಂಬಂಧಿಸಿದಂತೆ ನಷ್ಟಗಳು ಉಂಟಾಗುವ ಸಂಭವ ಅಥವಾ ಸಾಧ್ಯತೆ ಇರುವುದು.
ಆಸ್ತಿ ಹೊಣೆಗಾರಿಕೆ ಹೊಂದಾಣಿಕೆಯಾಗದಿರುವಿಕೆ ಅಥವಾ ಮಾರುಕಟ್ಟೆ ಅಪಾಯ	ಆಸ್ತಿಗಳ ಅವಧಿಗೆ ಹೋಲಿಸಿದರೆ ಹೊಣೆಗಾರಿಕೆ ಅವಧಿ ಹೆಚ್ಚಾಗಿರುವುದು. ಹೀಗಾಗಿ ಬಡ್ಡಿ ದರದಲ್ಲಿ ಕ್ಷೀಣತೆ ಉಂಟಾಗುವ ಮಾರುಕಟ್ಟೆ ಅಪಾಯಗಳಿಗೆ ಕಂಪನಿ ಒಳಗಾಗುತ್ತದೆ.

35. ಬಂಡವಾಳ ನಿರ್ವಹಣೆ;

ಕಂಪನಿಯ ಬಂಡವಾಳ ನಿರ್ವಹಣೆಯು, ಖರ್ಚು ಮತ್ತು ಈಕ್ವಿಟಿ ಶಿಲ್ಕುಗಳನ್ನು ಸಮತೋಲನ ಮಾಡುವ ಮೂಲಕ ದೀರ್ಘಾವಧಿ ಮತ್ತು ಅಲ್ಪಾವಧಿ ಗುರಿಗಳನ್ನು ಈಡೇರಿಸಲು ಷೇರುದಾರರುಗಳಿಗೆ ಲಾಭದ ಅನುಕೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಒದಗಿಸುವ ಅಪೇಕ್ಷೆ ಹೊಂದಿರುವುದು

ಕಂಪನಿಯು ವಾರ್ಷಿಕ ಮತ್ತು ದೀರ್ಘಾವಧಿ ಕಾರ್ಯಾಚರಣೆ ಯೋಜನೆಗಳು ಮತ್ತು ಚಾತುರ್ಯಕರ ಹೂಡಿಕೆ ಯೋಜನೆಗಳ ಆಧಾರದ ಮೇಲೆ ಬಂಡವಾಳ ಅಗತ್ಯತೆಯ ಮೊತ್ತವನ್ನು ನಿರ್ಧರಣೆ ಮಾಡುವುದು. ಹಣದ ಅಗತ್ಯತೆಗಳನ್ನು ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲಗಳ ಮೂಲಕ ಪೂರೈಸಲಾಗುವುದು. ಈಕ್ವಿಟಿ ಅನುಪಾತಕ್ಕೆ ಸಾಲ ಮತ್ತು ಕಂಪನಿಯ ಒಟ್ಟಾರೆ ಸಾಲದ ಪಕ್ವತೆ ಆಧಾರದ ಮೇಲೆ ಬಂಡವಾಳ ಸ್ವರೂಪವನ್ನು ಕಂಪನಿ ಉಸ್ತುವಾರಿ ಮಾಡುವುದು.

ಕೆಳಕಂಡ ತಃಖ್ತೆಯು ಕಂಪನಿಯ ಬಂಡವಾಳದ ಅನುಪಾತಕ್ಕೆ ನಿವ್ವಳ ಸಾಲದ ಸಾರಾಂಶ ತಿಳಿಸುವುದು:

ವಿವರಗಳು	31ನೇ ಮಾರ್ಚ್ 2023	31ನೇ ಮಾರ್ಚ್ 2022
ಒಟ್ಟು ಈಕ್ವಿಟಿ	56,545.42	51,557.39
ಸಾಲ	–	–
ನಗದು ಸಮಾನಗಳು, ಇತರೆ ಬ್ಯಾಂಕ್ ಶಿಲ್ಕುಗಳು ಸೇರಿದಂತೆ	28,640.05	25,457.75
ನಿವ್ವಳ ಸಾಲ	–	–
ಒಟ್ಟು ಬಂಡವಾಳ (ಈಕ್ವಿಟಿ + ನಿವ್ವಳ ಸಾಲ)	**85,185.46**	**77,015.14**
ಬಂಡವಾಳ ಅನುಪಾತಕ್ಕೆ ನಿವ್ವಳ ಸಾಲ		

31ನೇ ಮಾರ್ಚ್ 2023 ಮತ್ತು 31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಗಳ ಅವಧಿಯಲ್ಲಿ ಬಂಡವಾಳ ನಿರ್ವಹಣೆಗೆ ಗುರಿಗಳು, ನೀತಿಗಳು ಅಥವಾ ಪ್ರಕ್ರಿಯೆಗಳಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.

36 ಹಣಕಾಸಿನ ಅಪಾಯ ನಿರ್ವಹಣೆ

ಕಂಪನಿಯ ಚಟುವಟಿಕೆಗಳು ಮಾರುಕಟ್ಟೆ ಅಪಾಯ, ದ್ರವೀಕರಣ ಅಪಾಯ ಮತ್ತು ಕ್ರೆಡಿಟ್ ಅಪಾಯಕ್ಕೆ ಒಳಗಾಗುತ್ತವೆ. ಸಂಸ್ಥೆಯು ಒಳಗಾಗುವ ಅಪಾಯಗಳ ಮೂಲಗಳು ಮತ್ತು ಸಂಸ್ಥೆಯು ಹೇಗೆ ಅಂತಹ ಅಪಾಯಗಳನ್ನು ನಿಭಾಯಿಸುವುದು ಮತ್ತು ಇದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಸಂಬಂಧಿತ ಪರಿಣಾಮವೇನು ಎಂಬುದನ್ನು ಈ ಟಿಪ್ಪಣಿ ವಿವರಿಸುತ್ತದೆ.

ಅಪಾಯ	ಒಳಗಾಗುವಿಕೆ ಉಂಟಾಗುವ ಅಂಶ ಯಾವುದು	ಮಾಪನ
ಕ್ರೆಡಿಟ್ ಅಪಾಯ	ಇತರೆ ಬ್ಯಾಂಕ್ ಶಿಲ್ಕುಗಳು, ವ್ಯಾಪಾರದಿಂದ ಬರಬೇಕಾಗಿರುವುದು, ಅಮಾರ್ಟೈಸ್ಡ್ ಬೆಲೆಯಲ್ಲಿ ಗಣಿಸಿರುವ ಹೂಡಿಕೆಗಳು, ಸಾಲಗಳು, ಇತರೆ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಖಾತರಿಗಳು	ಅವಧಿ ವಿಶ್ಲೇಷಣೆ ಮತ್ತು ವಸೂಲಾತಿ ನಿರ್ಧರಣೆ
ದ್ರವೀಕರಣ ಅಪಾಯ	ಭದ್ರತೆಯಾಗಿ ತೆಗೆದುಕೊಂಡಿರುವ ಇತರೆ ಹಣಕಾಸಿನ ಹೊಣೆಗಾರಿಕೆಗಳು ಮತ್ತು ಪೂರಕ ಭದ್ರತೆಗಳು	ನಗದು ಹರಿಯುವಿಕೆ ಗತಿಯ ಬಗ್ಗೆ ಮುಂದಾಲೋಚನೆ
ಮಾರುಕಟ್ಟೆ ಅಪಾಯ–ವಿದೇಶಿ ವಿನಿಮಯ	ಮಾನ್ಯ ಮಾಡಿದ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಭಾರತೀಯ ರೂಪಾಯಿಯಲ್ಲಿ ಗಣಿಸದೆ ಇರುವುದು	ಸೂಕ್ಷ್ಮತೆ ವಿಶ್ಲೇಷಣೆ
ಮಾರುಟ್ಟೆ ಅಪಾಯ–ಭದ್ರತಾ ದರಗಳು	ಈಕ್ವಿಟಿ ಸೆಕ್ಯುರಿಟೀಸ್‌ನಲ್ಲಿ ಹೂಡಿಕೆ	ಸೂಕ್ಷ್ಮತೆ ವಿಶ್ಲೇಷಣೆ

i ಸಾಲದ ಅಪಾಯ

ಎದುರು ಪಕ್ಷಕಾರ ತನ್ನ ಒಪ್ಪಂದವಾದ ಹೊಣೆಗಾರಿಕೆಗಳನ್ನು ನಿರ್ವಹಿಸಲು ವಿಫಲವಾದಾಗ ಅದರಿಂದ ಕಂಪನಿಗೆ ಹಣಕಾಸಿನ ನಷ್ಟ ಉಂಟಾಗುತ್ತದೆ. ಸಾಲದ ಅಪಾಯವು ಇದಕ್ಕೆ ಸಂಬಂಧಪಡುತ್ತದೆ. ಗ್ರೂಪ್ ಮತ್ತು ಸಹವರ್ತಿ ಕಂಪನಿಯು ಅದರ ಕಾರ್ಯಾಚರಣೆ ಚಟುವಟಿಕೆಗಳಿಂದ (ಪ್ರಮುಖವಾಗಿ ವ್ಯಾಪಾರದ ಸಂಬಂಧ ಬರಬೇಕಾದ ಹಣ) ಮತ್ತು ಬ್ಯಾಂಕುಗಳಲ್ಲಿ ಮತ್ತು ಹಣಕಾಸು ಸಂಸ್ಥೆಗಳಲ್ಲಿರುವ ಠೇವಣಿಗಳು, ವಿದೇಶಿ ವಿನಿಮಯ ವ್ಯವಹಾರಗಳು ಮತ್ತು ಇತರೆ ಹಣಕಾಸಿನ ಸಾಧನಗಳು ಸೇರಿದಂತೆ ಅದರ ಹಣಕಾಸಿನ ಚಟುವಟಿಕೆಗಳಿಂದಲೂ ಕೂಡ ಸಾಲದ ಅಪಾಯಕ್ಕೆ ಒಳಗಾಗುತ್ತದೆ.

ಸಾಲದ ಅಪಾಯ ನಿರ್ವಹಣೆ

ಕಂಪನಿಯ ಸ್ಥಾಪಿತ ನೀತಿ, ಕ್ರಮಾವಳಿಗಳು, ಮತ್ತು ಗ್ರಾಹಕರ ಸಾಲದ ಅಪಾಯ ನಿರ್ವಹಣೆಗೆ ಸಂಬಂಧಿಸಿದ ನಿಯಂತ್ರಣಕ್ಕೆ ಒಳಪಟ್ಟು, ಪ್ರತಿ ವ್ಯಾಪಾರ ಘಟಕದಿಂದ ಗ್ರಾಹಕರ ಸಾಲದ ಅಪಾಯ ನಿರ್ವಹಣೆ ಮಾಡುವುದು. ಕಂಪನಿಯು ಬಹುಪಾಲು ತನ್ನ ಗ್ರಾಹಕರುಗಳ ಸಾಲದ ಗುಣಮಟ್ಟವನ್ನು ಮಾಪನ ಮಾಡಲು ಹಣಕಾಸಿನ ಮಾಹಿತಿ ಮತ್ತು ಹಿಂದಿನ ಅನುಭವವನ್ನು ಬಳಸುತ್ತದೆ ಮತ್ತು ಈ ನಿರ್ಧರಣೆ ಅನುಸಾರ ಪ್ರತಿಯೊಬ್ಬರ ಸಾಲದ ಮಿತಿಯನ್ನು ನಿರೂಪಿಸುತ್ತದೆ. ತನ್ನ ಎದುರು ಪಕ್ಷಕಾರರುಗಳ ಬರಬೇಕಾಗಿರುವ ಬಾಕಿಗಳು ಮತ್ತು ಸಾಲದ ಅರ್ಹತೆಗಳನ್ನು ನಿಯತಕಾಲಿಕವಾಗಿ ಗಮನಿಸುವುದು ಮತ್ತು ಒಂದೊಂದೆ ಪ್ರಕರಣವನ್ನು ವಿಶ್ಲೇಷಿಸುವುದು. ಹಿಂದಿನ ಅನುಭವದ ಆಧಾರದ ಮೇಲೆ ನೋಡಿದರೆ ವಾಸ್ತವವಾಗಿ ನಿರೀಕ್ಷಿತ ಸಾಲದ ನಷ್ಟಗಳು ಯಾವುದೂ ಇರುವುದಿಲ್ಲ. ಆದರೂ ಕಂಪನಿ ಪ್ರತಿಯೊಂದು ಪ್ರಕರಣವನ್ನು ಪ್ರತ್ಯೇಕವಾಗಿ ತೆಗೆದುಕೊಂಡು ವ್ಯಾಪಾರದಿಂದ ಬರಬೇಕಾಗಿರುವವುಗಳಲ್ಲಿನ ಕ್ಷೀಣತೆಯನ್ನು ನಿರ್ಧರಣೆ ಮಾಡುವುದು. ಅದರನುಸಾರ ಸಾಲದ ನಷ್ಟಕ್ಕೆ ಅವಕಾಶ ನೀಡುವುದು.

ನಗದು ಮತ್ತು ಬ್ಯಾಂಕ್ ಶಿಲ್ಕುಗಳಲ್ಲಿನ ಕ್ರೆಡಿಟ್ ಅಪಾಯವು ಸೀಮಿತವಾಗಿರುವುದು.ಏಕೆಂದರೆ ಎದುರು ಪಕ್ಷದಾರರು ಮಾನ್ಯತೆ ಪಡೆದ ರೇಟಿಂಗ್ ಏಜೆನ್ಸಿಗಳಿಂದ ಹೆಚ್ಚಿನ ಕ್ರೆಡಿಟ್ ರೇಟಿಂಗ್ ನೀಡಿದ ಬ್ಯಾಂಕ್‌ಗಳಾಗಿರುತ್ತವೆ.

ಕಂಪನಿಯು ಊಹೆಗಳು, ಹಣಕಾಸಿನ ಆಸ್ತಿಗಳ ದರ್ಜೆಗೆ ಸಂಬಂಧಿಸಿದ ಮಾಹಿತಿ ಮತ್ತು ಅಂಶಗಳ ಆಧಾರದ ಮೇಲೆ ನಿರ್ಣಯಕ್ಕೆ ಬಂದ ಕೆಳಕಂಡ ಪ್ರವರ್ಗಗಳ ಆಧಾರದ ಮೇಲೆ ಹಣಕಾಸಿನ ಆಸ್ತಿಗಳ ಕ್ರೆಡಿಟ್ ಅಪಾಯವನ್ನು ನಿರ್ಧರಣೆ ಮಾಡುತ್ತದೆ ಮತ್ತು ನಿರ್ವಹಣೆ ಮಾಡುತ್ತದೆ.

ವಿವಿಧ ಹಂತಗಳಲ್ಲಿ ಹಣಕಾಸಿನ ಆಸ್ತಿಗಳ ವರ್ಗೀಕರಣ

ಕಂಪನಿ ಹಣಕಾಸಿನ ಆಸ್ತಿಗಳನ್ನು ಈ ಕೆಳಕಂಡ ವೈಲಕ್ಷಣಗಳನ್ನು ಒಳಗೊಂಡ ಮೂರು ಹಂತಗಳನ್ನಾಗಿ ವರ್ಗೀಕರಿಸಿರುವುದು:

ಹಂತ:1: ಇಸಿಎಲ್‌ಗೆ 12 ತಿಂಗಳ ಅವಕಾಶ ಮಾನ್ಯ ಮಾಡಿರುವುದರಿಂದ ಪ್ರಾರಂಭಿಕ ಗಣನೆಯಲ್ಲಿ ಕ್ಷೀಣತೆಯಿರುವುದಿಲ್ಲ ಮತ್ತು ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳ ಇರುವುದಿಲ್ಲ;

ಹಂತ:2: ಪ್ರಾರಂಭಿಕ ಗಣನೆಯು ಇಸಿಎಲ್‌ನ ಜೀವಿತಾವಧಿ ಗಣನೆಯಾಗಿರುವುದರಿಂದ ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳವಿರುವುದು ಗೋಚರ ಮತ್ತು

ಹಂತ:3: ಕ್ಷೀಣತೆಯ ವಸ್ತುವಿನ ಪುರಾವೆ, ಮತ್ತು ಇದು ದೋಷದಿಂದ ಕೂಡಿರಬಹುದೆಂದು ಪರಿಗಣಿಸಿದೆ ಅಥವಾ ಜೀವಿತಾವಧಿ ಇಸಿಎಲ್ ಮಾನ್ಯ ಮಾಡಿರುವುದರಿಂದ ಕ್ರೆಡಿಟ್ ಕ್ಷೀಣಿಸುವುದು ಎಂದು ಗಣನೆ ಮಾಡಿದೆ.

ಎಲ್ಲಾ ಹಣಕಾಸಿನ ಆಸ್ತಿಗಳು ಅವುಗಳು 30 ದಿನಗಳ ಹಿಂಬಾಕಿ (ಡಿಪಿಡಿ)ಅಥವಾ ವರದಿಗಾರಿಕೆಯ ದಿನಾಂಕದಂದು ಒಂದು ಕಂತು ಸುಸ್ತಿಯಾಗಿರುವಾಗ ಸಾಲದ ಅಪಾಯದಲ್ಲಿ ಮಹತ್ತರವಾದ ಹೆಚ್ಚಳವಾಗುವುದೆಂದು ಭಾವಿಸಲಾಗಿದೆ. ಅದರಂತೆ ಹಂತ 1 ರಿಂದ ಹಂತ 2ಕ್ಕೆ ವರ್ಗಾವಣೆಯಾಗಿವೆ. ಹಂತ 1ಕ್ಕೆ ಇಸಿಎಲ್ ಅವಕಾಶವನ್ನು ಸುಸ್ತಿಯ ಸಂಭವನೀಯತೆ (PD) ಸಮಯದ 12 ತಿಂಗಳ ಅಂಶದ (PIT) ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ. ಹಂತ 2 ಮತ್ತು 3 ಆಸ್ತಿಗಳಿಗೆ ಜೀವಿತಾವಧಿ ಇಸಿಎಲ್ ಅನ್ನು ಸುಸ್ತಿಯ ಜೀವಿತಾವಧಿ ಸಂಭವನೀಯತೆ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ.

ಹಣಕಾಸಿನ ಸಾಧನಗಳ ಮೇಲಿನ ಕ್ಷೀಣತೆಯನ್ನು ಐಎನ್‌ಡಿ ಎಎಸ್ 109 'ಹಣಕಾಸಿನ ಸಾಧನಗಳ' ಅನ್ವಯ ನಿಗದಿಪಡಿಸಿರುವ ಇಸಿಎಲ್ ರೂಪದಲ್ಲಿ ಲೆಕ್ಕಾಚಾರ ಮಾಡಲಾಗುವುದು. ಇಸಿಎಲ್ ಮೂರು ಪ್ರಮುಖ ಅಂಶಗಳನ್ನು ಬಳಸುವುದು: ಮುನ್ನಡೆಯ ಬೃಹತ್ ಆರ್ಥಿಕ ಪರಿಸ್ಥಿತಿಗಳನ್ನು ಪರಿಗಣಿಸಿ ಹೊಂದಾಣಿಕೆಯೊಡನೆ ಪಿಡಿ, ಎಲ್‌ಜಿಡಿ (ಸುಸ್ತಿಯಿಂದ ಆದ ನಷ್ಟ) ಮತ್ತು ಇಎಡಿ (ಒಳಗು ಮಾಡಿದ ಸುಸ್ತಿ)

ಸಾಲಗಳು ಹೊರತಾಗಿ ಹಣಕಾಸಿನ ಸಾಧನಗಳು ಐಎನ್‌ಡಿ ಎಎಸ್ 109 'ಹಣಕಾಸಿನ ಸಾಧನಗಳು' ಅನ್ವಯ ಸರಳೀಕರಣಗೊಳಿಸಿದ ಇಸಿಎಲ್ ವಿಧಾನಕ್ಕೆ ಒಳಪಟ್ಟಿರುವವು.

36	ಹಣಕಾಸಿನ ಅಪಾಯ ನಿರ್ವಹಣೆ -(ಮುಂದುವರಿದುದು)			
	ಸಾಲದ ಅಪಾಯಕ್ಕೆ ಒಳಗಾಗುವಿಕೆ			
	ನಿರೀಕ್ಷಿತ ಸಾಲದ ನಷ್ಟಗಳಿಗೆ ಹವಣಿಕೆ			
	ಕಂಪನಿ ಕೆಳಕಂಡ ಹಣಕಾಸಿನ ಆಸ್ತಿಗಳಿಗೆ 12 ತಿಂಗಳ ಆಧಾರದ ಮೇಲಿನ ನಿರೀಕ್ಷಿತ ಸಾಲದ ನಷ್ಟ ಮತ್ತು ಜೀವಿತಾವಧಿ ನಿರೀಕ್ಷಿತ ಸಾಲದ ನಷ್ಟದ ಆಧಾರದ ಮೇಲೆ ವ್ಯವಸ್ಥೆ ಮಾಡುವುದು:			
	31ನೇ ಮಾರ್ಚ್ 2023			
	ವಿವರಗಳು	**ಅಂದಾಜು ಮಾಡಿದ ಒಟ್ಟು ವಾಹಕ ಮೊತ್ತ**	**ನಿರೀಕ್ಷಿತ ಸಾಲದ ನಷ್ಟಗಳು**	**ಕ್ಷೀಣತೆ ವ್ಯವಸ್ಥೆಯ ನಿವ್ವಳ ವಾಹಕ ಮೊತ್ತ**
	ವ್ಯಾಪಾರದಿಂದ ಬರಬೇಕಾಗುವುದು	4,695.92	(783.81)	3,912.11
	ನಗದು ಮತ್ತು ನಗದು ಸಮಾನತೆಗಳು	4,181.43		4,181.43
	ಇತರೆ ಬ್ಯಾಂಕ್ ಶಿಲ್ಕು	24,458.62		24,458.62
	ಇತರೆ ಹಣಕಾಸಿನ ಆಸ್ತಿಗಳು	30,726.47	(1769.79)	28,956.68
	31ನೇ ಮಾರ್ಚ್ 2022			
	ವಿವರಗಳು	**ಅಂದಾಜು ಮಾಡಿದ ಒಟ್ಟು ವಾಹಕ ಮೊತ್ತ**	**ನಿರೀಕ್ಷಿತ ಸಾಲದ ನಷ್ಟಗಳು**	**ಕ್ಷೀಣತೆ ವ್ಯವಸ್ಥೆಯ ನಿವ್ವಳದ ವಾಹಕ ಮೊತ್ತ**
	ವ್ಯಾಪಾರದಿಂದ ಬರಬೇಕಾಗುವುದು	9,168.93	(764.69)	8,404.24
	ನಗದು ಮತ್ತು ನಗದು ಸಮಾನತೆಗಳು	8,409.14	–	8,409.14
	ಇತರೆ ಬ್ಯಾಂಕ್ ಶಿಲ್ಕು	17,048.61	–	17,048.61
	ಇತರೆ ಹಣಕಾಸಿನ ಆಸ್ತಿಗಳು	24,701.86	(1518.30)	23,183.56
	ನಷ್ಟ ಅನುಮತಿ ವ್ಯವಸ್ಥೆ ಸಮನ್ವಯತೆ – ವ್ಯಾಪಾರದಿಂದ ಬರಬೇಕಾಗಿರುವುದು, ಸಾಲಗಳು ಮತ್ತು ಇತರೆ ಹಣಕಾಸಿನ ಆಸ್ತಿ			
			ವ್ಯಾಪಾರದಿಂದ ಬರಬೇಕಾದುದು	**ಇತರೆ ಹಣಕಾಸಿನ ಆಸ್ತಿ**
	01ನೇ ಏಪ್ರಿಲ್ 2021ರಂದು ನಷ್ಟದ ಅನುಮತಿ		**(743.67)**	**(1715.60)**
	ನಿರೀಕ್ಷಿತ ಸಾಲದ ನಷ್ಟಕ್ಕೆ ಅನುಮತಿ		(21.02)	363.56
	ವರ್ಷದ ಅವಧಿಯಲ್ಲಿ ಹಿಮ್ಮುಖಗೊಳಿಸಿರುವುದು/ ವಜಾ ಮಾಡಿರುವುದು			
	31ನೇ ಮಾರ್ಚ್ 2022 ರಂದು ನಷ್ಟದ ಅನುಮತಿ		**(764.69)**	**(2079.16)**
	ನಿರೀಕ್ಷಿತ ಕ್ರೆಡಿಟ್ ನಷ್ಟಕ್ಕೆ ಅನುಮತಿ		(19.12)	
	ವರ್ಷದ ಅವಧಿಯಲ್ಲಿ ಹಿಮ್ಮುಖಗೊಳಿಸಿರುವುದು/ವಜಾ ಮಾಡಿರುವುದು			60.01
	31ನೇ ಮಾರ್ಚ್ 2023 ರಂದು ನಷ್ಟದ ಅವಕಾಶ		**(783.81)**	**(2019.15)**

ii. ದ್ರವ್ಯತೆ ಅಪಾಯ

ಕಂಪನಿಯು ಸಾಕಷ್ಟು ಮೀಸಲು ನಿಧಿಗಳ ನಿರ್ವಹಣೆ, ಬ್ಯಾಂಕಿಂಗ್ ಸೌಲಭ್ಯಗಳು ಮತ್ತು ಮೀಸಲು ಸಾಲ ಪಡೆಯುವ ಸೌಲಭ್ಯಗಳ ಮೂಲಕ, ಮುಂದೆ ಉಂಟಾಗಬಹುದಾದ ಮತ್ತು ವಾಸ್ತವಿಕ ನಗದು ಹರಿಯುವಿಕೆಗಳನ್ನು ನಿರಂತರವಾಗಿ ಮೇಲುಸ್ತುವಾರಿ ಮಾಡುವ ಮೂಲಕ ಮತ್ತು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪಕ್ವತೆ ವಿವರಗಳನ್ನು ಹೊಂದಾಣಿಕೆ ಮಾಡುವ ಮೂಲಕ ದ್ರವ್ಯತೆ ಅಪಾಯವನ್ನು ನಿರ್ವಹಿಸುವುದು.

ದ್ರವ್ಯತೆ ಪರಿಸ್ಥಿತಿಯ ಆವರ್ತನ ಮುಂಗಾಣ್ಕೆಗಳು ಮತ್ತು ನಗದು ಮತ್ತು ನಗದು ಸಮಾನತೆಗಳನ್ನು ನಿರೀಕ್ಷಿತ ನಗದು ಹರಿಯುವಿಕೆ ಆಧಾರದ ಮೇಲೆ ಆಡಳಿತ ಮಂಡಳಿ ಮೇಲುಸ್ತುವಾರಿ ಮಾಡುವುದು. ಸಂಸ್ಥೆಯು ಕಾರ್ಯನಿರ್ವಹಿಸುವ ಮಾರುಕಟ್ಟೆಯ ದ್ರವ್ಯತೆಯನ್ನು ಕಂಪನಿ ಲೆಕ್ಕಕ್ಕೆ ತೆಗೆದುಕೊಳ್ಳುವುದು. ಇದರ ಜೊತೆಗೆ ಕಂಪನಿಯ ದ್ರವ್ಯತೆ ನಿರ್ವಹಣೆ ನೀತಿಯು ಪ್ರಮುಖ ಕರೆನ್ಸಿಗಳಲ್ಲಿನಗದು ಹರಿಯುವಿಕೆಗಳನ್ನು ಯೋಜಿಸುವುದು ಮತ್ತು ಇವುಗಳನ್ನು ಈಡೇರಿಸಲು ಅಗತ್ಯವಾದ ದ್ರವ್ಯತೆ ಆಸ್ತಿಗಳ ಮಟ್ಟವನ್ನು ಪರಿಗಣಿಸುವುದು, ಆಂತರಿಕ ಮತ್ತು ಬಾಹ್ಯ ನಿಯಂತ್ರಣ ಅಗತ್ಯತೆ ಎದುರಾಗಿ ಸ್ಥಿತಿ ವಿವರಣಾ ಪಟ್ಟಿ ದ್ರವ್ಯತೆ ಅನುಪಾತದ ಮೇಲುಸ್ತುವಾರಿ ಮತ್ತು ಋಣಕ್ಕೆ ಹಣಕಾಸಿನ ಯೋಜನೆಗಳ ನಿರ್ವಹಣೆಯನ್ನು ಒಳಗೊಂಡಿರುವುದು.

ಹಣಕಾಸಿನ ಹೊಣೆಗಾರಿಕೆಗಳ ವಾಯಿದೆಗಳು:

ಎಲ್ಲಾ ಹಣಕಾಸಿನ ಹೊಣೆಗಾರಿಕೆಗಳಿಗೆ ಅವುಗಳ ಒಪ್ಪಂದವಾದ ವಾಯಿದೆ ಮುಕ್ತಾಯಗಳ ಆಧಾರದ ಮೇಲೆ ಸಂಬಂಧಪಟ್ಟ ವಾಯಿದೆ ಮುಕ್ತಾಯದ ಗುಂಪುಗಳ ಆಧಾರದ ಮೇಲೆ ಕಂಪನಿಯ ಹಣಕಾಸಿನ ಹೊಣೆಗಾರಿಕೆಗಳನ್ನು ಈ ಕೆಳಗಿನ ತಃಖ್ತೆಯು ವಿಶ್ಲೇಷಿಸುವುದು. ತಃಖ್ತೆಯಲ್ಲಿ ತಿಳಿಸಿರುವ ಮೊತ್ತಗಳು ಒಪ್ಪಂದವಾದ ರಿಯಾಯಿತಿ ಮಾಡಿರದ ನಗದು ಹರಿವು ಆಗಿರುವುದು (ಗುತ್ತಿಗೆ ಹೊಣೆಗಾರಿಕೆಗಳು ಹೊರತಾಗಿ).

31ನೇ ಮಾರ್ಚ್ 2023	1 ವರ್ಷಕ್ಕಿಂತ ಕಡಿಮೆ	1 ವರ್ಷದಿಂದ 5 ವರ್ಷಗಳು	5 ವರ್ಷಗಳು ಮತ್ತು ಮೇಲ್ಪಟ್ಟು	ಒಟ್ಟು
ಜನ್ಯರಹಿತ				
ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದು	6,720.89	4,246.78		10,967.68
ಗುತ್ತಿಗೆ ಹೊಣೆಗಾರಿಕೆಗಳು	382.77	342.75		725.52
ಇತರೆ ಹಣಕಾಸಿನ ಹೊಣೆಗಾರಿಕೆಗಳು	9,756.79	17,706.03		27,462.81
ಒಟ್ಟು	**16,860.45**	**22,295.56**		**39,156.02**
31ನೇ ಮಾರ್ಚ್ 2022				
ಜನ್ಯರಹಿತ				
ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದು	0.07	0.03		0.10
ಗುತ್ತಿಗೆ ಹೊಣೆಗಾರಿಕೆಗಳು	619.57	462.31		1,081.88
ಇತರೆ ಹಣಕಾಸಿನ ಹೊಣೆಗಾರಿಕೆಗಳು	17,280.30	9,553.23		26,833.53
ಒಟ್ಟು	**17,899.94**	**10,015.57**		**27,915.51**

36 ಹಣಕಾಸಿನ ಅಪಾಯ ನಿರ್ವಹಣೆ -(ಮುಂದುವರಿದುದು)

iii **ಮಾರುಕಟ್ಟೆ ಅಪಾಯ**

ಎ. ವಿದೇಶಿ ಕರೆನ್ಸಿ ಅಪಾಯ

ಕಂಪನಿ ವಿದೇಶಿ ಕರೆನ್ಸಿಯಲ್ಲಿ ನಮೂದಿಸಿರುವ ಯಾವುದೇ ಆಸ್ತಿ ಅಥವಾ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ. ಆದ್ದರಿಂದಾಗಿ ಕಂಪನಿಯು ಕರೆನ್ಸಿ ಅಪಾಯಕ್ಕೆ ಒಳಗಾಗುವುದಿಲ್ಲ.

ಬಿ. ಬೆಲೆ ಅಪಾಯ

ಗ್ರೂಪ್ ಹೊಂದಿರುವ ಹೂಡಿಕೆಗಳಿಂದ ಉಂಟಾಗುವ ಈಕ್ವಿಟಿ ಸೆಕ್ಯೂರಿಟಿಸ್‌ನ ಬೆಲೆ ಅಪಾಯಕ್ಕೆ ಕಂಪನಿ ಒಳಗಾಗುವುದು ಮತ್ತು ಒಸಿಐ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಸ್ಥಿತಿ ವಿವರಣಾ ಪಟ್ಟಿಯಲ್ಲಿ ವರ್ಗೀಕರಿಸಿದೆ.

ಸೂಕ್ಷ್ಮತೆ

ಸದರಿ ಅವಧಿಗಳ ಕಂಪನಿಯ ಲಾಭಗಳ ಮೇಲೆ ಸಾಧನಗಳ ಹೆಚ್ಚಿನ/ಕಡಿಮೆ ಬೆಲೆಗಳಿಗೆ ಲಾಭ ಅಥವಾ ನಷ್ಟ ಸೂಕ್ಷ್ಮತೆ ಹೊಂದಿರುವುದು.

ವಿವರಗಳು	31ನೇ ಮಾರ್ಚ್ 2023	31ನೇ ಮಾರ್ಚ್ 2022
5% ನಷ್ಟು ಬೆಲೆ ಹೆಚ್ಚಳ–ಎಫ್‌ವಿಒಸಿಐ	120.24	121.19
5% ನಷ್ಟು ಬೆಲೆ ಇಳಿಕೆ – ಎಫ್‌ವಿಒಸಿಐ	(120.24)	(121.19)

37	**ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಮೇಲಿನ ಖರ್ಚು**		
	ಕಂಪನಿಗಳ ಕಾಯ್ದೆ, 2013ರ ಪ್ರಕರಣ 135 ಮತ್ತು ಇದರಡಿ ರೂಪಿಸಿರುವ ನಿಯಮಗಳ(ಸಿಎಸ್‌ಆರ್ ನಿಬಂಧನೆಗಳು) ಅನ್ವಯ, ಕಂಪನಿಯು ನಿರ್ದೇಶಕರ ಮಂಡಳಿಯ ಸಿಎಸ್‌ಆರ್ ಸಮಿತಿ ಒಂದನ್ನು ರಚಿಸಿದೆ.		
	ವಿವರಗಳು	**31ನೇ ಮಾರ್ಚ್ 2023**	**31ನೇ ಮಾರ್ಚ್ 2022**
	ವರ್ಷದ ಅವಧಿಯಲ್ಲಿ ಕಂಪನಿ ಖರ್ಚು ಮಾಡಬೇಕಿರುವ ಒಟ್ಟು ಮೊತ್ತ	129.01	96.24
	ವರ್ಷದ ಅವಧಿಯಲ್ಲಿ ಯಾವುದೇ ಆಸ್ತಿಯ ನಿರ್ಮಾಣ/ಸ್ವಾಧೀನ ಹೊರತಾಗಿ ಖರ್ಚು ಮಾಡಿರುವ ಮೊತ್ತ	90.66	121.60
	–ಪಾವತಿ ಮಾಡಿರುವುದು	90.66	121.60
	–ಪಾವತಿ ಮಾಡಬೇಕಾಗಿರುವುದು	–	–
	ವರ್ಷದ ಕೊನೆಯಲ್ಲಿನ ಕೊರತೆ/ (ಅಧಿಕ)	38.35	(25.36)
	ಹಿಂದಿನ ವರ್ಷಗಳಲ್ಲಿ ಅಧಿಕವಾಗಿ ಖರ್ಚು ಮಾಡಿರುವುದು	(50.09)	(24.73)
	ಹಿಂದಿನ ವರ್ಷ ಕೊರತೆಯಾಗಿದ್ದರ ಒಟ್ಟು ಮೊತ್ತ	–	–
	ಕೊರತೆಗೆ ಕಾರಣ	–	–
	ಸಿಎಸ್‌ಆರ್ ಚಟುವಟಿಕೆಗಳ ಸ್ವರೂಪ★	–	–
	ಸಂಬಂಧಿತ ವ್ಯಕ್ತಿಗಳ ವ್ಯವಹಾರಗಳ ವಿವರ	–	–
	ಒಪ್ಪಂದ ಹೊಣೆಗಾರಿಕೆ ಮಾಡಿಕೊಳ್ಳುವ ಮೂಲಕ ಉಂಟಾದ ಹೊಣೆಗಾರಿಕೆ ಸಂಬಂಧ ವ್ಯವಸ್ಥೆ ಮಾಡಿರುವಲ್ಲಿ, ವರ್ಷದ ಅವಧಿಯಲ್ಲಿ ವ್ಯವಸ್ಥೆಯ ಚಲನೆಯನ್ನು ಪ್ರತ್ಯೇಕವಾಗಿ ತೋರಿಸಬೇಕು.	–	–
	ಒಟ್ಟು	**90.66**	**121.60**
	★ಸಿಎಸ್‌ಆರ್ ಚಟುವಟಿಕೆಗಳನ್ನು ಕೆಳಗೆ ಪಟ್ಟಿ ಮಾಡಿದೆ.		
i)	ಆರೋಗ್ಯ ರಕ್ಷಣೆ ಸೇವೆಗಳು		
ii)	ಶೈಕ್ಷಣಿಕ ಚಟುವಟಿಕೆಗಳು		

38. ಹಣಕಾಸು ಸಾಧನಗಳು
ಪ್ರವರ್ಗವಾರು ಹಣಕಾಸು ಸಾಧನಗಳು

ಕೆಳಗಿನ ತಃಖ್ತೆಯು ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ವಾಹಕ ಮೊತ್ತಗಳನ್ನು ತೋರಿಸುವುದು.

ಟಿಪ್ಪಣಿ ಸಂಖ್ಯೆ	ವಿವರಗಳು	31ನೇ ಮಾರ್ಚ್ 2023ರಂದು ಇದ್ದಂತೆ				31ನೇ ಮಾರ್ಚ್ 2022ರಂದು ಇದ್ದಂತೆ			
		ಎಫ್‌ವಿಟಿ ಪಿಎಲ್	ಎಫ್‌ವಿಟಿ ಒಸಿಐ	ಅಮಾರ್ಟೈಸ್ಡ್ ಬೆಲೆ	ಒಟ್ಟು	ಎಫ್‌ವಿಟಿ ಪಿಎಲ್	ಎಫ್‌ವಿಟಿ ಒಸಿಐ	ಅಮಾರ್ಟೈಸ್ಡ್ ಬೆಲೆ	ಒಟ್ಟು
ಹಣಕಾಸಿನ ಆಸ್ತಿಗಳು:									
6	ಹೂಡಿಕೆಗಳು (★)	-	2,404.86	,597.43	3,002.29	-	2,423.86	,597.43	3,021.29
7	ಇತರೆ ಹಣಕಾಸಿನ ಆಸ್ತಿಗಳು	-	-	28,956.68	28,956.68	-		23,183.56	23,183.56
10	ವ್ಯಾಪಾರದಿಂದ ಬರಬೇಕಾಗಿರುವುದು	-	-	3,912.11	3,912.11	-		8,404.24	8,404.24
11	ನಗದು ಮತ್ತು ನಗದು ಸಮಾನಗಳು	-	-	4,181.43	4,181.43	-		8,409.14	8,409.14
12	ಇತರೆ ಬ್ಯಾಂಕ್ ಶಿಲ್ಕುಗಳು	-	-	24,458.62	24,458.62	-		17,048.61	17,048.61
	ಒಟ್ಟು ಹಣಕಾಸಿನ ಆಸ್ತಿಗಳು	-	**2,404.86**	**62,106.27**	**64,511.13**	-	**2,423.86**	**57,642.99**	**60,066.85**
	ಹಣಕಾಸಿನ ಹೊಣೆಗಾರಿಕೆಗಳು:	-	-	-	-	-	-	-	-
18	ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು	-	-	10,965.35	10,965.35	-	-	10,107.87	10,107.87
15	ಇತರೆ ಹಣಕಾಸಿನ ಹೊಣೆಗಾರಿಕೆಗಳು	-	-	28,188.34	28,188.34	-	-	27,915.41	27,915.41

★ ಸಹವರ್ತಿ ಕಂಪನಿಗಳ ಈಕ್ವಿಟಿ ಸಾಧನಗಳಲ್ಲಿನ ಹೂಡಿಕೆಗಳನ್ನು ಐಎನ್‌ಡಿ ಎಎಸ್ 27ರ ಅನ್ವಯ ಬೆಲೆಯಲ್ಲಿ ಮಾಪನ ಮಾಡಿದೆ. ಪ್ರತ್ಯೇಕ ಹಣಕಾಸಿನ ಹೇಳಿಕೆಗಳು ಮತ್ತು ಮೇಲಿನವುಗಳನ್ನು ಸೇರಿಸಿರುವುದಿಲ್ಲ.

ಹಣಕಾಸಿನ ಸಾಧನಗಳಿಗೆ ಟಿಪ್ಪಣಿಗಳು

(i) ನಗದು, ನಗದು ಸಮಾನತೆಗಳು, ವ್ಯಾಪಾರದಿಂದ ಬರಬೇಕಾದುದು, ಸಾಲಗಳು, ಇತರೆ ಹಣಕಾಸಿನ ಆಸ್ತಿಗಳು, ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದುದು, ಸಾಲಗಳು ಮತ್ತು ಇತರೆ ಹಣಕಾಸಿನ ಹೊಣೆಗಾರಿಕೆಗಳ ಅಂದಾಜು, ಈ ಸಾಧನಗಳ ಅಲ್ಪಾವಧಿ ವಾಯಿದೆ ಮುಕ್ತಾಯಕ್ಕೆ ಬಹುಪಾಲು ಸೇರಿದ ವಾಹಕ ಮೊತ್ತವನ್ನು ಆಡಳಿತ ಮಂಡಳಿ ನಿರ್ಧರಣೆ ಮಾಡಿರುವುದು. (ii) ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯವನ್ನು, ಒತ್ತಾಯಿತ ಅಥವಾ ಪರಿಸಮಾಪ್ತಿ ಮಾರಾಟ ಹೊರತಾಗಿ, ಅಪೇಕ್ಷಿತ ವ್ಯಕ್ತಿಗಳ ನಡುವಿನ ಚಾಲ್ತಿ ವ್ಯವಹಾರದಲ್ಲಿನ ಸಾಧನದ ವಿನಿಮಯ ಮಾಡಿಕೊಳ್ಳುವ ಮೊತ್ತದಲ್ಲಿ ಸೇರಿಸಿದೆ. (iii) ಕಂಪನಿಯು ಸಹಾಯಕ ಕಂಪನಿಗಳ ಈಕ್ವಿಟಿ ಷೇರುಗಳಲ್ಲಿನ ಹೂಡಿಕೆಗಳನ್ನು ಪರಿಭಾವಿತ ಬೆಲೆಯಲ್ಲಿ ಮಾಪನ ಮಾಡಿದೆ. ಕಂಪನಿಯು ನ್ಯಾಯೋಚಿತ ಮೌಲ್ಯವನ್ನು ರವಾನೆ ದಿನಾಂದಂದು ಪರಿಭಾವಿತ ಬೆಲೆಯಾಗಿ ಪರಿಗಣಿಸಿದೆ.

(ii) ನ್ಯಾಯೋಚಿತ ಮೌಲ್ಯದ ಶ್ರೇಣಿ

ಹಣಕಾಸಿನ ಸ್ಥಿತಿಯ ಹೇಳಿಕೆಯಲ್ಲಿ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವುದನ್ನು ನ್ಯಾಯೋಚಿತ ಮೌಲ್ಯ ಶ್ರೇಣಿಯ ಮೂರು ಹಂತಗಳಲ್ಲಿ ಗುಂಪು ಮಾಡಲಾಗಿದೆ. ಮಾಪನಕ್ಕೆ ಮಹತ್ತರ ಅಂಶಗಳ ಗಮನಹರಿಸುವಿಕೆ ಆಧಾರದ ಮೇಲೆ ಮೂರು ಹಂತಗಳನ್ನು ಪ್ರತಿಪಾದಿಸಲಾಗಿದೆ:

ಹಂತ 1: ಹಣಕಾಸು ಸಾಧನಗಳಿಗೆ ಸಕ್ರಿಯ ಮಾರುಕಟ್ಟೆಗಳಲ್ಲಿನ ನಮೂದಿತ ದರಗಳು (ಹೊಂದಾಣಿಕೆ ಮಾಡಿರದ್ದು)

ಹಂತ 2: ಹಂತ 1ರಲ್ಲಿ ಸೇರಿಸಿರುವ ನಮೂದಿತ ದರಗಳ ಹೊರತಾಗಿ ಒಳ ಬಳಕೆಗಳ ವಿಷಯಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಸ್ತಿ ಅಥವಾ ಹೊಣೆಗಾರಿಕೆಗೆ ಅಳವಡಿಸಿಕೊಳ್ಳುವವುಗಳಾಗಿವೆ.

ಹಂತ 3: ಆಸ್ತಿ ಅಥವಾ ಹೊಣೆಗಾರಿಕೆಗೆ ಒಳಪಡಿಸಿಕೊಳ್ಳದಿರುವ ಒಳ ಅಂಶಗಳು.

		31ನೇ ಮಾರ್ಚ್ 2023 ರಂದು ಇದ್ದಂತೆ			31ನೇ ಮಾರ್ಚ್ 2022ರಂದು ಇದ್ದಂತೆ		
	ಟಿಪ್ಪಣಿ ಸಂಖ್ಯೆ	ಹಂತ-1	ಹಂತ-2	ಹಂತ-3	ಹಂತ-1	ಹಂತ-2	ಹಂತ-3
ಹೂಡಿಕೆಗಳು	6	648.93	1,755.93	597.49	476.44	1,947.42	597.49

39. ಸಂಬಂಧಿಸಿದ ವ್ಯಕ್ತಿ-ಐಎನ್‌ಡಿ ಎಎಸ್ 24ರ ಅನ್ವಯ ಪ್ರಕಟಣೆ			
(i)	ಪ್ರಮುಖ ಆಡಳಿತ ಸಿಬ್ಬಂದಿ		
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ಗೆ			
	ವಿಕಾಶ್ ಕುಮಾರ್ ವಿಕಾಶ್	ವ್ಯವಸ್ಥಾಪಕ ನಿರ್ದೇಶಕರು	
	ಶ್ರೀದೇವಿ ಬಿ.ಎನ್.	ಕಂಪನಿ ಕಾರ್ಯದರ್ಶಿ	
	ಎ.ಎಂ.ಚಂದ್ರಪ್ಪ	ಮುಖ್ಯ ಹಣಕಾಸು ಅಧಿಕಾರಿ	
(ii)	ಸಹಾಯಕ ಕಂಪನಿಗಳು		
	ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್		
	ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್		
	ಸಹವರ್ತಿ ಕಂಪನಿಗಳು		
	ಕೆ.ಟಿ. ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್		
	ಕೆ.ಟಿ. ಮ್ಯಾನ್‌ಷನ್ಸ್ ಅಪಾರ್ಟ್‌ಮೆಂಟ್ಸ್ ಓನರ್ಸ್ ಅಸೋಷಿಯೇಷನ್		
(iii)	**ಸಂಬಂಧಿತ ವ್ಯಕ್ತಿಗಳ ಜೊತೆಗಿನ ವ್ಯವಹಾರಗಳು ಕೆಳಕಂಡಂತಿರುವುದು**		
		31ನೇ ಮಾರ್ಚ್ 2023	**31ನೇ ಮಾರ್ಚ್ 2022**
	ಪ್ರಮುಖ ಆಡಳಿತ ಸಿಬ್ಬಂದಿಗೆ ಪಾವತಿ ಮಾಡಿದ ಸಂಭಾವನೆ (*)(#)	107.37	94.09
	ಸಹಾಯಕ ಕಂಪನಿಗಳಿಂದ ಬಂದ ಲಾಭಾಂಶ	274.58	71.45
	ಸಹಾಯಕ ಕಂಪನಿಗಳಿಂದ ಬಂದ ಬಾಡಿಗೆ ಆದಾಯ	4.36	4.30
	ಸಹಾಯಕ ಕಂಪನಿಗಳಿಂದ ಬಂದ ಕಮಿಷನ್ ಆದಾಯ	–	–
	ಜಾಹೀರಾತು ಮತ್ತು ಮುದ್ರಣ ಖರ್ಚುಗಳು	24.45	56.44
	ಸಹಾಯಕ ಕಂಪನಿಗಳ ಪರವಾಗಿ ಮಾಡಿದ ಖರ್ಚುಗಳು	0.44	0.83
(*) ಕಂಪನಿಗೆ ಒಟ್ಟಾರೆಯಾಗಿ ಗ್ರಾ್ಯಚ್ಯುಟಿ ಮತ್ತು ರಜೆ ಪಾವತಿಯ ಹೊಣೆಗಾರಿಕೆ ವ್ಯವಸ್ಥೆಯನ್ನು ವಿಮಾಗಣನೆ ಆಧಾರದ ಮೇಲೆ ಒದಗಿಸಿದೆ. ವ್ಯಕ್ತಿಗಳಿಗೆ ಸಂಬಂಧಿಸಿದ ಮೊತ್ತವು ತಿಳಿದಿಲ್ಲ. ಆದ್ದರಿಂದ ಮೇಲಿನವುಗಳನ್ನು ಸೇರಿಸಿಲ್ಲ.			
(#)	ಭವಿಷ್ಯ ನಿಧಿಗೆ ವಂತಿಕೆಯು ಸೇರಿರುವುದು		

(v)	**ಈ ದಿನಾಂಕದಂದು ಇದ್ದಂತೆ ಸಂಬಂಧಿತ ವ್ಯಕ್ತಿಗಳಲ್ಲಿನ ಶಿಲ್ಕುಗಳು ಕೆಳಕಂಡತಿರುವುದು:**	**31ನೇ ಮಾರ್ಚ್ 2023**	**31ನೇ ಮಾರ್ಚ್ 2022**
	ಸಹಾಯಕ ಕಂಪನಿಗಳಿಂದ ಬರಬೇಕಿರುವುದು	–	–
	ಸಹಾಯಕ ಕಂಪನಿಗಳಿಗೆ ಪಾವತಿ ಮಾಡಬೇಕಿರುವುದು	10.59	22.32

40. ಸಂಭಾವ್ಯ ಹೊಣೆಗಾರಿಕೆಗಳು ಮತ್ತು ಬದ್ಧತೆಗಳು

ಕ್ರಸಂ.	ವಿವರಗಳು	2022-2023	2021-2022
i	ಕಂಪನಿಯಿಂದ ಬ್ಯಾಂಕುಗಳಿಗೆ ನೀಡಿರುವ ಜಾಮೀನುಗಳು/ ಪ್ರತಿ ಜಾಮೀನುಗಳು	38.57	31.84
ii	ಅಗ್ನಿಶಾಮಕ ನೀತಿ ಮೇಲೆ ವಿಮೆ ಕೇಳಿಕೆ ಹಕ್ಕು-ಪ್ರಕರಣ ಇತ್ಯರ್ಥವಾಗದೆ ಉಳಿದಿದೆ	207.73	207.73
	ಅಗ್ನಿಶಾಮಕ ನೀತಿ ಮೇಲೆ ವಿಮೆ - ತೀರ್ಪು ನೀಡಿರುವ ಪ್ರಕರಣಗಳು	488.70	488.70
	ವಿಮೆ ಕ್ಲೈಮಿನ ಮೇಲಿನ ಬಡ್ಡಿ	680.06	641.57
iii	ಕಬ್ಬಿಣದ ಅದುರಿನ ರಫ್ತಿನ ವ್ಯವಹಾರದಲ್ಲಿ ಪಾರ್ಟಿಯಿಂದ ಮಾಡಿರುವ ಕ್ಲೈಮ್‌ಗಳು (ಬಡ್ಡಿ ಸೇರಿದಂತೆ)	1,714.76	1,714.76
iv	ಪಿಂಚಣಿ, ಸಣ್ಣ ಉಳಿತಾಯಗಳು, ಆಸ್ತಿ ಉಸ್ತುವಾರಿ ನಿರ್ದೇಶನಾಲಯ ಮಾಡಿರುವ ಕ್ಲೈಮ್ ಗಳು	4,609.86	4,609.86
v	ವೆಸ್‌ಕೇರ್ (ಇಂಡಿಯಾ) ಲಿಮಿಟೆಡ್‌ನಿಂದ ವಿಂಡ್‌ಮಿಲ್‌ನ ಗುತ್ತಿಗೆಯ ಮೇಲಿನ ಕ್ಲೈಮ್	119.23	119.23
vi	ಆದಾಯ ತೆರಿಗೆ ತಗಾದೆಗಳು	2,975.76	3,158.07
vii	ಸೇವಾ ತೆರಿಗೆ ತಗಾದೆಗಳು	197.00	197.00
viii	ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಮಾಡಿರುವ ಕ್ಲೈಮ್‌ಗಳು-ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ (ಬಿಎಸಿಸಿ) ಯ ಗುತ್ತಿಗೆ ಮೇಲಿನ ಪರವಾನಗಿ ಶುಲ್ಕ	397.14	397.14

ಕಂಪನಿಯು ಕ್ಲೈಮ್‌ಗಳ ಬಗ್ಗೆ ವಿವಾದ ಮಾಡಿರುವುದರಿಂದ ಮೇಲೆ ತಿಳಿಸಿರುವ ಮೊತ್ತಗಳನ್ನು ಒದಗಿಸಿರುವುದಿಲ್ಲ.

i. ಇತರೆ ವ್ಯವಹಾರದ ವಿಚಾರಗಳಿಗೆ ಸಂಬಂಧಿಸಿದಂತೆ ನೀಡಿದೆ. ರೂ.38.57ಲಕ್ಷದ ಬ್ಯಾಂಕ್ ಗ್ಯಾರಂಟಿ (ಹಿಂದಿನ ವರ್ಷ ರೂ.31.84 ಲಕ್ಷ)

ii. ಕಂಪನಿಯು 1995-96ರಿಂದ 2003-04ರವರೆಗೆ 9 ಅಸೆಸ್‌ಮೆಂಟ್ ವರ್ಷಗಳಿಗೆ 3ನೇ ಡಿಸೆಂಬರ್ 2020ರಲ್ಲಿ ವಿವಾದ್ ಸೇ ವಿಶ್ವಾಸ್ ಕಾಯ್ದೆ 2020ರ ಅಡಿಯಲ್ಲಿ ಆದಾಯ ತೆರಿಗೆ ಇಲಾಖೆಗೆ ಮನವಿ ಸಲ್ಲಿಸಿದ್ದು, ಆದಾಯ ತೆರಿಗೆ ಇಲಾಖೆ ಅದನ್ನು ಒಪ್ಪಿಕೊಂಡಿದೆ. ಆದಾಯ ತೆರಿಗೆ ಇಲಾಖೆಯ ನಿರ್ದೇಶನದ ಮೇರೆಗೆ ರೂ.3617.49 ಲಕದ ಬ್ಯಾಂಕ್ ಗ್ಯಾರ್ಚ್ಯುಟಿಗಳನ್ನು ಬ್ಯಾಂಕ್ 2ನೇ ಜುಲೈ2021ರಂದು ರದ್ದುಪಡಿಸಿದೆ.

ಕಂಪನಿ ಮಾಲೀಕತ್ವದ ಬಿಎಸಿಸಿಯಲ್ಲಿ ಸಂಭವಿಸಿದ ಅಪಘಾತದ ಸಂಬಂಧ 2001ರ ಅವಧಿಯಲ್ಲಿ ತಮ್ಮ ಗ್ರಾಹಕರ ಕ್ಲೈಮ್‌ಗಳನ್ನು ಕೆಲವು ವಿಮಾ ಕಂಪನಿಗಳು ಇತ್ಯರ್ಥಪಡಿಸಿದ್ದು, ಇವು ತಾವು ಇತ್ಯರ್ಥಪಡಿಸಿರುವ ಕ್ಲೈಮ್‌ಗಳ ವಸೂಲಿಗಾಗಿ ಪ್ರತಿಸ್ಥಾಪನೆ ತತ್ವಗಳ ಅಡಿಯಲ್ಲಿ ಕಂಪನಿ ಮೇಲೆ ಹಲವಾರು ದಾವೆಗಳನ್ನು ಹೂಡಿವೆ. ಕಂಪನಿ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಘನ ಸರ್ವೋಚ್ಚ ನ್ಯಾಯಾಲಯದ ಮರೆ ಹೋಗಿದೆ. ಘನ ಸರ್ವೋಚ್ಚ ನ್ಯಾಯಾಲಯವು ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳು ಸರ್ಕಾರದ ಸಂಸ್ಥೆಗಳಾಗಿರುವುದರಿಂದ (ಕಂಪನಿ, ವಿಮಾ ಕಂಪನಿಗಳು ಮತ್ತು ಸೀಮಾ ಸುಂಕದ ಪ್ರಾಧಿಕಾರಿಗಳು) ವಿವಾದಿತ ವಿಷಯವನ್ನು ಪರಸ್ಪರ ಸೌಹಾರ್ದಯುತವಾಗಿ ಚರ್ಚಿಸಿ ಇತ್ಯರ್ಥಪಡಿಸಿಕೊಳ್ಳುವಂತೆ ದಿನಾಂಕ 6ನೇ ನವೆಂಬರ್ 2009ರ ಆದೇಶದಲ್ಲಿ ನಿರ್ದೇಶಿಸಿದೆ.

ರೂ.207.73 ಲಕ್ಷಗಳ ಮೊತ್ತದ (ಹಿಂದಿನ ವರ್ಷ: ರೂ.207.73ಲಕ್ಷ) ಕೆಲವು ಪ್ರಕರಣಗಳು ಇನ್ನೂ ಇತ್ಯರ್ಥವಾಗದೆ ಉಳಿದಿವೆ.

ಈ ಹಿಂದೆ ಇದೇ ರೀತಿಯ ವಿಚಾರದಲ್ಲಿ ಕೆಳ ನ್ಯಾಯಾಲಯಗಳು ಕಂಪನಿ ಮತ್ತು ಸೀಮಾ ಸುಂಕಗಳ ಇಲಾಖೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ವಿಮಾ ಕ್ಲೈಮ್‌ಗಳನ್ನು ಇತ್ಯರ್ಥಪಡಿಸುವ ಜವಾಬ್ದಾರಿ ಹೊಂದಿವೆ ಎಂಬ ಅಭಿಪ್ರಾಯವನ್ನು ಅನ್ವಯಿಸಿದ್ದವು, ಕಂಪನಿಯು ಒಟ್ಟು ತೀರ್ಪಿನ ಹೊಣೆಗಾರಿಕೆಯ ರೂ.651.60 ಲಕ್ಷಗಳ ಹೊಣೆಗಾರಿಕೆಯ 25% ಆಗಿ ರೂ.162.90ಲಕ್ಷ ಒದಗಿಸಿದೆ (ಹಿಂದಿನ ವರ್ಷ ರೂ.162.90ಲಕ್ಷಗಳು) ಮತ್ತು ರೂ.488.70 ಲಕ್ಷ (ಹಿಂದಿನ ವರ್ಷ: ರೂ.488.70 ಲಕ್ಷ) ಮೊತ್ತದ ಒದಗಿಸಿಲ್ಲದ ಭಾಗವನ್ನು ಮೇಲೆ ತಿಳಿಸಿದೆ. ಚಾಲ್ತಿ ವರ್ಷದಲ್ಲಿ 6%ನಂತೆ ಚಕ್ರಬಡ್ಡಿಯನ್ನು ರೂ.906.75ಲಕ್ಷ (ಹಿಂದಿನ ವರ್ಷ: ರೂ.855.42ಲಕ್ಷ) ಮೊತ್ತದ ಮೇಲೆ ಲೆಕ್ಕಾಚಾರ ಮಾಡಿದೆ. ಚಾಲ್ತಿ ವರ್ಷದಲ್ಲಿ ರೂ.226.68 ಲಕ್ಷದ ಮೊತ್ತ ನೀಡಿದೆ. (ಹಿಂದಿನ ವರ್ಷ: ರೂ.213.86ಲಕ್ಷಗಳು) ಮತ್ತು ರೂ.680.06ಲಕ್ಷಗಳ ಬಾಕಿ ಮೊತ್ತವನ್ನು (ಹಿಂದಿನ ವರ್ಷ: ರೂ.641.57ಲಕ್ಷ) ಸಂಭಾವ್ಯ ಹೊಣೆಗಾರಿಕೆಯಲ್ಲಿ ವರದಿ ಮಾಡಿದೆ. ವಿಮೆ ಕಂಪನಿಗಳು ಮತ್ತು ಸೀಮಾ ಸುಂಕ ಇಲಾಖೆ ಮಾಡಬೇಕಿರುವ ಇತ್ಯರ್ಥದ ಪಾಲನ್ನು ಇನ್ನೂ ಅಂತಿಮಗೊಳಿಸಿಲ್ಲ. ಬಿಎಸಿಸಿ ಉಗ್ರಾಣದಲ್ಲಿರುವ ಸರಕನ್ನು ಸೀಮಾ ಸುಂಕ ಇಲಾಖೆ ನೀಡಿರುವ ವ್ಯಾಪಾರ ಸುತ್ತೋಲೆ ಅನ್ವಯ ಕೆಜಿ ಒಂದಕ್ಕೆ ಯುಎಸ್‌ಡಿ 20 ರ ದರದಲ್ಲಿ ವಿಮೆ ಮಾಡಿಸಿದೆ.

iii. ಕಂಪನಿಯು ಎಫ್ಇ ಅಂಶ 52% ಉಳ್ಳ ಕಬ್ಬಿಣದ ಅದುರನ್ನು ಚೀನಾಕ್ಕೆ ರಫ್ತು ಮಾಡಲು ಒಪ್ಪಂದ ಒಂದನ್ನು ಮಾಡಿಕೊಂಡಿತ್ತು. ಕಂಪನಿಯು ಬದ್ಧತೆಯನ್ನು ಪಾಲಿಸದ ಪ್ರಯುಕ್ತ ಖರೀದಿದಾರರು ಮಧ್ಯಸ್ಥಿಕೆ ನ್ಯಾಯ ಪಂಚಾಯ್ತಿಗೆ ಹೋಗಿದ್ದರು. ಒಪ್ಪಂದದ ಅನ್ವಯ ರೂಪಿಸಿದ್ದ ಮಧ್ಯಸ್ಥಿಕೆ ಸಮಿತಿಯು 5% ನಂತೆ ಬಡ್ಡಿ ಪಾವತಿ ಮಾಡಬೇಕಾಗಿರುವುದಲ್ಲದೆ ಯುಎಸ್ಡಿ 18,80,851ರ ಮೊತ್ತಕ್ಕೆ ಕಂಪನಿ ವಿರುದ್ಧ ತೀರ್ಪನ್ನು ಹೊರಡಿಸಿತ್ತು. ಸಾಗರೋತ್ತರ ಖರೀದಿದಾರರಿಂದ ಯುಎಸ್ಡಿ 67,473 ಮೊತ್ತದ ಬಾಕಿ ಬರಬೇಕಾಗಿದೆ. ಕಂಪನಿಯ ವಿರುದ್ಧದ ರೂ.1714.16 ಲಕ್ಷಗಳ (ಹಿಂದಿನ ವರ್ಷ: ರೂ.1663.11ಲಕ್ಷ) ಬಡ್ಡಿ ಸೇರಿ ಮೇಲಿನ ತಃಖ್ತೆಯಲ್ಲಿ ತಿಳಿಸಿದೆ. ಚೀನಾದಲ್ಲಿ ಮಾಡಿದ ಖರ್ಚುಗಳ ಸಂಬಂಧ ಸಾಗರೋತ್ತರ ಖರೀದಿದಾರರ ಕ್ಲೈಮ್ಗಳು ಮತ್ತು ಎಫ್ಇಎಂಎ ಅನ್ವಯದ ಹೊಣೆಗಾರಿಕೆಯನ್ನು ಇಲ್ಲಿ ಪರಿಗಣಿಸಿರುವುದಿಲ್ಲ.

ಮಧ್ಯಸ್ಥಿಕೆ ತೀರ್ಪುಗಾರರ ತೀರ್ಪನ್ನು ಕಂಪನಿ ವಿರೋಧಿಸಿದೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಒಂದನ್ನು ಸಲ್ಲಿಸಿತ್ತು. ಘನ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಅಂಗೀಕರಿಸಲು ಮತ್ತು ಆದ್ಯತೆಯ ಮೇರೆಗೆ ಪ್ರಕರಣ ನಿರ್ಧಾರ ಮಾಡುವಂತೆ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ನಿರ್ದೇಶಿಸಿತ್ತು.

ಮೇಲೆ ತಿಳಿಸಿರುವ ವ್ಯವಹಾರಗಳಲ್ಲಿ ಅವ್ಯವಹಾರ ನಡೆದಿದೆ ಎಂಬುದಾಗಿ ಕರ್ನಾಟಕ ವಿಧಾನ ಸಭೆಯ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿ ವರದಿ ಮಾಡಿರುವ ಹಿನ್ನೆಲೆಯಲ್ಲಿ ಕಂಪನಿಯು ಅಧಿಕಾರ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರನ್ನು ಸಲ್ಲಿಸಿದೆ ಮತ್ತು ಪೊಲೀಸರು ಪ್ರಕರಣದ ತನಿಖೆ ಮಾಡುತ್ತಿದ್ದಾರೆ. ಈ ಕ್ರಿಮಿನಲ್ ದೂರುಗಳ ಸಂಬಂಧ ಪೊಲೀಸರು ಆರೋಪಪಟ್ಟಿ ತಯಾರಿಸಿದ್ದು, ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾವೆ ಹೂಡಿದ್ದಾರೆ.

iv. ಗುತ್ತಿಗೆದಾರರಾದ ಮೆ॥ ವೆಸ್ಕೇರ್ (ಇಂಡಿಯಾ) ಲಿಮಿಟೆಡ್ ಕಂಪನಿ ಕ್ಲೈಮ್ ಒಂದನ್ನು ಮಾಡಿದ್ದು, ಕಂಪನಿಯು ಅದನ್ನು ವಿರೋಧಿಸಿದೆ. ಈ ವಿಚಾರವನ್ನು ಮಧ್ಯಸ್ಥಿಕೆ ಸಮಿತಿಗೆ ವಹಿಸಿದ್ದು, ಅದು ಕಂಪನಿ ವಿರುದ್ಧ ರೂ.119.23 ಲಕ್ಷಗಳನ್ನು (ಹಿಂದಿನ ವರ್ಷ:ರೂ.119.23ಲಕ್ಷ) ಪಾವತಿ ಮಾಡುವಂತೆ, ಆದೇಶ ಹೊರಡಿಸಿದೆ. ಮಧ್ಯಸ್ಥಿಕೆ ಸಮಿತಿಯ ಈ ತೀರ್ಪನ್ನು ಕಂಪನಿ ವಿರೋಧಿಸಿ 2015-16ರ ಸಾಲಿನಲ್ಲಿ ದಾವೆಯನ್ನು ಹೂಡಿದೆ. ಈ ದಾವೆಯು ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಈ ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆ ಅಡಿಯಲ್ಲಿ ತಿಳಿಸಿದೆ.

V. ಆದಾಯ ತೆರಿಗೆ ಇಲಾಖೆಯ ಆದೇಶದ ಅನ್ವಯ ಕೆಳಕಂಡಂತೆ ತೆರಿಗೆ ಡಿಮ್ಯಾಂಡ್ಗಳಿರುವುವು. ಇದನ್ನು ಒದಗಿಸಿರುವುದಿಲ್ಲ.

	ಅಸೆಸ್ಮೆಂಟ್ ವರ್ಷ	ಮೊತ್ತ (ರೂ.ಲಕ್ಷಗಳಲ್ಲಿ)	ವಿವಾದ ಇತ್ಯರ್ಥವಾಗದೆ ಉಳಿದಿರುವ ವೇದಿಕೆ
	2010-11	205.23	ಹೊಸ ಪರಿಗಣನೆಗಾಗಿ ಸಿಐಟಿ(ಎ)
	2015-16	20.75	ಮೇಲ್ಮನವಿ ಸಿಐಟಿ (ಎ)ಯಲ್ಲಿ ಉಳಿದಿರುವುದು.
	2016-17	16.30	ಮೇಲ್ಮನವಿ ಸಿಐಟಿ (ಎ)ನಲ್ಲಿ ಬಾಕಿ ಉಳಿದಿದೆ
	2017-18	102.05	ಮೇಲ್ಮನವಿ ಸಿಐಟಿ (ಎ)ನಲ್ಲಿ ಬಾಕಿ ಉಳಿದಿದೆ
	2018-19	2,631.43	ಮೇಲ್ಮನವಿ ನ್ಯಾಷನಲ್ ಫೇಸ್ಲೆಸ್ ಅಪೀಲ್ ಸೆಂಟರ್ನಲ್ಲಿ ಉಳಿಸಿದೆ.
	ಒಟ್ಟು	**2,975.76**	

vi. **ಸೇವಾ ತೆರಿಗೆ**

2002-03 ರಿಂದ 2016-17ರ ವರ್ಷದವರೆಗೆ ವಿವಿಧ ವರ್ಷಗಳಿಗೆ ಸಂಬಂಧಿಸಿದಂತೆ ಸಿಇಎಸ್‌ಟಿಎಟಿ ಮುಂದೆ ವಿರೋಧ ಮಾಡಿರುವ ಸೇವಾ ತೆರಿಗೆಯ ಒಟ್ಟು ಮೊತ್ತ ರೂ.290.00 ಲಕ್ಷ. ಆದರೂ ಸಹ ಕಂಪನಿ ಈ ಬಾಕಿಗಳ ಪೈಕಿ ರೂ.93.00 ಲಕ್ಷಗಳನ್ನು ಸಂದಾಯ ಮಾಡಿದೆ. ಬಾಕಿ ಮೊತ್ತ ರೂ.197.00 ಲಕ್ಷವನ್ನು ''ಸಂಭಾವ್ಯ ಹೊಣೆಗಾರಿಕೆ'' ಆಡಿಯಲ್ಲಿ ತಿಳಿಸಿದೆ.

vii. ಕಂಪನಿಯು ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರದಿಂದ (ಎಎಐ) ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ (ಬಿಎಸಿಸಿ), ಬೆಂಗಳೂರು ಇಲ್ಲಿ, 2,565.4 ಚದರ ಮೀಟರ್ ಜಾಗವನ್ನು ಗುತ್ತಿಗೆಗೆ ಪಡೆದಿತ್ತು. ಗುತ್ತಿಗೆಯನ್ನು 01ನೇ ಜನವರಿ 2001 ರಿಂದ 2010ರ ವರೆಗಿನ ಅವಧಿಗೆ 10 ವರ್ಷಗಳವರೆಗೆ ನವೀಕರಿಸಲಾಗಿತ್ತು. ಜಂಟಿ ಸರ್ವೆಯ ನಂತರ, ಸ್ವತ್ತನ್ನು 02ನೇ ಮಾರ್ಚ್ 2022ರಂದು ವಹಿಸಿಕೊಡಲಾಗಿತ್ತು. ಎಎಐ ಪರವಾನಗಿ ಶುಲ್ಕಗಳ ಬಗ್ಗೆ ರೂ.226.89 ಲಕ್ಷ, ರೂ.167.24 ಲಕ್ಷಗಳ ಹಾನಿ ಮತ್ತು ರೂ.229.90 ಲಕ್ಷಗಳ ಬಡ್ಡಿ ಪಾವತಿಗೆ ಡಿಮ್ಯಾಂಡ್ ಮಾಡಿತ್ತು. ಈ ಸಂಬಂಧ ಕಂಪನಿಯು ಇತ್ಯರ್ಥದ ಮಾತುಕತೆ ಪ್ರಕ್ರಿಯೆಯಲ್ಲಿದೆ ಮತ್ತು ಪರವಾನಗಿ ಶುಲ್ಕ ಬಗ್ಗೆ ರೂ.226.89 ಲಕ್ಷ (ಹಿಂದಿನ ವರ್ಷ: ರೂ.142.40 ಲಕ್ಷ) ಒದಗಿಸಿದೆ. ಎಎಐನಲ್ಲಿ ಇತ್ಯರ್ಥದ ವಿಚಾರವು ಹಾಗೆಯೇ ಉಳಿದಿದ್ದು, ಬಾಡಿಗೆ ತಗಾದೆಯನ್ನು ಪೂರ್ಣವಾಗಿ ಒದಗಿಸಿದೆ. ಕಂಪನಿಯು ರೂ.397.14 ಲಕ್ಷ (ಹಿಂದಿನ ವರ್ಷ: ರೂ.397.14 ಲಕ್ಷ) ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆಯಾಗಿ ವರದಿ ಮಾಡಿದೆ.

ಒಪ್ಪಂದವಾದ ಬದ್ಧತೆಗಳು

ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಮೊತ್ತ ರೂ.592.83 ಲಕ್ಷಗಳು (ಹಿಂದಿನ ವರ್ಷ: ರೂ.397.04ಲಕ್ಷಗಳು)

ವಿವರಗಳು	ಬದ್ಧತೆ	ಸಿಡಬ್ಲ್ಯೂಐಪಿ
ಕಲಬುರಗಿ ಉಗ್ರಾಣ	160.08	592.83
	160.08	592.83

II. ಇತರೆ ಟಿಪ್ಪಣಿಗಳು:

i.

ii. ವಾಹನಗಳು ಮತ್ತು ಗ್ರಾಹಕರುಗಳ ದೀರ್ಘಬಾಳಿಕೆ ವಸ್ತುಗಳ ಸರಬರಾಜಿಗಾಗಿ ಕಂಪನಿಯು ಸರ್ಕಾರಿ ನೌಕರರುಗಳ ಜೊತೆ (ಬಾಡಿಗೆದಾರರು) ಹೈರ್ ಪರ್ಚೇಸ್ ಒಪ್ಪಂದ ಮಾಡಿಕೊಂಡಿತ್ತು. ಬಾಡಿಗೆದಾರರಿಂದ ಬರಬೇಕಾದ ಬಡ್ಡಿ ಸೇರಿದಂತೆ ಬಾಕಿಯಿರುವ ಕಂತುಗಳನ್ನು ''ಬಾಡಿಗೆದಾರರಲ್ಲಿರುವ ದಾಸ್ತಾನು'' ಎಂಬ ಶೀರ್ಷಿಕೆಯಡಿ ತೋರಿಸಿದೆ. ಹೈರ್‌ಪರ್ಚೇಸ್ ವ್ಯವಹಾರವನ್ನು ಜುಲೈ 2008 ರಿಂದ ಸ್ಥಗಿತಗೊಳಿಸಲಾಗಿದೆ.

iii. ಜಂಟಿ ಕಾರ್ಯಾಚರಣೆ ವ್ಯವಸ್ಥೆಗಳು ಮತ್ತು ಮುಂಗಡಗಳು/ಠೇವಣಿಗಳೂ ಸೇರಿದಂತೆ ಸಂಡ್ರಿ ಕ್ರೆಡಿಟರ್ಸ್, ಸಂಡ್ರಿ ಡೆಟರ್ಸ್, ವ್ಯಾಪಾರಿ ಸಹವರ್ತಿಗಳ ಲೆಕ್ಕದ ಖಾತೆಗಳಲ್ಲಿರುವ ಶಿಲ್ಕುಗಳು ದೃಢೀಕರಣ ಮತ್ತು ಸಮನ್ವಯಗೊಳಿಸುವುದಕ್ಕೆ ಒಳಪಟ್ಟಿರುವವು. ನಿವ್ವಳ ಲಾಭದ ಮೇಲೆ ಅಂತಹ ಸಮನ್ವಯತೆ ಮತ್ತು ದೃಢೀಕರಣದ ಯಾವುದೇ ಪರಿಣಾಮ ಉಂಟಾಗುವಿಕೆ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ತಿಳಿಯಲಾಗದು.

iv. ಆಮದಾದ ಸಿಮೆಂಟ್ ಸರಬರಾಜು ಮಾಡಲು ಮಾಡಿಕೊಂಡಿರುವ ಒಪ್ಪಂದದ ಸಂಬಂಧ ವಿವಿಧ ಸರ್ಕಾರಿ ಇಲಾಖೆಗಳಿಂದ ಪಡೆದಿರುವ ಮುಂಗಡಗಳು ರೂ.210.46 ಲಕ್ಷಗಳು (ರೂ.210.46 ಲಕ್ಷಗಳು) ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದವುಗಳಲ್ಲಿ ಸೇರಿದೆ.

v. ಮೈಸೂರ್ ಬ್ರೂಯರೀಸ್‌ನಿಂದ (ಎಂಬಿಎಲ್) (ಮೈಸೂರ್ ಬ್ರೂಯರೀಸ್ ಅನ್ನು ಮೊದಲು ಮೆ॥ ಎಸ್‌ಕೆಒಎಲ್ ಬ್ರೂಯರೀಸ್ ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದು, ಈಗ ಅದನ್ನು ಮೆ॥ ಎಬಿ ಇನ್‌ಬೆವ್ ಇಂಡಿಯಾ ಲಿಮಿಟೆಡ್ ಹೆಸರಿನಿಂದ ಕರೆಯಲಾಗುತ್ತಿದೆ) ಎಂಎಸ್‌ಐಎಲ್‌ಗೆ ಬರಬೇಕಾಗಿ ಬಾಕಿಯಿರುವ ಕಮಿಷನ್ ಅನ್ನು ನಿರ್ಧರಿಸಲು ಅಧಿಕಾರ ಹೊಂದಿದ ಅಧಿಕಾರಿ ಒಬ್ಬರನ್ನು ನೇಮಕ ಮಾಡುವಂತೆ ಘನ ಸರ್ವೋಚ್ಚ ನ್ಯಾಯಾಲಯ ದಿನಾಂಕ 13ನೇ ಫೆಬ್ರವರಿ 2003ರ ಆದೇಶದ ಅನ್ವಯ ನಿರ್ದೇಶನ ನೀಡಿತ್ತು. ರೂ.2518 ಲಕ್ಷಗಳ ಮೊತ್ತವನ್ನು ಪಾವತಿ ಮಾಡುವಂತೆ ಅಧಿಕಾರ ಹೊಂದಿದ ಅಧಿಕಾರಿಯು ಮಾಡಿದ ನಿರ್ಧಾರವನ್ನು ಮೈಸೂರ್ ಬ್ರೂಯರೀಸ್ ಲಿ. ವಿರೋಧಿಸಿದ್ದು, ಈ ವಿಚಾರವು ವಿಚಾರಣೆಯಲ್ಲಿದೆ.

ಕಂಪನಿಯು ಕಮಿಷನ್ ವಸೂಲಿಗಾಗಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಒಂದನ್ನು ಸಲ್ಲಿಸಿದೆ. ಆದೇಶದ ದಿನಾಂಕದಿಂದ ಎಂಟು ವಾರಗಳ ಕಡೆಯ ಅವಧಿ ಒಳಗೆ ತೀರ್ಪಿನ ಮೊತ್ತದ 60% ಠೇವಣಿ ಇಡುವಂತೆ ಎಂಬಿಎಲ್‌ಗೆ ಆದೇಶಿಸಿದೆ. ಮತ್ತು ಬಾಕಿ ಮೊತ್ತಕ್ಕೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇವರ ಹೆಸರಿನಲ್ಲಿ ಬ್ಯಾಂಕ್ ಗ್ಯಾರಂಟಿ ಸಲ್ಲಿಸುವಂತೆ ಆದೇಶಿಸಿದೆ. ಕಂಪನಿಯು ಆಸ್ತಿಗಳ ಜಪ್ತಿಗಾಗಿ ಉಚ್ಚ ನ್ಯಾಯಾಲಯದ ಮೊರೆ ಹೋಗಿದೆ. ಹಣಕಾಸಿನ ವರ್ಷ 2023-24ರ ಅವಧಿಯಲ್ಲಿ ಕಂಪನಿಯು ಕರ್ನಾಟಕ ಉಚ್ಚ ನ್ಯಾಯಾಲಯದ ಪರವಾಗಿ ರೂ.3525.00 ಲಕ್ಷಗಳ ಬ್ಯಾಂಕ್ ಗ್ಯಾರಂಟಿಗೆ ಎದುರಾಗಿ ರೂ.3531.53 ಲಕ್ಷದ ಮೊತ್ತವನ್ನು ಪಡೆದಿದೆ.

vi. ಸರ್ಕಾರದ ಅನುದಾನ / ಪ್ರೋತ್ಸಾಹ ಧನ

ಕಂಪನಿಯು ಸರ್ಕಾರದ ಏಜೆನ್ಸಿ-ಬಿಪಿಪಿಐ ನಿಂದ ಅನುದಾನ ಕೇಳಿದೆ. ಹಣಕಾಸಿನ ವರ್ಷ 2021-22ರ ಅವಧಿಯಲ್ಲಿ ಬಿಪಿಪಿಐ ಹೊಸ ಮಳಿಗೆ ಪ್ರಾರಂಭಿಸುವ ಸಮಯದಲ್ಲಿದ್ದ ಸ್ಥಿರಾಸ್ತಿಗಳ ಬಗ್ಗೆ ಖರ್ಚುಗಳಿಗೆ ಸಂಪರ್ಕಿಸಿದ್ದ ಈ ಮೊದಲಿದ್ದ ಯೋಜನೆಯಿಂದ ಪ್ರತಿ ಜನ್ ಔಷಧಿ ಮಳಿಗೆಗಳಲ್ಲಿ ಮಾಡಿದ ಖರೀದಿಗಳಿಗೆ ಮರು ಪಾವತಿ ಸಂಪರ್ಕಿತ ಯೋಜನೆಯನ್ನು ಬದಲಾಯಿಸಿದೆ. ಕಂಪನಿಯು 66 ಮಳಿಗೆಗಳಿಗೆ ಹಕ್ಕು ಸಲ್ಲಿಸಿತ್ತು. ಇದರ ಪೈಕಿ 17 ಮಳಿಗೆಗಳಿಗೆ ಹಕ್ಕನ್ನು ನಿರಾಕರಿಸಲಾಗಿತ್ತು. 13 ಮಳಿಗೆಗಳಿಗೆ ಹಕ್ಕನ್ನು ಸಲ್ಲಿಸಿರುವುದಿಲ್ಲ. ಹಿಂದಿನ ವರ್ಷದ (2020-21) ಕೊನೆಯಲ್ಲಿದ್ದಂತೆ ಸದರಿ ಹಕ್ಕಿನ ಅಡಿಯಲ್ಲಿ ರೂ.66.06 ಲಕ್ಷ ಮೊತ್ತ ಬಾಕಿಯಿದ್ದಿತು. ಇದಕ್ಕಾಗಿ ವ್ಯವಸ್ಥೆ ಮಾಡಿದೆ.

ಮದ್ಯ ವಿಭಾಗವು ಏಪ್ರಿಲ್‌ನಿಂದ ಅಕ್ಟೋಬರ್ 2018ರ ವರೆಗಿನ ಅವಧಿಯಲ್ಲಿ ಪರವಾನಗಿ ಶುಲ್ಕಗಳಾಗಿ ಇತರೆ ಆಸ್ತಿಗಳು ಟಿಪ್ಪಣಿ ನಂ.8ರ ಅಡಿಯಲ್ಲಿ ಪಾವತಿ ಮಾಡಿರುವ ಜಿಎಸ್‌ಟಿಯಾಗಿ ರೂ.597.40ಲಕ್ಷವನ್ನು ಸೇರಿಸಿದೆ. ಈ ಮೊತ್ತದ ಮರು ಪಾವತಿಗಾಗಿ ಮರು ಪಾವತಿ ಹಕ್ಕನ್ನು ಸಲ್ಲಿಸಿದೆ.

ಜಿಎಸ್‌ಟಿ-ಆರ್‌ಸಿಎಂ ರೂ.45.98 ಲಕ್ಷವನ್ನು ಸಹ ಇತರೆ ಆಸ್ತಿಗಳ ಟಿಪ್ಪಣಿ ನಂ.8ರ ಅಡಿಯಲ್ಲಿ ತಿಳಿಸಿದೆ.

vii. ಕಂಪನಿಯು ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್, ಬೆಂಗಳೂರು ಇದರ ಸಮೀಪದಲ್ಲಿನ ಸ್ವತ್ತಿನ ಸಂಬಂಧ ಶ್ರೀಮತಿ ನಾಗರತ್ನ ಇವರೊಡನೆ ಗುತ್ತಿಗೆ ಒಪ್ಪಂದ ಒಂದನ್ನು ಮಾಡಿಕೊಂಡಿದೆ. ಗುತ್ತಿಗೆಯನ್ನು 2003 ರಿಂದ 2008ರವರೆಗೆ 5 ವರ್ಷಗಳ ಅವಧಿಗೆ ನವೀಕರಿಸಿದೆ. ಸ್ವತ್ತನ್ನು ಖಾಲಿ ಮಾಡುವುದರಲ್ಲಿ ವಿಳಂಬವಾಗಿರುವುದರಿಂದ ಗುತ್ತಿಗೆ ಪಡೆದವರು ಪಾವತಿ ಮಾಡಿರದ ಬಾಡಿಗೆ ರೂ.43ಲಕ್ಷಗಳನ್ನು 18%ನಂತೆ ಬಡ್ಡಿಯ ಮೊತ್ತ ರೂ.16ಲಕ್ಷಗಳ ವಸೂಲಿಗೆ ನ್ಯಾಯಾಲಯದ ಮೊರೆ ಹೋಗಿದ್ದಾರೆ (ಒಎಸ್ ನಂ.75/2014). 15ನೇ ನವೆಂಬರ್ 2011 ರಿಂದ 20ನೇ ಡಿಸೆಂಬರ್ 2013ರ ಅವಧಿಗೆ ರೂ.59 ಲಕ್ಷಗಳ ಪಾವತಿ ಮಾಡಿರದ ಬಾಡಿಗೆ ವಸೂಲಿ ಬಗ್ಗೆ ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಇವರು ಕಂಪನಿಯ ವಿರುದ್ಧ ದಿನಾಂಕ 24ನೇ ಜೂನ್ 2019ರ ಆದೇಶ ಒಂದನ್ನು ಹೊರಡಿಸಿದೆ. ಈ ಸಂಬಂಧ ಕಂಪನಿ ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದು, 21ನೇ ಅಕ್ಟೋಬರ್ 2019 ರಂದು ಮಧ್ಯಂತರ ತಡೆಯಾಜ್ಞೆ ಪಡೆದಿದೆ. ನ್ಯಾಯಾಲಯದ ಆದೇಶಗಳ ಅನ್ವಯ ಕಂಪನಿಯು ಉಚ್ಚ ನ್ಯಾಯಾಲಯದಲ್ಲಿ ರೂ.50 ಲಕ್ಷ ಠೇವಣಿ ಮಾಡಿದೆ (ಆರ್‌ಎಫ್‌ಎ 1704/2019). ಈ ವಿಚಾರವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿದೆ.

viii. ಕಂಪನಿಯು ಆಮದಾದ ನದಿ ಮರಳಿಗಾಗಿ 2017ರಲ್ಲಿ ಮೆ॥ ಫೊಸಿಡಾನ್ ಎಫ್‌ಜಡ್‌ಇ, ದುಬೈ (ಸರಬರಾಜುದಾರರು) ಇವರ ಜೊತೆ ಒಪ್ಪಂದ ಒಂದನ್ನು ಮಾಡಿಕೊಂಡಿತ್ತು . ಈ ದಿನಾಂಕದವರೆಗೆ 2 ಶಿಪ್‌ಮೆಂಟ್‌ಗಳಲ್ಲಿ (ಅಕ್ಟೋಬರ್ 2017 ಮತ್ತು ಜನವರಿ 2018) 1,03,872.77 ಎಂಟಿ ಮರಳನ್ನು ಆಮದು ಮಾಡಿಕೊಂಡಿದೆ ಮತ್ತು ಈ ಮರಳನ್ನು ಆಂಧ್ರಪ್ರದೇಶದಲ್ಲಿನ ಕೃಷ್ಣಪಟ್ಟಂ ಬಂದರಿನಲ್ಲಿ ದಾಸ್ತಾನು ಮಾಡಿದೆ. ಕಂಪನಿಯು ಇದುವರೆವಿಗೆ 14,759 ಎಂಟಿ ಮರಳನ್ನು ಕಂಪನಿ ಮಾರಾಟ ಮಾಡಿದೆ.

ಸೀಮಾ ಸುಂಕದ ಆಯುಕ್ತರು, ವಿಜಯವಾಡ ಇವರು ನಂ.ವಿಜೆಡಿ-ಕಸ್ಟಂ-ಪಿಆರ್‌ವಿ-ಸಿಒಎಂ-003-20-21 ದಿನಾಂಕ: 03ನೇ ಡಿಸೆಂಬರ್ 2020ರ ಅನ್ವಯ ವ್ಯತ್ಯಾಸದ ಸುಂಕ, ಕಡಿಮೆ ಮಾಡಿದ ದಂಡ ಮತ್ತು ಶಿಕ್ಷೆಯ ಬಗ್ಗೆ ರೂ.599 ಲಕ್ಷಗಳ ಪಾವತಿಗೆ ಡಿಮ್ಯಾಂಡ್ ಮಾಡಿ ಆದೇಶ ಒಂದನ್ನು ಹೊರಡಿಸಿದ್ದರು.

ಸೀಮಾ ಸುಂಕದ ಆಯುಕ್ತರ ಈ ಆದೇಶವನ್ನು ರದ್ದುಪಡಿಸಲು ಕಂಪನಿ ಸಿಇಎಸ್‌ಟಿಎಟಿ, ಹೈದರಾಬಾದ್ ಇವರಲ್ಲಿ ಮೇಲ್ಮನವಿ ಸಲ್ಲಿಸಿತ್ತು ಮತ್ತು ಸದರಿ ವಿಷಯವು ಸಿಇಎಸ್‌ಟಿಎಟಿ, ಹೈದರಾಬಾದ್ ಇವರಲ್ಲಿ ಇತ್ಯರ್ಥವಾಗದೆ ಉಳಿದಿದೆ. ಈ ಸಂಬಂಧವಾಗಿ ಕಂಪನಿಯು ರೂ.11.80 ಲಕ್ಷಗಳ ಬ್ಯಾಂಕ್ ಗ್ಯಾರಂಟಿ ನೀಡಿದೆ. ಕಂಪನಿಯು ಖರೀದಿದಾರರಾದ ಓಷನ್ ಏಜೆನ್ಸೀಸ್ ಇವರಿಗೆ ಸೇರಿದ 6,826 ಟನ್‌ಗಳ ತೂಕದ ಮರಳನ್ನು ಹೊಂದಿದೆ. 10000 ಎಂಟಿ ಮಾರಾಟ ಮಾಡಿದ ನಂತರ ಮೇಲ್ಕಂಡ ತೂಕದ ಮರಳು ಉಳಿದಿದೆ.

ix. **ಮೆ॥ ಪರ್ಲ್ ಪೋರ್ಟ್ಸ್ ಅಂಡ್ ವೇರ್ ಹೌಸಿಂಗ್ ಪ್ರೈ . ಲಿಮಿಟೆಡ್ (ಬಿಎಸಿಸಿ):**

ಮೆ॥ ಪರ್ಲ್ ಪೋರ್ಟ್ಸ್ ಅಂಡ್ ವೇರ್ ಹೌಸಿಂಗ್ ಪ್ರೈ .ಲಿ. ಇವರು 89,888 ಚದರ ಅಡಿ ಜಾಗವನ್ನು , ಪ್ರತಿ ವರ್ಷ 25% ಹೆಚ್ಚಳದೊಡನೆ, 15 ವರ್ಷಗಳ ಅವಧಿವರೆಗೆ ಗುತ್ತಿಗೆಗೆ ನೀಡಲು ದಿನಾಂಕ:28ನೇ ಮಾರ್ಚ್ 2018ರಂದು ಎಂಎಸ್‌ಐಎಲ್ ಜೊತೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿತ್ತು . ಸದರಿ ಒಪ್ಪಂದ ಪತ್ರಕ್ಕೆ ಸೇರ್ಪಡೆ ಒಂದನ್ನು ಮಾಡುವ ಮುಖೇನ ದಿನಾಂಕ:18ನೇ ಜೂನ್ 2018ರಂದು ಮಾರ್ಪಾಡು ಮಾಡಲಾಗಿದೆ. ಬಾಡಿಗೆದಾರರು ಗುತ್ತಿಗೆ ಒಪ್ಪಂದ ಪತ್ರದ ಅನ್ವಯ ಬಾಕಿಗಳನ್ನು ಪಾವತಿ ಮಾಡದಿರುವುದಕ್ಕಾಗಿ ಕಂಪನಿಯು 3ನೇ ಮೇ 2021 ರಂದು ಗುತ್ತಿಗೆ ರದ್ದತಿ ನೋಟೀಸ್ ನೀಡಿತ್ತು . ಬಾಡಿಗೆದಾರರು ಕಂಪನಿಯಿಂದ ಅನುಮತಿ ಪಡೆಯದೆ ಸಿವಿಲ್ ಕಾಮಗಾರಿಗಳನ್ನು ಕೈಗೊಂಡಿದ್ದರಿಂದ ಅವರ ವಿರುದ್ಧ ಪೊಲೀಸ್ ದೂರು ಸಲ್ಲಿಸಲಾಗಿತ್ತು . ಏಕೈಕ ನ್ಯಾಯ ತೀರ್ಮಾನದ ಮಧ್ಯಸ್ಥಿಕೆದಾರರನ್ನು ನೇಮಕ ಮಾಡುವಂತೆ ಕೋರಿ ಕಂಪನಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿತ್ತು ಮತ್ತು 21ನೇ ಮಾರ್ಚ್ 2022ರಂದು ನಿವೃತ್ತ ನ್ಯಾಯಾಧೀಶರನ್ನು ಏಕೈಕ ನ್ಯಾಯ ತೀರ್ಮಾನ ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಿತ್ತು . ದಿನಾಂಕ 31ನೇ ಮಾರ್ಚ್ 2023ರಂದು ಇದ್ದಂತೆ, ಬಾಡಿಗೆದಾರರಿಂದ ರೂ.279.53 ಲಕ್ಷ (ಹಿಂದಿನ ವರ್ಷ 259.85 ಲಕ್ಷ) ಬಾಕಿ ಬರಬೇಕಾಗಿದೆ.

x. **ಮೆ॥ ಅತಿಥೇಯ ಕ್ಷೇಮ ಹೋಟೆಲ್ಸ್ ಪ್ರೈ ಲಿ., (ಕರ್ನಾಟಕ ಭವನ, ನವಿ ಮುಂಬಯಿ):**

xi ಕಂಪನಿಯು ನವಿ ಮುಂಬಯಿಯಲ್ಲಿ ಇರುವ ಅದರ ಗುತ್ತಿಗೆ ಸ್ವತ್ತನ್ನು (ಕರ್ನಾಟಕ ಭವನ) ಮೆ॥ ಅತಿಥೇಯ ಕ್ಷೇಮ ಹೋಟೆಲ್ಸ್ ಪ್ರೈ .ಲಿ. ಜೊತೆ 15 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ದಿನಾಂಕ 27ನೇ ಸೆಪ್ಟೆಂಬರ್ 2018ರಂದು ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವುದು. ಗುತ್ತಿಗೆ ಒಪ್ಪಂದ ಪತ್ರದ ಅನ್ವಯ ಬಾಡಿಗೆದಾರರು ಬಾಕಿಗಳನ್ನು ಪಾವತಿಸಿರುವುದಿಲ್ಲ ಮತ್ತು ದಿನಾಂಕ 31ನೇ ಮಾರ್ಚ್ 2023ರಂದು ಇದ್ದಂತೆ ಬಾಡಿಗೆದಾರರಿಂದ ರೂ.759.18ಲಕ್ಷ (ಹಿಂದಿನ ವರ್ಷ: ರೂ.731.15ಲಕ್ಷ) ಬಾಡಿಗೆ ಬಾಕಿ ಬರಬೇಕಿದೆ ಮತ್ತು ಕಂಪನಿಯು ಸಮಾನ ಮೊತ್ತದ ವ್ಯವಸ್ಥೆ ಹೊಂದಿರುವುದು.

xii. **ವಿಶೇಷ ಐಟಂಗಳು:**

ಕಂಪನಿಯು 9 ಹಣಕಾಸಿನ ವರ್ಷಗಳ ಬಗ್ಗೆ ಅಂದರೆ 1994-95ರಿಂದ 2002-03ರ ಅವಧಿವರೆಗೆ ವಿವಾದ್ ಸೇ ವಿಶ್ವಾಸ್ ಕಾಯ್ದೆ 2020ರ ಅನ್ವಯ ದಿನಾಂಕ 3ನೇ ಡಿಸೆಂಬರ್ 2020ರಂದು ಆದಾಯ ತೆರಿಗೆ ಇಲಾಖೆಗೆ ಮನವಿ ಸಲ್ಲಿಸಿದೆ. ಇದನ್ನು ಆದಾಯ ತೆರಿಗೆ ಇಲಾಖೆ ಅಂಗೀಕರಿಸಿದೆ. ಯೋಜನೆಯ ಅನ್ವಯ, 2000-01 ರಿಂದ 2002-03ರ ಹಣಕಾಸಿನ ವರ್ಷಗಳಿಗೆ ರೂ.1000.73 ಲಕ್ಷ ಆದಾಯ ತೆರಿಗೆ ಹೊಣೆಗಾರಿಕೆ ಇರುವುದು ಮತ್ತು ಕಂಪನಿಯು ಹಣಕಾಸಿನ ವರ್ಷ 1994-95 ರಿಂದ 1999-2000ರವರೆಗಿನ ಅವಧಿಗೆ ರೂ.818.52 ಲಕ್ಷಗಳ ಮರು ಪಾವತಿ ಪಡೆಯಲು ಅರ್ಹವಾಗಿರುವುದು, ಇದರಿಂದ ರೂ.182.21 ಲಕ್ಷಗಳ ನಿವ್ವಳ ಆದಾಯ ತೆರಿಗೆ ಹೊಣೆಗಾರಿಕೆಯನ್ನು ಹೊಂದಿರುವುದು.

ಇದರನುಸಾರ ಕಂಪನಿಯು ರೂ.1000.73ಲಕ್ಷಗಳನ್ನು ಪಾವತಿ ಮಾಡಿದೆ ಮತ್ತು ರೂ.818.52 ಲಕ್ಷಗಳ ಮರುಪಾವತಿಯನ್ನು 09.12.2022ರಂದು ಪಡೆದಿದೆ.

41. ಪರಿಶಿಷ್ಟ III ರ ಅನ್ವಯ ಅಗತ್ಯವಾಗಿರುವ ಹೆಚ್ಚುವರಿ ನಿಯಂತ್ರಣ ಮಾಹಿತಿ:

i. ಬೆನಾಮಿ ವ್ಯವಹಾರಗಳ (ನಿಷೇಧ) ಕಾಯ್ದೆ, 1988 (45/1988) ಮತ್ತು ಇದರಡಿ ಮಾಡಿರುವ ನಿಯಮಗಳ ಅನ್ವಯ ಬೆನಾಮಿ ಸ್ವತ್ತನ್ನು ಹೊಂದಿರುವ ಬಗ್ಗೆ ಗ್ರೂಪ್‌ನ ವಿರುದ್ಧ ಯಾವುದೇ ಕ್ರಮಾವಳಿಗಳನ್ನು ಕೈಗೊಂಡಿರುವುದಿಲ್ಲ ಅಥವಾ ಗ್ರೂಪ್‌ನ ವಿರುದ್ಧ ಯಾವುದೇ ಕ್ರಮಾವಳಿಗಳು ಇತ್ಯರ್ಥವಾಗದೆ ಉಳಿದಿರುವುದಿಲ್ಲ.

ii. ಕಂಪನಿಯು ಚಾಲ್ತಿ ಆಸ್ತಿಗಳ ಭದ್ರತೆ ಮೇಲೆ ಯಾವುದೇ ಸಾಲ ಪಡೆದಿರುವುದಿಲ್ಲ.

iii. ಯಾವುದೇ ಬ್ಯಾಂಕಿನಿಂದ ಅಥವಾ ಹಣಕಾಸಿನ ಸಂಸ್ಥೆಯಿಂದ ಅಥವಾ ಸರ್ಕಾರ ಅಥವಾ ಯಾವುದೇ ಸರ್ಕಾರದ ಪ್ರಾಧಿಕಾರದಿಂದ ಕಂಪನಿಯನ್ನು ಉದ್ದೇಶಪೂರ್ವಕ ಸುಸ್ತಿದಾರರಾಗಿರುವುದು ಎಂಬುದಾಗಿ ಘೋಷಿಸಿರುವುದಿಲ್ಲ.

iv. ಕಂಪನಿಗಳ ಕಾಯ್ದೆ, 2013 ಅಥವಾ ಕಂಪನಿಗಳ ಕಾಯ್ದೆ, 1956ರ ಅನ್ವಯ ತಟಸ್ಥಗೊಂಡಿರುವ ಕಂಪನಿಗಳ ಜೊತೆ ಕಂಪನಿ ಯಾವುದೇ ವ್ಯವಹಾರ ಹೊಂದಿರುವುದಿಲ್ಲ.

v. ಕಂಪನಿಯು ಕಂಪನಿಗಳ ಕಾಯ್ದೆ, 2013ರ ಅನ್ವಯ ನಿಗದಿಪಡಿಸಿರುವ ಪದರಗಳ ಸಂಖ್ಯೆಗಳನ್ನು ಅನುಸರಿಸಿದೆ.

vi. ಚಾಲ್ತಿ ಅಥವಾ ಹಿಂದಿನ ಹಣಕಾಸಿನ ವರ್ಷದ ಮೇಲೆ ಲೆಕ್ಕ ನಿರ್ವಹಣೆ ಪರಿಣಾಮ ಹೊಂದಿರುವ ಯಾವುದೇ ವ್ಯವಸ್ಥೆಯ ಯೋಜನೆಯನ್ನು ಕಂಪನಿ ಮಾಡಿಕೊಂಡಿರುವುದಿಲ್ಲ.

vii. ಕಂಪನಿಯು 31ನೇ ಮಾರ್ಚ್ 2022 ರಂದು ಕೊನೆಗೊಂಡ ಅವಧಿಯಲ್ಲಿ ಯಾವುದೇ ಹಣವನ್ನು ಪಡೆದಿರುವುದಿಲ್ಲ ಮತ್ತು ಯಾವುದೇ ಷೇರು ಪ್ರೀಮಿಯಂ ಸಂಗ್ರಹ ಮಾಡಿರುವುದಿಲ್ಲ.

viii. ಲೆಕ್ಕ ಪುಸ್ತಕಗಳಲ್ಲಿ ದಾಖಲು ಮಾಡದಿರುವ, ಆದಾಯ ತೆರಿಗೆ ಕಾಯ್ದೆ, 1961ರ ಅನ್ವಯ ಚಾಲ್ತಿ ಅಥವಾ ಹಿಂದಿನ ವರ್ಷ ತೆರಿಗೆ ನಿರ್ಧರಣೆ ಅವಧಿಯಲ್ಲಿ ಆದಾಯವೆಂದು ಒಪ್ಪಿಸಿದ ಅಥವಾ ಘೋಷಿಸಿದ ಯಾವುದೇ ಆದಾಯ ಇರುವುದಿಲ್ಲ.

ix. ಕಂಪನಿಯು ಚಾಲ್ತಿ ವರ್ಷದಲ್ಲಿ ಅಥವಾ ಹಿಂದಿನ ವರ್ಷದಲ್ಲಿ ಕ್ರಿಪ್ಟೋ ಕರೆನ್ಸಿ ಅಥವಾ ವರ್ಚುವಲ್ ಕರೆನ್ಸಿಯಲ್ಲಿ ವ್ಯಾಪಾರ ಮಾಡಿರುವುದಿಲ್ಲ ಅಥವಾ ಹೂಡಿಕೆ ಮಾಡಿರುವುದಿಲ್ಲ.

x. ಕಂಪನಿಯು ಚಾಲ್ತಿ ಅಥವಾ ಹಿಂದಿನ ವರ್ಷದಲ್ಲಿ ತನ್ನ ಸ್ವತ್ತು, ಸ್ಥಾವರ ಮತ್ತು ಉಪಕರಣದ ಬಗ್ಗೆ (ಬಳಕೆ ಹಕ್ಕಿನ ಆಸ್ತಿಗಳು ಸೇರಿದಂತೆ) ಅಥವಾ ಅಗೋಚರಿತ ಆಸ್ತಿಗಳ ಬಗ್ಗೆ ಮರು ಮೌಲ್ಯಮಾಪನ ಮಾಡಿರುವುದಿಲ್ಲ.

xi. ಕಂಪನಿಯು ಪ್ರವರ್ಧಕರು, ನಿರ್ದೇಶಕರು, ಪ್ರಮುಖ ಆಡಳಿತ ಸಿಬ್ಬಂದಿಗೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳಿಗೆ ಯಾವುದೇ ಸಾಲಗಳು ಮತ್ತು ಮುಂಗಡಗಳನ್ನು ನೀಡಿರುವುದಿಲ್ಲ.

xii. ಕಂಪನಿಯು ಶಾಸನಬದ್ಧ ಅವಧಿಯ ಆಚೆಗೆ ಕಂಪನಿಗಳ ರಿಜಿಸ್ಟ್ರಾರ್‌ರಲ್ಲಿ ದಾಖಲಿಸಬೇಕಿರುವ ಯಾವುದೇ ಆರೋಪ ಅಥವಾ ತೃಪ್ತಿಕರ ಉತ್ತರಗಳಿರುವುದಿಲ್ಲ.

42 ಹಣಕಾಸಿನ ಅನುಪಾತ

	ವಿವರಗಳು	ನ್ಯೂಮರೇಟರ್	ಡಿನಾಮಿನೇಟರ್	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ	ವ್ಯತ್ಯಾಸ
	ಚಾಲ್ತಿ ಅನುಪಾತ	ಚಾಲ್ತಿ ಆಸ್ತಿಗಳು	ಚಾಲ್ತಿ ಹೊಣೆಗಾರಿಕೆ	2.80	2.26	23.94%
	ಸಾಲದ ಈಕ್ವಿಟಿ ಅನುಪಾತ	ಸಾಲಗಳು	ಈಕ್ವಿಟಿ			
	ಸಾಲದ ಸೇವೆ ಒಳಗೊಳ್ಳುವಿಕೆ ಅನುಪಾತ	ನಿವ್ವಳ ಲಾಭ+ಸವಕಳಿ+ ಬಡ್ಡಿ ಪಾವತಿ +/- ಎಫ್‌ಇಎಕ್ಸ್ ಯಾವುದೇ ಇದ್ದಲ್ಲಿ ಮರು ಹೇಳಿಕೆ ಪರಿಣಾಮ-ಆಸ್ತಿಗಳ ಮಾರಾಟದ ಮೇಲಿನ ನಷ್ಟ/ಲಾಭ		ಸಾಲ ಪಡೆದಿರುವುದಿಲ್ಲ		ಅನ್ವಯವಾಗದು
	ಈಕ್ವಿಟಿ ಅನುಪಾತದಲ್ಲಿ ಗಳಿಕೆ	ಪಿಎಟಿ	ಸರಾಸರಿ ಈಕ್ವಿಟಿ	0.11	0.15	24.85%
	ತಪಶೀಲು ವಹಿವಾಟು ಅನುಪಾತ	ಮಾರಾಟ	ಸರಾಸರಿ ತಪಶೀಲು	19.14	19.11	0.18%
	ವಹಿವಾಟು ಅನುಪಾತಕ್ಕೆ ವ್ಯಾಪಾರದಿಂದ ಬರಬೇಕಾಗಿರುವುದು	ನಿವ್ವಳ ಕ್ರೆಡಿಟ್ ಮಾರಾಟ	ಸರಾಸರಿ ವ್ಯಾಪಾರ ಸಾಲಗಳು	45.87	40.42	13.48%
	ವಹಿವಾಟು ಅನುಪಾತಕ್ಕೆ ವ್ಯಾಪಾರದ ಸಂಬಂಧ ಪಾವತಿಸಬೇಕಿರುವುದು	ನಿವ್ವಳ ಕ್ರೆಡಿಟ್ ಖರೀದಿಗಳು	ಸರಾಸರಿ ವ್ಯಾಪಾರದ ಸಂಬಂಧ ಪಾವತಿಸಬೇಕಿರುವುದು	24.15	26.69	-9.53%
	ವಹಿವಾಟು ಅನುಪಾತಕ್ಕೆ ನಿವ್ವಳ ಬಂಡವಾಳ	ಮಾರಾಟ	ಸರಾಸರಿ ದುಡಿಮೆ ಬಂಡವಾಳ	7.45	6.27	18.75%
	ನಿವ್ವಳ ಲಾಭದ ಅನುಪಾರ	ಪಿಎಟಿ	ನಿವ್ವಳ ಮಾರಾಟ	0.02	0.03	-28.11%
	ಬಂಡವಾಳ ವಿನಿಯೋಜನೆ ಅನುಪಾತದ ಮೇಲಿನ ಗಳಿಕೆ	ಪಿಬಿಐಟಿ	ನಿವ್ವಳ ಮೌಲ್ಯ + ಎಲ್‌ಟಿ ಸಾಲ	0.15	0.18	-18.85%
	ಹೂಡಿಕೆ ಮೇಲಿನ ಗಳಿಕೆ	ಪಿಎಟಿ	ಸರಾಸರಿ ಈಕ್ವಿಟಿ	0.11	0.15	-24.85%

ವ್ಯತ್ಯಾಸವು 25% ಗಿಂತ ಹೆಚ್ಚಿದ್ದರೆ ಆ ವ್ಯತ್ಯಾಸಕ್ಕೆ ಕಾರಣ

★ ನಿವ್ವಳ ಲಾಭದ ಅನುಪಾತ-ಹಣಕಾಸಿನ ವರ್ಷ 2021-22ರ ಅವಧಿಯಲ್ಲಿ ವಿಶೇಷ ಆದಾಯದ ಪ್ರಯುಕ್ತ.

43 (1) ಮಧ್ಯವರ್ತಿಯು ಕೆಳಕಂಡ ರೀತಿಯಲ್ಲಿ ವ್ಯವಹರಿಸತಕ್ಕದ್ದು ಎಂಬ ಅರ್ಥವಂತಿಕೆಯೊಡನೆ ವಿದೇಶಿ ಕಂಪನಿಗಳು (ಮಧ್ಯವರ್ತಿಗಳು) ಸೇರಿದಂತೆ ಯಾವುದೇ ಇತರೆ ವ್ಯಕ್ತಿ(ಗಳು) ಅಥವಾ ಕಂಪನಿ(ಗಳು)ಗೆ ಕಂಪನಿಯು ಯಾವುದೇ ಮುಂಗಡ ಅಥವಾ ಸಾಲ ನೀಡಿರುವುದಿಲ್ಲ ಅಥವಾ ಹಣ ಹೂಡಿಕೆ ಮಾಡಿರುವುದಿಲ್ಲ.

(ಎ) ಕಂಪನಿಯಿಂದ ಅಥವಾ ಕಂಪನಿ ಪರವಾಗಿ (ಅಂತಿಮ ಫಲಾನುಭವಿಗಳು) ಯಾವುದೇ ರೀತಿಯಲ್ಲಿ ಗುರುತಿಸಲಾದ ಇತರೆ ವ್ಯಕ್ತಿಗಳು ಅಥವಾ ಕಂಪನಿಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ನೀಡಿಕೆ ಅಥವಾ ಹೂಡಿಕೆ ಮಾಡುವುದು ಅಥವಾ

(ಬಿ) ಅಂತಿಮ ಫಲಾನುಭವಿಗಳಿಗೆ ಅಥವಾ ಅವರ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಇಂತಹದನ್ನು ಒದಗಿಸುವುದು.

(2) ಕಂಪನಿಯು ಈ ಕೆಳಕಂಡಂತೆ ವ್ಯವಹರಿಸತಕ್ಕದ್ದು ಎಂಬ ಅರ್ಥವಂತಿಕೆಯೊಡನೆ (ಲಿಖಿತವಾಗಿ ದಾಖಲು ಮಾಡುವುದು ಅಥವಾ ಮಾಡದಿರುವುದು) ವಿದೇಶಿ ಕಂಪನಿಗಳು (ಹಣ ನೀಡಿಕೆ ವ್ಯಕ್ತಿಗಳು) ಸೇರಿದಂತೆ ಯಾವುದೇ ಇತರೆ ವ್ಯಕ್ತಿಯಿಂದ (ಗಳಿಂದ) ಅಥವಾ ಕಂಪನಿಯಿಂದ (ಗಳಿಂದ) ಯಾವುದೇ ಹಣ ಪಡೆದಿರುವುದಿಲ್ಲ:

(ಎ) ಹಣ ನೀಡಿಕೆ ವ್ಯಕ್ತಿಯಿಂದ ಅಥವಾ ಅವರ ಪರವಾಗಿ (ಅಂತಿಮ ಫಲಾನುಭವಿಗಳು) ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳಿಗೆ ಅಥವಾ ಕಂಪನಿಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಸಾಲ ನೀಡುವುದು ಅಥವಾ ಹೂಡಿಕೆ ಮಾಡುವುದು ಅಥವಾ

(ಬಿ) ಅಂತಿಮ ಫಲಾನುಭವಿಗಳಿಗೆ ಅಥವಾ ಅವರ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಇನ್ನಿತರೆ ಒದಗಿಸುವುದು.

44 ದಿನಾಂಕ 31ನೇ ಮಾರ್ಚ್ 2023 ಮತ್ತು ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಧಿಕಾರ ನೀಡಿದ ದಿನಾಂಕದ ನಡುವೆ ಯಾವುದೇ ಹೊಂದಾಣಿಕೆ ಅಥವಾ ಮಹತ್ತರ ಹೊಂದಾಣಿಕೆ ರಹಿತ ಘಟನೆಗಳು ಸಂಭವಿಸಿರುವುದಿಲ್ಲ.

45 ಹಿಂದಿನ ವರ್ಷದ ಅಂಕಿಅಂಶಗಳನ್ನು ಅಗತ್ಯವಿರುವೆಡೆಗಳಲ್ಲಿ ಚಾಲ್ತಿ ವರ್ಷದ ವರ್ಗೀಕರಣಗಳಿಗೆ ಮರು ವರ್ಗೀಕರಣ ಮಾಡಿದೆ.

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
ಎಂ.ಬಿ.ಪಾಟೀಲ
ಅಧ್ಯಕ್ಷರು
ಡಿನ್ ಸಂಖ್ಯೆ :09379177

ಸಹಿ/-
ಎ.ಎಂ. ಚಂದ್ರಪ್ಪ
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
ಮನೋಜ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
ಶ್ರೀದೇವಿ ಬಿ.ಎನ್
ಕಂಪನಿ ಕಾರ್ಯದರ್ಶಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ
ವರ್ಷದ ಲೆಕ್ಕಗಳು (ಕ್ರೋಡೀಕೃತ)

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ (ಪರಿಷ್ಕೃತ)

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ
ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ಮೇಲಿನ ವರದಿ

ಅರ್ಹತಾ ಅಭಿಪ್ರಾಯ

ನಾವು ಮೆ॥ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ** (ಇಲ್ಲಿ ಇದನ್ನು ''ಧಾರಕ ಕಂಪನಿ'' ಎಂಬುದಾಗಿ ಪ್ರಸ್ತಾಪಿಸಲಾಗಿರುವುದು), ಮತ್ತು ಇದರ ಸಹಾಯಕ ಕಂಪನಿಗಳ (ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳನ್ನು ಜೊತೆಯಾಗಿ ''ಗ್ರೂಪ್'' ಎಂಬುದಾಗಿ ಪ್ರಸ್ತಾಪಿಸಲಾಗಿರುವುದು), ಮತ್ತು ಅನುಬಂಧ-ಎ ನಲ್ಲಿ ಪಟ್ಟಿ ಮಾಡಿರುವಂತೆ ಇದರ ಸಹವರ್ತಿ ಕಂಪನಿಗಳ 31ನೇ ಮಾರ್ಚ್ 2023ರಂದು ಇದ್ದಂತೆ ಕ್ರೋಡೀಕೃತ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ಕ್ರೋಡೀಕೃತ ಹೇಳಿಕೆ (ಇತರೆ ಸಮಗ್ರ ಆದಾಯ ಸೇರಿದಂತೆ), ನಗದು ಹರಿಯುವಿಕೆಗಳ ಕ್ರೋಡೀಕೃತ ಹೇಳಿಕೆ ಮತ್ತು ಈ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಬದಲಾವಣೆಗಳ ಕ್ರೋಡೀಕೃತ ಹೇಳಿಕೆ ಮತ್ತು ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ (ಇವುಗಳನ್ನು ಇಲ್ಲಿ ಇನ್ನು ಮುಂದೆ ''ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು'' ಎಂಬುದಾಗಿ ಪ್ರಸ್ತಾಪಿಸಲಾಗಿದೆ) ಒಳಗೊಂಡ ಲಗತ್ತಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಯ ಲೆಕ್ಕಪರಿಶೋಧನೆ ಮಾಡಿದ್ದೇವೆ.

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ಮತ್ತು ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಗಳ ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಬಗ್ಗೆ ಇತರೆ ಲೆಕ್ಕಪರಿಶೋಧಕರ ವರದಿಗಳು ಮತ್ತು ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಗಳ ಇತರೆ ಹಣಕಾಸಿನ ಮಾಹಿತಿಯನ್ನು ಪರಿಗಣಿಸಿದ ಆಧಾರದ ಮೇಲೆ, ನಮ್ಮ ವರದಿಯ ''ಅರ್ಹತಾ ಅಭಿಪ್ರಾಯಕ್ಕೆ ಆಧಾರದ'' ವಿಭಾಗದಲ್ಲಿ ವಿವರಿಸಿರುವ ವಿಚಾರಗಳ ಪರಿಣಾಮಗಳ ಹೊರತಾಗಿ, ಮೇಲೆ ತಿಳಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಕಂಪನಿಗಳ ಕಾಯ್ದೆ 2013ರ (''ಕಾಯ್ದೆ'') ಅನ್ವಯ ಅಗತ್ಯವಾದಂತೆ ಸ್ವರೂಪದಲ್ಲಿ ಮಾಹಿತಿಯನ್ನು ನೀಡುವುದು ಮತ್ತು ತಿದ್ದುಪಡಿಯಾದಂತೆ ಕಂಪನಿಗಳ (ಭಾರತೀಯ ಲೆಕ್ಕನಿರ್ವಹಣೆ ಗುಣಮಟ್ಟಗಳು) ನಿಯಮಗಳು, 2015 (''ಐಎನ್‌ಡಿ ಎಎಸ್'') ಅನ್ನು ಓದಿಕೊಂಡಂತೆ ಕಾಯ್ದೆಯ ಪ್ರಕರಣ 133ರ ಅನ್ವಯ ನಿಗದಿಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳಿಗೆ ಅನುಗುಣವಾಗಿ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಇತರೆ ಲೆಕ್ಕ ನಿರ್ವಹಣೆ ನೀತಿಗಳು, 31ನೇ ಮಾರ್ಚ್ 2023ರಂದು ಇದ್ದಂತೆ ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯ ಕ್ರೋಡೀಕೃತ ವ್ಯವಹಾರದ ಪರಿಸ್ಥಿತಿ ಮತ್ತು ಅದರ ಲಾಭ ಮತ್ತು ನಷ್ಟದ ಕ್ರೋಡೀಕೃತ ಹೇಳಿಕೆ, ಅದರ ಕ್ರೋಡೀಕೃತ ನಗದು ಹರಿಯುವಿಕೆಗಳು ಮತ್ತು ಆ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಕ್ರೋಡೀಕೃತ ಬದಲಾವಣೆ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವುದು.

ಸಮ ದಿನಾಂಕದಂದು ನಿರ್ದೇಶಕರ ಮಂಡಳಿ ಅಳವಡಿಸಿಕೊಂಡಿರುವಂತೆ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಬೆಂಗಳೂರಿನಲ್ಲಿ ದಿನಾಂಕ 29ನೇ ನವೆಂಬರ್ 2023 ರ ಲೆಕ್ಕಪರಿಶೋಧನಾ ವರದಿ ಒಂದನ್ನು (ಮೂಲ ವರದಿ) ನೀಡಿದ್ದೆವು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143 (6)(ಎ) ಅನ್ವಯ ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಅಭಿಪ್ರಾಯದ ಅನುಸಾರ, ನಾವು ಸದರಿ ಲೆಕ್ಕಪರಿಶೋಧನಾ ವರದಿಯನ್ನು ಪರಿಷ್ಕರಣೆ ಮಾಡಿದ್ದೇವೆ. ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್ ಅಡಿಯಲ್ಲಿನ ಕಲಂ (ಬಿ) ಮತ್ತು (ಡಿ) ಯಿಂದ (ಜಿ) ವರೆಗೆ ಮತ್ತು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಕಲಂ (ಬಿ) ಮತ್ತು (ಎ) ಹೊರತುಪಡಿಸಿ, ಕಂಪನಿಯ ಹಣಕಾಸಿನ ಹೇಳಿಕೆಗಳಲ್ಲಿನ ವರದಿಯಾಗಿರುವ ಅಂಕಿ ಅಂಶಗಳ ಮೇಲೆ ಪರಿಷ್ಕೃತ ವರದಿಯು ಯಾವುದೇ ಪರಿಣಾಮ ಉಂಟುಮಾಡುವುದಿಲ್ಲ. ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಅಭಿಪ್ರಾಯಗಳನ್ನು ಪರಿಗಣಿಸಲು ಸೂಕ್ತವಾಗಿ ಪರಿಷ್ಕರಣೆ ಮಾಡಿರುವ ಸದರಿ ಲೆಕ್ಕಪರಿಶೋಧನಾ ವರದಿಯು ಮೂಲ ವರದಿಯನ್ನು ರದ್ದುಗೊಳಿಸುವುದು.

ಅರ್ಹತಾ ಅಭಿಪ್ರಾಯಕ್ಕೆ ಆಧಾರ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಎ. ಕಂಪನಿಯು ವ್ಯಾಪಾರದ ಸಂಬಂಧ ಬರಬೇಕಾಗಿರುವುದು, ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು, ಇತರೆ ಪಾವತಿಗಳು ಮತ್ತು ಮುಂಗಡಗಳ ಬಗ್ಗೆ ಶಿಲ್ಕುಗಳ, ದೃಢೀಕರಣೆ ಕಳುಹಿಸುವ ನೀತಿ ಒಂದನ್ನು ಹೊಂದಿರುವುದು. ಆದರೂ, ದೃಢೀಕರಣೆ ಪಡೆಯಲು ಮತ್ತು ಅದನ್ನು ಲೆಕ್ಕದ ಪುಸ್ತಕಗಳ ಜೊತೆ ಸಮಂಜಸತೆ ಮಾಡಲು ಸೂಕ್ತವಾದ ಅನುಸರಣೆ ವಿಧಾನವಿರುವುದಿಲ್ಲ. ಕಂಪನಿಯು ವಸೂಲಾಗದ ಮತ್ತು ಸಂದೇಹಾಸ್ಪದವಾದ ಸಾಲಗಳಿಗೆ ವರ್ಷಾಂತ್ಯದಲ್ಲಿ ವ್ಯವಸ್ಥೆ ಮಾಡುವುದು. ಶಿಲ್ಕುಗಳ ದೃಢೀಕರಣ ಮತ್ತು ಸಮಂಜಸತೆಗಳು ಇಲ್ಲದಿರುವುದರಿಂದ, ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಹಣಕಾಸಿನ ಪರಿಣಾಮವನ್ನು ತಿಳಿಯಲಾಗದು.

ಬಿ. ನಾವು ಗಮನಿಸಿರುವುದೇನೆಂದರೆ, (i) ಫಾರ್ಮಸ್ಯೂಟಿಕಲ್ಸ್ ಉತ್ಪನ್ನಗಳ ಆಖೈರು ತಪಶೀಲಿನ ಪ್ರಮಾಣದ ಬಗ್ಗೆ ದೃಢೀಕರಣೆ ಇಲ್ಲದಿರುವುದರಿಂದ, ರೂ. 351 ಲಕ್ಷಗಳ ಮೊತ್ತದ ಆಖೈರು ತಪಶೀಲಿನ ಪ್ರಮಾಣ ಮತ್ತು/ಅಥವಾ ಮೌಲ್ಯದ ನಿಖರತೆ ಬಗ್ಗೆ ಅಭಿಪ್ರಾಯ ತಿಳಿಸಲು ನಮಗೆ ಸಾಧ್ಯವಿರುವುದಿಲ್ಲ. (ii) ಕಂಪನಿಯು ಸದರಿ ವರ್ಷದಲ್ಲಿ ಆಮದಾದ ನದಿ ಮರಳಿನ ದಾಸ್ತಾನಿನ ಭೌತಿಕ ಪರಿಶೀಲನೆ ವರದಿಯನ್ನು ಪಡೆದುಕೊಂಡಿದ್ದು, ಅದರಲ್ಲಿ ರೂ.347.87 ಲಕ್ಷಗಳ ಮೊತ್ತದ 16565.002 ಎಂಟಿ ದಾಸ್ತಾನು ಕಡಿಮೆ ಇರುವುದು ಕಂಡುಬಂದಿದೆ. ಆದರೆ, ಹಿಂದಿನ ವರ್ಷಗಳಲ್ಲಿ ಪುಸ್ತಕಗಳಲ್ಲಿ 100% ವ್ಯವಸ್ಥೆ ಮಾಡಿದ್ದರೂ, ಸ್ಥಿತಿ ವಿವರಣ ಪಟ್ಟಿಯ ದಿನಾಂಕದಂದು

ಇದರ ಬಗ್ಗೆ ಶಿಲ್ಕಿನ ದೃಢೀಕರಣ ಇರುವುದಿಲ್ಲ ಮತ್ತು ಈ ವರ್ಷದ ಅವಧಿಯಲ್ಲಿ ಯಾವುದೇ ಮಾರಾಟ ನಡೆದಿರುವುದಿಲ್ಲ.; ಕಂಪನಿಯು ಕಡಿಮೆಯಾಗಿ ಕಂಡುಬಂದಿರುವ ತಪಶೀಲನ್ನು ರದ್ದುಪಡಿಸಿರುವುದಿಲ್ಲ ಇಲ್ಲವೇ ಪುಸ್ತಕಗಳಲ್ಲಿ ಈ ಮೊದಲು ಮಾಡಿದ್ದ ಸಂಬಂಧಪಟ್ಟ ವ್ಯವಸ್ಥೆಯನ್ನು ಹಿಂಪಡೆದಿರುವುದಿಲ್ಲ. ಆದ್ದರಿಂದ ತಪಶೀಲುಗಳು ಮತ್ತು ತಪಶೀಲುಗಳಿಗೆ ವ್ಯವಸ್ಥೆ ಎರಡನ್ನೂ ರೂ.347.87 ಲಕ್ಷದ ವರೆಗೆ ಅಧಿಕವಾಗಿ ತಿಳಿಸಿದೆ.

ಸಿ. ಚಿಟ್‌ಫಂಡ್ ವಿಭಾಗದಲ್ಲಿ, (i) ಸೂಕ್ತವಾದ ಆಂತರಿಕ ನಿಯಂತ್ರಣ ಕ್ರಮಗಳು ಇಲ್ಲದಿರುವುದು. (ii) ನಿಯೋಜಿಸಿರುವ ತಂತ್ರಾಂಶದಿಂದ ನಿಖರವಾದ ಮತ್ತು ಅಗತ್ಯವಾದ ವರದಿಗಳನ್ನು ಸೃಜಿಸಲು ಬೆಂಬಲ ಇಲ್ಲದಿರುವುದರಿಂದ; (iii) ಆಫ್‌ಲೈನ್ ಶಾಖೆಗಳಿಗೆ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ನಿರೂಪಿತ ವ್ಯವಸ್ಥೆ ಮತ್ತು ಪುಸ್ತಕಗಳನ್ನು ಸಕಾಲಿಕವಾಗಿ ಸಮಾಪ್ತಿಗೊಳಿಸದಿರುವುದು. (iv) ಹಣಕಾಸಿನ ಹೇಳಿಕೆಗಳ ಬಗ್ಗೆ ಪರಿಣಾಮ ಉಂಟು ಮಾಡಬಹುದಾದ ಬ್ಯಾಂಕ್ ಸಮಂಜಸತೆ ವಿವರಣೆಗಳು ಇತ್ಯಾದಿಗಳನ್ನು ಸಕಾಲಿಕವಾಗಿ ಸಿದ್ದಪಡಿಸದಿರುವುದರಿಂದ, ಈ ವರ್ಷದ ಅವಧಿಯಲ್ಲಿ ಕಂಪನಿಯ ಹೊರಗುತ್ತಿಗೆ ನೌಕರರೊಬ್ಬರು ಹಣವನ್ನು ದುರುಪಯೋಗ ಮಾಡಿಕೊಂಡಿರುವರು. ಕಂಪನಿಯು ಮುಂದಿನ ಹೊಣೆಗಾರಿಕೆ ಸೇರಿದಂತೆ ರೂ.147.80ಲಕ್ಷಗಳ ನಷ್ಟವನ್ನು ಅಂದಾಜು ಮಾಡಿದೆ ಮತ್ತು ಅದನ್ನು ಒದಗಿಸಿದೆ. ಕಂಪನಿಯು ಎಫ್‌ಐಆರ್ ಸಲ್ಲಿಸಿದೆ ಮತ್ತು ಆ ಹಣ ವಸೂಲಿಗೆ ಕ್ರಯ ಕೈಗೊಂಡಿದೆ. ಕಂಪನಿಯು ಎರಡು ಶಾಖೆಗಳ ಸಂಬಂಧ ಫೊರೆನ್ಸಿಕ್ ಲೆಕ್ಕ ಪರಿಶೋಧನೆಗೂ ಕ್ರಮ ಕೈಗೊಂಡಿದೆ ಮತ್ತು ಲೆಕ್ಕ ಪರಿಶೋಧನೆ ವರದಿಗಾಗಿ ನಿರೀಕ್ಷಿಸಲಾಗಿದೆ. ಅಗತ್ಯ ಮಾಹಿತಿ ಇಲ್ಲದ ಕಾರಣ, ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಯಾವುದೇ ಪರಿಣಾಮವನ್ನು ತಿಳಿಯಲು ಆಗದು.

ಡಿ. ಡಿ. ಕಂಪನಿಯು ಈ ವರ್ಷದ ಅವಧಿಯಲ್ಲಿ ರೂ. 56.46 ಲಕ್ಷ ಮೊತ್ತದ ಬಿಪಿಪಿಐ ಪ್ರೋತ್ಸಾಹ ಧನ ಪಡೆದಿದೆ ಮತ್ತು ಇದನ್ನು ಸ್ವತಂತ್ರ ಹಣಕಾಸಿನ ಹೇಳಿಕೆಯಲ್ಲಿ ವರದಿ ಮಾಡಿದೆ. ವರ್ಷದ ಅಂದಾಜು ಮಾಡಿದ ಪ್ರೋತ್ಸಾಹ ಧನವು ರೂ. 167.69 ಲಕ್ಷ. ಬಿಪಿಪಿಐ ಪ್ರೋತ್ಸಾಹ ಧನವನ್ನು ಪರಿಗಣನೆ ಮಾಡುವ ಸಂಬಂಧದಲ್ಲಿ ನಗದು ಆಧಾರದ ಲೆಕ್ಕ ನಿರ್ವಹಣೆ ಅನುಸರಿಸುವುದಾಗಿ ಕಂಪನಿ ತಿಳಿಸಿದೆ. ಆದರೆ ಇದರ ಬಗ್ಗೆ ಲೆಕ್ಕ ನಿರ್ವಹಣೆ ನೀತಿಯನ್ನು ತಿಳಿಸಿರುವುದಿಲ್ಲ. ಪಡೆಯಬಹುದಾಗಿರುವ ಅರ್ಹ ಬಿಪಿಪಿಐ ಪ್ರೋತ್ಸಾಹ ಧನ ಮತ್ತು ಪಡೆಯಲಾಗಿರುವ ಪ್ರೋತ್ಸಾಹ ಧನದ ನಡುವೆ ಉಂಟಾಗಿರುವ ರೂ. 111.23 ಲಕ್ಷಗಳ ವ್ಯತ್ಯಾಸವನ್ನು ಮಾನ್ಯಮಾಡಿರುವುದಾಗಲಿ ಅಥವಾ ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸುವುದನ್ನಾಗಲಿ ಮಾಡಿರುವುದಿಲ್ಲ.

ಇ. ಬರಬೇಕಾಗಿರುವ ಆದಾಯ ತೆರಿಗೆ ಮರುಪಾವತಿಗಳು ಮತ್ತು ವ್ಯವಸ್ಥೆ ಮಾಡಿದ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗಿದೆ ಮತ್ತು ಅಗತ್ಯ ನಮೂದುಗಳನ್ನು ಮಾಡಬೇಕಾಗಿತ್ತು. ತೆರಿಗೆ ನಿರ್ಧರಣೆ ವರ್ಷ 2012-13 ಮತ್ತು 2014-15ಕ್ಕೆ ಪುಸ್ತಕಗಳಲ್ಲಿ ರೂ.46.88 ಲಕ್ಷ ಮೊತ್ತದ ವ್ಯವಸ್ಥೆಯು ಬಾಕಿ ಉಳಿದಿರುವುದು. ಆದರೆ ಯಾವುದೇ ಡಿಮ್ಯಾಂಡ್ ಬಾಕಿ ಇರುವುದಿಲ್ಲ. ತೆರಿಗೆ ನಿರ್ಧರಣೆ ವರ್ಷ 2013-14 ರಲ್ಲಿ ರೂ. 76.56 ಲಕ್ಷ ಮೊತ್ತವನ್ನು ಮರುಪಾವತಿಯಾಗಬಹುದಾಗಿರುವುದು ಎಂಬುದಾಗಿ ತೋರಿಸಿದೆ. ಆದರೆ ಮರುಪಾವತಿಯನ್ನು ಹಿಂದಿನ ವರ್ಷದ ಡಿಮ್ಯಾಂಡ್‌ಗೆ ಹೊಂದಾಣಿಕೆ ಮಾಡಿದೆ. ಇದನ್ನು ಕಂಪನಿ ವಿರೋಧಿಸಿರುವುದಿಲ್ಲ. ಇದರ ಸಂಯೋಜಿತ ಪರಿಣಾಮದಿಂದ ವರ್ಷದ ಲಾಭವು ರೂ.29.68 ಲಕ್ಷಗಳಷ್ಟು ಅಧಿಕವಾಗಿದೆ ಮತ್ತು ಚಾಲ್ತಿ ತೆರಿಗೆ ಆಸ್ತಿಯು ಇದೇ ಪ್ರಮಾಣದಲ್ಲಿ ಅಧಿಕವಾಗಿದೆ.

ಎಫ್. ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗದಲ್ಲಿ, ಕಂಪನಿಯು ಟೂರ್ಸ್ ಅಂಡ್ ಟ್ರಾವೆಲ್ಸ್ ಸೇವೆಗಳಿಗಾಗಿ ಕೆಲವು ಮುಂಗಡಗಳನ್ನು ಪಡೆದಿದೆ. ಕಂಪನಿಯು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ(ಆರ್‌ಜಿಯುಹೆಚ್‌ಎಸ್), ಕರ್ನಾಟಕ ಮತ್ತು ಸಂಬಂಧಪಟ್ಟ ಸೇವೆ ಪೂರೈಕೆದಾರರ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಿತ್ತು. ಕಂಪನಿಯು ಕಾಗದದ ವಿಭಾಗದಿಂದ ಆರ್ ಜಿಯುಹೆಚ್‌ಎಸ್‌ಗೆ ಸರಬರಾಜುಗಳನ್ನು ಮಾಡಿದೆ. ಕಂಪನಿ ಮತ್ತು ಆರ್‌ಜಿಯುಹೆಚ್‌ಎಸ್ ಮತ್ತು ಸಂಬಂಧಪಟ್ಟ ಸೇವೆ ಪೂರೈಕೆದಾರರ ನಡುವೆ ವಿವಾದ ಉಂಟಾಗಿರುವುದರಿಂದ, ಆರ್‌ಜಿಯುಹೆಚ್‌ಎಸ್ ಮತ್ತು ಸೇವೆ ಪೂರೈಕೆದಾರರು ಸ್ವೀಕರಿಸಬೇಕಾಗಿರುವ ಮತ್ತು ಪಾವತಿ ಮಾಡಬೇಕಿರುವ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗುವುದು.. ಕಂಪನಿಯು ಈ ವಿಚಾರವಾಗಿ ರೂ. 200 ಲಕ್ಷಗಳ ಮೊತ್ತದ ವಸೂಲಾಗದ ಮತ್ತು ಸಂದೇಹಾಸ್ಪದವಾದ ಲೆಕ್ಕಕ್ಕೆ ಅವಕಾಶ ಮಾಡಿದೆ. ಸಮಂಜಸತೆ ವಿವರಣೆಯು ಇಲ್ಲದಿರುವುದರಿಂದ ಇದರಿಂದ ಉಂಟಾಗುವ ಪರಿಣಾಮವನ್ನು ತಿಳಿಯಲು ಸಾಧ್ಯವಿರುವುದಿಲ್ಲ.

ಜಿ. ಕಂಪನಿಯು ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ಆದಾಯವನ್ನು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ. ಆದರೆ, ಲೆಕ್ಕಾಚಾರದಲ್ಲಿ ತಪ್ಪುಗಳಿಂದಾಗಿ, ಈ ವರ್ಷದ ಅವಧಿಯಲ್ಲಿ ಮಾನ್ಯ ಮಾಡಿರುವ ಬಡ್ಡಿ ಆದಾಯವು ರೂ.31.54 ಲಕ್ಷದಷ್ಟು ಕಡಿಮೆಯಾಗಿದೆ.. ಇದರಿಂದಾಗಿ ಮತ್ತು ಇನ್ನಿತರೆ ತಪ್ಪುಗಳಿಂದಾಗಿ, ಚಾಲ್ತಿ ಆಸ್ತಿಗಳ ಅಡಿಯಲ್ಲಿ ನಗದು ಮತ್ತು ನಗದು ಸಮಾನತೆಗಳ ಹೊರತಾಗಿ ಬ್ಯಾಂಕ್ ಶಿಲ್ಕುಗಳನ್ನು ರೂ. 32.80 ಲಕ್ಷದಷ್ಟು ಕಡಿಮೆಯಾಗಿ ತಿಳಿಸಿದೆ.

ಹೆಚ್. ಟಿಪ್ಪಣಿ ಸಂಖ್ಯೆ. 14 ರಲ್ಲಿ ತಿಳಿಸಿರುವಂತೆ ಸಂಚಯನವಾಗಿರುವ ಮತ್ತು ಪಾವತಿಗೆ ಬಾಕಿಯಿರುವ ಬಡ್ಡಿಯಲ್ಲಿ ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನಿಂದ ಧಾರಕ ಕಂಪನಿಗೆ ಪಾವತಿ ಮಾಡಬೇಕಾಗಿರುವ ರೂ. 25.27 ಲಕ್ಷದ ಮೊತ್ತವು ಸೇರಿರುವುದು. ಧಾರಕ ಕಂಪನಿಯು ಬರಬೇಕಾಗಿರುವ ಶಿಲ್ಕುಗಳನ್ನು ತಮ್ಮ ಪುಸ್ತಕಗಳಲ್ಲಿ ವಜಾ ಮಾಡಿದೆ ಮತ್ತು ಬರಬೇಕಾಗಿರುವ ಮೊತ್ತವು ಕಂಪನಿಯ ಪುಸ್ತಕಗಳಲ್ಲಿ ಗೋಚರವಾಗುವುದಿಲ್ಲ. ಆದ್ದರಿಂದ, ಧಾರಕ

ಕಂಪನಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿನ ಸಾಲಗಳು ಮತ್ತು ಸಂಚಯನವಾಗಿರುವ ಹಾಗೂ ಪಾವತಿಗೆ ಬಾಕಿ ಇರುವ ಬಡ್ಡಿಯನ್ನು ರೂ.25.27 ಲಕ್ಷದಷ್ಟು ಹೆಚ್ಚಿಗೆಯಾಗಿ ತಿಳಿಸಿದೆ.

ಧಾರಕ ಕಂಪನಿಯ ಸಹಾಯಕ ಕಂಪನಿಗಳಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಮೊದಲಿನ ಹೆಸರು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್) ಮತ್ತು ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ ಹಣಕಾಸಿನ ಹೇಳಿಕೆಗಳ ಬಗ್ಗೆ, ಲೆಕ್ಕಪರಿಶೋಧಕರ ಸ್ವತಂತ್ರ ಸಂಸ್ಥೆ ಒಂದು ನೀಡಿರುವ ಅನುಕ್ರಮವಾಗಿ ದಿನಾಂಕ: 27ನೇ ಅಕ್ಟೋಬರ್ 2023 ಮತ್ತು 25ನೇ ಆಗಸ್ಟ್ 2023ರ ತಮ್ಮ ವರದಿಗಳ ಅನ್ವಯ, ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ವ್ಯಕ್ತಪಡಿಸಿರುವ ಆಕ್ಷೇಪಣೆಗಳ ಬಗ್ಗೆ ನಾವು ಗಮನ ಸೆಳೆಯುವೆವು. ಇದನ್ನು ನಾವು ಈ ಕೆಳಕಂಡಂತೆ ಮರು ಸ್ಥಾಪಿಸಿದ್ದೇವೆ:-

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್

ಎ. ವ್ಯಾಪಾರದ ಸಂಬಂಧ ಬರಬೇಕಾಗಿರುವುದು, ಮುಂಗಡಗಳು, ಗ್ರಾಹಕರಿಗೆ ಪಾವತಿ ಮಾಡಬೇಕಿರುವ ಮತ್ತು ಪಡೆದಿರುವ ಮುಂಗಡದ ಶಿಲ್ಕನ್ನು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದಂತೆ ಸಮನ್ವಯಗೊಳಿಸಿರುವುದಿಲ್ಲ ಅಥವಾ ಎದುರು ಪಕ್ಷಕಾರರಿಂದ ದೃಢಪಡಿಸಿರುವುದೂ ಇಲ್ಲ. ಸ್ಥಿತಿ ವಿವರಣಾ ಪಟ್ಟಿ ದಿನಾಂಕದಂದು ಇದ್ದಂತೆ ಈ ಲೆಕ್ಕಗಳ ವಾಹಕ ಮೊತ್ತದ ಬಗ್ಗೆ ಸಾಕಷ್ಟು ಸೂಕ್ತವಾದ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ನಮಗೆ ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಈ ಮೊತ್ತಗಳಿಗೆ ಯಾವುದೇ ಹೊಂದಾಣಿಕೆಗಳನ್ನು ಮಾಡಬೇಕಾದ ಅವಶ್ಯಕತೆ ಇರುವುದೇ ಎಂಬುದನ್ನು ನಿರ್ಧರಿಸಲು ನಮಗೆ ಸಾಧ್ಯವಾಗಿಲ್ಲ. ಈ ಸಮನ್ವಯಗೊಳಿಸಿರದ ಅಥವಾ ದೃಢಪಡಿಸದಿರುವ ಲೆಕ್ಕದ ಶಿಲ್ಕುಗಳ ಯಾವುದೇ ಹಣಕಾಸಿನ ಪರಿಣಾಮವನ್ನು ನಿರ್ಧರಣೆ ಮಾಡಲಾಗದು.

ಒಟ್ಟು ಶಿಲ್ಕುಗಳು, ದೃಢಪಡಿಸಿದ ಶಿಲ್ಕುಗಳು ಮತ್ತು ದೃಢಪಡಿಸದಿರುವ ಶಿಲ್ಕುಗಳ ಶೇಕಡವಾರು ಪ್ರಮಾಣವನ್ನು ಈ ಕೆಳಗೆ ನೀಡಿದೆ:

(ಮೊತ್ತ ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ಹಣಕಾಸಿನ ಅನುಸಾರ ಮೊತ್ತ	ದೃಢೀಕರಣ ಪಡೆದಿರುವ ಮತ್ತು ಸಮನ್ವಯ ಮಾಡಿರುವ ಮೊತ್ತ	ಸಮನ್ವಯಗೊಳಿಸಿರದ/ ದೃಢಪಡಿಸದಿರುವ ಲೆಕ್ಕದ ಶಿಲ್ಕಿನ ಶೇಕಡವಾರು ಪ್ರಮಾಣ
1	ವ್ಯಾಪಾರದಿಂದ ಬರಬೇಕಾಗಿರುವುದು	15,408.87	0.40	99.99 %
2	ವ್ಯಾಪಾರದ ಸಂಬಂಧದ ಮುಂಗಡಗಳು	1,734.92	-	100.00%
3	ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು	19,702.52	677.28	96.56%
4	ಗ್ರಾಹಕರುಗಳಿಂದ ಬಂದ ಮುಂಗಡಗಳು	2,133.20	-	100.00%

ಬಿ. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ 10ರಲ್ಲಿ ತಿಳಿಸಿರುವ ವ್ಯಾಪಾರದಿಂದ ಬರಬೇಕಾಗಿರುವ ಮೊತ್ತದಲ್ಲಿ ರೂ. 349.80 ಲಕ್ಷವು ಸೇರಿರುವುದು. ಈ ಹಣವು ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಕಂಪನಿಯ ಬ್ಯಾಂಕ್ ಖಾತೆಗೆ ನೇರವಾಗಿ ಬಂದಿದೆ. ಇದರ ಬಗ್ಗೆ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಆದ್ದರಿಂದಾಗಿ, ಕಂಪನಿಯು ವ್ಯಾಪಾರದಿಂದ ಬರಬೇಕಾದವುಗಳ ಬಗ್ಗೆ ಸಮಯದ ವಿವರವನ್ನು ಅಂದಾಜಿನ ಮೇರೆಗೆ ವಿಶ್ಲೇಷಿಸುವ ಪರಿಸ್ಥಿತಿಯಲ್ಲಿರುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಸೂಕ್ತವಾದ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ನಮಗೆ ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಈ ವ್ಯಾಪಾರದಿಂದ ಬರಬೇಕಾದವುಗಳು, ಮುಂಗಡಗಳು, ಪಾವತಿ ಮಾಡಬೇಕಿರುವುದು ಮತ್ತು ಗ್ರಾಹಕರಿಂದ ಬಂದಿರುವ ಮುಂಗಡಗಳ ಲೆಕ್ಕದ ಶಿಲ್ಕುಗಳಿಗೆ ಯಾವುದೇ ಹೊಂದಾಣಿಕೆಗಳನ್ನು ಮಾಡಬೇಕೆ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ನಮಗೆ ಸಾಧ್ಯವಿಲ್ಲ.

ಗ್ರಾಹಕರು ಆದಾಯ ತೆರಿಗೆ ಕಾಯ್ದೆ, 1961ರ ಅನ್ವಯ ತಡೆಹಿಡಿದಿರುವ ರೂ.1,012.97 ಲಕ್ಷಗಳ ಮೊತ್ತದ ತೆರಿಗೆ ಬಗ್ಗೆ ವಿಶ್ಲೇಷಣೆ ಮಾಡುವ ಸ್ಥಿತಿಯಲ್ಲಿ ಕಂಪನಿ ಇರುವುದಿಲ್ಲ. ಹಾಗಾಗಿ ಈ ಹೊಂದಾಣಿಕೆಗಳ ಬಗ್ಗೆ ಹಣಕಾಸಿನ ಪರಿಣಾಮವನ್ನು ನಿರ್ಧರಣೆ ಮಾಡಲಾಗದು.

ರೂ.1,022.50 ಲಕ್ಷಗಳ ಮೊತ್ತದ ಗ್ರಾಹಕರ ಜಿಎಸ್‌ಟಿ ಟಿಡಿಎಸ್ ಬಗ್ಗೆ ವಿಶ್ಲೇಷಣೆ ಮಾಡುವ ಸ್ಥಿತಿಯಲ್ಲಿ ಕಂಪನಿ ಇರುವುದಿಲ್ಲ. ಹಾಗಾಗಿ ಈ ಹೊಂದಾಣಿಕೆಗಳ ಬಗ್ಗೆ ಹಣಕಾಸಿನ ಪರಿಣಾಮವನ್ನು ನಿರ್ಧರಣೆ ಮಾಡಲಾಗದು.

ಸಿ. ಸಿಜಿಎಸ್‌ಟಿಯ ನಿಯಮ 42 ಅನ್ನು ಅನುಸರಣೆ ಮಾಡದಿರುವಿಕೆ- ಕಂಪನಿಯು ಸಾಮಾನ್ಯ ಕ್ರೆಡಿಟ್‌ಗಳನ್ನು ಪಡೆದಿರುವುದಿಲ್ಲ ಮತ್ತು ವಿನಾಯಿತಿ ಸರಬರಾಜುಗಳ ಪ್ರಮಾಣಕ್ಕೆ ಐಟಿಸಿಯನ್ನು ಮರಳಿಸಿರುವುದಿಲ್ಲ. ಸರಿಯಾದ ದಾಖಲೆ ನಿರ್ವಹಣೆ ಮಾಡಿಲ್ಲದ ಪ್ರಯುಕ್ತ ಮೊತ್ತದ ಬಗ್ಗೆ ಟೀಕೆ ಮಾಡಲು ನಮಗೆ ಸಾಧ್ಯವಾಗಿರುವುದಿಲ್ಲ.

ಡಿ. ಕಂಪನಿಯು ದಿನಾಂಕ 18ನೇ ಜೂನ್ 2019ರ ತನ್ನ ಮಂಡಳಿ ಸಭೆಯಲ್ಲಿ ವಿಜಯಪುರ ಶಾಖೆಯ ಶಾಖಾ ವ್ಯವಸ್ಥಾಪಕರಾದ ಶ್ರೀ ಎಂ.ಎಸ್. ಪಾಟೀಲ್‌ರವರು ಮೆ|| ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಜಯಪುರ ಇವರಿಂದ ಬರಬೇಕಾಗಿದ್ದ ಲೆಕ್ಕದಲ್ಲಿ ರೂ. 39.29 ಲಕ್ಷಗಳನ್ನು ವಸೂಲಿ ಮಾಡಿಕೊಂಡಿರುವುದನ್ನು ಗಮನಿಸಿದ್ದು, ಈ ಸಂಬಂಧ ಶಾಖಾ ವ್ಯವಸ್ಥಾಪಕರ ವಿರುದ್ಧ ಜಲನಗರ್ ಪೊಲೀಸ್ ಠಾಣೆ, ವಿಜಯಪುರ ಇಲ್ಲಿ ದಿನಾಂಕ : 30.05.2019ರಂದು ಎಫ್‌ಐಆರ್ ದಾಖಲಿಸಿದೆ. ಈ

2021-22ರ ಹಣಕಾಸಿನ ವರ್ಷದ ಅವಧಿಯಲ್ಲಿ ಅವರಿಂದ ಸದರಿ ಮೊತ್ತ ರೂ. 39.29 ಲಕ್ಷವನ್ನು ವಸೂಲಿ ಮಾಡಿದ ಪ್ರಯುಕ್ತ ಅವರ ಮೇಲಿನ ಎಫ್ಐಆರ್ ಅನ್ನು ಹಿಂತೆಗೆದುಕೊಳ್ಳಲಾಗಿದೆ. ಆದರೂ ಸದರಿ ಪ್ರಕರಣದ ಬಗ್ಗೆ ಸರ್ಕಾರದ ನೌಕರರ ಮೂಲಕ (ನಿವೃತ್ತ ನ್ಯಾಯಮೂರ್ತಿಗಳು) ಕೈಗೊಂಡಿರುವ ಇಲಾಖಾ ವಿಚಾರಣೆ ಇನ್ನೂ ಸಮಾಪ್ತಿಗೊಂಡಿರುವುದಿಲ್ಲ. ಮೇಲೆ ತಿಳಿಸಿದ ಮೊತ್ತ ರೂ. 39.29 ಲಕ್ಷವನ್ನು 3ನೇ ಸೆಪ್ಟೆಂಬರ್ 2019ರಂದು ವಸೂಲಿ ಮಾಡಲಾಗಿದೆ. ಆದರೆ ಇದರ ಮೇಲಿನ ಬಡ್ಡಿ ವಸೂಲಿ ಮಾಡಿರುವುದಿಲ್ಲ. ಬಡ್ಡಿಯನ್ನು ವಸೂಲಿ ಮಾಡದೆ ಇರುವುದರಿಂದ ಯಾವುದೇ ಹಣಕಾಸಿನ ಪರಿಣಾಮ ಉಂಟಾಗಿರುವುದೇ ಎಂಬುದನ್ನು ನಿರ್ಧರಣೆ ಮಾಡಲಾಗದು.

ಇ. 31ನೇ ಮಾರ್ಚ್ 2023ರಂದು ಇದ್ದಂತೆ ವ್ಯಾಪಾರದಿಂದ ಬಂದಿರುವ ಮುಂಗಡಗಳು ಮತ್ತು ಇತರೆಯಿಂದ ಬರಬೇಕಾಗಿರುವುದು ಎಂಬ ಶೀರ್ಷಿಕೆ ಅಡಿಯಲ್ಲಿ ರೂ. 62.06 ಲಕ್ಷಗಳ ಮೊತ್ತದ ಮುಂಗಡ ಪಾವತಿಗಳು ಮೂರು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ಹೊಂದಾಣಿಕೆ ಮಾಡದೆ ಹಾಗೆಯೇ ಉಳಿದಿದೆ. ಇದರಲ್ಲಿ 2012-13ರ ಹಣಕಾಸಿನ ವರ್ಷದಲ್ಲಿ ಶ್ರೀ ಎಂ.ಎಸ್. ಪಾಟೀಲ್‌ರವರಿಗೆ ಅವರ ವೈಯಕ್ತಿಕ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುವ ಮೂಲಕ ಪಾವತಿ ಮಾಡಿರುವ ರೂ. 0.12 ಲಕ್ಷವೂ ಸೇರಿದೆ. ಹೀಗೆ ಬಡ್ಡಿ ವಸೂಲಿ ಮಾಡಿರದ ಕಾರಣ ಯಾವುದೇ ಹಣಕಾಸಿನ ಪರಿಣಾಮ ಉಂಟಾಗುವುದೇ ಎಂಬುದನ್ನು ನಿರ್ಧರಣೆ ಮಾಡಲಾಗದು.

ಎಫ್. ವ್ಯಾಪಾರದಿಂದ ಪಡೆದ ಮುಂಗಡಗಳು ಮತ್ತು ಇತರೆ ಸ್ವೀಕೃತಿಗಳು, ಟಿಪ್ಪಣಿ ನಂ.7, ಪ್ರಕಾಶನ ಸಂಸ್ಥೆಗಳಿಂದ ಸ್ವೀಕರಿಸಬಹುದಾಗಿರುವ ಗುರಿ ತಲುಪುವಿಕೆ ಪ್ರೋತ್ಸಾಹ ಧನ ರೂ.68.52 ಲಕ್ಷ ಮೊತ್ತವನ್ನು ಸಮಂಜಸತೆ ಮಾಡಿರುವುದಿಲ್ಲ. ಯಾವುದೇ ದೃಢೀಕರಣ ಲಭ್ಯವಿರುವುದಿಲ್ಲ ಮತ್ತು ಇದು ನಗದಾಗುವ ಬಗ್ಗೆ ಖಚಿತತೆ ಇರುವುದಿಲ್ಲ. ಈ ಪ್ರಮಾಣದವರೆಗೆ ಚಾಲ್ತಿ ಆಸ್ತಿಗಳನ್ನು ಹೆಚ್ಚಿಗೆಯಾಗಿ ತಿಳಿಸಿದೆ.

ಜಿ. ವ್ಯಾಪಾರದ ಸಂಬಂಧದ ಮುಂಗಡಗಳು ಮತ್ತು ಇತರೆ ಸ್ವೀಕಾರಗಳು, ಟಿಪ್ಪಣಿ ಸಂಖ್ಯೆ 7, ಪ್ರಕಾಶನ ಸಂಸ್ಥೆಗಳಿಗೆ ಪಾವತಿ ಮಾಡಿದ ಮುಂಗಡ ರೂ.51.13 ಲಕ್ಷವನ್ನು ಸಮಂಜಸತೆ ಮಾಡಿರುವುದಿಲ್ಲ. ಯಾವುದೇ ದೃಢೀಕರಣ ಲಭ್ಯವಿರುವುದಿಲ್ಲ ಮತ್ತು ಅದು ನಗದಾಗುವ ಬಗ್ಗೆ ಖಚಿತತೆ ಇರುವುದಿಲ್ಲ. ಈ ಪ್ರಮಾಣದವರೆಗೆ ಚಾಲ್ತಿ ಆಸ್ತಿಗಳನ್ನು ಹೆಚ್ಚಾಗಿ ತಿಳಿಸಿದೆ.

ಎಚ್. ಬಿಲ್ ಮಾಡದಿರುವ ಆದಾಯ ಟಿಪ್ಪಣಿ ನಂ.08, ಇತರೆ ಆಸ್ತಿಗಳು ರೂ.3,843.24 ಲಕ್ಷವನ್ನು 31ನೇ ಮಾರ್ಚ್ 2023ರಂದು ಮಾನ್ಯ ಮಾಡಿದೆ. ಇದರಲ್ಲಿ ರೂ.3,048.36 ಲಕ್ಷವನ್ನು ತದನಂತರ ಗ್ರಾಹಕರಿಗೆ ಬಿಲ್ ಮಾಡಿದೆ. ಲೆಕ್ಕ ಪರಿಶೋಧನೆಯ ಈ ದಿನಾಂಕದವರೆಗೆ ರೂ.794.88 ಲಕ್ಷಗಳಿಗೆ ಗ್ರಾಹಕರಿಗೆ ಬಿಲ್ ಮಾಡಿರುವುದಿಲ್ಲ. ಸೇವೆಗಳನ್ನು ಸಲ್ಲಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳ ಅಗತ್ಯವಿರುವುದರಿಂದ ರೂ.794.88 ಲಕ್ಷಗಳ ಮೊತ್ತದ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸಲು ನಮಗೆ ಸಾಧ್ಯವಾಗಿರುವುದಿಲ್ಲ.

ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ (ಎಂಸಿಟಿಸಿಎಲ್)

ಎ. ಈ ಕಂಪನಿಯು 1986ರಿಂದ ಯಾವುದೇ ತಯಾರಿಕೆ ಚಟುವಟಿಕೆಗಳನ್ನು ನಡೆಸುತ್ತಿಲ್ಲದ ಪ್ರಯುಕ್ತ ಸದರಿ ಕಂಪನಿಯು ಚಲನಶೀಲ ಕಂಪನಿಯಾಗಿರುವುದಿಲ್ಲ. ಕಂಪನಿಯು ರೂ.835.39 ಲಕ್ಷ (ಹಿಂದಿನ ವರ್ಷರೂ. 838.42ಲಕ್ಷ) ಸಂಚಿತ ನಷ್ಟ ಅನುಭವಿಸಿದೆ. ಕಂಪನಿಯ ನಿವ್ವಳ ಸಂಪತ್ತು ಕರಗಿಹೋಗಿದೆ. ಈ ದಿನಾಂಕದಲ್ಲಿದ್ದಂತೆ ಕಂಪನಿಯ ಚಾಲ್ತಿ ಹೊಣೆಗಾರಿಕೆಗಳು ಅದರ ಒಟ್ಟಾರೆ ಆಸ್ತಿಗಳಿಗಿಂತ ರೂ.759.65ಲಕ್ಷ (ಹಿಂದಿನ ವರ್ಷ) ರೂ. 762.68 ಲಕ್ಷ-ಗಳಷ್ಟು ಮೀರಿದೆ. ಸದರಿ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಜೊತೆಗೆ ವೈಯಕ್ತಿಕ ಹಣಕಾಸುಗಳು ಮತ್ತು ಲೆಕ್ಕಪರಿಶೋಧಕರ ವರದಿಗಳಲ್ಲಿ ವರದಿ ಮಾಡಿರುವ ಇತರೆ ವಿಚಾರಗಳು ವಾಸ್ತವಿಕ ಅನಿಶ್ಚಿತತೆ ಉಂಟಾಗಿರುವಿಕೆಯನ್ನು ಸೂಚಿಸುತ್ತವೆ. ಇವು ಕಂಪನಿಯು ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವ ಕಂಪನಿಯ ಸಾಮರ್ಥ್ಯದ ಮೇಲೆ ಮಹತ್ತರ ಸಂದೇಹ ಉಂಟು ಮಾಡುವುದು.

ಬಿ. ಕಂಪನಿಯು ಕೆಎಸ್ಐಐಡಿಸಿ ಮತ್ತು ಕರ್ನಾಟಕ ಸರ್ಕಾರದಿಂದ ಪಡೆದಿರುವ ಚಾಲ್ತಿ ವರ್ಷದ ರೂ. 5.48 ಲಕ್ಷ (ಹಿಂದಿನ ವರ್ಷ ರೂ.5.48ಲಕ್ಷ) ಮತ್ತು ಏಪ್ರಿಲ್ 1999ರಿಂದ ಪಡೆದಿರುವ ರೂ. 143.10 ಲಕ್ಷಗಳ ಮೊತ್ತದ ಸಾಲದ ಮೇಲೆ ಬಡ್ಡಿ ನೀಡಿರುವುದಿಲ್ಲ. ಈ ಮೊತ್ತದ ಬಡ್ಡಿಯನ್ನು ಒದಗಿಸಿದ್ದೇ ಆಗಿದ್ದಲ್ಲಿ, 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಲಾಭ ಮತ್ತು ನಷ್ಟದ ಲೆಕ್ಕದ ಖಾತೆಯ ವಿವರದ ಪ್ರಕಾರ ವರ್ಷದ ಲಾಭ ತೆರಿಗೆಗಳ ಮುನ್ನ ರೂ. 4.04 ಲಕ್ಷಗಳ ಬದಲಾಗಿ ವರ್ಷದ ನಷ್ಟವು ರೂ. 1.80 ಲಕ್ಷ ಆಗಿರುತ್ತಿತ್ತು. ಚಾಲ್ತಿ ಹೊಣೆಗಾರಿಕೆಯನ್ನು ಚಾಲ್ತಿ ವರ್ಷಕ್ಕೆ ರೂ. 5.48 ಲಕ್ಷಗಳ ಪ್ರಮಾಣದ ವರೆಗೆ ಕಡಿಮೆಯಾಗಿ ತೋರಿಸಿದೆ. ಹಿಂದಿನ ವರ್ಷದ ನಷ್ಟವನ್ನು ರೂ.3.68 ಲಕ್ಷಗಳ ಎದುರಾಗಿ ರೂ.1.80ಲಕ್ಷ ಆಗಿರುವುದು) ಮತ್ತು ಸಂಚಿತ ನಷ್ಟವನ್ನು ರೂ.143.10 ಲಕ್ಷದಷ್ಟು ಕಡಿಮೆಯಾಗಿ ತೋರಿಸಿದೆ.

ನಾವು ಕಾಯ್ದೆಯ ಪ್ರಕರಣ 143(10) ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕಪರಿಶೋಧನೆ ಬಗ್ಗೆಗಿನ ಗುಣಮಟ್ಟಗಳ (ಎಸ್ಎಗಳು) ಅನುಸಾರ ನಮ್ಮ ಲೆಕ್ಕಪರಿಶೋಧನೆ ಮಾಡಿದ್ದೇವೆ. ಸದರಿ ಗುಣಮಟ್ಟಗಳ ಅನ್ವಯ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಕ್ರೋಡೀಕೃತ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ವಿಭಾಗದಲ್ಲಿನ ಲೆಕ್ಕಪರಿಶೋಧನೆ ಮಾಡಲು ಲೆಕ್ಕಪರಿಶೋಧಕರ ಜವಾಬ್ದಾರಿಗಳಲ್ಲಿ ಇನ್ನೂ ಮಿಗಿಲಾಗಿ ವಿವರಿಸಿದೆ. ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ('ಐಸಿಎಐ') ಹೊರಡಿಸಿರುವ ನೀತಿ ಸಂಹಿತೆಗಳ ಅನುಸಾರ ಸದರಿ ಗ್ರೂಪ್ ಮತ್ತು ಇತರ ಸಹವರ್ತಿ ಕಂಪನಿಗೆ ಒಳಪಡದೆ ನಾವು ಸ್ವತಂತ್ರವಾಗಿರುವೆವು.

ಕಾಯ್ದೆಯ ಉಪಬಂಧಗಳ ಅನ್ವಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ನೈತಿಕ ಅಗತ್ಯತೆಗಳ ಜೊತೆಗೆ ಮತ್ತು ಇದರಡಿಯ ನಿಯಮಗಳ ಅನ್ವಯ ನಾವು ಸ್ವತಂತ್ರರಾಗಿರುವೆವು ಮತ್ತು ಸದರಿ ಅಗತ್ಯತೆಗಳು ಮತ್ತು ನೀತಿ ಸಂಹಿತೆಗಳ ಅನುಸಾರ ನಮ್ಮ

ಇತರೆ ನೈತಿಕ ಜವಾಬ್ದಾರಿಗಳನ್ನು ನಾವು ಈಡೇರಿಸಿದ್ದೇವೆ. ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆಯು ನಮ್ಮ ಅರ್ಹತೆ ಹೊಂದಿದ ಲೆಕ್ಕ ಪರಿಶೋಧನೆ ಅಭಿಪ್ರಾಯಕ್ಕೆ ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು ಎಂಬುದಾಗಿ ನಾವು ನಂಬಿದ್ದೇವೆ.

ಚಾರ್ಟರ್ಡ್ ಅಕೌಂಟೆಂಟ್ಸ್‌ರ ಸ್ವತಂತ್ರ ಸಂಸ್ಥೆ ಒಂದರಿಂದ ಸಹಾಯಕ ಕಂಪನಿಗಳಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಹಿಂದಿನ ಹೆಸರು: ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್) ಮತ್ತು ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ ಹಣಕಾಸಿನ ಹೇಳಿಕೆಗಳ ಬಗ್ಗೆ ಅನುಕ್ರಮವಾಗಿ ದಿನಾಂಕ:27ನೇ ಅಕ್ಟೋಬರ್ 2023 ಮತ್ತು 25ನೇ ಆಗಸ್ಟ್ 2023ರ ತಮ್ಮ ವರದಿಯ ಅನ್ವಯದ ಲೆಕ್ಕಪರಿಶೋಧನೆ ವರದಿಯಲ್ಲಿ ಸೇರಿಸಿರುವ ಕೆಳಕಂಡ ಮಹತ್ವಪೂರ್ಣ ವಿಚಾರಗಳನ್ನು ನಾವು ಈ ಕೆಳಕಂಡಂತೆ ಮರು ಪ್ರತಿಪಾದಿಸಿರುವ ಬಗ್ಗೆ ನಾವು ಗಮನ ಸೆಳೆಯುವೆವು:

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್

1. ಕ್ರೋಡೀಕೃತ ಹಣಕಾಸಿನ ಹೇಳಿಕೆಯ ಟಿಪ್ಪಣಿ 16ರಲ್ಲಿ ಮುಂಗಡ ತೇವಣಿ ರೂ.73.69 ಲಕ್ಷವನ್ನು ಹಿಂದಿರುಗಿಸುವ ಮುಂಗಡ ತೇವಣಿಯಾಗಿ ಪಡೆಯಲಾಗಿದ್ದು, ಅದನ್ನು ಇತರೆ ಚಾಲ್ತಿ ಹೊಣೆಗಾರಿಕೆಗಳಲ್ಲಿ ತೋರಿಸಿದೆ. ಸಂಬಂಧಿಸಿದ ಪೂರೈಕೆದಾರರ ಹೆಸರನ್ನು ಗುರುತಿಸಲು ಕಂಪನಿಗೆ ಸಾಧ್ಯವಾಗಿರುವುದಿಲ್ಲ ಮತ್ತು ಸಂಬಂಧಿಸಿದ ಯೋಜನೆಯು ಪೂರ್ಣಗೊಂಡಿದ್ದರೂ ಸಹ ಈ ಮೊತ್ತವನ್ನು ಹಿಂದಿರುಗಿಸಿರುವುದಿಲ್ಲ.

ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್

ಹಣಕಾಸಿನ ಹೇಳಿಕೆಗಳಿಗೆ ಟಿಪ್ಪಣಿಗಳಲ್ಲಿನ ಈ ಕೆಳಕಂಡ ವಿಚಾರಗಳ ಬಗ್ಗೆ ನಾವು ಗಮನ ಸೆಳೆಯುವೆವು:

ಎ. ರಸ್ತೆ ಉದ್ದೇಶಕ್ಕಾಗಿ ಸ್ವಾಧೀನ ಮಾಡಿಕೊಂಡಿರುವ 5,777 ಚದರ ಗಜದ ವಿಸ್ತೀರ್ಣದ ಜಮೀನಿನ ಸಂಬಂಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಂದ ಬರಬೇಕಾಗಿರುವ ಪರಿಹಾರದ ಮೊತ್ತ ವಸೂಲಿ ಮಾಡಲು ಕಂಪನಿ ಪ್ರಕ್ರಿಯೆ ಕೈಗೊಂಡಿದೆ. ಬರಬೇಕಾದ ಪರಿಹಾರದ ಮೊತ್ತ ಎಷ್ಟು ಎಂಬುದು ತಿಳಿದುಬಂದಿರುವುದಿಲ್ಲ.

ಬಿ. ವಿಶೇಷ ಘಟಕ ಯೋಜನೆ ಅನ್ವಯ 1985-86ರ ವರ್ಷದ ಅವಧಿಯಲ್ಲಿ ಕರ್ನಾಟಕ ಸರ್ಕಾರದಿಂದ ಪಡೆದಿರುವ ರೂ.10.00 ಲಕ್ಷವನ್ನು ಕ್ರೋಡೀಕೃತ ಹಣಕಾಸಿನ ಹೇಳಿಕೆಯ ಚಾಲ್ತಿ ಹೊಣೆಗಾರಿಕೆಗಳಲ್ಲಿ ತೋರಿಸಿದೆ. ವಿಶೇಷ ಘಟಕ ಯೋಜನೆಯ ಮೇಲಿನ ಬಡ್ಡಿಯ ಬಗ್ಗೆ ಅವಕಾಶ ಮಾಡಿರದ ಪ್ರಯುಕ್ತ ಅದರಿಂದ ಉಂಟಾಗಬಹುದಾದ ಪರಿಣಾಮ ಏನೆಂಬುದು ತಿಳಿಯುವುದಿಲ್ಲ.

ಸಿ. ರೂ.905.88ಲಕ್ಷ ಮೊತ್ತದ ಚಾಲ್ತಿ ಮತ್ತು ಚಾಲ್ತಿಯೇತರ ಹೊಣೆಗಾರಿಕೆಗಳಲ್ಲಿನ ಭದ್ರತೆಯುಳ್ಳ ಮತ್ತು ಭದ್ರತೆಯಿಲ್ಲದ ಸಾಲಗಳು ದೃಢೀಕರಣೆಗೆ ಒಳಪಟ್ಟಿರುವವು.

ಡಿ. ಏಪ್ರಿಲ್ 1999ರಿಂದ ಕೆಎಸ್‌ಐಐಡಿಸಿ ಯಿಂದ ಪಡೆದ ಸಾಲದ ಮೇಲೆ ಸಂಚಯನವಾಗಿರುವ ಬಡ್ಡಿಯ ಬಗ್ಗೆ ಹೊಣೆಗಾರಿಕೆಯನ್ನು ರೂ.143.10 ಲಕ್ಷದಷ್ಟು (ಹಿಂದಿನ ವರ್ಷ ರೂ.137.62ಲಕ್ಷ) ಕಡಿಮೆಯಾಗಿ ತಿಳಿಸಿದೆ. ಇದನ್ನು ಮನ್ನಾ ಮಾಡುವಂತೆ ಕಂಪನಿಯು ಕೋರಿದೆ.

ಕ್ರೋಡೀಕೃತ ಹಣಕಾಸು ಹೇಳಿಕೆಗಳು ಮತ್ತು ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಹೊರತಾದ ಮಾಹಿತಿ

ಧಾರಕ ಕಂಪನಿಯ ನಿರ್ದೇಶಕರ ಮಂಡಳಿಯು ಇತರೆ ಮಾಹಿತಿ ಸಿದ್ಧಪಡಿಸಲು ಜವಾಬ್ದಾರರಾಗಿರುವರು. ಇತರೆ ಮಾಹಿತಿಯಲ್ಲಿ ಕಂಪನಿಯ ಮಂಡಳಿ ವರದಿ, ಒಳಗೊಂಡಿರುವುದು. ಆದರೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ನಮ್ಮ ಲೆಕ್ಕಪರಿಶೋಧಕರ ವರದಿ ಸೇರಿರುವುದಿಲ್ಲ. ಮಂಡಳಿಯ ವರದಿಯನ್ನು ಸದರಿ ಲೆಕ್ಕಪರಿಶೋಧಕರ ವರದಿ ದಿನಾಂಕದ ನಂತರ ನಮಗೆ ಒದಗಿಸುವ ನಿರೀಕ್ಷೆ ಹೊಂದಿರುವೆವು.

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ಒಳಪಡಿಸಿಕೊಂಡಿರುವುದಿಲ್ಲ. ಆದ್ದರಿಂದಾಗಿ ಇದರ ಮೇಲೆ ನಾವು ಯಾವುದೇ ರೀತಿಯ ಭರವಸೆಯ ನಿರ್ಣಯ ವ್ಯಕ್ತಪಡಿಸುವುದಿಲ್ಲ.

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಸಂಬಂಧದಲ್ಲಿ, ನಮ್ಮ ಜವಾಬ್ದಾರಿಯು ಮೇಲೆ ಗುರುತಿಸಿರುವ ಇತರೆ ಮಾಹಿತಿಯನ್ನು ಓದುವುದಾಗಿರುತ್ತದೆ. ಹಾಗೆ ಮಾಡುವಾಗ ಇತರೆ ಮಾಹಿತಿಯು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಿಗೆ ವಾಸ್ತವಿಕವಾಗಿ ಅಸಂಗತವಾಗಿರುವವೇ ಅಥವಾ ಲೆಕ್ಕ ಪರಿಶೋಧನೆಯಲ್ಲಿ ಪಡೆದಿರುವ ನಮ್ಮ ತಿಳುವಳಿಕೆಯು ಅಸಂಗತವಾಗಿರುವುದೇ ಅಥವಾ ವಾಸ್ತವಿಕವಾಗಿ ತಪ್ಪು ನೀಡಲಾಗಿದೆಯೇ ಎಂಬುದನ್ನು ಪರಿಗಣಿಸುವೆವು.

ನಾವು ಮಾಡಿರುವ ಕೆಲಸದ ಆಧಾರದ ಮೇಲೆ ಸದರಿ ಲೆಕ್ಕಪರಿಶೋಧಕರ ವರದಿ ದಿನಾಂಕಕ್ಕೆ ಮೊದಲು ನಾವು ಪಡೆದುಕೊಂಡಿರುವ ಸದರಿ ಇತರೆ ಮಾಹಿತಿಯು ವಾಸ್ತವಿಕವಾಗಿ ತಪ್ಪು ಹೇಳಿಕೆಯಿಂದ ಕೂಡಿರುವುದು ಎಂದು ನಾವು ನಿರ್ಣಯಿಸುವೆವು. ಹಾಗೆ ಮಾಡಿದಾಗ ನಾವು ಆ ವಾಸ್ತವಾಂಶವನ್ನು ವರದಿ ಮಾಡಬೇಕಾಗುತ್ತದೆ.

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿ ಜವಾಬ್ದಾರಿ

ಧಾರಕ ಕಂಪನಿಯ ನಿರ್ದೇಶಕರ ಮಂಡಳಿಯು, ಕಾಯ್ದೆಯ ಪ್ರಕರಣ 133ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಮಾನದಂಡಗಳೂ ಸೇರಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕನಿರ್ವಹಣೆ ನೀತಿಗಳ ಅನುಸಾರ ಗ್ರೂಪ್‌ನ ಮತ್ತು ಇದರ ಸಹವರ್ತಿ ಕಂಪನಿಯ ಕ್ರೋಡೀಕೃತ ಹಣಕಾಸಿನ ಪರಿಸ್ಥಿತಿ, ಕ್ರೋಡೀಕೃತ ಹಣಕಾಸಿನ ಕಾರ್ಯಕ್ಷಮತೆ ಮತ್ತು ಕ್ರೋಡೀಕೃತ ನಗದು ಹರಿಯುವಿಕೆಗಳ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಕಂಪನಿಗಳ ಕಾಯ್ದೆ, 2013ರ ಪ್ರಕರಣದಲ್ಲಿ (ಇಲ್ಲಿ ಇನ್ನು ಮುಂದೆ ಇದನ್ನು 'ಕಾಯ್ದೆ' ಎಂದು ಪ್ರಸ್ತಾಪಿಸಲಾಗುವುದು) ತಿಳಿಸಿರುವ ವಿಚಾರಗಳಿಗೆ ಜವಾಬ್ದಾರಿಯಾಗಿರುವುದು. ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯಲ್ಲಿ ಸೇರ್ಪಡೆಯಾಗಿರುವ ಕಂಪನಿಗಳ ಸಂಬಂಧಪಟ್ಟ ನಿರ್ದೇಶಕರುಗಳ

ಮಂಡಳಿಯು ಗ್ರೂಪ್‌ನ ಮತ್ತು ಅದರ ಸಹವರ್ತಿ ಕಂಪನಿಯ ಆಸ್ತಿಗಳನ್ನು ಸುರಕ್ಷತೆ ಮಾಡಲು ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು, ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡುವುದು ಮತ್ತು ಬಳಸುವುದು; ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡುವುದು; ಮತ್ತು ಮೇಲೆ ತಿಳಿಸಿರುವಂತೆ ಧಾರಕ ಕಂಪನಿಯ ನಿರ್ದೇಶಕರು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕೆ ಬಳಸಲಾಗುವ, ವಂಚನೆ ಅಥವಾ ತಪ್ಪಿನಿಂದ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಮತ್ತು ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ದಪಡಿಸಲು ಸೂಕ್ತವಾದ ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆಯನ್ನು ಖಾತರಿ ಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವ ಸಾಕಷ್ಟು ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಮಾಡಲು ಜವಾಬ್ದಾರರಾಗಿರುವರು.

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ ಗ್ರೂಪ್ ಮತ್ತು ಇತರ ಸಹವರ್ತಿ ಕಂಪನಿಯಲ್ಲಿ ಸೇರಿರುವ ಸಂಬಂಧಪಟ್ಟ ಕಂಪನಿಗಳ ನಿರ್ದೇಶಕರುಗಳ ಮಂಡಳಿಯು ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯು ಚಲನಶೀಲ ಕಂಪನಿಯಾಗಿ ಮುಂದುವರಿಯುವ ಸಾಮರ್ಥ್ಯ ಹೊಂದಿರುವುದೇ, ಚಲನಶೀಲ ಕಂಪನಿಗೆ ಸಂಬಂದಪಟ್ಟ ಅನ್ವಯವಾಗುವ ವಿಚಾರಗಳನ್ನು ಪ್ರಕಟಪಡಿಸುವುದೇ ಮತ್ತು ಗ್ರೂಪ್‌ನ್ನು ಪರಿಸಮಾಪ್ತಿಗೊಳಿಸಲು ಅಥವಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು, ಇದನ್ನು ಮಾಡದೆ ವಾಸ್ತವವಾದ ಯಾವುದೇ ಪರ್ಯಾಯ ಉಪಾಯವಿಲ್ಲವೆಂದು ಆಡಳಿತ ಮಂಡಳಿಗೆ ಕಂಡುಬರದ ಹೊರತು, ಚಲನಶೀಲ ಕಂಪನಿಯ ಆಧಾರದ ಲೆಕ್ಕನಿರ್ವಹಣೆ ಬಳಕೆ ಮಾಡಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಜವಾಬ್ದಾರರಾಗಿರುವರು.

ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯಲ್ಲಿ ಸೇರ್ಪಡೆಯಾಗಿರುವ ಕಂಪನಿಯ ಸಂಬಂಧಪಟ್ಟ ನಿರ್ದೇಶಕರುಗಳ ಮಂಡಳಿಯು ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯ ಹಣಕಾಸಿನ ವರದಿಗಾರಿಕೆ ಪ್ರಕ್ರಿಯೆಯನ್ನು ಅವಲೋಕಿಸುವ ಜವಾಬ್ದಾರಿ ಹೊಂದಿರುವರು.

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರು ಹೊಂದಿರುವ ಜವಾಬ್ದಾರಿಗಳು

ನಮ್ಮ ಧ್ಯೇಯವು ಕ್ರೋಡೀಕೃತ್ರ ಹಣಕಾಸಿನ ಹೇಳಿಕೆಗಳು ಒಟ್ಟಾರೆಯಾಗಿ ವಂಚನೆ ಅಥವಾ ತಪ್ಪಿನಿಂದಾಗಲಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವಂತೆ ಸೂಕ್ತವಾದ ಭರವಸೆ ಪಡೆಯುವುದು ಮತ್ತು ನಮ್ಮ ಅಭಿಪ್ರಾಯ ಒಳಗೊಂಡ ಲೆಕ್ಕ ಪರಿಶೋಧಕರ ವರದಿ ಒಂದನ್ನು ನೀಡುವುದು ಆಗಿರುತ್ತದೆ. ಸೂಕ್ತವಾದ ಭರವಸೆ ಅಂದರೆ ಉನ್ನತ ಮಟ್ಟದ ಭರವಸೆಯಾಗಿರುವುದು. ಆದರೆ ಲೆಕ್ಕಪರಿಶೋಧನೆಯ ಗುಣಮಟ್ಟಗಳ (ಎಸ್‌ಎಗಳು) ಅನುಸಾರ ಲೆಕ್ಕಪರಿಶೋಧನೆಯು ಯಾವಾಗಲೂ ವಾಸ್ತವಿಕ ತಪ್ಪು ಹೇಳಿಕೆಗಳೇನಾದರೂ ಇದ್ದಲ್ಲಿ ಅವುಗಳನ್ನು ಪತ್ತೆ ಹಚ್ಚುವುದೆಂಬ ಬಗ್ಗೆ ಖಾತರಿಯಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉಂಟಾಗಬಹುದು. ಅವು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ, ಸದರಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಬಳಕೆದಾರರು ತೆಗೆದುಕೊಂಡ ಆರ್ಥಿಕ ತೀರ್ಮಾನಗಳ ಮೇಲೆ ಪ್ರಭಾವ ಬೀರುವುವು ಎಂಬುದಾಗಿ ಸಕಾರಣವಾಗಿ ನಿರೀಕ್ಷಿಸಲಾಗಿದ್ದಲ್ಲಿ ಅವು ವಾಸ್ತವಿಕವಾದವು ಎಂಬುದಾಗಿ ಪರಿಗಣಿಸಲಾಗುವುದು.

ಎಸ್‌ಎಗಳ ಅನುಸಾರದ ಅಂಗವಾಗಿ ನಾವು ಲೆಕ್ಕಪರಿಶೋಧನೆ ಕಾರ್ಯದ ಉದ್ದಕ್ಕೂ ವೃತ್ತಿದಾಯಕ ತೀರ್ಮಾನಗಳನ್ನು ಮಾಡುವೆವು ಮತ್ತು ವೃತ್ತಿದಾಯಕ ಸಂದೇಹವನ್ನು ಅನುಸರಿಸುವೆವು. ಇದಲ್ಲದೆ ನಾವು:

- ವಂಚನೆ ಅಥವಾ ತಪ್ಪಿನ ಪ್ರಯುಕ್ತ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯಗಳನ್ನು ಗುರುತಿಸುವೆವು ಮತ್ತು ನಿರ್ಧರಣೆ ಮಾಡುವೆವು. ಅಂತಹ ಅಪಾಯಗಳನ್ನು ನಿಭಾಯಿಸಲು ಪೂರಕವಾದ ಲೆಕ್ಕ ಪರಿಶೋಧನೆ ಕ್ರಮಾವಳಿಗಳನ್ನು ವಿನ್ಯಾಸ ಮಾಡುವೆವು ಮತ್ತು ಲೆಕ್ಕಪರಿಶೋಧನೆ ಮಾಡುವೆವು ಹಾಗೂ ನಮ್ಮ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸೂಕ್ತವಾದ ಮತ್ತು ಸಾಕಷ್ಟು ಪ್ರಮಾಣದ ಲೆಕ್ಕಪರಿಶೋಧನೆ ಪುರಾವೆ ಪಡೆಯುವೆವು. ವಂಚನೆಯಿಂದ ಉಂಟಾಗುವ ವಾಸ್ತವಿಕ ತಪ್ಪು ಹೇಳಿಕೆಯನ್ನು ಪತ್ತೆಹಚ್ಚದಿರುವ ಅಪಾಯವು, ತಪ್ಪಿನಿಂದ ಉಂಟಾಗುವ ಅಪಾಯಕ್ಕಿಂತ ತೀವ್ರವಾದುದಾಗಿರುತ್ತದೆ. ವಂಚನೆಯು ಒಳಸಂಚು, ನಕಲಿ ಪತ್ರ ಸೃಷ್ಟಿ, ಉದ್ದೇಶಪೂರ್ವಕವಾಗಿಯೇ ಬಿಟ್ಟುಬಿಡುವುದು, ತಪ್ಪು ಪ್ರಾತಿನಿಧ್ಯಗಳನ್ನು ನೀಡುವುದು ಅಥವಾ ಆಂತರಿಕ ನಿಯಂತ್ರಣವನ್ನು ಉಲ್ಲಂಘಿಸುವ ಕೃತ್ಯಗಳನ್ನು ಒಳಗೊಂಡಿರುವುದರಿಂದ ವಂಚನೆಯು ತಪ್ಪಿಗಿಂತ ತೀವ್ರ ಸ್ವರೂಪದ ಅಪಾಯವಾಗಿರುವುದು.
- ಪರಿಸ್ಥಿತಿಗಳಿಗೆ ಸೂಕ್ತವಾಗಿರುವ ಲೆಕ್ಕಪರಿಶೋಧನೆ ಕ್ರಮಾವಳಿಗಳನ್ನು ರೂಪಿಸಲು, ಲೆಕ್ಕಪರಿಶೋಧನೆಗೆ ಪೂರಕವಾದ ಆಂತರಿಕ ನಿಯಂತ್ರಣದ ಅರ್ಥವಂತಿಕೆ ಒಂದನ್ನು ಪಡೆಯುವೆವು. ಕಂಪನಿಗಳ ಕಾಯ್ದೆ 2013ರ ಪ್ರಕರಣ 143(3)(i)ರ ಅನ್ವಯ, ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದೇ ಮತ್ತು ಆ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿದೆ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸಲು ಸಹ ನಾವು ಜವಾಬ್ದಾರರಾಗಿರುವೆವು.
- ಆಡಳಿತ ಮಂಡಳಿ ಬಳಸಿರುವ ಲೆಕ್ಕ ನಿರ್ವಹಣೆ ನೀತಿಗಳ ಸೂಕ್ತಾಸೂಕ್ತತೆ ಮತ್ತು ಲೆಕ್ಕನಿರ್ವಹಣೆ ಅಂದಾಜುಗಳ ಯುಕ್ತತೆ ಮತ್ತು ಸಂಬಂಧಪಟ್ಟ ಪ್ರಕಟಣೆಗಳ ಸೂಕ್ತತೆಗಳನ್ನು ಮೌಲ್ಯಮಾಪನ ಮಾಡುವೆವು.
- ಆಡಳಿತ ವರ್ಗವು ಚಲನಶೀಲ ಸಂಸ್ಥೆಯ ಆಧಾರದ ಲೆಕ್ಕನಿರ್ವಹಣೆ ಬಳಕೆಯ ಸೂಕ್ತತೆಗಳ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರುವುದು ಮತ್ತು ಪಡೆದುಕೊಂಡ ಲೆಕ್ಕಪರಿಶೋಧನೆ ಪುರಾವೆಯ ಆಧಾರದ ಮೇಲೆ, ಗ್ರೂಪ್ ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವ ಬಗ್ಗೆ ಗುರುತರವಾದ ಸಂದೇಹ ಸೂಚಿಸುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅನಿಶ್ಚಿತತೆ ಇರುವುದೇ ಎಂಬುದನ್ನು ತೀರ್ಮಾನಿಸುವೆವು. ವಾಸ್ತವಿಕ ಅನಿಶ್ಚಿತತೆ ಇರುವುದೆಂದು

ನಾವು ತೀರ್ಮಾನಿಸಿದ್ದೇ ಆದರೆ, ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ಸಂಬಂಧಪಟ್ಟ ಘೋಷಣೆಗಳ ಬಗ್ಗೆಗಿನ ಲೆಕ್ಕಪರಿಶೋಧಕರ ವರದಿ ಬಗ್ಗೆ ನಾವು ಗಮನ ಸೆಳೆಯಬೇಕಾಗುತ್ತದೆ; ಅಥವಾ ಅಂತಹ ಘೋಷಣೆಗಳು ಸಾಕಷ್ಟು ಇಲ್ಲದಿದ್ದರೆ, ಆಗ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಯ ಮೇಲೆ ಆಧಾರಿತವಾಗಿರುವುದು. ಆದರೂ, ಮುಂದಿನ ದಿನಗಳಲ್ಲಿ ಉಂಟಾಗುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಗ್ರೂಪ್ ಚಲನಶೀಲ ಸಂಸ್ಥೆಗಳಾಗಿ ಮುಂದುವರಿಯುವುದನ್ನು ಸ್ಥಗಿತಗೊಳಿಸಬಹುದಾಗಿರುವುದು.

- ಪ್ರಕಟಣೆಗಳೂ ಸೇರಿದಂತೆ ಒಟ್ಟಾರೆ ನಿರೂಪಣೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಸ್ವರೂಪ ಮತ್ತು ವಿಷಯ ಒಕ್ಕಣೆಯನ್ನು ಮೌಲ್ಯಮಾಪನ ಮಾಡುವೆವು. ಮತ್ತು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಮುಂದೆ ತಿಳಿಸಿರುವ ವ್ಯವಹಾರಗಳು ಮತ್ತು ಘಟನಾವಳಿಗಳನ್ನು ನ್ಯಾಯೋಚಿತ ನಿರೂಪಣೆಯ ರೀತಿಯಲ್ಲಿ ಪ್ರತಿನಿಧಿಸುವುದೇ ಎಂಬುದನ್ನು ಮೌಲ್ಯಮಾಪನ ಮಾಡುವೆವು.
- ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ಅಭಿಪ್ರಾಯ ತಿಳಿಸಲು ಕಂಪನಿಗಳ ಹಣಕಾಸಿನ ಮಾಹಿತಿ ಬಗ್ಗೆ ಅಥವಾ ಗ್ರೂಪ್‌ನ ಒಳಗಿನ ವ್ಯವಹಾರ ಚಟುವಟಿಕೆಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಸೂಕ್ತವಾದ ಲೆಕ್ಕಪರಿಶೋಧನಾ ಪುರಾವೆ ಪಡೆಯುವೆವು. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರ್ಪಡೆಯಾಗಿರುವ ಮತ್ತು ನಾವು ಅದರ ಸ್ವತಂತ್ರ ಲೆಕ್ಕಪರಿಶೋಧಕರಾಗಿರುವ, ಕಂಪನಿಗಳ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಗೆ ನಿರ್ದೇಶನ ನೀಡುವುದು, ಮೇಲ್ವಿಚಾರಣೆ ನೋಡಿಕೊಳ್ಳುವುದು ಮತ್ತು ಲೆಕ್ಕ ಪರಿಶೋಧನೆ ಮಾಡುವುದಕ್ಕೆ ನಾವು ಜವಾಬ್ದಾರರಾಗಿರುವೆವು. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರ್ಪಡೆಯಾಗಿರುವ ಇತರೆ ಕಂಪನಿಗಳಿಗೆ ಸಂಬಂಧಿಸಿದಂತೆ ಹಣಕಾಸಿನ ಹೇಳಿಕೆಗಳನ್ನು ಬೇರೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿರುವುದರಿಂದ, ಅಂತಹ ಬೇರೆ ಲೆಕ್ಕಪರಿಶೋಧಕರು ತಾವು ನಡೆಸಿದ ಲೆಕ್ಕಪರಿಶೋಧನೆಗೆ ನಿರ್ದೇಶನ ನೀಡಲು, ಮೇಲ್ವಿಚಾರಣೆ ಮಾಡಲು ಮತ್ತು ಲೆಕ್ಕಪರಿಶೋಧನೆ ಮಾಡಲು ಜವಾಬ್ದಾರರಾಗಿರುವರು. ನಾವು ನಮ್ಮ ಲೆಕ್ಕಪರಿಶೋಧನೆಗೆ ಮಾತ್ರ ಸಂಪೂರ್ಣ ಜವಾಬ್ದಾರರಾಗಿರುವೆವು.

ನಾವು ಸ್ವತಂತ್ರ ಲೆಕ್ಕಪರಿಶೋಧಕರಾಗಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರ್ಪಡೆಯಾಗಿರುವ ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಯ ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ಇತರೆ ವಿಚಾರಗಳ ಜೊತೆಗೆ, ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಾವು ಗುರುತಿಸಿದ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಮಹತ್ತರವಾದ ಕೊರತೆಗಳು ಸೇರಿದಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಮಹತ್ತರವಾದ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಬಗ್ಗೆ ನಾವು ತಿಳಿಸುವೆವು.

ನಾವು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ನಮ್ಮ ಸ್ವತಂತ್ರದ ಬಗ್ಗೆ ಸಂಬಂಧಪಟ್ಟ ನೈತಿಕ ಅಗತ್ಯತೆಗಳನ್ನು ಅನುಸರಣೆ ಮಾಡಿರುವ ಬಗ್ಗೆ ವಿವರಣೆಯೊಡನೆ ತಿಳಿಸುವೆವು ಮತ್ತು ನಮ್ಮ ಸ್ವತಂತ್ರಕ್ಕೆ ಅನ್ವಯಿಸುವುದೆಂದು ವಿಶ್ವಾಸನೀಯವಾಗಿ ಚಿಂತಿಸಿದ ಎಲ್ಲಾ ಬಾಂಧವ್ಯದ ಬಗ್ಗೆ ಮತ್ತು ಇತರ ವಿಚಾರಗಳ ಬಗ್ಗೆಯೂ ಸಹ ತಿಳಿಸುವೆವು. ಇದು ಎಲ್ಲಿ ಅನ್ವಯವಾಗುವುದು ಎಂಬುದರ ಬಗ್ಗೆ ಮತ್ತು ಸಂಬಂಧಿಸಿದ ಸುರಕ್ಷತೆಗಳ ಬಗ್ಗೆ ತಿಳಿಸುವೆವು.

ಆಡಳಿತ ಜವಾಬ್ದಾರಿ ಹೊಂದಿರುವವರಿಗೆ ತಿಳಿಸಿರುವ ವಿಚಾರಗಳಿಂದ, ಚಾಲ್ತಿ ಅವಧಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿನ ಅತ್ಯಂತ ಮಹತ್ತರವಾದ ವಿಚಾರಗಳು ಯಾವುವು ಎಂದು ನಾವು ನಿರ್ಧರಣೆ ಮಾಡುವೆವು. ಆದ್ದರಿಂದ ಅವು ಪ್ರಮುಖ ಲೆಕ್ಕಪರಿಶೋಧನೆ ವಿಚಾರಗಳಾಗಿರುವವು. ಸದರಿ ವಿಚಾರಗಳನ್ನು ಬಹಿರಂಗಪಡಿಸಬಾರದೆಂಬ ಕಾನೂನು ಅಥವಾ ನಿರ್ಬಂಧನೆಗಳಿಲ್ಲದ ಹೊರತು, ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ಈ ವಿಚಾರಗಳನ್ನು ನಾವು ವಿವರಿಸುವೆವು ಅಥವಾ ಅದು ಅತ್ಯಂತ ಅಪರೂಪದ ಪರಿಸ್ಥಿತಿಗಳಾಗಿದ್ದಲ್ಲಿ, ಅಂತಹ ವಿಚಾರಗಳನ್ನು ನಮ್ಮ ವರದಿಯಲ್ಲಿ ತಿಳಿಸುವುದಿಲ್ಲ. ಏಕೆಂದರೆ ಹಾಗೆ ಮಾಡುವುದರಿಂದ ಅಂತಹ ಮಾಹಿತಿಯ ಸಾರ್ವಜನಿಕ ಹಿತಾಸಕ್ತಿ ಸೌಲಭ್ಯಗಳನ್ನು ಮರೆಮಾಚುವ ಸಕಾರಣ ನಿರೀಕ್ಷೆಯಿರುವುದು.

ಇತರೆ ವಿಚಾರಗಳು:

ನಾವು ಎರಡು ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆಗಳು/ಹಣಕಾಸಿನ ಮಾಹಿತಿಯ ಲೆಕ್ಕಪರಿಶೋಧನೆ ಮಾಡಿರುವುದಿಲ್ಲ. ಈ ಕಂಪನಿಗಳ ಹಣಕಾಸಿನ ಹೇಳಿಕೆಗಳು 31ನೇ ಮಾರ್ಚ್ 2023ರಂದು ಇದ್ದಂತೆ ರೂ.42,727.60 ಲಕ್ಷಗಳ ಒಟ್ಟು ಆಸ್ತಿಗಳನ್ನು ಮತ್ತು ಸದರಿ ದಿನಾಂಕದಂದು ಕೊನೆಗೊಂಡ ವರ್ಷದಲ್ಲಿ ರೂ.58,565.53 ಲಕ್ಷಗಳ ಒಟ್ಟು ಆದಾಯಗಳನ್ನು ಮತ್ತು ರೂ.2,180.06 ಲಕ್ಷಗಳ ನಿವ್ವಳ ನಗದು ಹರಿವನ್ನು ಪ್ರತಿಬಿಂಬಿಸುವುದು ಮತ್ತು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ ರೂ.2,343.09 ಲಕ್ಷಗಳ ನಿವ್ವಳ ಲಾಭದ ಕಂಪನಿಯ ಪಾಲನ್ನು ಬಿಂಬಿಸುವುದು. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಪರಿಗಣಿಸಿರುವಂತೆ ಈ ಅಂಶಗಳು ಗೋಚರವಾಗಿವೆ. ಒಂದು ಸಹವರ್ತಿ ಕಂಪನಿಯ ಸಂಬಂಧ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಪರಿಗಣಿಸಿರುವಂತೆ 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ನಿವ್ವಳ ಲಾಭ ರೂ.14.28ಲಕ್ಷಗಳ ಗ್ರೂಪ್‌ನ ಪಾಲನ್ನು ಸಹ ಒಳಗೊಂಡಿರುವುದು. ಈ ಹಣಕಾಸಿನ ಹೇಳಿಕೆಗಳು/ ಹಣಕಾಸಿನ ಮಾಹಿತಿಯನ್ನು ಬೇರೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿರುವರು. ಇವರ ವರದಿಗಳನ್ನು ಆಡಳಿತ ಮಂಡಳಿ ನಮಗೆ ಸಲ್ಲಿಸಿರುವುದು ಮತ್ತು ಸಹವರ್ತಿ ಕಂಪನಿ ಸಂಬಂಧ ಸೇರ್ಪಡೆಯಾಗಿರುವ ಮೊತ್ತಗಳು ಮತ್ತು ಪ್ರಕಟಣೆಗಳಿಗೆ ಸಂಬಂಧಿಸಿದಂತೆ, ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಅಭಿಪ್ರಾಯ ಮತ್ತು ಮೇಲೆ ತಿಳಿಸಿರುವ ಸಹವರ್ತಿ ಕಂಪನಿಗೆ ಸಂಬಂಧಿಸಿದಂತೆ, ಕಾಯ್ದೆಯ ಪ್ರಕರಣ 143ರ ಉಪ ಪ್ರಕರಣಗಳು (3) ಮತ್ತು (11)ರ ಅನ್ವಯದ ನಮ್ಮ ವರದಿಯು ಬೇರೆ ಲೆಕ್ಕ ಪರಿಶೋಧಕರ ವರದಿಗಳ ಮೇಲೆ ಸಂಪೂರ್ಣವಾಗಿ ಆಧಾರಿತವಾಗಿರುವುದು.

ಬೇರೆ ಲೆಕ್ಕಪರಿಶೋಧಕರು ಮಾಡಿರುವ ಕಾರ್ಯ ಮತ್ತು ಅವರ ವರದಿಗಳ

ಬಗ್ಗೆ ನಾವು ಅವಲಂಬನೆಯಾಗಿರುವ ಬಗ್ಗೆ ಮೇಲಿನ ವಿಚಾರಗಳ ಸಂಬಂಧ ಮತ್ತು ಆಡಳಿತ ಮಂಡಳಿ ದೃಢೀಕರಣೆ ಮಾಡಿರುವ ಹಣಕಾಸಿನ ಹೇಳಿಕೆಗಳು/ ಹಣಕಾಸಿನ ಮಾಹಿತಿಯ ಹಿನ್ನೆಲೆಯಲ್ಲಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ಮತ್ತು ಕೆಳಗೆ ತಿಳಿಸಿರುವ ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆ ಮೇಲಿನ ನಮ್ಮ ವರದಿಯ ಬಗ್ಗೆ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡುವುದಿಲ್ಲ.

ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆ ವರದಿ:

1. ಕಾಯ್ದೆಯ ಪ್ರಕರಣ 143ರ ಉಪ ಪ್ರಕರಣ(11)ರ ಅನ್ವಯ ಭಾರತದ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 (''ಆದೇಶ'') ರ ಅನ್ವಯ ಅಗತ್ಯವಾದಂತೆ ಆದೇಶದ ಕಂಡಿಕೆ 3 (xvi)ರಲ್ಲಿ ನಿರ್ದಿಷ್ಟಪಡಿಸಿರುವ ವಿಚಾರದ ಬಗ್ಗೆ ಹೇಳಿಕೆ ಒಂದನ್ನು ಅನುಬಂಧ-ಬಿ ನಲ್ಲಿ ನಾವು ನೀಡಿದ್ದೇವೆ.

2. ಕಾಯ್ದೆಯ ಪ್ರಕರಣ 143(3)ರ ಅನ್ವಯ ಅಗತ್ಯವಾದಂತೆ ಅನ್ವಯವಾಗುವ ಪ್ರಮಾಣದವರೆಗೆ ನಾವು ವರದಿ ಮಾಡುವುದೇನೆಂದರೆ:

ಎ) ಮೇಲೆ ತಿಳಿಸಿದ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಉದ್ದೇಶಕ್ಕಾಗಿ ಅಗತ್ಯವಾಗಿರುವುದಾಗಿ ನಾವು ತಿಳಿದಿರುವ ಮತ್ತು ನಂಬಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಕೇಳಿ ಪಡೆದಿದ್ದೇವೆ.

ಬಿ) ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್ ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ, ಆ ಲೆಕ್ಕದ ಪುಸ್ತಕಗಳನ್ನು ಮತ್ತು ಇತರೆ ಲೆಕ್ಕಪರಿಶೋಧಕರ ವರದಿಯನ್ನು ನಾವು ಪರಿಶೀಲಿಸಿದಾಗ ಕಂಡುಬಂದಿರುವುದೇನೆಂದರೆ ಮೇಲೆ ತಿಳಿಸಿದ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಸಂಬಂಧಿಸಿದಂತೆ ಕಾನೂನಿನ ಅನುಸಾರ ಅಗತ್ಯವಾದಂತೆ ಲೆಕ್ಕಗಳ ಸೂಕ್ತವಾದ ಪುಸ್ತಕಗಳನ್ನು ಇಡಲಾಗಿದೆ.

ಸಿ) ಸದರಿ ವರದಿಯಲ್ಲಿ ತಿಳಿಸಿರುವ ಕ್ರೋಡೀಕೃತ ಸ್ಥಿತಿ ವಿವರಣಾ ಪಟ್ಟಿ, ಕ್ರೋಡೀಕೃತ ಲಾಭ ಮತ್ತು ನಷ್ಟದ ಹೇಳಿಕೆಗಳು (ಇತರೆ ಸಮಗ್ರ ಆದಾಯಗಳು ಸೇರಿದಂತೆ), ಕ್ರೋಡೀಕೃತ ನಗದು ಹರಿಯುವಿಕೆ ಹೇಳಿಕೆ ಮತ್ತು ಕ್ರೋಡೀಕೃತ ಈಕ್ವಿಟಿಯಲ್ಲಿನ ಬದಲಾವಣೆ ಹೇಳಿಕೆಗಳು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕೆ ನಿರ್ವಹಣೆ ಮಾಡಿರುವ ಲೆಕ್ಕದ ಸಂಬಂಧಪಟ್ಟ ಪುಸ್ತಕಗಳಿಗೆ ಅನುಸಾರವಾಗಿರುವುದು.

ಡಿ) ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರ ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ ಮೇಲೆ ತಿಳಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7 ಓದಿಕೊಂಡಂತೆ ಕಾಯ್ದೆಯ ಪ್ರಕರಣ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳಿಗೆ ಅನುಗುಣವಾಗಿರುವುದು.

ಇ) ಸಹಾಯಕ ಕಂಪನಿ (ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ (ಎಂಸಿಟಿಎಲ್) ಲೆಕ್ಕಪರಿಶೋಧನೆ ವರದಿ ಆಧಾರದ ಮೇಲೆ, ಮೇಲಿನ ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಭಾಗದಲ್ಲಿ ವಿವರಿಸಿರುವ ಎಂಸಿಟಿಎಲ್ ಕಂಪನಿಗೆ ಸಂಬಂಧಿಸಿದ ವಿಚಾರಗಳು ನಮ್ಮ ಅಭಿಪ್ರಾಯದಲ್ಲಿ ಸಹಾಯಕ ಕಂಪನಿಯ ಕಾರ್ಯಾಚರಣೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡುವುದು.

ಎಫ್) ಕಾಯ್ದೆಯ ಪ್ರಕರಣ 164(2)ರ ಅನ್ವಯ ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯ ನಿರ್ದೇಶಕರ ಅನರ್ಹತೆಯ ವಿಚಾರಗಳ ಬಗ್ಗೆ ವರದಿಗಾರಿಕೆಯು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.ಜಿ.ಎಸ್.ಆರ್.463(ಇ) ದಿನಾಂಕ: 05.06.2015ರ ಅನ್ವಯ ಅನ್ವಯವಾಗುವುದಿಲ್ಲ.

ಜಿ) ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವಿಕೆ ಬಗ್ಗೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಧಾರಕ ಕಂಪನಿ ಮತ್ತು ಸಹಾಯಕ ಕಂಪನಿಗಳು ಮತ್ತು ಇದರ ಸಹವರ್ತಿ ಕಂಪನಿಯ ಈ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲಿನ ಅನುಬಂಧ-ಸಿ ರಲ್ಲಿನ ನಮ್ಮ ಪ್ರತ್ಯೇಕ ವರದಿಯನ್ನು ನೋಡಬಹುದು.

ಎಚ್) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನ್ವಯದ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವ ಇತರೆ ವಿಚಾರಗಳು ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ತಿಳಿದಿರುವ ಮಾಹಿತಿಯಂತೆ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ಮತ್ತು ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಮೇಲಿನ ಬೇರೆ ಲೆಕ್ಕಪರಿಶೋಧಕರ ವರದಿಯನ್ನು ಪರಿಗಣಿಸಿದ ಆಧಾರದ ಮೇಲೆ ಹಾಗೂ 'ಇತರೆ ವಿಚಾರದ ಪ್ಯಾರಾಗ್ರಾಫ್‌ನಲ್ಲಿ ತಿಳಿಸಿರುವಂತೆ ಇರುವುದು.

i) ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಗಳ ಹಣಕಾಸಿನ ಪರಿಸ್ಥಿತಿ ಮೇಲೆ ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯಗಳು ಉಂಟು ಮಾಡುವ ಪರಿಣಾಮವನ್ನು ಕಂಪನಿಯ ಲೆಕ್ಕಪರಿಶೋಧಕರು ವರದಿ ಮಾಡಿರುವಂತೆ ದಿನಾಂಕ: 09ನೇ ಸೆಪ್ಟೆಂಬರ್ 2022ರ ತಮ್ಮ ವರದಿ ಅನ್ವಯ ಶಿವಮೊಗ್ಗದಲ್ಲಿನ ಫುಡ್ ಪಾರ್ಕ್‌ನ ಗುತ್ತಿಗೆ ರದ್ದುಪಡಿಸಿದ ಬಗ್ಗೆ ಮೆ।। ಎಲ್‌ಎಂಜೆ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಜೊತೆಗಿನ ವ್ಯಾಜ್ಯ ಇತ್ಯರ್ಥವಾಗದೆ ಉಳಿದಿದೆ ಮತ್ತು ಕಂಪನಿಯ ಹಣಕಾಸಿನ ಸ್ಥಿತಿಯ ಮೇಲೆ ಉಂಟಾಗುವ ಪರಿಣಾಮವೇನು ಎಂಬುದನ್ನು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ-41ರಲ್ಲಿ ಕಂಪನಿ ಪ್ರಕಟಿಸಿದೆ.

ii) ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯು ಜನ್ಯ ಗುತ್ತಿಗೆಗಳು ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ. ಇದರಿಂದಾಗಿ ಯಾವುದೇ ವಾಸ್ತವಿಕ ಮುಂಗಾಣ್ಕೆ ನಷ್ಟಗಳಿರುವುದಿಲ್ಲ.

iii) ಗ್ರೂಪ್ ಮತ್ತು ಇದರ ಸಹವರ್ತಿ ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ಕಂಪನಿ ವರ್ಗಾಯಿಸಬೇಕಾದ ಯಾವುದೇ ಮೊತ್ತ ಇರುವುದಿಲ್ಲ.

iv) (ಎ) ಅವರ ತಿಳುವಳಿಕೆ ಮತ್ತು ನಂಬಿಕೆಯ ಅನುಸಾರ ಕಂಪನಿಯು ವಿದೇಶಿ ಕಂಪನಿಗಳು ('ಮಧ್ಯವರ್ತಿಗಳು') ಸೇರಿದಂತೆ ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ಅಥವಾ ಕಂಪನಿಗಳಲ್ಲಿ ('ಅಂತಿಮ ಫಲಾನುಭವಿಗಳು) ಇವರಿಂದ ಅಥವಾ ಇವರ ಪರವಾಗಿ ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ಮಧ್ಯವರ್ತಿಗಳು ನೇರವಾಗಿ ಅಥವಾ ಪರೋಕ್ಷವಾಗಿ ಸಾಲ ನೀಡಲು ಅಥವಾ ಹೂಡಿಕೆ ಮಾಡಲು ಲಿಖಿತ ರೂಪದಲ್ಲಿ ದಾಖಲಾದ ಅಥವಾ ಇದಿಲ್ಲದ ಅರ್ಥವಂತಿಕೆಯೊಡನೆ (ಸಾಲವಾಗಿ ಪಡೆದ ಹಣದಿಂದ ಅಥವಾ ಸೆಕ್ಯುರಿಟೀಸ್ ಪ್ರೀಮಿಯಂ ಅಥವಾ ಯಾವುದೇ ಇತರೆ ಮೂಲದಿಂದ ಅಥವಾ ಹಣದ ಸ್ವರೂಪದಲ್ಲಿ) ಯಾವುದೇ ಹಣವನ್ನು ಮುಂಗಡವಾಗಿ ನೀಡಿರುವುದಿಲ್ಲ ಅಥವಾ ಸಾಲ ನೀಡಿರುವುದಿಲ್ಲ ಅಥವಾ ಹೂಡಿಕೆ ಮಾಡಿರುವುದಿಲ್ಲ ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹದೇನನ್ನೂ ಒದಗಿಸಿರುವುದಿಲ್ಲ.

ಬಿ) 'ಕಾಯ್ದೆಯ' ಅನ್ವಯ ಯಾರ ಹಣಕಾಸಿನ ಹೇಳಿಕೆಗಳನ್ನು ಲೆಕ್ಕಪರಿಶೋಧನೆ ಮಾಡಲಾಗಿರುವುದೊ ಭಾರತದಲ್ಲಿ ಸ್ಥಾಪನೆಯಾಗಿರುವ ಅಂತಹ ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಗಳ ಸಂಬಂಧಪಟ್ಟ ಆಡಳಿತ ಮಂಡಳಿಗಳು ನಮಗೆ ತಿಳಿಸಿರುವಂತೆ ಅವರ ತಿಳುವಳಿಕೆ ಮತ್ತು ನಂಬಿಕೆಯ ಅನುಸಾರ, ಇದರ ಸಹವರ್ತಿ ಕಂಪನಿಯು ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳಿಂದ ಹಣ ನೀಡಿಕೆ ವ್ಯಕ್ತಿಯು (ಅಂತಿಮ ಫಲಾನುಭವಿಗಳು) ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಲಿಖಿತ ರೂಪದಲ್ಲಿ ದಾಖಲಾದ ಅಥವಾ ಇದಿಲ್ಲದ ಅರ್ಥವಂತಿಕೆಯೊಡನೆ ಯಾವುದೇ ಹಣವನ್ನು ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳು, ವಿದೇಶಿ ಕಂಪನಿಗಳು ('ಹಣ ನೀಡಿಕೆ ವ್ಯಕ್ತಿಗಳು') ಸೇರಿದಂತೆ ಇವರಿಂದ ಹಣ ಪಡೆದಿರುವುದಿಲ್ಲ ಅಥವಾ ಹಣ ನೀಡಿಕೆ ವ್ಯಕ್ತಿ (ಅಂತಿಮ ಫಲಾನುಭವಿಗಳು) ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹ ಯಾವುದನ್ನೂ ಒದಗಿಸಿರುವುದಿಲ್ಲ ಮತ್ತು

ಸಿ) ನಾವು ನಡೆಸಿದ ಅಂತಹ ಲೆಕ್ಕಪರಿಶೋಧನಾ ಕ್ರಮಾವಳಿ ಆಧಾರದ ಮೇಲೆ ಮತ್ತು ಈ ಪರಿಸ್ಥಿತಿಗಳಲ್ಲಿ ಸಕಾರಣವಾದುದು ಮತ್ತು ಸೂಕ್ತವಾದುದು ಎಂಬುದಾಗಿ ಪರಿಗಣಿಸಿರುವ, ಮೇಲಿನ ಉಪ ಕಲಂಗಳು (ಎ) ಮತ್ತು (ಬಿ)ರ ಅನ್ವಯ ಆಡಳಿತ ಮಂಡಳಿ ನೀಡಿರುವ ವಿವರಣೆಯು ನಿಯಮ 11(ಇ)ರ ಉಪ ಕಲಂಗಳು (i) ಮತ್ತು (ii) ರ ಅನ್ವಯ ಯಾವುದೇ ವಾಸ್ತವಿಕ ತಪ್ಪು ಹೇಳಿಕೆಗಳನ್ನು ಒಳಗೊಂಡಿದೆ ಎಂದು ನಾವು ಅಥವಾ ಇತರೆ ಲೆಕ್ಕಪರಿಶೋಧಕರು ನಂಬುವಂತೆ ಮಾಡುವ ಯಾವುದೇ ಅಂಶ ನಮ್ಮ ಗಮನಕ್ಕೆ ಬಂದಿರುವುದಿಲ್ಲ.

ಲಾಭಾಂಶದ ವಿಚಾರದಲ್ಲಿ:

v) ಎ) ಹಿಂದಿನ ವರ್ಷದಲ್ಲಿ ಪ್ರಸ್ತಾಪಿಸಿದ್ದ ಅಂತಿಮ ಲಾಭಾಂಶ, ಸದರಿ ವರ್ಷದ ಅವಧಿಯಲ್ಲಿ ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿ (ಕೆಎಸ್ಎಂಸಿಎ) ಘೋಷಿಸಿರುವ ಮತ್ತು ಪಾವತಿಸಿರುವ ಲಾಭಾಂಶವು ಅನ್ವಯವಾಗುವಂತೆ 'ಕಾಯ್ದೆಯ' ಪ್ರಕರಣ 123ರ ಅನುಸಾರ ಇರುವುದು.

ಬಿ) ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ 14ರಲ್ಲಿ ತಿಳಿಸಿರುವಂತೆ, ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿಯ (ಕೆಎಸ್ಎಂಸಿಎ) ಸಂಬಂಧಪಟ್ಟ ನಿರ್ದೇಶಕರ ಮಂಡಳಿಯು ಸದರಿ ವರ್ಷಕ್ಕೆ ಅಂತಿಮ ಲಾಭಾಂಶದ ಪ್ರಸ್ತಾವನೆಯು ಮುಂಬರುವ ಸಂಬಂಧಪಟ್ಟ ವಾರ್ಷಿಕ ಮಹಾ ಸಭೆಯಲ್ಲಿ ಸಂಬಂಧಪಟ್ಟ ಕಂಪನಿಗಳ ಸದಸ್ಯರುಗಳಿಂದ ಅನುಮೋದನೆಗೆ ಒಳಪಟ್ಟಿರುವುದು. ಘೋಷಣೆ ಮಾಡಿರುವ ಲಾಭಾಂಶದ ಮೊತ್ತವು ಲಾಭಾಂಶ ಘೋಷಣೆಗೆ ಅನ್ವಯವಾಗುವ ಪ್ರಮಾಣದವರೆಗೆ 'ಕಾಯ್ದೆಯ' ಪ್ರಕರಣ 123ರ ಅನುಸಾರ ಇರುವುದು.

vi) ಲೆಕ್ಕಪರಿಶೋಧನೆ ಟ್ರಯಲ್ (ಎಡಿಟ್ ಲಾಗ್)ನ ರೆಕಾರ್ಡ್ ಮಾಡುವ ವೈಶಿಷ್ಟ್ಯದ ಸೌಲಭ್ಯವಿರುವ ಲೆಕ್ಕನಿರ್ವಹಣೆ ಸಾಫ್ಟ್‌ವೇರ್ ಬಳಸಿ ಲೆಕ್ಕದ ಪುಸ್ತಕಗಳನ್ನು ನಿರ್ವಹಣೆ ಮಾಡಲು ಕಂಪನಿಗಳ (ಲೆಕ್ಕಗಳು) ನಿಯಮಗಳು 2014ರ ನಿಯಮ 3(1)ರ ಉಪಬಂಧವು ಗ್ರೂಪ್‌ಗೆ ಮತ್ತು ಅದರ ಸಹವರ್ತಿ ಕಂಪನಿಗೆ 1ನೇ ಏಪ್ರಿಲ್ 2023ರಿಂದ ಅನ್ವಯವಾಗುವುದು. ಆದ್ದರಿಂದಾಗಿ ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11(ಜಿ) ಅನ್ವಯ ವರದಿ ಮಾಡುವಿಕೆಯು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಅನ್ವಯವಾಗುವುದಿಲ್ಲ.

ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ :000312ಎಸ್
ಸಹಿ/-
(ಪಿ.ಎಲ್. ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ :209054
ಯುಡಿಐಎನ್:24209054ಬಿಜೆಜೆಡ್‌ವೈಜೆಡ್‌ಕೆ8098
ಸ್ಥಳ: ಬೆಂಗಳೂರು
ದಿನಾಂಕ:30.12.2023

ಅನುಬಂಧ-ಎ

ಕಂಪನಿಗಳ ಪಟ್ಟಿ

ಕ್ರ .ಸಂ.	ಕಂಪನಿ ಹೆಸರು	ಸಂಬಂಧ
1	ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಹಿಂದಿನ ಹೆಸರು: ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್)	ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ
2	ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	ಸಹಾಯಕ ಕಂಪನಿ
3	ಫುಡ್ ಕರ್ನಾಟಕ ಲಿಮಿಟೆಡ್	ಸಹವರ್ತಿ ಕಂಪನಿ

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಬಿ

ದಿನಾಂಕ 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಮತ್ತು ಆ ದಿನಾಂಕದಂದು ಇದ್ದಂತೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ ನೀಡಿದ ಸಮ ದಿನಾಂಕದ ನಮ್ಮ ವರದಿಯ 'ಇತರೆ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ' ಅನ್ವಯ ಕಂಡಿಕೆ 1 ಅನ್ನು ನೋಡಿ.

ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 (ಸಿಎಆರ್‌ಒ) 2020ರ ಕಂಡಿಕೆ (xxi) ರ ಅನ್ವಯ ಅಗತ್ಯವಾದಂತೆ, ನಾವು ವರದಿ ಮಾಡುವುದೇನೆಂದರೆ, ಕೆಳಕಂಡ ಕಂಪನಿಗಳ ಲೆಕ್ಕಪರಿಶೋಧಕರು, ಧಾರಕ ಕಂಪನಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರ್ಪಡೆ ಮಾಡಿರುವ ಸಂಬಂಧಪಟ್ಟ ಕಂಪನಿಗಳ ಸ್ವತಂತ್ರ/ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲಿನ ತಮ್ಮ ವರದಿಯಲ್ಲಿ ಅಭಿಪ್ರಾಯ ಅಥವಾ ವ್ಯತಿರಿಕ್ತ ಟೀಕೆಗಳನ್ನು ವ್ಯಕ್ತಪಡಿಸಿರುವರು:

ಕ್ರ. ಸಂ	ಕಂಪನಿಯ ಹೆಸರು	ಸಿಐಎನ್	ಪ್ರವರ್ಗ	ಸಂಬಂಧಪಟ್ಟ ಲೆಕ್ಕಪರಿಶೋಧಕರ ವರದಿ ದಿನಾಂಕ	ಸಂಬಂಧಪಟ್ಟ ಸಿಎಆರ್‌ಒ ವರದಿಗಳಲ್ಲಿನ ಕಂಡಿಕೆ ಸಂಖ್ಯೆ
1	ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್	ಯು85110ಕೆಎ1966 ಎಸ್‌ಜಿಸಿ001612	ಧಾರಕ ಕಂಪನಿ	ನವೆಂಬರ್ 29, 2023	(i)(b) (i)(c) (ii)(a) (vii)(a)
2	ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್ (ಮೊದಲಿನ ಹೆಸರು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್	ಯು51101ಕೆಎ1972 ಪಿಎಲ್‌ಸಿ002242	ಸಹಾಯಕ ಕಂಪನಿ	ಅಕ್ಟೋಬರ್ 27, 2023	(vii) (b)
3	ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	ಯು85110ಕೆಎ1940 ಎನ್‌ಜಿಸಿ000261	ಸಹಾಯಕ ಕಂಪನಿ	ಆಗಸ್ಟ್ 25, 2023	(i)(c) (vii)(a) (ix)(a) (xix)

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಸಿ

(ಸಮ ದಿನಾಂಕದ ನಮ್ಮ ವರದಿ ನೋಡಿ)

ಕಂಪನಿಗಳ ಕಾಯ್ದೆ 2013ರ (ಕಾಯ್ದೆ) ಪ್ರಕರಣ 143ರ ಉಪ ಪ್ರಕರಣ 3 ರ ಕಲಂ (i)ರ ಅನ್ವಯದ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ

ದಿನಾಂಕ 31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ ಮತ್ತು ಆ ದಿನಾಂಕದಂದು ಇದ್ದಂತೆ ಕಂಪನಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕ ಪರಿಶೋಧನಾ ವರದಿಯ ಜೊತೆಗೆ ನಾವು ಆ ದಿನಾಂಕದಂದು ಇದ್ದಂತೆ ಭಾರತದಲ್ಲಿ ಸ್ಥಾಪನೆಯಾಗಿರುವ ಕಂಪನಿಗಳಾದ ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ ('ಧಾರಕ ಕಂಪನಿ'), ಇದರ ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಮಾಡಿದ್ದೇವೆ.

ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ:

ಭಾರತದಲ್ಲಿ ಸ್ಥಾಪನೆಯಾಗಿರುವ ಕಂಪನಿಗಳಾಗಿರುವ ಧಾರಕ ಕಂಪನಿ, ಇದರ ಸಹಾಯಕ ಮತ್ತು ಸಹವರ್ತಿ ಕಂಪನಿಗಳ ಸಂಬಂಧಪಟ್ಟ ನಿರ್ದೇಶಕರ ಮಂಡಳಿಯು, ಭಾರತದ ಲೆಕ್ಕಪರಿಶೋಧಕರ ಸಂಸ್ಥೆ (ಐಸಿಎಐ) ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಸಂಬಂಧಪಟ್ಟ ಕಂಪನಿಗಳು ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ಜವಾಬ್ದಾರರಾಗಿರುವರು. ಈ ಜವಾಬ್ದಾರಿಗಳಲ್ಲಿ 'ಕಾಯ್ದೆ',ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

ಲೆಕ್ಕ ಪರಿಶೋಧಕರ ಜವಾಬ್ದಾರಿ:

ಭಾರತದಲ್ಲಿ ಸ್ಥಾಪನೆಯಾಗಿರುವ ಧಾರಕ ಕಂಪನಿ, ಅದರ ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಯ ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(10) ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಮಾನದಂಡಗಳು ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವುವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬುದರ ಬಗ್ಗೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ಇರುವ ಭೌತಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯಮಾಪನವೂ ಸಹ ಒಳಗೊಂಡಿರುವುದು. ಆಯ್ಕೆ ಮಾಡಿದ ಕ್ರಮಾವಳಿಗಳು, ವಂಚನೆ ಅಥವಾ ತಪ್ಪಿನ ಪ್ರಯುಕ್ತ ಹಣಕಾಸಿನ ಹೇಳಿಕೆಗಳಲ್ಲಿ ಉಂಟಾಗುವ ಭೌತಿಕ ತಪ್ಪು ಹೇಳಿಕೆಯ ಅಪಾಯದ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರು ಮಾಡುವ ತೀರ್ಮಾನಗಳ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆ, ಮತ್ತು ಇತರೆ ಲೆಕ್ಕಪರಿಶೋಧಕರು ಕೆಳಗೆ ತಿಳಿಸಿರುವ ಇತರೆ ವಿಚಾರಗಳ ಪ್ಯಾರಾಗ್ರಾಫ್‌ನಲ್ಲಿ ಪ್ರಸ್ತಾಪಿಸಿರುವ ಅವರ ವರದಿಗಳ ಅನುಸಾರ ಪಡೆದಿರುವ ಲೆಕ್ಕಪರಿಶೋಧನೆ ಪುರಾವೆಯು ಧಾರಕ ಕಂಪನಿಯ, ಇದರ ಸಹಾಯಕ ಕಂಪನಿಗಳು ಮತ್ತು ಇದರ ಸಹವರ್ತಿ ಕಂಪನಿಯ ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಾಗಿರುವುದು ಮತ್ತು ಸೂಕ್ತವಾಗಿರುವುದೆಂದು ನಾವು ನಂಬಿರುವೆವು.

ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ. ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು: (1) ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆ.

(2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು

(3) ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಉಪಯೋಗ ಅಥವಾ ವಿಲೇವಾರಿ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು ಆಗಿರುತ್ತದೆ

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅಂತರ್ಗತ ಮಿತಿಗಳು:

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ, ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

ಅರ್ಹತಾ ಅಭಿಪ್ರಾಯಕ್ಕೆ ಆಧಾರ

ನಮ್ಮ ಅಭಿಪ್ರಾಯದಲ್ಲಿ, ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳನುಸಾರ ಮತ್ತು ನಾವು ನಿರ್ವಹಿಸಿದ ಲೆಕ್ಕಪರಿಶೋಧನೆ ಆಧಾರದ ಮೇಲೆ ದಿನಾಂಕ: 31.03.2023 ರಂದಿನಂತೆ ಧಾರಕ ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳಲ್ಲಿನ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ಗುರುತಿಸಲಾಗಿದೆ:

ಎ) ಕಂಪನಿಯು ತನ್ನ ಎಲ್ಲಾ ಕಾರ್ಯಾಚರಣೆ ವಿಭಾಗಗಳು ಮತ್ತು ಶಾಖೆಗಳನ್ನು ಒಳಪಡಿಸಿಕೊಳ್ಳಲು ಸಂಯೋಜಿತ ಇಆರ್‌ಪಿ ವ್ಯವಸ್ಥೆ ಹೊಂದಿರುವುದಿಲ್ಲ. ಇದರ ಮೂರು ವಿಭಾಗಗಳಾದ –ಪಾನೀಯ, ಚಿಟ್‌ಫಂಡ್ ಮತ್ತು ಕಾಗದದ ವಿಭಾಗಗಳ ವ್ಯವಹಾರವನ್ನು ಸ್ವತಂತ್ರ ಸಾಫ್ಟ್‌ವೇರ್‌ನಲ್ಲಿ ಮಾಡಲಾಗುತ್ತಿದೆ. ಈ ವಿಭಾಗಗಳ ಸಾಫ್ಟ್‌ವೇರ್‌ಗಳಿಂದ ಟ್ರಯಲ್ ಬ್ಯಾಲೆನ್ಸ್‌ಗಳನ್ನು ಪಡೆದುಕೊಳ್ಳಲಾಗಿದೆ ಮತ್ತು ಪ್ರಧಾನ ಕಚೇರಿಯಲ್ಲಿ ಕೈಯಿಂದ ಸಂಯೋಜನೆ ಮಾಡಲಾಗಿದೆ ಮತ್ತು ಟ್ಯಾಲಿ ಇಆರ್‌ಪಿಯಲ್ಲಿ ಇತರೆ ವಿಭಾಗಗಳ ಜೊತೆ ಸಂಯೋಜಿಸಲಾಗಿದೆ.

ಬಿ) ಕಂಪನಿಯು ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಬಗ್ಗೆ ನಿಯತಕಾಲಿಕ ಆಧಾರದ ಮೇಲೆ ಭೌತಿಕ ಪರಿಶೀಲನೆಯ ಕಾರ್ಯಕ್ರಮ ಹೊಂದಿರುವುದಿಲ್ಲ. ಸ್ಥಿರ ಆಸ್ತಿಗಳ ರಿಜಿಸ್ಟರ್‌ಗಳನ್ನು ನಿಯತಕಾಲಿಕವಾಗಿ ಸಕಾಲಿಕಗೊಳಿಸಿರುವುದಿಲ್ಲ. ಭೌತಿಕ ಪರಿಶೀಲನೆ ಕಾರ್ಯಕ್ರಮ ಇಲ್ಲದಿರುವುದರಿಂದ, ಯಾವುದಾದರೂ ವ್ಯತ್ಯಾಸಗಳಿದ್ದಲ್ಲಿ ಅದನ್ನು ಗುರುತಿಸಲಾಗದು ಮತ್ತು ಸರಿಯಾಗಿ ವ್ಯವಹರಿಸಲಾಗದು. ಇದರಿಂದ ಸರಿಯಾಗಿರದ ಸವಕಳಿ ವ್ಯವಸ್ಥೆಗೆ ಮತ್ತು ದುರ್ಬಲತೆ ನಿರ್ಧರಣೆಗೆ ಕಾರಣವಾಗುತ್ತದೆ.

ಸಿ) ನಿಯತಕಾಲಿಕ ಆಧಾರದ ಮೇಲೆ ಡೆಟಾರ್‌ಗಳು, ಕ್ರೆಡಿಟಾರ್‌ಗಳು ಮತ್ತು ಇತರೆ ವ್ಯಕ್ತಿಗಳ ಸಂಬಂಧ ಶಿಲ್ಕುಗಳ ದೃಢೀಕರಣ ಪಡೆಯಲು ಕಂಪನಿಯು ಅನುಸರಣೆ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಕಂಪನಿಯು ವಸೂಲಾಗದ ಮತ್ತು ಸಂದೇಹಾಸ್ಪದವಾದ ಸಾಲಗಳಿಗೆ ಅಂದಾಜು ಮಾಡಲಾದ/ಸಾಮಾನ್ಯವಾದ ಆಧಾರದ ಮೇಲೆ ವ್ಯವಸ್ಥೆ ಮಾಡುವುದು. ಆಂತರಿಕ ನಿಯಂತ್ರಣ ಕ್ರಮಾವಳಿಗಳು ಇಲ್ಲದಿರುವುದರಿಂದ ಲೆಕ್ಕದ ಪುಸ್ತಕಗಳಲ್ಲಿ ನಿಖರವಾಗಿರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತಿಳಿಸಲು ಅವಕಾಶವಾಗುತ್ತದೆ ಮತ್ತು ಅದರಿಂದ ಕಂಪನಿಯ ಹಣಕಾಸಿನ ಫಲಿತಾಂಶಗಳ ಮೇಲೆ ಪರಿಣಾಮ ಉಂಟಾಗುತ್ತದೆ.

ಡಿ) ಚಿಟ್‌ಫಂಡ್ ವಿಭಾಗ ಬಳಸಿರುವ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್‌ಗೆ ವೆಂಡಾರ್‌ರವರಿಂದ ಬೆಂಬಲವಾಗಲಿ ಅಥವಾ ಕಂಪನಿಯಿಂದ ತಾಂತ್ರಿಕ ವಿಷಯಗಳ ಅಪಾಯ ನಿವಾರಿಸಲು ವಾರ್ಷಿಕ ನಿರ್ವಹಣೆ ಗುತ್ತಿಗೆಗಳನ್ನಾಗಲಿ ಹೊಂದಿರುವುದಿಲ್ಲ. ಚಿಟ್‌ಫಂಡ್ ವಿಭಾಗದ ಎರಡು ಶಾಖೆಗಳ ಹಣಕಾಸಿನ ಲೆಕ್ಕಗಳನ್ನು ಇನ್ನೂ ಕೈಯಿಂದಲೇ ನಿರ್ವಹಣೆ ಮಾಡಲಾಗುತ್ತಿದೆ ಮತ್ತು ಅದರ ಸಾಫ್ಟ್‌ವೇರ್ ಜೊತೆ ಸಂಯೋಜಿಸಿರುವುದಿಲ್ಲ. ಈ ಎರಡು ಶಾಖೆಗಳ ಟ್ರಯಲ್ ಬ್ಯಾಲೆನ್ಸ್‌ಗಳನ್ನು ಚಿಟ್‌ಫಂಡ್ ವಿಭಾಗದ ಇತರೆ ಎಲ್ಲಾ ಶಾಖೆಗಳ ಜೊತೆ ಸೇರಿಸಲು ಎಕ್ಸೆಲ್ ವರ್ಕ್ ಶೀಟ್‌ನಲ್ಲಿ ಕೈಯಿಂದ ಸಿದ್ಧಪಡಿಸಲಾಗಿದೆ. ತದನಂತರ, ಇದನ್ನು ಪ್ರಧಾನ ಕಚೇರಿ ಲೆಕ್ಕಗಳ

ಜೊತೆ ಟ್ಯಾಲಿ ಇಆರ್‌ಪಿ ಜೊತೆ ಸಂಯೋಜನೆ ಮಾಡಿದೆ. ಚಿಟ್‌ಫಂಡ್ ವಿಭಾಗದಲ್ಲಿ ನಿಯತಕಾಲಿಕ ಬ್ಯಾಂಕ್ ಸಮಂಜಸತೆ ವಿವರಣೆಗಳನ್ನು ಸಿದ್ಧಪಡಿಸುವುದರಲ್ಲಿ ವಿಳಂಬವಾಗಿದೆ. ಈ ಕಾರ್ಯವು ಹಣದ ದುರುಪಯೋಗವನ್ನು ಪತ್ತೆ ಹಚ್ಚಲು ಪ್ರಮುಖವಾದುದಾಗಿದೆ.

ಇ) ಬರಬೇಕಿರುವುದು ಮತ್ತು ಪಾವತಿ ಮಾಡಬೇಕಿರುವುದನ್ನು ಗ್ರಾಹಕರವಾರು ಲೆಕ್ಕ ಮಾಡಿರುವುದಿಲ್ಲ. ಹಾಗಾಗಿ ಟೂರ್ಸ್ ಅಂಡ್ ಟ್ರಾವೆಲ್ ವಿಭಾಗದಲ್ಲಿ ಪೂರ್ಣಗೊಂಡ ಪ್ರವಾಸಗಳ ಸಂಬಂಧ ಗಳಿಕೆಯನ್ನು ಅದು ಸಂಚಯನವಾದಾಗ ಕಂಪನಿ ಗಣನೆ ಮಾಡಿರುವುದಿಲ್ಲ. ಇದರಿಂದಾಗಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ನಿಖರವಾಗಿ ವರದಿ ಮಾಡಲು ಸಾಧ್ಯವಾಗದ ಸಂದರ್ಭ ಉಂಟಾಗಿರುವುದು ಮತ್ತು ಲೆಕ್ಕ ಪುಸ್ತಕಗಳಲ್ಲಿ ಆದಾಯವನ್ನು ಕಡಿಮೆಯಾಗಿ ತಿಳಿಸಲು ಕಾರಣವಾಗಿದೆ. ನವದೆಹಲಿ ಶಾಖೆಯಲ್ಲಿ ಟೂರ್ಸ್ ಅಂಡ್ ಟ್ರಾವೆಲ್ ವ್ಯವಹಾರಕ್ಕೆ ಆದಾಯ ಲೆಕ್ಕ ನಿರ್ವಹಣೆಯ ವಿಧಾನವು ಪ್ರಧಾನ ಕಚೇರಿಯಲ್ಲಿನ ಟೂರ್ಸ್ ಅಂಡ್ ಟ್ರಾವೆಲ್ ವಿಭಾಗದಲ್ಲಿ ಆದಾಯ ಲೆಕ್ಕ ನಿರ್ವಹಣೆಯ ವಿಧಾನವು ತಳಮಟ್ಟದಲ್ಲಿರುವುದಕ್ಕೆ ಹೋಲಿಸಿದರೆ ದೆಹಲಿಯ ಶಾಖೆಯಲ್ಲಿ ನೆಟ್‌ಲೆವೆಲ್‌ನಲ್ಲಿದೆ.

ಎಫ್) ವಿವಿಧ ಸ್ವತ್ತು, ಸ್ಥಾವರ ಮತ್ತು ಉಪಕರಣದ ಖರೀದಿಗೆ ಅಳವಡಿಸಿಕೊಂಡಿರುವ ಕ್ರಮಾವಳಿಯು ರೂ.5.00 ಲಕ್ಷಕ್ಕೂ ಹೆಚ್ಚಿನ ಮೊತ್ತದ ಖರೀದಿಗೆ ಅನ್ವಯಿಸುವ ಸಾಮಾನ್ಯ ಖರೀದಿ ಕ್ರಮಾವಳಿಗೆ ಅನುಗುಣವಾಗಿರುವುದಿಲ್ಲ. ಇದರಿಂದಾಗಿ ಸ್ವತ್ತು, ಸ್ಥಾವರ ಮತ್ತು ಉಪಕರಣ ಸ್ವಾಧೀನತೆಯಲ್ಲಿ ಸಾಧ್ಯನೀಯ ಅಕ್ರಮಗಳಿಗೆ ಅಸ್ಪದವಾಗುವುದು.

ಜಿ) ಕಂಪನಿಯು ಕಾಗದ ಮತ್ತು ಫಾರ್ಮಸ್ಯೂಟಿಕಲ್ ವಿಭಾಗಗಳಲ್ಲಿ ದಾಸ್ತಾನಿನ ಭೌತಿಕ ಪರಿಶೀಲನೆ, ಮೌಲ್ಯಮಾಪನಕ್ಕೆ, ಮತ್ತು ಮಾರಾಟವಾಗದ/ನಿಧಾನಗತಿಯಲ್ಲಿ ಮಾರಾಟವಾಗುವ ದಾಸ್ತಾನುಗಳನ್ನು ಗುರುತಿಸಲು ಸಾಕಷ್ಟು ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಆದ್ದರಿಂದ, ದಾಸ್ತಾನಿನ ಮೌಲ್ಯದಲ್ಲಿ ಕ್ಷೀಣತೆಯಾಗುವುದನ್ನು ಸರಿಯಾಗಿ ಗುರುತಿಸಲು ಸಾಧ್ಯವಿಲ್ಲ. ಇದರಿಂದ ಲೆಕ್ಕದ ಪುಸ್ತಕಗಳಲ್ಲಿ ತಪಶೀಲಿನ ಪ್ರಮಾಣವನ್ನು ಹೆಚ್ಚಿಗೆಯಾಗಿ ತಿಳಿಸಲು ಕಾರಣವಾಗುವುದು.

ಎಚ್) ಕಂಪನಿಯು ಚಿಟ್‌ಫಂಡ್ಸ್ (ಕರ್ನಾಟಕ) ನಿಯಮಗಳು, 1983ರ ನಿಯಮ 20(2)ರ ಅನ್ವಯ ಅಗತ್ಯವಾದಂತೆ ಫಾರಂ xi (ಸ್ವೀಕಾರಗಳು ಮತ್ತು ಖರ್ಚಿನ ಲೆಕ್ಕ ಮತ್ತು ಪ್ರತಿ ಚಿಟ್ ಗ್ರೂಪ್‌ಗಳ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತಿಳಿಸಿರುವ ವಿವರಣೆ) ಅನ್ನು ರಿಜಿಸ್ಟ್ರಾರ್‌ರವರಿಗೆ ಸಲ್ಲಿಸಿರುವುದಿಲ್ಲ.

ಧಾರಕ ಕಂಪನಿಯ ಸಹಾಯಕ ಕಂಪನಿಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಹಿಂದಿನ ಹೆಸರು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್) ಹಣಕಾಸಿನ ಹೇಳಿಕೆಗಳ ಬಗ್ಗೆ ದಿನಾಂಕ:27ನೇ ಅಕ್ಟೋಬರ್ 2023ರ ಸ್ವತಂತ್ರ ಚಾರ್ಟರ್ಡ್ ಅಕೌಂಟೆಂಟ್‌ರವರು ನೀಡಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿಯಲ್ಲಿ ಸೇರಿಸಿರುವ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳ ಬಗ್ಗೆ ನಾವು ಗಮನ ಸೆಳೆಯುವೆವು, ಮತ್ತು ಅದನ್ನು ನಾವು ಈ ಕೆಳಕಂಡಂತೆ ಪುನರ್ ಪ್ರತಿಪಾದನೆ ಮಾಡಿರುವೆವು:

ಎ) ಸ್ವತ್ತು, ಸ್ಥಾವರ ಮತ್ತು ಉಪಕರಣದ ಮೇಲಿನ ಕಂಪನಿಯ ಆಂತರಿಕ ನಿಯಂತ್ರಣವು ಅದರ ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ. ಸ್ಥಿರಾಸ್ತಿಗಳ ಮಾರಾಟ/ವಿನಿಮಯದ ಮೇಲೆ ಸೂಕ್ತವಾದ ನಿಯಂತ್ರಣ ಇರುವುದಿಲ್ಲ. ಸ್ವತ್ತು , ಸ್ಥಾವರ ಮತ್ತು ಉಪಕರಣದ ಸ್ವಾಧೀನದ ಬಗ್ಗೆ ಪಾವತಿ ಮಾಡಿರುವ ಬಂಡವಾಳ ಮುಂಗಡಗಳನ್ನು ಗುರುತಿಸುವ ಬಗ್ಗೆ ಸೂಕ್ತವಾದ ನಿಯಂತ್ರಣ ಇರುವುದಿಲ್ಲ. ಕಂಪನಿಯು ಆಸ್ತಿ ಬಂಡವಾಳೀಕರಣ ಪ್ರಕ್ರಿಯೆ ಹೊಂದಿರುವುದಿಲ್ಲ.

ಬಿ) ಪ್ರಯಾಣದ ಮುಂಗಡ ಇತ್ಯರ್ಥಪಡಿಸುವ ಬಗ್ಗೆ ಕಂಪನಿಯ ಆಂತರಿಕ ನಿಯಂತ್ರಣವು ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ.

ಸಿ) ಶಾಖೆಗಳಲ್ಲಿ ನಗದು ನಿರ್ವಹಣೆ ಮತ್ತು ಶಾಖೆಗಳಿಗೆ ನೀಡಿದ ಮುಂಗಡದ ಮರುಪಾವತಿ ಬಗ್ಗೆಗಿನ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ. ಖರ್ಚಿನ ಲೆಕ್ಕವನ್ನು ಮುಂಗಡ ಲೆಕ್ಕಗಳಿಗೆ ಜಮೆ ಮಾಡಿರುವುದಿಲ್ಲ. ಮರು ಪಾವತಿ ಮಾಡುವಾಗ ಕಂಪನಿಯು ಪಾವತಿ ನಮೂದನ್ನು ಖರ್ಚಿಗೆ ಡೆಬಿಡ್ ಮಾಡಿದೆ. ಇದು ಲೆಕ್ಕ ನಿರ್ವಹಣೆಯ ಸರಿಯಾದ ಮಾರ್ಗವಾಗಿರುವುದಿಲ್ಲ.

ಡಿ) ಗ್ರಾಹಕರುಗಳಿಂದ ನೇರ ವರ್ಗಾವಣೆ ಮಾಡಿರುವ ವಿಚಾರಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಠೇವಣಿಗಳ ಬಗ್ಗೆ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆ ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ. ಇದನ್ನು ಸಾದಿಲ್ವಾರು ಸಾಲಗಾರರ ವಸೂಲಿಯಲ್ಲಿ ಲೆಕ್ಕ ಮಾಡಿದೆ, ಬಾಕಿಯಿರುವ ವಸೂಲಿಯನ್ನು 31ನೇ ಮಾರ್ಚ್ 2023ರಂದು ಇದ್ದಂತೆ ರೂ.281.37 ಲಕ್ಷಗಳಿಗೆ ಹೊಂದಾಣಿಕೆ ಮಾಡಬೇಕಿದೆ.

ಇ) ವೇತನ ಬಡ್ತಿ/ಸಮಯಾಧಾರಿತ ಬಡ್ತಿ ವಿಚಾರಕ್ಕೆ ಸಂಬಂಧಿಸಿದಂತೆ ನೌಕರರಿಗೆ ಮಾಹಿತಿ ನೀಡಿಕೆ ಬಗ್ಗೆಗಿನ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ.

ಎಫ್) ಷೇರುಗಳ ವರ್ಗಾವಣೆ ಸರ್ಟಿಫಿಕೇಟ್‌ನ ನಿರ್ವಹಣೆ ಬಗ್ಗೆಗಿನ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯಾಚರಣೆಯ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ.

ಜಿ) ಪುಸ್ತಕ ಮುಚ್ಚುವಿಕೆಯ ಬಗ್ಗೆ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯಾಚರಣೆಯ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ. ಲೆಡ್ಜರ್ ಲೆಕ್ಕಗಳನ್ನು ಸೃಷ್ಟಿಸುವ ಬಗ್ಗೆ ಮತ್ತು ಲೆಡ್ಜರ್‌ಗಳ ಸೂಕ್ತವಾದ ವರ್ಗೀಕರಣಗಳ ಬಗ್ಗೆ ನಿಯಂತ್ರಣ ಇರುವುದಿಲ್ಲ.

ಎಚ್) ಕಂಪನಿಯು ಅಪಾಯದ ರೂಪ/ಅಪಾಯದ ಪುಸ್ತಕ ಮತ್ತು ಗುಣಮಟ್ಟದ ಕಾರ್ಯಾಚರಣೆ ಕ್ರಮಾವಳಿಗಳು ಮತ್ತು ಅಪಾಯ ತಗ್ಗಿಸುವ ಯೋಜನೆಯನ್ನು ಹೊಂದಿರುವುದಿಲ್ಲ.

ಐ) ಕಂಪನಿಯ ಪ್ರಮುಖ ಆದಾಯ ಮೂಲ ಕಾರ್ಯಕ್ರಮ ನಿರ್ವಹಣೆ ಆಗಿರುವುದು. ಆದರೆ ಪ್ರತಿ ಕಾರ್ಯಕ್ರಮದ ಲಾಭವನ್ನು ಲೆಕ್ಕದ ಪುಸ್ತಕಗಳಲ್ಲಿ ಒದಗಿಸಿರುವುದಿಲ್ಲ.

ಜೆ) ಬಾಡಿಗೆಯ ಬಗ್ಗೆ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿ ಇರುವುದಿಲ್ಲ, ಬಾಡಿಗೆ ಒಪ್ಪಂದ ಪತ್ರಗಳ ಅವಧಿ ಮುಗಿದುಹೋಗಿದೆ, ಕಟ್ಟಡ ಖಾಲಿ ಮಾಡಿರುವ ವಿವರಣೆಗಳು ಲಭ್ಯವಾಗಿರುವುದಿಲ್ಲ ಮತ್ತು ಸಂಬಂಧಿಸಿದ ಭದ್ರತಾ ಠೇವಣಿಯನ್ನು ಬಾಡಿಗೆಗೆ ಹೊಂದಾಣಿಕೆ ಮಾಡಲಾಗಿದೆ.

ಕೆ) ಕಂಪನಿಗೆ ನಗದು ನಷ್ಟ ಉಂಟು ಮಾಡುವ, ಕ್ಲೈಮ್ ಮಾಡಿರದ ಟಿಡಿಎಸ್ ಬಗ್ಗೆ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆ, ಟಿಡಿಎಸ್ ನ ಸಮಂಜಸತೆ ಮತ್ತು ಲೆಕ್ಕ ನಿರ್ವಹಣೆ ಕಾರ್ಯಾಚರಣೆಯ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ.

ಎಲ್) ನೌಕರರ ಸೌಲಭ್ಯಗಳ ಬಗ್ಗೆ ಖರ್ಚುಗಳ ಹಂಚಿಕೆ ಮೇಲಿನ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ. ನೌಕರರಿಗೆ ವೇತನ ಬಡ್ತಿಯನ್ನು ಕಂಪನಿಯ ನಿಯಮಗಳು ಮತ್ತು ನೀತಿಗಳ ಆಧಾರದ ಮೇಲೆ ಕೊಟ್ಟಿರುವುದಿಲ್ಲ. ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿನ ವಾಸ್ತವಿಕ ದೌರ್ಬಲ್ಯವು ಕೊರತೆ, ಅಥವಾ ಕೊರತೆಗಳ ಸಂಯೋಜನೆಯಾಗಿದೆ. ಆದ್ದರಿಂದ ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಗೆ ಉಂಟಾಗುವ ಸಕಾರಣ ಸಾಧ್ಯತೆಯಿರುತ್ತದೆ. ಇದನ್ನು ಸಕಾಲಿಕ ಆಧಾರದ ಮೇಲೆ ತಡೆಯಲಾಗದು ಅಥವಾ ಪತ್ತೆ ಹಚ್ಚಲಾಗದು.

ಅರ್ಹತಾ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಮತ್ತು ಸಹಾಯಕ ಕಂಪನಿ (ಎಂಸಿಟಿಎಲ್) ಮತ್ತು ಇದರ ಸಹವರ್ತಿ ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಇತರೆ ಲೆಕ್ಕಪರಿಶೋಧಕರ ವರದಿಗಳ ಮೇಲೆ ಆಧಾರಿತವಾಗಿ, ಅರ್ಹತಾ ಅಭಿಪ್ರಾಯ ಕಂಡಿಕೆಯ ಆಧಾರದಲ್ಲಿ ಮೇಲೆ ವಿವರಿಸಿರುವ ವಾಸ್ತವಿಕ ದುರ್ಬಲತೆಯ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿ (ಎಂಸಿಟಿಎಲ್) ಮತ್ತು ಇದರ ಸಹವರ್ತಿ ಕಂಪನಿಯು ಎಲ್ಲಾ ವಾಸ್ತವಿಕ ವಿಚಾರದಲ್ಲಿ, ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿರುವವು ಮತ್ತು ಅಂತಹ ನಿಯಂತ್ರಣಗಳು 31ನೇ ಮಾರ್ಚ್ 2023ರಂದು ಇದ್ದಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವವು ಮತ್ತು ಧಾರಕ ಕಂಪನಿಯ ಸಹಾಯಕ ಕಂಪನಿಯಾದ ಕೆಎಸ್ಎಂಸಿಎಯ ಲೆಕ್ಕಪರಿಶೋಧಕರು ವರದಿ ಮಾಡಿರುವಂತೆ ಆ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವವು. ಅರ್ಹತಾ ಅಭಿಪ್ರಾಯಕ್ಕೆ ಆಧಾರದಲ್ಲಿ ಮೇಲೆ ವಿವರಿಸಿರುವ ವಾಸ್ತವಿಕ ದುರ್ಬಲತೆಯ ಸಾಧ್ಯನೀಯ ಪರಿಣಾಮದಿಂದಾಗಿ, ಧಾರಕ ಕಂಪನಿಯ ಸಹಾಯಕ ಕಂಪನಿಯಾದ ಕೆಎಸ್ಎಂಸಿಎ ಯ ವ್ಯವಹಾರದ ಸ್ವರೂಪ ಮತ್ತು ಗಾತ್ರದ ಅನುಗುಣವಾಗಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು 31ನೇ ಮಾರ್ಚ್ 2023ರಂದು ಇದ್ದಂತೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿಲ್ಲ. ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಸಂಬಂಧಪಟ್ಟ ಕಂಪನಿಗಳು ಪ್ರತಿಪಾದಿಸಿರುವ ಹಣಕಾಸಿನ ವರದಿಗಾರಿಕೆ ಅರ್ಹತೆಯ ಮೇಲಿನ ಆಂತರಿಕ ನಿಯಂತ್ರಣದ ಆಧಾರದಲ್ಲಿ ನೋಡಿದಾಗ ಈ ಅಂಶ ವೇದ್ಯವಾಗಿರುವುದು.

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಗ್ರೂಪ್‌ನ ಮತ್ತು ಇದರ ಸಹವರ್ತಿ ಕಂಪನಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕ ಶೋಧನೆಯ ಸ್ವರೂಪ ಸಮಯ ಮತ್ತು ಅನ್ವಯ ಮಾಡಿರುವ ಲೆಕ್ಕಪರಿಶೋಧನಾ ಪರೀಕ್ಷೆಗಳನ್ನು ನಿರ್ಧರಣೆ ಮಾಡಿ ಮೇಲೆ ವಿವರಿಸಿರುವಂತೆ ನಾವು ಗುರುತಿಸಿರುವ ಮತ್ತು ವರದಿ ಮಾಡಿರುವ ವಾಸ್ತವಿಕ ದೌರ್ಬಲ್ಯವನ್ನು ನಾವು ಪರಿಗಣಿಸಿದ್ದೇವೆ ಮತ್ತು ಸದರಿ ವಾಸ್ತವಿಕ ದೌರ್ಬಲ್ಯಗಳು, ಮೇಲೆ ತಿಳಿಸಿರುವಂತೆ ಗ್ರೂಪ್‌ನ ಮತ್ತು ಇದರ ಸಹವರ್ತಿ ಸಂಸ್ಥೆಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯಕ್ಕೆ ಧಕ್ಕೆ ಉಂಟು ಮಾಡಿದೆ. ಆದ್ದರಿಂದಾಗಿ ನಾವು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ಅರ್ಹತಾ ಅಭಿಪ್ರಾಯಗಳನ್ನು ನೀಡಿದ್ದೇವೆ.

ಇತರೆ ವಿಚಾರಗಳು

ಭಾರತದಲ್ಲಿ ಸ್ಥಾಪನೆಯಾಗಿರುವ ಕಂಪನಿಗಳಾದ ಎರಡು ಸಹಾಯಕ ಕಂಪನಿಗಳಿಗೆ ಸಂಬಂಧಿಸಿದಂತೆ ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿ ಇರುವಿಕೆ ಮತ್ತು ಅವುಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವ ಬಗ್ಗೆ ಕಾಯ್ದೆಯ ಪ್ರಕರಣ 143(3) (i)ರ ಅನ್ವಯ ನಮ್ಮ ಅಭಿಪ್ರಾಯವು ಆ ಕಂಪನಿಗಳ ಲೆಕ್ಕಪರಿಶೋಧಕರ ಸಂಬಂಧಪಟ್ಟ ವರದಿಗಳ ಮೇಲೆ ಆಧಾರಿತವಾಗಿರುವುದು.

ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ :000312ಎಸ್
ಸಹಿ/-
(ಪಿ.ಎಲ್. ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ :209054
ಯುಡಿಐಎನ್:24209054ಬಿಜೆಜೆಡ್‌ವೈಜೆಡ್‌ಕೆ8098
ಸ್ಥಳ: ಬೆಂಗಳೂರು
ದಿನಾಂಕ:30.12.2023

2023ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇದರ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ 2013ರ ಕಂಪನಿಗಳ ಕಾಯ್ದೆಯ ಪ್ರಕರಣ 129(4) ಓದಿಕೊಂಡಂತೆ ಪ್ರಕರಣ 143(6)(ಬಿ) ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆಗಳು

2013ರ ಕಂಪನಿಗಳ ಕಾಯ್ದೆಯಡಿಯಲ್ಲಿ (ಕಾಯ್ದೆ) ನಿಗದಿಪಡಿಸಿರುವ ಹಣಕಾಸು ವರದಿ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2023ಕ್ಕೆ** ಕೊನೆಗೊಂಡ ವರ್ಷಕ್ಕೆ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪ್ರಕರಣ 129(4) ಓದಿಕೊಂಡಂತೆ ಪ್ರಕರಣ 139(5)ರನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಂದ ನೇಮಕಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಬಗೆಗಿನ ಗುಣಮಟ್ಟದ ಅನುಸಾರ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ, ಕಾಯ್ದೆಯ 129(4) ಓದಿಕೊಂಡಂತೆ ಪ್ರಕರಣ 143ರ ಅನ್ವಯ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೊಣೆಯಾಗಿರುತ್ತಾರೆ. **ದಿನಾಂಕ 30ನೇ ಡಿಸೆಂಬರ್ 2023 ರ** ಅವರ ಪರಿಷ್ಕೃತ ಲೆಕ್ಕಪರಿಶೋಧನೆ ವರದಿಯಂತೆ ಅವರಿಂದ ಇದನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ. ಇದು **ದಿನಾಂಕ 29ನೇ ನವೆಂಬರ್ 2023 ರ** ಅವರ ಮೊದಲಿನ ಲೆಕ್ಕಪರಿಶೋಧನೆ ವರದಿಯನ್ನು ರದ್ದುಗೊಳಿಸಿರುವುದು.

ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಪರವಾಗಿ, ನಾನು **31ನೇ ಮಾರ್ಚ್ 2023ಕ್ಕೆ** ಕೊನೆಗೊಂಡ ವರ್ಷದ ''**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು**''ನ ಕ್ರೋಡೀಕೃತ ಹಣಕಾಸು ಹೇಳಿಕೆಗಳನ್ನು ಕಾಯ್ದೆಯ 129(4) ಓದಿಕೊಂಡಂತೆ ಕಾಯ್ದೆಯ ಸೆಕ್ಷನ್ 143(6)(ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇನೆ. ನಾವು **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು, ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಮತ್ತು ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು** ಇವುಗಳ ಹಣಕಾಸಿನ ಹೇಳಿಕೆಗಳ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇವೆ. ಆದರೆ **ಫುಡ್ ಕರ್ನಾಟಕ ಲಿಮಿಟೆಡ್, ಬೆಂಗಳೂರು** ಇವರ **31ನೇ ಮಾರ್ಚ್ 2023**ಕ್ಕೆ ಕೊನೆಗೊಂಡ ವರ್ಷದ ಪೂರಕ ಲೆಕ್ಕ ಪರಿಶೋಧನೆ ಮಾಡಿರುವುದಿಲ್ಲ. ಈ ಪೂರಕ ಲೆಕ್ಕ ಪರಿಶೋಧನೆಯನ್ನು ಶಾಸನಬದ್ಧ ಲೆಕ್ಕ ಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಬಳಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕ ಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿ ವಿಚಾರಣೆಗಳಿಗೆ ಮತ್ತು ಕೆಲವು ಆಯ್ದ ಲೆಕ್ಕ ಪತ್ರಗಳ ದಾಖಲೆಗಳ ಪರಿಶೀಲನೆಗೆ ಸೀಮಿತವಾಗಿರುತ್ತದೆ.

ಪೂರಕ ಲೆಕ್ಕಪರಿಶೋಧನೆ ಅವಧಿಯಲ್ಲಿ ಎತ್ತಿದ ನನ್ನ ಲೆಕ್ಕಪರಿಶೋಧನೆ ಪ್ರಶ್ನಾವಳಿಗಳಿಗೆ ಪರಿಣಾಮ ನೀಡಲು **ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಯಲ್ಲಿ ಪರಿಷ್ಕರಣೆ ಮಾಡಿರುವುದರಿಂದ** ಕಾಯ್ದೆಯ ಪ್ರಕರಣ 129(4) ಓದಿಕೊಂಡಂತೆ ಕಾಯ್ದೆಯ ಪ್ರಕರಣ 143(6)(ಬಿ) ಅನ್ವಯ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ಪೂರಕವಾದ ಲೆಕ್ಕ ಪರಿಶೋಧನೆ ವರದಿ ಬಗ್ಗೆ ಯಾವುದೇ ಟೀಕೆ ಟಿಪ್ಪಣಿ ಮಾಡುವುದಿಲ್ಲ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ
ಪರವಾಗಿ ಮತ್ತು ಹೆಸರಿನಲ್ಲಿ
ಸಹಿ/-
(ವಿಮಲೇಂದ್ರ ಎ.ಪಟ್ಟರ್ಧನ್)
ಕಾರ್ಯನಿರತ ಅಕೌಂಟೆಂಟ್ ಜನರಲ್ (ಆಡಿಟ್-II)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ : 12.01.2024

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

31ನೇ ಮಾರ್ಚ್ 2023ರಂದು ಇದ್ದಂತೆ ಕ್ರೋಡೀಕೃತ ಸ್ಥಿತಿ ವಿವರಣಾ ಪಟ್ಟಿ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
i.	**ಆಸ್ತಿಗಳು**			
	ಚಾಲ್ತಿಯೇತರ ಆಸ್ತಿಗಳು			
	(ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ	2	5,493.94	4,755.67
	(ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ	3	592.83	397.04
	(ಸಿ) ಹೂಡಿಕೆ ಸ್ವತ್ತು	4	3,847.40	3,965.64
	(ಡಿ) ಇತರೆ ಅಗೋಚರ ಆಸ್ತಿಗಳು	5	20.70	26.86
	(ಇ) ಬಳಕೆ ಹಕ್ಕಿನ ಆಸ್ತಿಗಳು	5ಎ	860.28	1,028.26
	(ಎಫ್) ಹಣಕಾಸಿನ ಆಸ್ತಿಗಳು			
	(i) ಹೂಡಿಕೆಗಳು	6	2,404.92	2,423.94
	(ii) ಇತರೆ ಹಣಕಾಸಿನ ಆಸ್ತಿಗಳು	7	16,594.17	12,441.71
	(iii) ಚಾಲ್ತಿಯೇತರ ಬ್ಯಾಂಕ್ ಶಿಲ್ಕುಗಳು	12	76.80	1,487.72
	(ಜಿ) ಮುಂದೂಡಿದ ತೆರಿಗೆ ಆಸ್ತಿಗಳು (ನಿವ್ವಳ)	30	2,800.89	2,200.96
	(ಎಚ್) ಇತರೆ ಚಾಲ್ತಿಯೇತರ ಆಸ್ತಿಗಳು	8	86.51	1,159.31
	ಒಟ್ಟು ಚಾಲ್ತಿಯೇತರ ಆಸ್ತಿಗಳು		**32,778.44**	**29,887.11**
	ಚಾಲ್ತಿ ಆಸ್ತಿಗಳು			
	(ಎ) ತಪಶೀಲುಗಳು	9	15,844.24	14,655.37
	(ಬಿ) ಹಣಕಾಸಿನ ಆಸ್ತಿಗಳು			
	(i) ವ್ಯಾಪಾರದಿಂದ ಬರಬೇಕಾಗಿರುವುದು	10	19,312.72	16,845.67
	(ii) ನಗದು ಮತ್ತು ನಗದು ಸಮಾನಗಳು	11	10,174.77	17,853.77
	(iii) ಮೇಲಿನ (iii) ಹೊರತಾಗಿ ಬ್ಯಾಂಕ್ ಶಿಲ್ಕುಗಳು	12	35,751.60	21,251.67
	(iv) ಇತರೆ ಹಣಕಾಸಿನ ಆಸ್ತಿಗಳು	7	14,292.61	10,928.49
	(ಸಿ) ಇತರೆ ಚಾಲ್ತಿ ಆಸ್ತಿಗಳು	8	12,327.28	7,635.31
	ಮಾರಾಟಕ್ಕೆ ಇಟ್ಟಿರುವ ಆಸ್ತಿಗಳು	32	414.73	430.02
	(ಡಿ) ಚಾಲ್ತಿ ತೆರಿಗೆ ಆಸ್ತಿ (ನಿವ್ವಳ)	8ಎ	468.55	2,174.26
	ಒಟ್ಟು ಚಾಲ್ತಿ ಆಸ್ತಿಗಳು		**108,586.51**	**91,774.56**
	ಒಟ್ಟು ಆಸ್ತಿಗಳು		**141,364.95**	**121,661.67**

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
ii	**ಈಕ್ವಿಟಿ ಮತ್ತು ಹೊಣೆಗಾರಿಕೆಗಳು**			
	ಈಕ್ವಿಟಿ			
	(ಎ) ಈಕ್ವಿಟಿ ಷೇರು ಬಂಡವಾಳ	13	4,273.48	4,273.48
	(ಬಿ) ಇತರೆ ಈಕ್ವಿಟಿ	14	71,060.40	63,821.97
	(ಸಿ) ಅನಿಯಂತ್ರಿತ ಬಡ್ಡಿ		(37.38)	(37.38)
	ಒಟ್ಟು ಈಕ್ವಿಟಿ		**75,296.50**	**68,058.07**
	ಹೊಣೆಗಾರಿಕೆಗಳು			
	ಚಾಲ್ತಿಯೇತರ ಹೊಣೆಗಾರಿಕೆಗಳು			
	(ಎ) ಹಣಕಾಸಿನ ಹೊಣೆಗಾರಿಕೆಗಳು			
	(i) ಸಾಲಗಳು	15	175.00	174.55
	(ii) ಇತರೆ ಹಣಕಾಸಿನ ಹೊಣೆಗಾರಿಕೆಗಳು	16	18,469.86	10,305.69
	(iii) ಗುತ್ತಿಗೆ ಹೊಣೆಗಾರಿಕೆಗಳು		342.75	462.31
	(ಬಿ) ವ್ಯವಸ್ಥೆಗಳು	17	1,643.02	1,542.14
	(ಸಿ) ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳು	18	36.72	36.72
	ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು		**20,667.35**	**12,521.41**
	ಚಾಲ್ತಿ ಹೊಣೆಗಾರಿಕೆಗಳು			
	(ಎ) ಹಣಕಾಸು ಹೊಣೆಗಾರಿಕೆಗಳು			
	(i) ವ್ಯಾಪಾರ ಸಂಬಂಧ ಪಾವತಿ ಮಾಡಬೇಕಾಗಿರುವುದು	19		
	(ಎ) ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಒಟ್ಟು ಬಾಕಿಯಿರುವ ಮೊತ್ತ		2,694.04	547.20
	(ಬಿ) ಮೇಲಿನ (I) (ಎ) ಹೊರತಾಗಿ ಸಾಲಗಾರರ ಒಟ್ಟು ಬಾಕಿಯಿರುವ ಮೊತ್ತ		27,976.15	20,146.94
	(ii) ಇತರೆ ಹಣಕಾಸು ಹೊಣೆಗಾರಿಕೆಗಳು	16	9,924.10	17,601.67
	(iii) ಗುತ್ತಿಗೆ ಹೊಣೆಗಾರಿಕೆಗಳು	16	382.77	619.57
	(ಬಿ) ಇತರೆ ಚಾಲ್ತಿ ಹೊಣೆಗಾರಿಕೆಗಳು	18	4,163.81	1,750.79
	(ಸಿ) ವ್ಯವಸ್ಥೆಗಳು	17	260.23	416.01
	ಒಟ್ಟು ಚಾಲ್ತಿ ಹೊಣೆಗಾರಿಕೆಗಳು		**45,401.10**	**41,082.19**
	ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು		**141,364.95**	**121,661.67**

ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು
ಮೇಲೆ ಉಲ್ಲೇಖಿಸಿರುವ ಒಡಗೂಡಿದ ಟಿಪ್ಪಣಿಗಳು ಹಣಕಾಸು ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುತ್ತದೆ.

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
ಎಂ.ಬಿ.ಪಾಟೀಲ
ಅಧ್ಯಕ್ಷರು
ಡಿನ್ ಸಂಖ್ಯೆ :09379177

ಸಹಿ/-
ಎ.ಎಂ. ಚಂದ್ರಪ್ಪ
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
ಮನೋಜ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
ಶ್ರೀದೇವಿ ಬಿ.ಎನ್
ಕಂಪನಿ ಕಾರ್ಯದರ್ಶಿ

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಕ್ರೋಡೀಕೃತ ಲಾಭ ಮತ್ತು ನಷ್ಟದ ವಿವರಣಾ ಪಟ್ಟಿ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
	ಮುಂದುವರೆಯುತ್ತಿರುವ ಕಾರ್ಯಾಚರಣೆಗಳು			
	ಕಾರ್ಯಾಚರಣೆಗಳಿಂದ ಬಂದ ಆದಾಯ	20	340,389.17	296,037.34
	ಇತರೆ ಆದಾಯ	21	3,466.51	2,348.05
	ಒಟ್ಟು ಆದಾಯ		**343,855.68**	**298,385.39**
	ಖರ್ಚುಗಳು			
	ಬಳಸಿರುವ ಸಾಮಗ್ರಿಗಳ ಬೆಲೆ	22	1,742.55	1,359.00
	ವ್ಯಾಪಾರದ ಸರಕಿನ ಖರೀದಿ	23	265,845.07	247,767.71
	ಸೇವೆಗಳ ವೆಚ್ಚ	24	40,344.44	20,217.12
	ಸಿದ್ಧಪಡಿಸಿದ ಸರಕುಗಳ ಮತ್ತು ವ್ಯಾಪಾರಿ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು	25	(1,100.42)	(1,888.39)
	ನೌಕರರ ಸೌಲಭ್ಯ ವೆಚ್ಚಗಳು	26	2,408.35	2,515.53
	ಹಣಕಾಸಿನ ವೆಚ್ಚಗಳು	27	179.99	162.14
	ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು	28	1,904.75	1,795.86
	ಇತರೆ ಖರ್ಚುಗಳು	29	21,325.73	19,599.73
	ಒಟ್ಟು ಖರ್ಚುಗಳು		332,650.46	291,528.70
	ಅಸಾಧಾರಣ ಬಾಬ್ತುಗಳ ಮುನ್ನ ಲಾಭ, ಹೂಡಿಕೆಗಳ ನಿವ್ವಳ ಲಾಭ/(ನಷ್ಟ)ದ ಪಾಲು ಈಕ್ವಿಟಿ ವಿಧಾನ ಬಳಸಿ ಲೆಕ್ಕ ಮಾಡಿರುವುದು ಮತ್ತು ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಬಂದ ಆದಾಯ		11,205.23	6,856.69
	ಅಸಾಧಾರಣ ಐಟಂಗಳು	41		3,460.54
	ಈಕ್ವಿಟಿ ವಿಧಾನ ಬಳಸಿ ಲೆಕ್ಕ ಮಾಡಿರುವ ಸಹವರ್ತಿ ಕಂಪನಿಗಳ ನಿವ್ವಳ ಲಾಭ/(ನಷ್ಟ)ದ ಗ್ರೂಪ್‌ನ ಪಾಲು		(14.28)	(12.32)
	ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಂದ ತೆರಿಗೆಗೆ ಮುನ್ನ ಲಾಭ		**11,190.93**	**10,304.91**
	ತೆರಿಗೆ ಖರ್ಚುಗಳು	30		
	(1) ಚಾಲ್ತಿ ತೆರಿಗೆ		3,335.76	2,620.98
	(2) ಮುಂದೂಡಿದ ತೆರಿಗೆ		(608.09)	(514.94)
	(3) ಹಿಂದಿನ ಅವಧಿಗಳಿಗೆ ಸಂಬಂಧಿಸಿದಂತೆ ತೆರಿಗೆಗೆ ಹೊಂದಾಣಿಕೆ		35.28	13.26
	ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಬಂದ ವರ್ಷದ ಲಾಭ		**8,427.97**	**8,185.61**
	ಸ್ಥಗಿತವಾದ ಕಾರ್ಯಾಚರಣೆಗಳು	31		
	ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ ವರ್ಷದ ತೆರಿಗೆ ಪಾವತಿಗೆ ಮುನ್ನಿನ ಲಾಭ /(ನಷ್ಟ)		(2.82)	(0.90)
	ಸ್ಥಗಿತಗೊಂಡ ಕಾರ್ಯಾಚರಣೆಗಳ ತೆರಿಗೆ ಆದಾಯ /(ಖರ್ಚು)		–	–
	ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ವರ್ಷದಲ್ಲಿ ಆದ ಲಾಭ/(ನಷ್ಟ)		**(2.82)**	**(0.90)**
	ವರ್ಷದ ಲಾಭ /(ನಷ್ಟ)		**8,425.16**	**8,184.71**

ಕ್ರ. ಸಂ.	ವಿವರ	ಟಿಪ್ಪಣಿ ಸಂಖ್ಯೆ	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
	ಇತರೆ ಸಮಗ್ರ ಆದಾಯ	33		
	ಎ) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳು			
	ಇತರೆ ಸಮಗ್ರ ಆದಾಯದ ಮೂಲಕ ಈಕ್ವಿಟಿ ಸಾಧನಗಳ ಮೇಲೆ ನಿವ್ವಳ(ನಷ್ಟ) /ಲಾಭ		(19.00)	(384.81)
	ಆದಾಯ ತೆರಿಗೆ ಪರಿಣಾಮ		**4.78**	
	ನಿರೂಪಿತ ಸೌಲಭ್ಯ ಯೋಜನೆಗಳ ಮೇಲಿನ ಮರುಮಾಪನ ಮಾಡಿದ ಲಾಭಗಳು/(ನಷ್ಟಗಳು)		2.50	(109.62)
	ಆದಾಯ ತೆರಿಗೆ ಪರಿಣಾಮ		**(0.45)**	**(8.24)**
	ವರ್ಷದ ಇತರೆ ಸಮಗ್ರ ಆದಾಯ ತೆರಿಗೆಯ ನಿವ್ವಳ		**(12.17)**	**(502.67)**
	ವರ್ಷದ ಒಟ್ಟು ಸಮಗ್ರ ಆದಾಯ		**8,412.99**	**7,682.04**
	ಕೆಳಕಂಡವುಗಳಿಗೆ ಅನ್ವಯಿಸಬಹುದಾದ ನಿವ್ವಳ ಲಾಭ:			
	ಮಾತೃಸಂಸ್ಥೆಯ ಈಕ್ವಿಟಿ ಹೊಂದಿರುವವರು		8,424.49	8,184.58
	ನಿಯಂತ್ರಣರಹಿತ ಬಡ್ಡಿ		0.67	0.13
	ಒಟ್ಟು ಇತರೆ ಸಮಗ್ರ ಆದಾಯ/ನಷ್ಟ (ತೆರಿಗೆಯ ನಿವ್ವಳ)			
	ಕೆಳಕಂಡವುಗಳಿಗೆ ಅನ್ವಯಿಸಬಹುದಾದುದು: ನಿವ್ವಳ ಲಾಭ:		-12.17	-502.67
	ಮಾತೃಸಂಸ್ಥೆಯ ಈಕ್ವಿಟಿ ಹೊಂದಿರುವವರು		-0.00	-
	ನಿಯಂತ್ರಣರಹಿತ ಬಡ್ಡಿ		8,412.32	7,681.91
	ಒಟ್ಟು ಸಮಗ್ರ ಆದಾಯ/ನಷ್ಟ (ತೆರಿಗೆಯ ನಿವ್ವಳ)		0.67	0.13
	ಕೆಳಕಂಡವುಗಳಿಗೆ ಅನ್ವಯ			
	ಮಾತೃಸಂಸ್ಥೆಯ ಈಕ್ವಿಟಿದಾರರು		8,412.32	7,681.91
	ನಿಯಂತ್ರಣ ರಹಿತ ಬಡ್ಡಿ		0.67	0.13
	ನಿರಂತರ ಕಾರ್ಯಾಚರಣೆಯ ಷೇರು ಒಂದರ ಗಳಿಕೆಗಳು			
	ಮೂಲ (ರೂ)	34	197.22	191.54
	ದ್ರವೀಕೃತ (ರೂ)		197.22	191.54
	ಸ್ಥಗಿತಗೊಂಡ ಕಾರ್ಯಾಚರಣೆ ಬಗ್ಗೆ ಷೇರು ಒಂದರ ಗಳಿಕೆ			
	ಮೂಲ (ರೂ)	34	(0.07)	(0.02)
	ದ್ರವೀಕೃತ (ರೂ)		(0.07)	(0.02)
	ಮುಂದುವರಿದ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ಷೇರು ಒಂದರ ಗಳಿಕೆಗಳು			
	ಮೂಲ (ರೂ)	34	197.15	191.52
	ದ್ರವೀಕೃತ (ರೂ)		197.15	191.52

ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು 1.2

ಒಡಗೂಡಿದ ಟಿಪ್ಪಣಿಗಳು ಹಣಕಾಸು ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುತ್ತದೆ.

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/-
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-	ಸಹಿ/-	
ಎಂ.ಬಿ.ಪಾಟೀಲ	ಮನೋಜ್‌ಕುಮಾರ್	
ಅಧ್ಯಕ್ಷರು	ವ್ಯವಸ್ಥಾಪಕ ನಿರ್ದೇಶಕರು	
ಡಿನ್ ಸಂಖ್ಯೆ :09379177	ಡಿನ್ ಸಂಖ್ಯೆ :09379177	
ಸಹಿ/-	ಸಹಿ/-	
ಎ.ಎಂ. ಚಂದ್ರಪ್ಪ	ಶ್ರೀದೇವಿ ಬಿ.ಎನ್	
ಮುಖ್ಯ ಹಣಕಾಸು ಅಧಿಕಾರಿ	ಕಂಪನಿ ಕಾರ್ಯದರ್ಶಿ	

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಕ್ರೋಡೀಕೃತ ನಗದು ಹರಿವಿನ ವಿವರ
(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುತ್ತವೆ)

ವಿವರಗಳು	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆ		
ಲಾಭ ಮತ್ತು ನಷ್ಟದ ಹೇಳಿಕೆ ಅನ್ವಯ ತೆರಿಗೆಗೆ ಮತ್ತು ಅಸಾಧಾರಣ ಐಟಂಗಳ ಮುನ್ನ ಲಾಭ	11,188.12	10,316.33
ಇವುಗಳಿಗೆ ಹೊಂದಾಣಿಕೆ:		
ಲಾಭಾಂಶ	(6.11)	(7.37)
ಮುಂದೆ ಅಗತ್ಯವಿಲ್ಲದ ಸಂದೇಹಾಸ್ಪದ ಸಾಲಗಳಿಗೆ ವ್ಯವಸ್ಥೆ	(131.13)	(15.32)
ಬಡ್ಡಿ ಆದಾಯ	(1,918.85)	(1,395.90)
ಸ್ವತ್ತು , ಸ್ಥಾವರ ಮತ್ತು ಉಪಕರಣ ಮಾರಾಟದಿಂದ ಬಂದ ಲಾಭ	(6.11)	(1.67)
ಸ್ವತ್ತುಗಳ ಹಾನಿಯಿಂದ ಉಂಟಾದ ನಷ್ಟ	–	–
ಬಾಡಿಗೆ	(851.04)	(662.46)
ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು	1,904.75	1,795.86
ಹಣಕಾಸಿನ ವೆಚ್ಚಗಳು	179.99	162.14
ಸಂದೇಹಾಸ್ಪದವಾದ ಸಾಲಗಳು ಮತ್ತು ಮುಂಗಡಗಳಿಗೆ ಅವಕಾಶಗಳು	430.33	1,840.33
ಡಿಜಿಟಲ್ ಫ್ಲೆಕ್ಸ್ ಪ್ರಿಂಟಿಂಗ್ ಮೆಷಿನ್‌ನ ದುರ್ಬಲ	–	2.55
ಇತರೆ ಹಣಕಾಸಿನ ಆಸ್ತಿಗಳ ಮೌಲ್ಯದಲ್ಲಿನ ದುರ್ಬಲತೆ ನಷ್ಟ	6.83	44.13
ಪ್ರತಿಪಾದಿತ ಸೌಲಭ್ಯ ಯೋಜನೆಯ ಮರು ಮಾಪನ ಲಾಭ (ನಷ್ಟಗಳು)	2.05	(101.38)
ಜಂಟಿ ವ್ಯವಸ್ಥೆಗಳಿಂದ ಬಂದ ಲಾಭದ ಪಾಲು	–	–
ಹಿಂದಿನ ವರ್ಷಗಳ ತೆರಿಗೆಯ ಹೆಚ್ಚಳ/(ಕೊರತೆ) ವ್ಯವಸ್ಥೆ	–	(93.87)
ಅಸಾಧಾರಣ ಐಟಂಗಳು	–	3,460.54
ಈಕ್ವಿಟಿ ವಿಧಾನ ಬಳಸಲು ಲೆಕ್ಕಕ್ಕೆ ತೆಗೆದುಕೊಂಡಿರುವ ಸಹವರ್ತಿ ಕಂಪನಿಗಳ ನಿವ್ವಳ ಲಾಭ/(ನಷ್ಟದಲ್ಲಿ) ದಲ್ಲಿ ಗ್ರೂಪ್‌ನ ಪಾಲು	14.28	–
ದುಡಿಮೆ ಬಂಡವಾಳ ಬದಲಾವಣೆಗೆ ಮುನ್ನ ಕಾರ್ಯಾಚರಣೆ ಲಾಭ	**10,813.11**	**15,343.91**
ದುಡಿಮೆ ಬಂಡವಾಳದಲ್ಲಿನ ಬದಲಾವಣೆಗಳು		
ಇವುಗಳಗಳಲ್ಲಿನ ಹೆಚ್ಚಳ/(ಇಳಿಕೆ) ಹೊಂದಾಣಿಕೆಗಳು		
ವ್ಯಾಪಾರದಿಂದ ಬರಬೇಕಾಗಿರುವುದು	(2,598.18)	(5,026.74)
ಸರಕಿನ ತಪಶೀಲು	(1,188.87)	(1,675.70)
ಇತರೆ ಆಸ್ತಿಗಳು	(3,619.18)	(4,439.09)
ಇತರೆ ಹಣಕಾಸಿನ ಆಸ್ತಿಗಳು	(10,549.05)	(3,817.78)
ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು	9,976.06	5,971.55
ಇತರೆ ಹೊಣೆಗಾರಿಕೆಗಳು	2,413.02	(6,163.78)
ಇತರೆ ಹಣಕಾಸಿನ ಹೊಣೆಗಾರಿಕೆಗಳು	486.61	5,232.12
ವ್ಯವಸ್ಥೆಗಳು	(54.90)	31.34
ಕಾರ್ಯಾಚರಣೆಗಳಿಂದ ಉತ್ಪತ್ತಿಯಾಗಿರುವ ನಗದು	**5,678.62**	**5,455.83**
ಪಾವತಿಸಿದ ತೆರಿಗೆ, ನಿವ್ವಳ	(3,249.39)	(3,187.97)
ಕಾರ್ಯಾಚರಣೆ ಚಟುವಟಿಕೆಗಳಿಂದ ಉತ್ಪತ್ತಿಯಾಗಿರುವ ನಿವ್ವಳ ನಗದು	**2,429.22**	**2,267.86**

ವಿವರಗಳು	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
ಬಿ. ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು		
ಸ್ವತ್ತು , ಸ್ಥಾವರ ಮತ್ತು ಉಪಕರಣ ಖರೀದಿ (ಬಂಡವಾಳ ಮುಂಗಡಗಳು ಮತ್ತು ಬಳಕೆ ಹಕ್ಕಿನ ಆಸ್ತಿಗಳು ಸೇರಿದಂತೆ)	2,265.93	(1,191.85)
ಸರ್ಕಾರದ ಅನುದಾನ		
ಜಂಟಿ ವ್ಯವಸ್ಥೆಗಳಿಂದ ಬಂದ ಲಾಭದ ಪಾಲು		
ನಗದು ಮತ್ತು ನಗದು ಸಮಾನತೆಗಳು ಹೊರತಾದ ಬ್ಯಾಂಕ್ ಶಿಲ್ಕುಗಳ ಚಲನೆ	(13,089.01)	4,374.80
ಬಾಡಿಗೆ	851.04	451.64
ಪಡೆದಿರುವ ಬಡ್ಡಿ	1,518.14	1,320.28
ಪಡೆದಿರುವ ಲಾಭಾಂಶ	6.11	7.37
ಹೂಡಿಕೆ ಚಟುವಟಿಕೆಗಳಲ್ಲಿ (ಬಳಸಿರುವ) /ಉತ್ಪತ್ತಿಯಾಗಿರುವ ನಿವ್ವಳ ನಗದು	**(8,447.79)**	**4,962.24**
ಸಿ.ಹಣಕಾಸಿನ ಚಟುವಟಿಕೆಗಳಿಂದ ಆದ ನಗದು ಹರಿವು		
ಪಾವತಿಸಿದ ಹಣಕಾಸಿನ ವೆಚ್ಚ	75.83	(39.19)
ಪಾವತಿ ಮಾಡಿದ ಲಾಭಾಂಶ	(1,105.19)	(320.51)
ಪಾವತಿ ಮಾಡಿದ ಗುತ್ತಿಗೆ ಬಾಧ್ಯತೆ	(631.08)	(794.72)
ತೆರಿಗೆ ಪರಿಣಾಮ		(7.34)
ಹಣಕಾಸಿನ ಚಟುವಟಿಕೆಗಳಲ್ಲಿ ಬಳಸಿದ ನಿವ್ವಳ ನಗದು	**(1,660.44)**	**(1,161.76)**
ನಗದು ಮತ್ತು ನಗದು ಸಮಾನತೆಗಳಲ್ಲಿ ನಿವ್ವಳ ಬದಲಾವಣೆ	**(7,679.00)**	**6,068.34**
ವರ್ಷದ ಆರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು	17,853.77	11,785.43
ವರ್ಷದ ಕೊನೆಯಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು	10,174.77	17,853.77

ಹಣಕಾಸಿನ ಚಟುವಟಿಕೆಗಳಿಂದ ಉಂಟಾದ ಬಾಧ್ಯತೆಗಳಲ್ಲಿನ ನಗದು ಮತ್ತು ನಗದೇತರ ಬದಲಾವಣೆಗಳು

ವಿವರಗಳು	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
ಸಾಲಗಳು		
ವರ್ಷದ ಆರಂಭದಲ್ಲಿ	174.56	174.56
ನಗದು ಹರಿವು	–	–
ನಗದೇತರ ಬದಲಾವಣೆಗಳು	–	–
ವರ್ಷದ ಕೊನೆಯಲ್ಲಿ	**174.56**	**174.56**
ಗುತ್ತಿಗೆ ಹೊಣೆಗಾರಿಕೆ:		
ವರ್ಷದ ಆರಂಭದಲ್ಲಿ	1,081.88	1,397.26
ನಗದು ಹರಿವು	(631.08)	(794.72)
ನಗದೇತರ ಬದಲಾವಣೆಗಳು	274.73	479.34
ವರ್ಷದ ಕೊನೆಯಲ್ಲಿ	**725.52**	**1,081.88**
ಇದರೊಡಗಿನ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವವು 1.2		

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/–
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/–
ಎಂ.ಬಿ.ಪಾಟೀಲ
ಅಧ್ಯಕ್ಷರು
ಡಿನ್ ಸಂಖ್ಯೆ :09379177

ಸಹಿ/–
ಮನೋಜ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/–
ಎ.ಎಂ. ಚಂದ್ರಪ್ಪ
ಮುಖ್ಯ ಹಣಕಾಸು ಅಧಿಕಾರಿ

ಸಹಿ/–
ಶ್ರೀದೇವಿ ಬಿ.ಎನ್
ಕಂಪನಿ ಕಾರ್ಯದರ್ಶಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿಯ ಸಾರಾಂಶ
ಈಕ್ವಿಟಿಯಲ್ಲಿನ ಬದಲಾವಣೆಗಳ ಕ್ರೋಡೀಕೃತ ಹೇಳಿಕೆ
(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

ಎ.ಈಕ್ವಿಟಿ ಷೇರು ಬಂಡವಾಳ	
ವಿವರಗಳು	ಮೊತ್ತ
01.04.2021 ಅವಧಿಯ ಆರಂಭದಲ್ಲಿನ ಶಿಲ್ಕುಗಳು	**4,273.48**
2021-22ರ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು	
31.03.2022 ರಂದು ಇದ್ದಂತೆ ಶಿಲ್ಕು	**4,273.48**
2022-23ರ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು	
31.03.2023 ರಂದು ಇದ್ದಂತೆ ಶಿಲ್ಕು	**4,273.48**

ಬಿ. ಇತರೆ ಈಕ್ವಿಟಿ

ವಿವರಗಳು	ಮೀಸಲುಗಳು ಮತ್ತು ಹೆಚ್ಚುವರಿ ನಿಧಿ					ಇತರೆ ಸಮಗ್ರ ಆದಾಯ		ಒಟ್ಟು
	ಇತರೆ ಮೀಸಲುಗಳು ಸಾಮಾನ್ಯ ಮೀಸಲುಗಳು	ಉಳಿಸಿಕೊಂಡಿರುವ ಗಳಿಕೆಗಳು	ಬಂಡವಾಳ ಮೀಸಲು ನಿಧಿ	ನಿಯಂತ್ರಣ ರಹಿತ ಬಡ್ಡಿ	ಹಂಚಿಕೆ ಬಾಕಿಯಿರುವ ಷೇರು ಅರ್ಜಿ ಹಣ	ಈಕ್ವಿಟಿ ಸಾಧನಗಳ ನ್ಯಾಯೋಚಿತ ಮೌಲ್ಯ ಮಾಪನ	ನಿರೂಪಿತ ಸೌಲಭ್ಯ ಯೋಜನೆಗಳ ಮರು ಮಾಪನ	
31.04.2021ರಂದು ಇದ್ದಂತೆ ಶಿಲ್ಕು	23,021.54	33,621.97	77.98	(37.51)	345.74	49.84	(665.90)	56,413.66
ವರ್ಷದ ಲಾಭ	–	8,197.03	–	–	–	–	–	8,197.03
ಉಳಿಸಿಕೊಂಡಿರುವ ಗಳಿಗೆಗಳಿಂದ ವರ್ಗಾವಣೆ★	1,016.48	(1,016.48)	–	–	–	–	–	–
ಲಾಭದ ಪಾಲು–ನಿಯಂತ್ರಣ ರಹಿತ ಬಡ್ಡಿ	–	0.13	–	0.13	–	–	–	0.26
ಪಾವತಿಸಿದ ಲಾಭಾಂಶ	–	(320.51)	–	–	–	–	–	(320.51)
ಲಾಭಾಂಶ ವಿತರಣೆ ತೆರಿಗೆ	–	–	–	–	–	–	–	–
ಐಎನ್ ಡಿ ಎಎಸ್ ಹೊಂದಾಣಿಕೆಗಳು						(384.81)	(101.38)	(486.19)
2018–2019ರ ಅವಧಿಯಲ್ಲಿ ಮಾಡಿದ್ದ ಹೆಚ್ಚುವರಿ ಆದಾಯ ತೆರಿಗೆ ವ್ಯವಸ್ಥೆಯ ಹಿಮ್ಮುಖಗೊಳಿಸಿರುವಿಕೆ	–	–	–	–	–	–	–	–
ನಷ್ಟದ ಪಾಲು–ಫುಡ್ ಕರ್ನಾಟಕ	–	(12.32)	–	–	–	–	–	(12.32)
ತೆರಿಗೆ ಪರಿಣಾಮ	–	7.34	–	–	–	–	–	(7.34)
ವರದಿಗಾರಿಕೆ ಅವಧಿ 31.03.2022ರ ಕೊನೆಯಲ್ಲಿದ್ದ ಶಿಲ್ಕು	**24,038.02**	**40,462.48**	**77.98**	**(37.38)**	**345.74**	**(334.97)**	**(767.28)**	**63,784.60**
ವರ್ಷದ ಲಾಭ	–	8,439.44	–	–	–	–	–	8,439.44
ಉಳಿಸಿಕೊಂಡಿರುವ ಗಳಿಕೆಗಳಿಂದ ವರ್ಗಾವಣೆ★	1,128.21	(1,128.21)	–	–	–	–	–	–
ಒಸಿಐ ಹೊಂದಾಣಿಕೆಗಳು	–	–	–	–	–	(14.22)	2.05	(12.17)
ಲಾಭದ ಪಾಲು–ನಿಯಂತ್ರಣರಹಿತ ಬಡ್ಡಿ	–	(0.00)		0.00	–	–	–	–
ಪಾವತಿಸಿದ ಲಾಭಾಂಶ	–	(1,105.19)	–	–	–	–	–	(1,105.19)
ಕೆಐಎಡಿಬಿ ಜಮೀನು	–	(69.41)	–	–	–	–	–	(69.41)
ಆದಾಯ ತೆರಿಗೆ ಮರುಪಾವತಿ	–	0.04	–	–	–	–	–	0.04
ನಷ್ಟದ ಪಾಲು–ಫುಡ್ ಕರ್ನಾಟಕ	–	(14.28)	–	–	–	–	–	(14.28)
ತೆರಿಗೆ ಪರಿಣಾಮ	–	(7.34)	–	–	–	–	–	(7.34)
ವರದಿಗಾರಿಕೆ ಅವಧಿ 31.03.2022ರ ಕೊನೆಯಲ್ಲಿದ್ದ ಶಿಲ್ಕು	**25,166.23**	**46,584.87**	**77.98**	**(37.38)**	**345.74**	**(349.19)**	**(765.23)**	**71,023.03**

★ ಉಳಿಸಿಕೊಂಡಿರುವ ಗಳಿಕೆಗಳಿಂದ ವರ್ಗಾವಣೆಯು ಚಿಟ್ ಫಂಡ್ ವಿಭಾಗದ ಒಟ್ಟಾರೆ ಲಾಭದ 10% ಅನ್ನು ಪ್ರತಿವರ್ಷ ಸಾಮಾನ್ಯ ಮೀಸಲು ನಿಧಿಗೆ ವರ್ಗಾವಣೆ ಮಾಡುವುದು ಸೇರಿರುವುದು.

ಸಮ ದಿನಾಂಕದ ನಮ್ಮ ವರದಿಯನುಸಾರ
ಬಿಎಸ್‌ಡಿ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 000312ಎಸ್
ಸಹಿ/–
(ಪಿ.ಎಲ್.ವೆಂಕಟಾದ್ರಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 209054
ಸ್ಥಳ : ಬೆಂಗಳೂರು
ದಿನಾಂಕ:29.11.2023

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ
ಸಹಿ/–
ಎಂ.ಬಿ.ಪಾಟೀಲ
ಅಧ್ಯಕ್ಷರು
ಡಿನ್ ಸಂಖ್ಯೆ :09379177
ಸಹಿ/–
ಎ.ಎಂ. ಚಂದ್ರಪ್ಪ
ಮುಖ್ಯ ಹಣಕಾಸು ಅಧಿಕಾರಿ

ಸಹಿ/–
ಮನೋಜ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177
ಸಹಿ/–
ಶ್ರೀದೇವಿ ಬಿ.ಎನ್
ಕಂಪನಿ ಕಾರ್ಯದರ್ಶಿ

MSIL

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
ಮಹತ್ತರ ಲೆಕ್ಕ ನಿರ್ವಹಣಾ ನೀತಿಗಳು ಮತ್ತು ಇತರ ವಿವರಣಾತ್ಮಕ ಮಾಹಿತಿಯ ಕ್ರೋಡೀಕೃತ ಸಾರಾಂಶ:

1. ಗ್ರೂಪ್‌ನ ಅವಲೋಕನ ಮತ್ತು ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳು

1.1 ಗ್ರೂಪ್‌ನ ಅವಲೋಕನ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ('ಕಂಪನಿ', 'ಎಂಎಸ್‌ಐಎಲ್') ಕರ್ನಾಟಕ ಸರ್ಕಾರದ ಒಂದು ಪ್ರಮುಖ ಉದ್ಯಮವಾಗಿರುವುದು. ಇದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳ ವ್ಯವಹಾರ ನಡೆಸುತ್ತಿರುವುದು. ಇದು ಒಂದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಪ್ರಾರಂಭವಾಗಿದೆ. ಕಂಪನಿಯ ನೋಂದಾಯಿತ ಕಚೇರಿಯು ಬೆಂಗಳೂರು, ಕರ್ನಾಟಕ, ಭಾರತದಲ್ಲಿ ಇದೆ. ಈ ಕಂಪನಿಯು ಪ್ರಾರಂಭವಾದ ಸಮಯದಿಂದ ಪ್ರಮುಖ ಮಾರಾಟ ಶಕ್ತಿಯಾಗಿ ರಾಷ್ಟ್ರಮಟ್ಟದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿದೆ. ಇದು ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ಜಾಲಬಂಧ ಹೊಂದಿರುವುದರ ಜೊತೆಗೆ, ದೇಶದಲ್ಲಿನ ಕೆಲವು ಪ್ರಮುಖ ಸ್ಥಳಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಾದ ವಿದೇಶಿ ಮದ್ಯದ ವ್ಯಾಪಾರ ಮತ್ತು ವ್ಯವಹಾರ, ಚಿಟ್ ಫಂಡ್‌ಗಳನ್ನು ನಡೆಸುವುದು, ಕಾಗದದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಮತ್ತು ಆಮದಾದ ಮರಳಿನ ವ್ಯಾಪಾರ, ಫಾರ್ಮಸ್ಯೂಟಿಕಲ್, ಕೈಗಾರಿಕೆ ಮತ್ತು ಗ್ರಾಹಕರ ಉತ್ಪನ್ನಗಳ ಮಾರಾಟ ವ್ಯವಹಾರವನ್ನು ನಡೆಸುತ್ತಿರುವುದು.

ಗ್ರೂಪ್ ಎರಡು ಸಹಾಯಕ ಕಂಪನಿಗಳು ಮತ್ತು ಒಂದು ಸಹವರ್ತಿ ಕಂಪನಿ ಹೊಂದಿರುವುದು:

ಹೆಸರು	ಸ್ಥಾಪನೆಯಾದ ವರ್ಷ	ಧಾರಕ%	ಸಂಬಂಧ
ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್	1972	100	ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ
ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್	1940	95.10	ಸಹಾಯಕ ಕಂಪನಿ
ಫುಡ್ ಕರ್ನಾಟಕ ಲಿಮಿಟೆಡ್	2003	50	ಸಹವರ್ತಿ ಕಂಪನಿ

ಸದರಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಗ್ರೂಪ್ ಅನ್ನು ಸಹಾಯಕ ಸಂಸ್ಥೆಗಳು ಸೇರಿದಂತೆ ಒಟ್ಟಾರೆಯಾಗಿ 'ಗ್ರೂಪ್' ಎಂಬುದಾಗಿ ಪ್ರಸ್ತಾಪಿಸಲಾಗಿದೆ.

1.2 ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಿಕೆಗೆ ಆಧಾರ:

(i) ಅನುಸರಣೆ ಹೇಳಿಕೆ :

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಮಾಡಿರುವ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ) ನಿಯಮಗಳು, 2015 ಓದಿಕೊಂಡಂತೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 133ರ ಅನ್ವಯ ಪ್ರಕಟಿಸಿರುವಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ (ಐಎನ್‌ಡಿ ಎಎಸ್) ಅನ್ವಯ ಕಂಪನಿಯ ಹಣಕಾಸಿನ ಹೇಳಿಕೆಗಳನ್ನು ಗ್ರೂಪ್ ಸಿದ್ಧಪಡಿಸಿದೆ. ನಿರೂಪಿತ ಅವಧಿಯಲ್ಲಿ ಗ್ರೂಪ್ ಲೆಕ್ಕನಿರ್ವಹಣೆ ನೀತಿಗಳನ್ನು ಏಕ ರೀತಿಯಲ್ಲಿ ಅನ್ವಯಿಸಿದೆ.

31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳನ್ನು ನಿರ್ದೇಶಕರ ಮಂಡಳಿಯು 29.11.2023ರಂದು ಅಧಿಕೃತಗೊಳಿಸಿದೆ ಮತ್ತು ನೀಡಲು ಅನುಮೋದಿಸಿದೆ.

(ii) ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಗೆ ಆಧಾರ:

ಕೆಳಕಂಡವುಗಳ ಹೊರತಾಗಿ, ಹಣಕಾಸಿನ ಹೇಳಿಕೆಗಳನ್ನು ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಐತಿಹಾಸಿಕ ವೆಚ್ಚದ ಅನ್ವಯ ಸಿದ್ಧಪಡಿಸಲಾಗಿದೆ:

ಎ) ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಕೆಲವು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳು

ಬಿ) ಅದರ ವಾಹಕ ಮೊತ್ತಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮತ್ತು ಮಾರಾಟ ಮಾಡುವ ಬೆಲೆ ಕಳೆದು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದ ವಿಲೇವಾರಿ ಮಾಡಲು ಇಟ್ಟಿರುವ ಆಸ್ತಿಗಳು

ಸಿ) ವಿಮಾಗಣನ ಮೌಲ್ಯ ಮಾಪನದ ಅನುಸಾರ ನೌಕರರ ನಿರೂಪಿತ ಸೌಲಭ್ಯ ಯೋಜನೆ

ಡಿ) ಐಎನ್‌ಡಿ ಎಎಸ್ 116 ಗುತ್ತಿಗೆಗಳ ಅಡಿಯಲ್ಲಿ ಗುತ್ತಿಗೆಗಳು ಎಂಬುದಾಗಿ ಪರಿಗಣಿಸಿರುವ ಮತ್ತು ಅಂದಾಜು ಮಾಡಲಾದ ಗುತ್ತಿಗೆ ಅವಧಿಯಲ್ಲಿ ಅಂತಹ ಹಕ್ಕುಗಳಿಗೆ ಅಂದಾಜು ಮಾಡಿದ ನಗದು ಹರಿಯುವಿಕೆಗಳ ನ್ಯಾಯೋಚಿತ ಮೌಲ್ಯದಲ್ಲಿ ಬಳಕೆ ಹಕ್ಕಿನ ಆಸ್ತಿಗಳನ್ನು ಬಂಡವಾಳೀಕರಣಗೊಳಿಸಿರುವ ಕೆಲವು ವ್ಯವಸ್ಥೆಗಳು. ಉಳಿಸಿಕೊಂಡಿರುವ ಗಳಿಕೆಗಳ ಸಂಬಂಧ ಮಾರ್ಪಾಡು ಮಾಡಿದ ಹಿಂದಿನಿಂದ ಅನ್ವಯವಾಗುವಿಕೆ ವಿಧಾನವನ್ನು ಬಳಸಿ ಗ್ರೂಪ್ ಎಎನ್‌ಡಿ ಎಎಸ್ -116 ಅನ್ನು ಅಳವಡಿಸಿಕೊಂಡಿರುವುದು.

ಐತಿಹಾಸಿಕ ವೆಚ್ಚ ಸಾಮಾನ್ಯವಾಗಿ ಸರಕುಗಳು ಮತ್ತು ಸೇವೆಗಳ ವಿನಿಮಯಕ್ಕಾಗಿ ನೀಡುವ ಬೆಲೆಯ ನ್ಯಾಯೋಚಿತ ಪರಿಗಣನೆಯಾಗಿರುತ್ತದೆ.

ನ್ಯಾಯೋಚಿತ ಮೌಲ್ಯವು ಒಂದು ಆಸ್ತಿಯ ಮಾರಾಟದಿಂದ ಬರುವ ಬೆಲೆ ಅಥವಾ ಗಣನೆಯ ದಿನಾಂಕದಂದು ಮಾರುಕಟ್ಟೆ ಪಾಲುದಾರರ

ನಡುವೆ ನಡೆಯುವ ಕ್ರಮಬದ್ಧ ವಹಿವಾಟುಗಳಲ್ಲಿ ಋಣಭಾರದ ವರ್ಗಾವಣೆಗಾಗಿ ಸಂದಾಯ ಮಾಡುವ ಮೊತ್ತವಾಗಿರುತ್ತದೆ. ಸದರಿ ಬೆಲೆಯು ನೇರವಾಗಿ ಒಳಪಡಿಸಬಹುದಾಗಿರುವುದು ಅಥವಾ ಇನ್ನೊಂದು ಮೌಲ್ಯಮಾಪನ ತಂತ್ರದ ಮೂಲಕ ಅಂದಾಜು ಮಾಡುವುದೋ ಅಥವಾ ಬಿಡುವುದನ್ನು ಪರಿಗಣಿಸಲಾಗದು. ಒಂದು ಆಸ್ತಿಯ ಅಥವಾ ಹೊಣೆಗಾರಿಕೆಯ ನ್ಯಾಯೋಚಿತ ಬೆಲೆಯ ಮೌಲ್ಯಮಾಪನ ಮಾಡುವಾಗ ಗ್ರೂಪ್ ಆಸ್ತಿ ಅಥವಾ ಹೊಣೆಗಾರಿಕೆ ಅಂದಾಜು ಲೆಕ್ಕಾಚಾರಕ್ಕಾಗಿ ಅನುಸರಿಸುವ ಲಕ್ಷಣಗಳನ್ನೇ ಒಂದು ವೇಳೆ ಮಾರುಕಟ್ಟೆ ಪಾಲುದಾರರು ಅನುಸರಿಸುತ್ತಿದ್ದಲ್ಲಿ ಕಂಪನಿಯು ಅವುಗಳನ್ನು ಮಾಪನ ದಿನದಂದು ಗಣನೆಗೆ ತೆಗೆದುಕೊಳ್ಳುವುದು. ನ್ಯಾಯೋಚಿತ ಮೌಲ್ಯವನ್ನು ಗಣನೆಗಾಗಿ ಮತ್ತು/ಅಥವಾ ಬಹಿರಂಗಪಡಿಸುವ ಉದ್ದೇಶಕ್ಕಾಗಿ ಈ ಹಣಕಾಸು ಹೇಳಿಕೆಗಳಲ್ಲಿ ಷೇರು ಆಧಾರಿತ ಪಾವತಿ ವಹಿವಾಟುಗಳನ್ನು ಹೊರತುಪಡಿಸಿ ಆ ಲಕ್ಷಣಗಳ ಆಧಾರದ ಮೇಲೆ ನಿರ್ಧರಿಸಲಾಗುವುದು. ಏಕೆಂದರೆ ಷೇರು ಆಧಾರಿತ ಪಾವತಿ ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 102 ಷೇರು ಆಧಾರಿತ ಪಾವತಿ ವ್ಯಾಪ್ತಿಯಲ್ಲಿ ಬರುತ್ತವೆ. ಗುತ್ತಿಗೆ (ಲೀಸಿಂಗ್) ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 116ರ ವ್ಯಾಪ್ತಿಯೊಳಗೆ ಬರುತ್ತವೆ ಮತ್ತು ಅಳತೆ ಮಾಪನಗಳು ನ್ಯಾಯೋಚಿತ ಮೌಲ್ಯದೊಂದಿಗೆ ಕೆಲವು ಸಾಮ್ಯತೆಗಳನ್ನು ಹೊಂದಿರುತ್ತವೆ. ಆದರೆ ಅವುಗಳ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-2 ಗಳಲ್ಲಿನ ನಿವ್ವಳ ಲಭಿಸಬಹುದಾದ ಮೌಲ್ಯ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 36ರಲ್ಲಿನ ಒಟ್ಟು ಆಸ್ತಿಗಳು ಅಥವಾ ಬಳಕೆಯಲ್ಲಿರುವ ಮೌಲ್ಯದಂತೆ ನ್ಯಾಯೋಚಿತ ಮೌಲ್ಯಗಳಾಗಿರುವುದಿಲ್ಲ.

ಇದರೊಂದಿಗೆ ಹಣಕಾಸು ವರದಿಗಾರಿಕೆ ಉದ್ದೇಶಕ್ಕಾಗಿ ನ್ಯಾಯೊಚಿತ ಮೌಲ್ಯಮಾಪನಗಳನ್ನು ಹಂತ (ಮಟ್ಟ) 1,2 ಅಥವಾ 3 ಗಳೆಂದು ವಸ್ತುಗಳು ಯಾವ ಹಂತದ ನ್ಯಾಯೋಚಿತ ಮೌಲ್ಯಮಾಪನಗಳಿಗೆ ಸೇರ್ಪಡೆಗೊಳ್ಳುವುವು ಎಂಬುದರ ಆಧಾರದ ಮೇಲೆ ವಿಂಗಡಿಸಲಾಗಿದೆ ಮತ್ತು ವಸ್ತುಗಳ ಪ್ರಾಮುಖ್ಯತೆಯು ಒಟ್ಟಾರೆಯಾಗಿ ಯಾವ ನ್ಯಾಯೋಚಿತ ಮೌಲ್ಯಮಾಪಕಗಳಿಗೆ ಅನ್ವಯಿಸುತ್ತವೆ ಎಂಬುದರ ಆಧಾರದಲ್ಲಿಮಾಡಲಾಗಿದೆ. ಅವುಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:

ಹಂತ-1 : ಸಕ್ರಿಯ ಮಾರುಕಟ್ಟೆಗಳಲ್ಲಿ ಹಣಕಾಸು ಸಾಧನಗಳಿಗೆ ನಮೂದಿತ ದರಗಳು (ಹೊಂದಾಣಿಕೆ ಮಾಡಿರದ್ದು)

ಹಂತ-2: ಸಕ್ರಿಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಿಡದಿರುವ ಹಣಕಾಸು ಸಾಧನಗಳ ನ್ಯಾಯೋಚಿತ ಬೆಲೆಯನ್ನು ಸಂಸ್ಥೆಯ ನಿರ್ದಿಷ್ಟ ಅಂದಾಜುಗಳ ಮೇಲೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಅವಲಂಬಿತವಾಗುವ ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸುವ ಮೌಲ್ಯಮಾಪನ ತಂತ್ರಗಳನ್ನು ಉಪಯೋಗಿಸುವ ಮೂಲಕ ನಿರ್ಧರಿಸಲಾಗುತ್ತದೆ.

ಹಂತ-3: ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಆಧಾರಿಸಿರದ ಆಸ್ತಿಗಳು ಅಥವಾ ಹೊಣೆಗಾರಿಕೆ ಸಲಕರಣೆಗಳು. (ಅಂತರ್ಗತವಾಗದಿರುವ ಸಲಕರಣೆಗಳು)

(iii) ಕ್ರೋಡೀಕರಣದ ಆಧಾರ :

ಕ್ರೋಡೀಕೃತ ಹಣಕಾಸುಗಳಲ್ಲಿಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ ಮತ್ತು ಇದರ ಸಹಾಯಕ ಮತ್ತು ಸಹವರ್ತಿ ಕಂಪನಿಗಳ ಹಣಕಾಸಿನ ಹೇಳಿಕೆಗಳು ಸೇರಿರುವವು. ಗ್ರೂಪ್‌ನ ಕ್ರೋಡೀಕೃತ ಹಣಕಾಸಿನ ಹೇಳಿಕೆಯು ಅದರ ಆಸ್ತಿಗಳು, ಹೊಣೆಗಾರಿಕೆಗಳು, ಈಕ್ವಿಟಿ, ಆದಾಯ, ಖರ್ಚುಗಳು ಮತ್ತು ಗ್ರೂಪ್‌ನ ಮತ್ತು ಸಹಾಯಕ ಕಂಪನಿಗಳ ನಗದು ಹರಿಯುವಿಕೆಯನ್ನು ಒಳಗೊಂಡಿರುವುದು. ಗ್ರೂಪ್ ತನ್ನ ಸಹಾಯಕ ಕಂಪನಿಗಳ ಗಳಿಕೆಗಳನ್ನು ವ್ಯತ್ಯಾಸಗೊಳಿಸುವ ಹಕ್ಕನ್ನು ಹೊಂದಿರುವುದರಿಂದ ಮತ್ತು ಸಹಾಯಕ ಕಂಪನಿಗಳ ಮೇಲೆ ಹೊಂದಿರುವ ತನ್ನ ಅಧಿಕಾರದ ಮೂಲಕ ಸದರಿ ಗಳಿಕೆಗಳನ್ನು ನಿಯಂತ್ರಿಸುವ ಸಾಮರ್ಥ್ಯ ಹೊಂದಿರುವುದರಿಂದ ಗ್ರೂಪ್ ಸಹಾಯಕ ಕಂಪನಿಗಳ ನಿಯಂತ್ರಣ ಹೊಂದಿರುವುದು.

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು, ಒಂದೇ ರೀತಿಯ ವ್ಯವಹಾರಗಳಿಗೆ ಮತ್ತು ಒಂದೇ ಸ್ವರೂಪದ ಪರಿಸ್ಥಿತಿಯಲ್ಲಿನ ಇತರೆ ಕಾರ್ಯಕ್ರಮಗಳಿಗೆ ಏಕ ರೀತಿಯ ಲೆಕ್ಕ ನಿರ್ವಹಣೆ ನೀತಿಗಳನ್ನು ಬಳಸಿ ಸಿದ್ಧಪಡಿಸಲಾಗಿದೆ. ಪ್ರಮುಖವಾಗಿ ಅನುಸರಿಸಿರುವ ಕ್ರೋಡೀಕರಣ ಕ್ರಮಾವಳಿಗಳು ಕೆಳಕಂಡಂತಿರುವವು: (ಎ) ಗ್ರೂಪ್ ಮತ್ತು ಇದರ ಸಹಾಯಕ ಕಂಪನಿಗಳ ಐಟಂಗಳಾದ ಆಸ್ತಿಗಳು, ಹೊಣೆಗಾರಿಕೆಗಳು, ಈಕ್ವಿಟಿ, ಆದಾಯ, ಖರ್ಚುಗಳು ಮತ್ತು ನಗದು ಹರಿಯುವಿಕೆಗಳನ್ನು ಒಂದೊಂದೇ ಆಧಾರದ ಮೇಲೆ ಸಂಯೋಜನೆ ಮಾಡಲಾಗಿದೆ; (ಬಿ) ಪ್ರತಿ ಸಹಾಯಕ ಕಂಪನಿಗಳಲ್ಲಿ ಮಾತೃ ಸಂಸ್ಥೆ ಹೂಡಿಕೆ ಮಾಡಿರುವಿಕೆಯ ವಾಹಕ ಮೊತ್ತ ಮತ್ತು ಪ್ರತಿ ಸಹಾಯಕ ಕಂಪನಿಗಳ ಈಕ್ವಿಟಿಯ ಮಾತೃಸಂಸ್ಥೆ ಭಾಗವನ್ನು ತೆಗೆದು ಹಾಕಲಾಗಿರುತ್ತದೆ. ಮತ್ತು (ಸಿ) ಪರಸ್ಪರ ಗ್ರೂಪ್‌ನ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಗ್ರೂಪ್‌ನ ಸಂಸ್ಥೆಗಳ ನಡುವಿನ ಈಕ್ವಿಟಿ, ಆದಾಯ, ಖರ್ಚುಗಳು ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ನಗದು ಹರಿಯುವಿಕೆಯನ್ನು ಪೂರ್ಣವಾಗಿ ತೆಗೆದು ಹಾಕಲಾಗಿರುವುದು.

iv ಅಂದಾಜು ಬಳಕೆ :

ಹಣಕಾಸಿನ ಹೇಳಿಕೆಯನ್ನು ಸಿದ್ಧಪಡಿಸುವಿಕೆಯು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕನಿರ್ವಹಣೆ ನೀತಿಗಳ ಅನುಗುಣವಾಗಿರುವುದು. ಇದಕ್ಕೆ ವರದಿಗಾರಿಕೆಯ ಅವಧಿ ಕೊನೆಯಲ್ಲಿದ್ದಂತೆ, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟಿರುವ ಆದಾಯ, ಖರ್ಚುಗಳ ಮೇಲೆ ಮತ್ತು ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಪ್ರಕಟಣೆಗಳ ಮೇಲೆ ಹಾಗೂ ಸದರಿ ಅವಧಿಯಲ್ಲಿನ ಆದಾಯ ಮತ್ತು ಖರ್ಚುಗಳ ತಿಳಿಸಲಾದ

ಮೊತ್ತಗಳ ಮೇಲೆ ಪರಿಣಾಮ ಉಂಟು ಮಾಡುವ ತೀರ್ಮಾನಗಳು, ಅಂದಾಜುಗಳು ಮತ್ತು ಊಹೆಗಳನ್ನು ಗ್ರೂಪ್‌ನ ಆಡಳಿತ ಮಂಡಳಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ವೇಳೆಯಲ್ಲಿ ಮಾಡಬೇಕಾಗುತ್ತದೆ. ಈ ಅಂದಾಜುಗಳು ಆಡಳಿತ ಮಂಡಳಿಯು ಚಾಲ್ತಿ ಘಟನಾವಳಿಗಳು ಮತ್ತು ಕ್ರಮಗಳ ಬಗ್ಗೆ ಹೊಂದಿರುವ ಪರಿಜ್ಞಾನದ ಮೇಲೆ ಆಧಾರಿತವಾದವುಗಳಾಗಿದ್ದರೂ, ಮುಂದಿನ ಅವಧಿಗಳಲ್ಲಿ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಸದರಿ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆ ತಲೆದೋರುವುದು.ಅಂದಾಜುಗಳಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಲಾಗಿದೆ. ಏಕೆಂದರೆ ಆಡಳಿತ ಮಂಡಳಿಯು ಅಂದಾಜುಗಳನ್ನು ಮಾಡಿದ ಸನ್ನಿವೇಶಗಳಲ್ಲಿನ ಬದಲಾವಣೆ ಬಗ್ಗೆ ಎಚ್ಚರ ವಹಿಸುತ್ತದೆ. ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳನ್ನು ಒಳಗೊಂಡ ಮಹತ್ತರ ಲೆಕ್ಕ ನಿರ್ವಹಣೆ ಅಂದಾಜುಗಳಿಗೆ ಅಗತ್ಯವಿರುವ ಲೆಕ್ಕ ನಿರ್ವಹಣಾ ನೀತಿಗಳ ಅನ್ವಯಿಕೆಯನ್ನು ಮತ್ತು ಈ ಹಣಕಾಸು ಹೇಳಿಕೆಗಳಲ್ಲಿ ಊಹೆಗಳ ಬಳಕೆಯನ್ನು ಟಿಪ್ಪಣಿ 1.3 ಮತ್ತು 1.4ರಲ್ಲಿ ಬಹಿರಂಗಪಡಿಸಿದೆ.

V. ಗ್ರೂಪ್ ಇನ್ನೂ ಅಳವಡಿಸಿಕೊಂಡಿರದ ಹೊಸ ಲೆಕ್ಕ ನಿರ್ವಹಣೆ ಗುಣಮಟ್ಟಗಳು ಮತ್ತು ತಿದ್ದುಪಡಿಗಳು

ಕಾಲಕಾಲಕ್ಕೆ ಹೊರಡಿಸಿದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳ ಅನ್ವಯ ಹಾಲಿಯಿರುವ ಗುಣಮಟ್ಟಗಳಿಗೆ ಹೊಸ ಗುಣಮಟ್ಟಗಳನ್ನು ಅಥವಾ ತಿದ್ದುಪಡಿಗಳನ್ನು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಅಧಿಸೂಚಿಸಿದೆ. ದಿನಾಂಕ 23ನೇ ಮಾರ್ಚ್ 2023ರಂದು ಎಂಸಿಎಯು ಈ ಕೆಳಕಂಡಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ತಿದ್ದುಪಡಿ ನಿಯಮಗಳು, 2022ಕ್ಕೆ ತಿದ್ದುಪಡಿ ಮಾಡಿದೆ.

ಎ) ಐಎನ್‌ಡಿ ಎಎಸ್ 12, ಆದಾಯ ತೆರಿಗೆಗಳು–ಈ ತಿದ್ದುಪಡಿಯು ಪ್ರಾರಂಭಿಕ ಗಣನೆ ವಿನಾಯ್ತಿಯ ವ್ಯಾಪ್ತಿಯನ್ನು ಕಡಿಮೆ ಮಾಡಿದೆ, ಹಾಗಾಗಿ ಸಮಾನವಾದ ಮತ್ತು ತಾತ್ಕಾಲಿಕ ವ್ಯತ್ಯಾಸಗಳನ್ನು ನಿವಾರಿಸುವುದಕ್ಕೆ ಆಸ್ಪದ ನೀಡುವ ವ್ಯವಹಾರಗಳಿಗೆ ಅನ್ವಯವಾಗದು. ಈ ತಿದ್ದುಪಡಿ ಅಳವಡಿಕೆಯ ಜಾರಿ ದಿನಾಂಕವು ಏಪ್ರಿಲ್ 1, 2023ರಂದು ಅಥವಾ ಆ ನಂತರ ಪ್ರಾರಂಭವಾಗುವ ವಾರ್ಷಿಕ ಅವಧಿಗಳಾಗಿರುವುದು. ಕಂಪನಿಯು ತಿದ್ದುಪಡಿಯ ಮೌಲ್ಯಮಾಪನ ಮಾಡಿರುವುದು ಮತ್ತು ಅದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆ ಮೇಲೆ ಯಾವುದೇ ಪರಿಣಾಮ ಉಂಟಾಗದು.

ಬಿ) ಐಎನ್‌ಡಿ ಎಎಸ್–1 ಹಣಕಾಸಿನ ಹೇಳಿಕೆಗಳ ನಿರೂಪಣೆ–ಈ ತಿದ್ದುಪಡಿಯಂತೆ, ಸಂಸ್ಥೆ ಅದರ ಮಹತ್ತರ ಲೆಕ್ಕನಿರ್ವಹಣೆ ನೀತಿಗಳ ಬದಲಾಗಿ ಅದರ ವಾಸ್ತವಿಕ ಲೆಕ್ಕನಿರ್ವಹಣೆ ನೀತಿಗಳನ್ನು ತಿಳಿಸಬೇಕಾಗುತ್ತದೆ. ಈ ತಿದ್ದುಪಡಿ ಅಳವಡಿಕೆ ಜಾರಿಗೆ ಬರುವ ದಿನಾಂಕವು 1ನೇ ಏಪ್ರಿಲ್ 2023ರಂದು ಅಥವಾ ಆ ನಂತರ ಪ್ರಾರಂಭವಾಗುವ ವಾರ್ಷಿಕ ಅವಧಿಗಳಾಗಿರುವುದು. ಕಂಪನಿ ತಿದ್ದುಪಡಿಯನ್ನು ಮೌಲ್ಯಮಾಪನ ಮಾಡಿದೆ. ತಿದ್ದುಪಡಿಯ ಪರಿಣಾಮವು ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಉಂಟು ಮಾಡುವ ಪರಿಣಾಮ ಮಹತ್ತರವಾದುದಾಗಿರುವುದಿಲ್ಲ.

ಸಿ) ಐಎನ್‌ಡಿ ಎಎಸ್–8–ಲೆಕ್ಕ ನಿರ್ವಹಣೆ ನೀತಿಗಳು, ಲೆಕ್ಕ ನಿರ್ವಹಣೆ ಅಂದಾಜುಗಳು ಮತ್ತು ತಪ್ಪುಗಳಲ್ಲಿ ಬದಲಾವಣೆಗಳು–ಈ ತಿದ್ದುಪಡಿಯು 'ಲೆಕ್ಕನಿರ್ವಹಣೆ ಅಂದಾಜುಗಳ' ಸೂತ್ರ ಒಂದನ್ನು ಪರಿಚಯಿಸಿದೆ ಮತ್ತು ಲೆಕ್ಕ ನಿರ್ವಹಣೆ ಅಂದಾಜುಗಳಿಂದ ಲೆಕ್ಕ ನಿರ್ವಹಣೆ ನೀತಿಗಳಲ್ಲಿ ಮಹತ್ವವಾದ ಬದಲಾವಣೆ ಮಾಡಲು ಕಂಪನಿಗೆ ನೆರವಾಗಲು ಐಎನ್‌ಡಿ ಎಎಸ್ 8ಕ್ಕೆ ತಿದ್ದುಪಡಿಗಳನ್ನು ಸೇರಿಸಲಾಗಿದೆ. ಈ ತಿದ್ದುಪಡಿ ಅಳವಡಿಕೆ ಜಾರಿಯಾಗುವ ದಿನಾಂಕವು 1ನೇ ಏಪ್ರಿಲ್ 2023ರಂದು ಅಥವಾ ಆ ನಂತರ ಪ್ರಾರಂಭವಾಗುವ ವಾರ್ಷಿಕ ಅವಧಿಗಳಾಗಿರುವುದು. ಕಂಪನಿಯು ತಿದ್ದುಪಡಿಯ ಮೌಲ್ಯಮಾಪನ ಮಾಡಿದೆ ಮತ್ತು ಇದರಿಂದ ಅದರ ಸ್ವತಂತ್ರ ಹಣಕಾಸಿನ ಹೇಳಿಕೆಯ ಮೇಲೆ ಯಾವುದೇ ಪರಿಣಾಮ ಉಂಟಾಗದು.

ಡಿ) ಐಎನ್‌ಡಿ ಎಎಸ್ 102ರಲ್ಲಿ ಇತರೆ ತಿದ್ದುಪಡಿಗಳು, ಷೇರು ಆಧಾರಿತ ಪಾವತಿಗಳು, ಐಎನ್‌ಡಿ ಎಎಸ್ 103, ವ್ಯವಹಾರ ಸಂಯೋಜನೆಗಳು, ಐಎನ್‌ಡಿ ಎಎಸ್ 109, ಹಣಕಾಸಿನ ಸಾಧನಗಳು, ಐಎನ್‌ಡಿ ಎಎಸ್ 115, ಗ್ರಾಹಕರ ಜೊತೆಗಿನ ಗುತ್ತಿಗೆಯಿಂದ ಬಂದ ಆದಾಯವು, ಸಂಬಂಧಪಟ್ಟ ಐಎನ್‌ಡಿ ಎಎಸ್‌ನ ಬಗ್ಗೆ ಉತ್ತಮ ಸ್ಪಷ್ಟನೆ ನೀಡುವುದಕ್ಕೆ ಇವು ಪ್ರಮುಖವಾಗಿ ಸಂಪಾದಕೀಯ ಸ್ವರೂಪದ್ದಾಗಿವೆ.

(vi) ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳು:

ಎ. ಚಾಲ್ತಿಗೆ ಪ್ರತಿಯಾಗಿ ಚಾಲ್ತಿಯೇತರ ವರ್ಗೀಕರಣ:

ಗ್ರೂಪ್ ತನ್ನ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಚಾಲ್ತಿ/ಚಾಲ್ತಿಯೇತರ ವರ್ಗೀಕರಣದ ಆಧಾರದಲ್ಲಿ ಪ್ರಸ್ತುತಪಡಿಸಿದೆ.

(i) ಒಂದು ಆಸ್ತಿಯು ಈ ಕೆಳಕಂಡಂತ್ತಿದ್ದರೆ ಆಗ ಅದನ್ನು ಚಾಲ್ತಿ ಆಸ್ತಿ ಎಂದು ವರ್ಗೀಕರಣ ಮಾಡಲಾಗಿದೆ;

- ಸಾಮಾನ್ಯ ಕಾರ್ಯಾಚರಣೆ ಆವರ್ತನದಲ್ಲಿ ನಗದೀಕರಣವಾಗಲಿರುವ ನಿರೀಕ್ಷೆಯಲ್ಲಿ ಅಥವಾ ಮಾರಾಟ ಮಾಡಲು ಉದ್ದೇಶಿಸಿರುವುದು ಅಥವಾ ಬಳಸಲ್ಪಡುವುದು.
- ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ವರದಿಯ ಅವಧಿಯ ನಂತರ 12 ತಿಂಗಳೊಳಗಾಗಿ ನಗದಾಗುವುದೆಂದು ನಿರೀಕ್ಷಿಸುವುದು. ಅಥವಾ

- ವರದಿ ಅವಧಿಯ ನಂತರ ಕನಿಷ್ಠ 12 ತಿಂಗಳಲ್ಲಿ ವಿನಿಮಯ ಗೊಳಿಸುವುದಕ್ಕೆ ಅಥವಾ ಹೊಣೆಗಾರಿಕೆ ಇತ್ಯರ್ಥಗೊಳಿಸುವಿಕೆಗೆ ಯಾವುದೇ ನಿರ್ಬಂಧ ಇರದ ನಗದು ಅಥವಾ ನಗದು ಸಮಾನಗಳು.

(ii) ಇನ್ನುಳಿದ ಎಲ್ಲ ಆಸ್ತಿಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(iii) ಒಂದು ಹೊಣೆಗಾರಿಕೆಯನ್ನು ಅದು ಕೆಳಕಂಡಂತಿದ್ದಾಗ ಚಾಲ್ತಿ ಎಂದು ವರ್ಗೀಕರಣ ಮಾಡಲಾಗಿರುತ್ತದೆ;

- ಅದು ಸಾಮಾನ್ಯ ಕಾರ್ಯಾಚರಣೆಯ ವಿಧಾನದಲ್ಲಿ ಇತ್ಯರ್ಥ ಗೊಳಿಸಲಾಗುವುದೆಂದು ನಿರೀಕ್ಷಿಸಿರುವುದು;
- ಅದನ್ನು ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ವರದಿ ಅವಧಿಯ ನಂತರ 12 ತಿಂಗಳೊಳಗಾಗಿ ಇತ್ಯರ್ಥ ಗೊಳಿಸಬೇಕಾಬೇಕಾಗಿರುವುದು, ಅಥವಾ
- ವರದಿಯ ಅವಧಿಯ ನಂತರ ಕನಿಷ್ಠ 12 ತಿಂಗಳವರೆಗೆ ಹೊಣೆಗಾರಿಕೆಯ ಇತ್ಯರ್ಥವನ್ನು ಮುಂದೂಡಲು ಬೇಷರತ್ ಹಕ್ಕು ಇಲ್ಲದಿರುವುದು.

iv) ಇನ್ನುಳಿದ ಎಲ್ಲ ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(v) ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಆಸ್ತಿಗಳು ಮತ್ತು ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

ಗ್ರೂಪ್ ತನ್ನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಆಸ್ತಿಗಳೆಂದು ವರ್ಗೀಕರಣ ಮಾಡುವ ಉದ್ದೇಶದಿಂದ ಕಾರ್ಯಾಚರಣೆ ಆವರ್ತನವನ್ನು ಒಂದು ವರ್ಷ ಎಂದು ದೃಢೀಕರಿಸಿದೆ. ಇದನ್ನು ಸೇವೆಯ ಸ್ವರೂಪ ಮತ್ತು ಅಭಿವೃದ್ಧಿಯ ಉದ್ದೇಶಕ್ಕಾಗಿ ಆಸ್ತಿಯ ಸ್ವಾಧೀನಪಡಿಸಿಕೊಳ್ಳಲಾದ ಹಾಗೂ ಅವುಗಳಿಂದ ಲಭ್ಯವಾಗಬಹುದಾದ ನಗದು ಅಥವಾ ನಗದು ಸಮಾನಗಳ ನಡುವಿನ ಸಮಯಗಳ ಆಧಾರದ ಮೇಲೆ ಮಾಡಲಾಗಿದೆ. ಚಿಟ್ ವ್ಯವಹಾರದ ಆಸ್ತಿಗಳ ಮತ್ತು ಹೊಣೆಗಾರಿಕೆಗಳು ಇದರಲ್ಲಿ ಸೇರಿರುವುದಿಲ್ಲ. ಇದರ ಆವರ್ತನ ಅದರ ಅವಧಿ ಮೇಲೆ ಆಧಾರಿತವಾಗಿದೆ. 40 ತಿಂಗಳುಗಳನ್ನು ಅದರ ಆವರ್ತನವೆಂದು ಪರಿಗಣಿಸಿದೆ. ಇದು ಹೆಚ್ಚು ಜನಪ್ರಿಯ ಬಿಡ್ ಅವಧಿಯಾಗಿದೆ.

ಬಿ. ವಿದೇಶಿ ಕರೆನ್ಸಿ ವಹಿವಾಟು:

ಕಾರ್ಯಾಚರಣೆ ಮತ್ತು ನಿರೂಪಣೆ ಕರೆನ್ಸಿ:

ಹಣಕಾಸು ಹೇಳಿಕೆಗಳನ್ನು ಭಾರತೀಯ ರೂಪಾಯಿಗಳಲ್ಲಿ (ರೂ.) ಪ್ರಸ್ತುತಪಡಿಸಲಾಗಿದೆ. ಇದು ಗ್ರೂಪ್‌ನ ಕಾರ್ಯಾಚರಣೆಯಲ್ಲಿರುವ ಮತ್ತು ಪ್ರಸ್ತುತಪಡಿಸುವಿಕೆ ಕರೆನ್ಸಿ ಕೂಡ ಆಗಿದೆ. ಎಲ್ಲ ಮೊತ್ತಗಳು ನಿರ್ದಿಷ್ಟವಾಗಿ ಬೇರೆ ರೀತಿಯಲ್ಲಿ ಗುರುತಿಸದ ಹೊರತು ಹತ್ತಿರದ ಪೂರ್ಣ ರೂಪಾಯಿಗಳಲ್ಲಿ ವರದಿ ಮಾಡಲಾಗಿದೆ.

ಎ) ಆರಂಭದ ಮಾನ್ಯತೆ:

ವಿದೇಶಿ ಕರೆನ್ಸಿ ವಹಿವಾಟುಗಳನ್ನು ಚಾಲನೆಯಲ್ಲಿರುವ ಹಣ (Currency) ದಲ್ಲಿ ದಾಖಲಿಸಲಾಗಿದೆ. ಇದನ್ನು ವಹಿವಾಟಿನ ದಿನಾಂಕದಂದು ಚಾಲನಾ ಹಣ ಮತ್ತು ವಿದೇಶಿ ಹಣಗಳ ನಡುವಿನ ವಿನಿಮಯ ದರ ಅನುಸರಿಸಿ ದಾಖಲಿಸಲಾಗಿದೆ.

ಬಿ) ಪರಿವರ್ತನೆ:

ವಿದೇಶಿ ಕರೆನ್ಸಿ ಹಣಕಾಸಿನ ಅಂಶಗಳನ್ನು ವಹಿವಾಟಿನ ದಿನಾಂಕದಂದು ಮುಕ್ತಾಯ ದರವನ್ನು ಪರಿಗಣನೆಗೆ ತೆಗೆದುಕೊಂಡು ಚಾಲನಾ ಹಣಕ್ಕೆ ಪರಿವರ್ತಿಸಲಾಗಿದೆ.

ಹಣಕಾಸೇತರ ಅಂಶಗಳನ್ನು ವಿದೇಶಿ ಕರೆನ್ಸಿಯಲ್ಲೇ ಕೆಳಕಂಡಂತೆ ನಮೂದಿಸಲಾಗಿದೆ.

– ಈ ಅಂಶಗಳು–ಐತಿಹಾಸಿಕ ಬೆಲೆ ಹೊಂದಿದ್ದು, ಆ ಬಗ್ಗೆ ವಹಿವಾಟು ದಿನಾಂಕದಂದು ಇದ್ದ ವಿದೇಶಿ ವಿನಿಮಯ ದರವನ್ನು ಪರಿಗಣಿಸಿ ವರದಿ ಮಾಡಲಾಗಿದೆ.

– ನ್ಯಾಯೋಚಿತ ಮೌಲ್ಯ ಹೊಂದಿರುವ ಹಣಕಾಸೇತರ ಸಾಮಗ್ರಿಗಳು ಅಥವಾ ಇದೇ ರೀತಿಯಲ್ಲಿ ವಿದೇಶಿ ಹಣದಲ್ಲಿ ಮೌಲ್ಯಮಾಪನ ಮಾಡಿರುವ ಸಾಮಗ್ರಿಗಳನ್ನು ಅವುಗಳ ಮೌಲ್ಯನಿರ್ಧರಣೆ ಮಾಡುವ ಅವಧಿಯಲ್ಲಿ ಚಾಲನೆಯಲ್ಲಿದ್ದ ವಿನಿಮಯ ದರವನ್ನು ಪರಿಗಣಿಸಿ ಮೌಲ್ಯ ನಿರ್ಧರಣೆ ಮಾಡಲಾಗಿದೆ.

ವರದಿ ಮಾಡುವ ದಿನಾಂಕದಂದು ಇದ್ದಂತೆ ಹಣಕಾಸು ಸಾಮಗ್ರಿಗಳ ಇತ್ಯರ್ಥ ಅಥವಾ ಮರು ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಕಂಡು ಬರುವ ವ್ಯತ್ಯಾಸಗಳನ್ನು ಅಂದರೆ ಈ ಸಾಮಗ್ರಿಗಳ ಮೌಲ್ಯವನ್ನು ಮೊದಲು ದಾಖಲು ಮಾಡಿದಾಗ ಇದ್ದ ವಿನಿಮಯ ದರ ಮತ್ತು ವರದಿ ಮಾಡುವ ದಿನಾಂಕದಂದು ಇದ್ದ ವಿನಿಮಯ ದರಗಳ ನಡುವಿನ ವ್ಯತ್ಯಾಸವನ್ನು ಅವು ಉಂಟಾದ ವರ್ಷದಲ್ಲಿ ಗುರುತಿಸಲಾಗಿದೆ ಮತ್ತು ಆ ಕುರಿತು ಸದರಿ ವಸ್ತುಗಳು ಇದ್ದ ವರ್ಷದ ಲಾಭ ಅಥವಾ ನಷ್ಟದ ಹೇಳಿಕೆಯಲ್ಲಿ ನಮೂದಿಸಲಾಗಿದೆ.

ಸಿ) ಆದಾಯ ಗುರುತಿಸುವಿಕೆ:

ಗ್ರೂಪ್ ತನ್ನ ಕ್ರೋಡೀಕೃತ ಹಣಕಾಸು ಹೇಳಿಕೆಗಳನ್ನು ರೂಪಿಸುವಾಗ ಕೆಳಕಂಡ ಲೆಕ್ಕ ನಿರ್ವಹಣಾ ನೀತಿಯನ್ನು ಅನುಸರಿಸಿದೆ:

ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯ

ಗ್ರೂಪ್ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟ ಐಎನ್‌ಡಿ ಎಎಸ್ 115ರಲ್ಲಿ ಗೊತ್ತುಪಡಿಸಲಾದ ಕೆಳಕಂಡ 5 ಹಂತಗಳ ಮಾದರಿಯನ್ನು ಆಧರಿಸಿ ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯವನ್ನು ಮಾನ್ಯ ಮಾಡಿದೆ:

ಹಂತ:1 –ಗ್ರಾಹಕರೊಂದಿಗಿನ ಗುತ್ತಿಗೆ(ಗಳು)ಯನ್ನು ಗುರುತಿಸುವುದು: ಒಂದು ಗುತ್ತಿಗೆಯನ್ನು ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ವ್ಯಕ್ತಿಗಳ ನಡುವೆ ಉಂಟಾದ ಒಪ್ಪಂದವೆಂದು ನಿರೂಪಿಸಿದ್ದು, ಅದು ಜಾರಿಗೊಳಿಸಬಹುದಾದ ಹಕ್ಕು ಮತ್ತು ಬಾಧ್ಯತೆಗಳನ್ನು ಸೃಜಿಸುತ್ತದೆ ಮತ್ತು ಪ್ರತಿಯೊಂದು ಗುತ್ತಿಗೆಯು ಪೂರೈಸಬೇಕಾಗಿರುವ ಅರ್ಹತೆ, ಮಾನದಂಡವನ್ನು ರೂಪಿಸುತ್ತದೆ ಎಂದು ವ್ಯಾಖ್ಯಾನಿಸಲಾಗಿದೆ.

ಹಂತ:2 –ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ದಕ್ಷತೆಗಳನ್ನು ಗುರುತಿಸುವುದು: ಒಂದು ಕಾರ್ಯ ನಿರ್ವಹಣಾ ದಕ್ಷತೆ ಬಾಧ್ಯತೆಯು ಗ್ರಾಹಕರೊಂದಿಗಿನ ಒಂದು ಗುತ್ತಿಗೆಯಲ್ಲಿ ಸರಕು ಅಥವಾ ಸೇವೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದಾಗಿ ಆಶ್ವಾಸನೆ ಇರುವುದು.

ಹಂತ: 3 – ವಹಿವಾಟಿನ ಬೆಲೆ ನಿರ್ಧರಣೆ: ವ್ಯವಹಾರದ ಬೆಲೆಯು ತಾನು ವಚನವಿತ್ತಂತೆ ಗ್ರಾಹಕರಿಗೆ ವರ್ಗಾವಣೆ ಮಾಡುವ ಸರಕುಗಳು ಅಥವಾ ಸೇವೆಗೆ ವಿನಿಮಯವಾಗಿ ಗ್ರೂಪ್ ಪಡೆಯಲರ್ಹವಾದುದೆಂದು ಪರಿಗಣಿಸುವ ಮೊತ್ತವಾಗಿರುತ್ತದೆ. ಇದು ಮೂರನೇ ವ್ಯಕ್ತಿಯ ಪರವಾಗಿ ಪಡೆದ ಮೊತ್ತವನ್ನು ಹೊರತುಪಟ್ಟಿರುತ್ತದೆ.

ಹಂತ: 4– ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಗೆ ಹಂಚಿಕೆ ಮಾಡಲಾದ ವಹಿವಾಟು ಬೆಲೆ: ಒಂದು ಗುತ್ತಿಗೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯನಿರ್ವಹಣಾ ಬಾಧ್ಯತೆ ಇದ್ದಲ್ಲಿ, ಗ್ರೂಪ್ ತಾನು ತೃಪ್ತಿಕರವಾಗಿ ನಿರ್ವಹಿಸುವ ಪ್ರತಿ ಕಾರ್ಯ ನಿರ್ವಹಣಾ ಬಾಧ್ಯತೆಗೆ ವಿನಿಮಯವಾಗಿ ಪಡೆಯಲರ್ಹವೆಂದು ಗ್ರೂಪ್ ಪರಿಗಣಿಸುವ ಮೊತ್ತದಲ್ಲಿ ಪ್ರತಿ ಕಾರ್ಯನಿರ್ವಹಣಾ ಬಾಧ್ಯತೆಗೆ ವಹಿವಾಟು ಬೆಲೆಯನ್ನು ಹಂಚಿಕೆ ಮಾಡುವುದು.

ಹಂತ: 5– ಸಂಸ್ಥೆಯು ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಆದಾಯವನ್ನು ಮಾನ್ಯ ಮಾಡುವುದು.

ಕೆಳಕಂಡ ಯಾವುದಾದರೊಂದು ಮಾನದಂಡವನ್ನು ಪೂರೈಸಿದಲ್ಲಿ ಗ್ರೂಪ್ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸುವುದು ಮತ್ತು ಕಾಲಾನಂತರ ಆದಾಯವನ್ನು ಮಾನ್ಯ ಮಾಡುತ್ತದೆ:

(1) ಗ್ರೂಪ್ ಕಾರ್ಯನಿರ್ವಹಣೆಗಾರರಾಗಿ ಗ್ರೂಪ್ ನಿರ್ವಹಿಸುತ್ತಾ ಪೂರೈಸಿದ ಕಾರ್ಯನಿರ್ವಹಣೆಯಿಂದ ಗ್ರಾಹಕನು ಪ್ರಯೋಜನ ಬಳಸಿಕೊಳ್ಳುವುದು ಮತ್ತು ಉಪಯೋಗವನ್ನು ಏಕಕಾಲಕ್ಕೆ ಬಳಸಿಕೊಳ್ಳುವುದು, ಅಥವಾ

(2) ಗ್ರೂಪ್‌ನ ಕಾರ್ಯನಿರ್ವಹಣೆಯು ಗ್ರಾಹಕನಿಗೆ ಆಸ್ತಿ ಸೃಜಿಸುವುದು ಅಥವಾ ಗ್ರಾಹಕನ ನಿಯಂತ್ರಣದಲ್ಲಿರುವ ಆಸ್ತಿಯನ್ನು ಹೆಚ್ಚಿಸುವುದು. ಅದು ಆಸ್ತಿಯ ಸೃಷ್ಟಿ ಅಥವಾ ವೃದ್ಧಿ ಎಂದು ಪರಿಗಣಿತ; ಅಥವಾ

(3) ಗ್ರೂಪ್‌ನ ಕಾರ್ಯನಿರ್ವಹಣೆಯು ಗ್ರೂಪ್‌ನ ಪರ್ಯಾಯ ಬಳಕೆಯಾಗಿ ಒಂದು ಆಸ್ತಿಯನ್ನು ಸೃಜಿಸದಿದ್ದರೆ ಮತ್ತು ಸಂಸ್ಥೆಯು ಕಾರ್ಯನಿರ್ವಹಣೆ ಪೂರ್ಣಗೊಂಡ ದಿನಾಂಕಕ್ಕೆ ಹಣ ಪಾವತಿಗೆ ಜಾರಿಗೊಳಿಸಬೇಕಾದ ಹಕ್ಕು ಹೊಂದಿದ್ದರೆ.

ಕಾರ್ಯನಿರ್ವಹಣಾ ಬಾಧ್ಯತೆಗಳಿಗೆಮೇಲ್ಕಂಡ ಯಾವುದಾದರೊಂದು ಷರತ್ತು ಪೂರೈಸದಿದ್ದಲ್ಲಿ ಯಾವ ಸಮಯದಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸಲಾಗುವುದೋ ಆಗ ಆದಾಯವನ್ನು ಮಾನ್ಯ ಮಾಡಲಾಗುವುದು.

ಗ್ರೂಪ್ ವಚನವಿತ್ತಂತೆ ಸರಕುಗಳನ್ನು ಅಥವಾ ಸೇವೆಗಳನ್ನು ತಲುಪಿಸುವ ಮೂಲಕ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಅದು ಕಾರ್ಯನಿರ್ವಹಣೆಯಿಂದ ಗಳಿಸಿದ ಪರಿಗಣಿತ ಮೊತ್ತ ಆಧಾರಿತ ಗುತ್ತಿಗೆ ಆಸ್ತಿಯನ್ನು ಸೃಷ್ಟಿಸುತ್ತದೆ. ಗ್ರಾಹಕರಿಂದ ಸ್ವೀಕರಿಸಲ್ಪಟ್ಟ ಪರಿಗಣಿತ ಮೊತ್ತವು ಮಾನ್ಯ ಮಾಡಿದ ಮೊತ್ತಕ್ಕಿಂತ ಹೆಚ್ಚಾಗಿದ್ದಲ್ಲಿ ಅದು ಗುತ್ತಿಗೆ ಬಾಧ್ಯತೆಗೆ ಅವಕಾಶವಾಗುತ್ತದೆ.

ಆದಾಯವನ್ನು ಒಡಂಬಡಿಕೆಯ ರೂಪದಲ್ಲಿ ವ್ಯಾಖ್ಯಾನಿಸಲಾದ ಹಣ ಪಾವತಿ ಷರತ್ತುಗಳನ್ನು ಗಣನೆಗೆ ತೆಗೆದುಕೊಂಡು ಮತ್ತು ತೆರಿಗೆ ಮತ್ತು ಕರಗಳನ್ನು ಹೊರತುಪಡಿಸಿ ಸ್ವೀಕರಿಸಲಾದ ಅಥವಾ ಸ್ವೀಕಾರಾರ್ಹವಾಗಿರುವ ಪರಿಗಣಿತ ಮೊತ್ತದ ನ್ಯಾಯೋಚಿತ ಮೌಲ್ಯಕ್ಕನುಗುಣವಾಗಿ ಲೆಕ್ಕ ಹಾಕಲಾಗಿದೆ.

ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಪರಿಗಣನೆ

(ಎ) ಸರಕುಗಳ ಮಾರಾಟದಿಂದ ಬರುವ ಗಳಿಕೆಯನ್ನು ಖರೀದಿದಾರರಿಗೆ ಸರಕುಗಳು ರವಾನೆಯಾದಾಗ ಪರಿಗಣಿಸಲಾಗುತ್ತದೆ. ಮಾರಾಟದ ಮೊತ್ತವು ತೆರಿಗೆಗಳ ನಿವ್ವಳವಾಗಿರುತ್ತದೆ.

(ಬಿ) ಸೇವೆಗಳನ್ನು ಸಲ್ಲಿಸಿದಾಗ ಬರುವ ಗಳಿಕೆಯನ್ನು ಗುತ್ತಿಗೆ ನಿಯಮಗಳ ಅನುಸಾರ ಸೇವೆಗಳನ್ನು ಸಲ್ಲಿಸಿದಾಗ ಪರಿಗಣಿಸಲಾಗುತ್ತದೆ. ಇದು ತೆರಿಗೆಯನ್ನು ಒಳಗೊಂಡಿರುವುದಿಲ್ಲ.

(ಸಿ) ಠೇವಣಿಗಳ ಮೇಲಿನ ಬಡ್ಡಿಯನ್ನು ಸಮಯದ ಅನುಪಾತದ ಆಧಾರದ ಮೇಲೆ ಮತ್ತು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ.

ಬಾಡಿಗೆ ಆದಾಯ:

ಕಾರ್ಯಾಚರಣೆ ಗುತ್ತಿಗೆಗಳಿಂದ ಬರುವ ಬಾಡಿಗೆ ಆದಾಯವನ್ನು ಸಂಬಂಧಪಟ್ಟ ಗುತ್ತಿಗೆಯ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಪರಿಗಣಿಸಲಾಗಿದೆ.

ಲಾಭಾಂಶದ ಆದಾಯ

ಲಾಭಾಂಶದಿಂದ ಬರುವ ಆದಾಯವನ್ನು ಗ್ರೂಪ್ ಪಾವತಿಯನ್ನು ಸ್ವೀಕರಿಸುವ ಹಕ್ಕನ್ನು ಸ್ಥಾಪಿಸಿದಾಗ ಮಾನ್ಯ ಮಾಡಲಾಗಿದೆ. ಲಾಭಾಂಶದ

ಜೊತೆಗೆ ಸಂಯೋಜನೆಗೊಂಡ ಆರ್ಥಿಕ ಸೌಲಭ್ಯಗಳು ಗ್ರೂಪ್‌ಗೆ ಬರುವುದು ಮತ್ತು ಲಾಭಾಂಶದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಲಾಗುವುದು.

ಬಡ್ಡಿ ಆದಾಯ:

ಒಂದು ಹಣಕಾಸು ಆಸ್ತಿಯಿಂದ ಬರುವ ಬಡ್ಡಿ ಆದಾಯವನ್ನು ಯಾವಾಗ ಅದರ ಆರ್ಥಿಕ ಲಾಭಗಳು ಗ್ರೂಪ್‌ಗೆ ಸೇರಬಹುದಾಗಿದ್ದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಆದಾಯದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಬಹುದಾಗಿದೆ. ಬಾಕಿ ಇರುವ ಅಸಲು ಮೊತ್ತಕ್ಕೆ ಜಾರಿಯಲ್ಲಿರುವ ಬಡ್ಡಿದರವನ್ನು ಅನ್ವಯಿಸಿದನ್ನು ಅನುಸರಿಸಿ ಅವಧಿ ಅನುಪಾತಾಧಾರಿತದಲ್ಲಿ ಬಡ್ಡಿಯು ಸಂಚಯವಾಗುತ್ತದೆ. ವಿಳಂಬಿತ ಸ್ವೀಕೃತಿಗಳು, ರದ್ದತಿ/ಮುಟ್ಟುಗೋಲಾದ ಆದಾಯಗಳ ಮೇಲಿನ ಬಡ್ಡಿ ಮತ್ತು ಗ್ರಾಹಕರಿಂದ ವರ್ಗಾವಣೆ ಶುಲ್ಕಗಳನ್ನು ಅಂತಿಮ ಸಂಗ್ರಹಣೆ ಸಂಶಯಾತ್ಮಕವಾಗಿರುವ ಪ್ರಕರಣಗಳು ಮತ್ತು ಕೆಳಗೆ ಪಟ್ಟಿ ಮಾಡಿರುವ ಸಂದರ್ಭಗಳನ್ನು ಹೊರತುಪಡಿಸಿ ಸಂಚಯ ಆಧಾರಿತದಲ್ಲಿ ಪರಿಗಣಿಸಲಾಗಿದೆ:

ನಗದು ಆಧಾರದ ಮೇಲೆ ಆದಾಯ ಗುರುತಿಸುವಿಕೆ

ಕೆಳಕಂಡ ಐಟಂಗಳಿಗೆ ಹೊರತಾಗಿ ಗಳಿಕೆಯನ್ನು ಸಂಚಯದ ಆಧಾರದ ಮೇಲೆ ಮಾನ್ಯ ಮಾಡಿದೆ. ಕೆಳಕಂಡ ಐಟಂಗಳ ಬಗ್ಗೆ, ಹಣ ನಗದಾಗುವುದು ಅನಿಶ್ಚಿತವಾಗಿರುವುದರಿಂದ ನಗದು ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ.

(i) **ಚಿಟ್ ಕಾರ್ಯಾಚರಣೆಗಳು**

ಚಿಟ್ ಕಾರ್ಯಾಚರಣೆಯಿಂದ ಬರುವ ಎಲ್ಲ ರೀತಿಯ ಆದಾಯಗಳು ನಗದು ಆಧಾರಿತವಾಗಿವೆ.

(ii) **ಹೈರ್ ಪರ್ಚೇಸ್ :** ಹೈರ್ ಪರ್ಚೇಸ್ ಮಾರಾಟಗಳ ಮೇಲಿನ ಬಡ್ಡಿ ಆದಾಯವನ್ನು ನಗದು ಆಧಾರದಲ್ಲಿ ಪರಿಗಣಿಸಲಾಗಿದೆ.

(iii) ಕರ ಸಾಲ/ಜಾರಿಯಲ್ಲಿರುವ ವಿದೇಶಿ ವಾಣಿಜ್ಯ ನೀತಿಯ ವಿವಿಧ ಉತ್ತೇಜನ ಯೋಜನೆಗಳಡಿ ವಿನಾಯಿತಿ, ತೆರಿಗೆ ಸಾಲ, ಸಮೀಕ್ಷಾ ಕೊರತೆಯಿಂದಾಗಿ ಕಸ್ಟಮ್ ಸುಂಕದ ಹಿಂಪಾವತಿ, ಮತ್ತು ಆದಾಯ ತೆರಿಗೆ/ಸೇವಾ ತೆರಿಗೆ/ಮಾರಾಟ ತೆರಿಗೆ/ವ್ಯಾಟ್/ಜಿಎಸ್‌ಟಿ ಮತ್ತು ಅವುಗಳ ಮೇಲಿನ ಬಡ್ಡಿ ಇತ್ಯಾದಿ ಮರು ಪಾವತಿ.

(iv) ಅವಧಿ ಮೀರಿದ ವಸೂಲಾತಿಗಳ ಮೇಲಿನ ಬಡ್ಡಿ

(v) ಪೂರೈಕೆದಾರರು/ಖಾತರಿದಾರರ ಮೇಲಿನ ಸಮಾಪ್ತಿಗೊಂಡ ಹಾನಿಗಳು.

ಆದಾಯದ ಇತರೆ ಐಟಂಗಳನ್ನು ಸ್ವೀಕರಿಸುವ ಹಕ್ಕು ಉಂಟಾದಾಗ ಪರಿಗಣಿಸಿದೆ.

ಡಿ) ಸರಕುಗಳ ತಪಶೀಲುಗಳು:

ಈ ಸರಕುಗಳನ್ನು ನಿವ್ವಳ ನಗದೀಕರಣ ಮೌಲ್ಯಗಳಲ್ಲಿ ನಿರ್ಧರಣೆ ಮಾಡಿರುವ ಅನುಪಯುಕ್ತ ಮತ್ತು ಉಪ ಉತ್ಪನ್ನಗಳನ್ನು ಹೊರತುಪಡಿಸಿ ಉಳಿದವುಗಳನ್ನು ಕಡಿಮೆ ಬೆಲೆಯಲ್ಲಿ ಮತ್ತು ನಿವ್ವಳ ನಗದೀಕರಣ ಮೌಲ್ಯದಲ್ಲಿ ಮೌಲ್ಯ ಮಾಡಲಾಗಿರುತ್ತದೆ. ನಿವ್ವಳ ನಗದೀಕರಣದ ಮೌಲ್ಯವು ಸಾಮಾನ್ಯ ವ್ಯವಹಾರದ ಸಮಯದಲ್ಲಿ ಅಂದಾಜು ಮಾಡಿದ ಮಾರಾಟ ಬೆಲೆ ಆಗಿರುತ್ತದೆ. ಪೂರ್ಣಗೊಳಿಸುವಿಕೆಯ ಅಂದಾಜು ಮೌಲ್ಯ ಮತ್ತು ಮಾರಾಟ ಮಾಡಲು ಅಗತ್ಯವಿರುವ ಅಂದಾಜು ಬೆಲೆಯನ್ನು ಕಳೆಯಲಾಗಿದೆ. ಅಬಕಾರಿ ಅಂಟುಕಾರಕ ಚೀಟಿಗಳನ್ನು ಮುದ್ರಿಸಿದ್ದು, ಆದರೆ ಇನ್ನೂ ಸರಬರಾಜು ಮಾಡಿರದಿರುವುದರಿಂದ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಲ್ಲಿದ್ದಂತೆ ಸರಕು ತಪಶೀಲುಗಳೆಂದು ಪರಿಗಣಿಸಲಾಗಿದೆ.

ತಪಶೀಲು ಸರಕುಗಳನ್ನು ಈ ಕೆಳಕಂಡಂತೆ ಮೌಲ್ಯ ನಿರ್ಣಯ ಮಾಡಿದೆ:

(i) **ಕಚ್ಚಾ ಸಾಮಗ್ರಿಗಳು:** ಕಚ್ಚಾ ಸಾಮಗ್ರಿಗಳ ವೆಚ್ಚವು ಖರೀದಿ ಬೆಲೆ ಮತ್ತು ಸರಕುಗಳನ್ನು ಹಾಲಿ ಸ್ಥಳಕ್ಕೆ ಮತ್ತು ಹಂತಕ್ಕೆ ಸಾಗಿಸಲು ಉಂಟಾದ ವೆಚ್ಚಗಳನ್ನು ಒಳಗೊಂಡಿರುತ್ತದೆ. ಬೆಲೆಯನ್ನು ಕಾಗದದ ವಿಭಾಗದಲ್ಲಿ ಸರಾಸರಿ ತೂಕದ ಆಧಾರದ ಮೇಲೆ ನಿರ್ಧರಣೆ ಮಾಡಲಾಗಿದೆ.

(ii) **ಸಿದ್ಧಪಡಿಸಿದ ಸರಕುಗಳು ಮತ್ತು ಪ್ರಗತಿಯಲ್ಲಿರುವ ಕಾರ್ಯಗಳು:** ಬೆಲೆಯು ಸಾಮಗ್ರಿಗಳ ನೇರ ಬೆಲೆ ಮತ್ತು ಕಾರ್ಮಿಕ ವೆಚ್ಚ ಮತ್ತು ಸಾಮಾನ್ಯ ಕಾರ್ಯಾಚರಣೆ ಆಧಾರದಲ್ಲಿ ಅಂದರೆ ತರಲು ಉಂಟಾಗುವ ವೆಚ್ಚ ಹೊರತುಪಡಿಸಿ ಅವುಗಳ ಮೇಲಿನ ತಯಾರಿಕಾ ವೆಚ್ಚ ಒಳಗೊಂಡಿರುತ್ತದೆ. ಸರಾಸರಿ ತೂಕದ ಮೇಲೆ ಬೆಲೆ ನಿರ್ಧರಣೆ ಮಾಡಲಾಗುತ್ತದೆ. ಕಾಗದದ ವಿಭಾಗದ ಸಂಬಂಧ ಪರಿವರ್ತನೆಗಾರರಿಗೆ ನೀಡಿರುವ ಕಚ್ಚಾ ಸಾಮಗ್ರಿಗಳು, ಮತ್ತು ಬಳಕೆ ವಸ್ತುಗಳನ್ನು ಪರಿವರ್ತನಾಗಾರರಿಂದ ನೋಟ್ ಪುಸ್ತಕಗಳನ್ನು ಸ್ವೀಕರಿಸುವಾಗ ಸಿದ್ಧಪಡಿಸಿದ ಸರಕು ಎಂದು ಪರಿಗಣಿಸಲಾಗುತ್ತದೆ.

(iii) ಮದ್ಯದ ದಾಸ್ತಾನಿನ ಮೌಲ್ಯಮಾಪನಕ್ಕಾಗಿ ಸಾಗಾಣಿಕೆ ಆಗಮನ ಸರಕನ್ನು ಪರಿಗಣಿಸಿರುವುದಿಲ್ಲ ಮತ್ತು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ವಿಧಿಸಿದೆ.

(iv) ಅನುಪಯುಕ್ತ ಸರಕುಗಳು, ನಿಧಾನಗತಿಯ ಮತ್ತು ದೋಷರೂಪಿತ ಸರಕುಗಳನ್ನು ನಿವ್ವಳ ವಾಸ್ತವೀಕರಣದ ಮೌಲ್ಯಕ್ಕೆ ದಾಖಲಿಸಿದೆ.

ಇ) ಸ್ವತ್ತು , ಸ್ಥಾವರ ಮತ್ತು ಉಪಕರಣ(ಪಿಪಿಇ): ಗುರುತಿಸುವಿಕೆ ಮತ್ತು ಮಾಪನ

ಸ್ವತ್ತು , ಸ್ಥಾವರ ಮತ್ತು ಉಪಕರಣವನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದು ಬೆಲೆಯಲ್ಲಿ ಮಾಪನ ಮಾಡಲಾಗಿದೆ. ಈ ಬೆಲೆಯಲ್ಲಿ ಆಸ್ತಿಯ ಸ್ವಾಧೀನಕ್ಕೆ ನೇರವಾಗಿ ಅನ್ವಯಿಸಬಹುದಾದ ಖರ್ಚುಗಳೂ ಸೇರಿರುವವು. ಅರ್ಹತಾ ಆಸ್ತಿಗಳ ನಿರ್ಮಾಣಕ್ಕೆ ನೇರವಾಗಿ ಅನ್ವಯಿಸಬಹುದಾದ ಸಮಾನ್ಯ ಮತ್ತು ನಿರ್ದಿಷ್ಟ ಸಾಲದ ವೆಚ್ಚವನ್ನು ಬೆಲೆಯ ಭಾಗವಾಗಿ ಬಂಡವಾಳೀಕರಿಸಲಾಗಿದೆ.

ಸವಕಳಿ ಮತ್ತು ಉಪಯುಕ್ತ ಜೀವಿತಾವಧಿ

ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಸವಕಳಿ/ಅಮಾರ್ಟೈಜೇಷನ್ ಅನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಯ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಿದೆ ಮತ್ತು ಸೂಕ್ತವಾಗಿದ್ದಲ್ಲಿ ಅನುಗುಣವಾಗಿ ಹೊಂದಾಣಿಕೆ ಮಾಡಿದೆ.

ವಿವರಗಳು	ಜೀವಿತಾವಧಿ-ವರ್ಷಗಳಲ್ಲಿ
ಕಟ್ಟಡ	60
ಅಗ್ನಿಶಾಮಕ ಉಪಕರಣ	10
ವಿದ್ಯುತ್ ಉಪಕರಣ	10
ಪೀಠೋಪಕರಣ ಮತ್ತು ಅಳವಡಿಕೆಗಳು	10
ವಾಹನಗಳು	8
ಪೀಠೋಪಕರಣ ಮತ್ತು ಅಳವಡಿಕೆಗಳು-ಮದ್ಯ	5
ನಿರ್ವಹಣೆ ಉಪಕರಣ	5
ತೂಕದ ಯಂತ್ರಗಳು	5
ಕಚೇರಿ ಉಪಕರಣ	5
ಸ್ಥಾವರ ಮತ್ತು ಯಂತ್ರೋಪಕರಣ (ಡಿಜಿಪ್ಲೆಕ್ಸ್ ಮೆಷಿನ್)	15
ಕಂಪ್ಯೂಟರ್‌ಗಳು	3
ಡಾರ್ಕ್‌ರೂಂ ಉಪಕರಣಗಳು	3
ಪಾರ್ಟಿಷನ್‌ಗಳು	3
ಗುತ್ತಿಗೆದಾರಿಕೆ ಆಸ್ತಿಗಳು/ ಗುತ್ತಿಗೆದಾರಿಕೆ -ಕಟ್ಟಡಗಳ ಅಭಿವೃದ್ಧಿ	ಪ್ರಾಥಮಿಕ ಗುತ್ತಿಗೆ ಅವಧಿಯಲ್ಲಿ-ಜಮೀನಿಗೆ ಹೊರತಾಗಿ

ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

ತಾಂತ್ರಿಕ ಪರಿಣತರು ಮಾಡಿರುವ ತಾಂತ್ರಿಕ ನಿರ್ಧರಣೆ ಮತ್ತು ಆಡಳಿತ ಮಂಡಳಿ ಅಂದಾಜಿನ ಆಧಾರದ ಮೇಲೆ ಗ್ರೂಪ್ ಮದ್ಯದ ಮಾರಾಟ ಮಳಿಗೆಗಳಲ್ಲಿರುವ ಪೀಠೋಪಕರಣ ಮತ್ತು ಅಳವಡಿಕೆಗಳ ಅಂದಾಜು ಮಾಡಿದ ಜೀವಿತಾವಧಿ ಉಪಯುಕ್ತತೆಯಲ್ಲಿ ಸವಕಳಿ ಮಾಡಿದೆ. ಇದು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಜೀವಿತಾವಧಿಯಿಂದ ಭಿನ್ನವಾಗಿವೆ. ಸದರಿ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿಯು ಅವುಗಳನ್ನು ಬಳಸಲಿರುವ ಅವಧಿಯಲ್ಲಿ ವಾಸ್ತವಿಕವಾಗಿದ್ದು, ನ್ಯಾಯೋಚಿತ ಅಂದಾಜನ್ನು ಆಡಳಿತ ಮಂಡಳಿ ನಂಬುವುದು.

ಅಮಾನ್ಯತೆ

ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಯಾವುದೇ ಬಾಬ್ತು ಹಾಗೂ ಅದರ ಮಹತ್ತರ ಭಾಗವು ಆರಂಭದಲ್ಲಿ ಮಾನ್ಯ ಮಾಡಿದ್ದನ್ನು ಅದರ ವಿಲೇವಾರಿ, ಅಥವಾ ಅದರ ಬಳಕೆಯಿಂದ ಅಥವಾ ವಿಲೇವಾರಿಯಿಂದ ಮುಂದೆ ಯಾವುದೇ ಆರ್ಥಿಕ ಲಾಭ ಇಲ್ಲ ಎಂದು ಪರಿಗಣಿಸಿದಾಗ ಅದನ್ನು ಅಮಾನ್ಯಗೊಂಡ ಬಾಬ್ತು ಎಂದು ಪರಿಗಣಿಸಲಾಗುವುದು. ಸ್ವತ್ತಿನ ಅಮಾನ್ಯೀಕರಣದಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟವನ್ನು (ಇದನ್ನು ನಿವ್ವಳ ವಿಲೇವಾರಿಯಿಂದ ಬರುವ ಮೊತ್ತ ಮತ್ತು ಸ್ವತ್ತು ಹೊಂದಿರುವ ಮೊತ್ತದ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಸ್ವತ್ತು ಅಮಾನ್ಯಗೊಂಡಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

ಎಫ್) ಅಗೋಚರಿತ ಆಸ್ತಿಗಳು:

ಮಾನ್ಯತೆ ಮತ್ತು ಮಾಪನ

ಪ್ರತ್ಯೇಕವಾಗಿ ಪಡೆದಿರುವ ಅಗೋಚರಿತ ಆಸ್ತಿ (ಸಾಫ್ಟ್‌ವೇರ್)ಗಳನ್ನು ಅವುಗಳ ಸ್ವಾಧೀನತೆಯ ವೆಚ್ಚದ ಬೆಲೆಯಲ್ಲಿ ತಿಳಿಸಲಾಗಿದೆ. ವೆಚ್ಚವು ಖರೀದಿ ಬೆಲೆ, ಬಂಡವಾಳೀಕರಣ ಮಾನದಂಡವನ್ನು ಪೂರೈಸಿದ್ದಲ್ಲಿ ಸಾಲದ ವೆಚ್ಚ ಮತ್ತು ನೇರವಾಗಿ ಅನ್ವಯಿಸಬಹುದಾದ ಅಥವಾ ಕಾರಣೀಭೂತವಾಗಬಹುದಾದ ವೆಚ್ಚಗಳಾದ ಅಂದರೆ ಸ್ವತ್ತನ್ನು ಉದ್ದೇಶಿತ ಬಳಕೆಗಾಗಿ ಕಾರ್ಯ ನಿರ್ವಹಿಸುವ ಸ್ಥಿತಿಗೆ ತರಲು ತಗಲುವ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ವ್ಯಾಪಾರ ಕಡಿತ, ರಿಯಾಯಿತಿಗಳನ್ನು ಕಡಿತಗೊಳಿಸಿ ಖರೀದಿ ಬೆಲೆಯನ್ನು ಪರಿಗಣಿಸಿದೆ.

ಪ್ರಾರಂಭಿಕ ಮಾನ್ಯತೆ ಅನುಸರಿಸಿ ಅಗೋಚರಿತ ಆಸ್ತಿಗಳನ್ನು ಯಾವುದೇ ಸಂಚಯನವಾಗಿರುವ ಅಮಾರ್ಟೈಜೇಷನ್ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಪರಿಗಣಿಸಿದೆ.

ಬಂಡವಾಳೀಕರಣಗೊಂಡ ತಂತ್ರಾಂಶಗಳ ವೆಚ್ಚವನ್ನು ಅವುಗಳನ್ನು ಸ್ವಾಧೀನಗೊಳಿಸಿಕೊಂಡ ದಿನಾಂಕದಿಂದ ನೇರ ಮಾರ್ಗದ ವಿಧಾನದಿಂದ 6 ವರ್ಷಗಳ ಅವಧಿಯಲ್ಲಿ ಅಮಾರ್ಟೈಜೇಷನ್ ಮಾಡಲಾಗಿದೆ.

ಅಗೋಚರ ಆಸ್ತಿಯ ಅಮಾನ್ಯತೆಯಿಂದ ಉಂಟಾಗುವ ಲಾಭ ಅಥವಾ ನಷ್ಟಗಳನ್ನು ಸದರಿ ಆಸ್ತಿಯ ಹೊಂದಿರುವ ಮೊತ್ತ ಮತ್ತು ವಿಲೇವಾರಿಯಿಂದ ಲಭ್ಯವಾಗುವ ನಿವ್ವಳ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಮಾಪನ ಮಾಡಲಾಗುವುದು ಮತ್ತು ಆಸ್ತಿಯ ಅಮಾನ್ಯಗೊಳಿಸಿದಾಗ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದು.

ಅಗೋಚರಿತ ಆಸ್ತಿಗಳ ಉಳಿಕೆ ಮೌಲ್ಯ, ಉಪಯುಕ್ತ ಜೀವಿತಾವಧಿ

ಮತ್ತು ಅಮೌಲ್ಯೀಕರಣ (ಅಮಾರ್ಟೈಜೇಷನ್) ವಿಧಾನಗಳನ್ನು ಪ್ರತಿ ವರದಿ ಮಾಡುವ ದಿನಾಂಕದ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಸೂಕ್ತವೆಂದು ಅನ್ನಿಸಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗುತ್ತದೆ.

ಜಿ. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯನ್ನು ನಿರ್ಮಾಣದ ಅವಧಿಯಲ್ಲಿ ಮಾಡಿದ ವೆಚ್ಚ, ಅರ್ಹತಾ ಆಸ್ತಿಗಳ ಸ್ವಾಧೀನಕ್ಕಾಗಿ ತರಲಾದ ಸಾಲದ ಮೇಲಿನ ಬಡ್ಡಿ ಮತ್ತು ಸ್ವತ್ತಿನ ಬಳಕೆಯ ದಿನಾಂಕವನ್ನು ಮುಂದಿನ ಅವಧಿಯಲ್ಲಿ ಯೋಜನಾ ಅನುಷ್ಠಾನ ಸಂಬಂಧಿಸಿದ ಕಾರ್ಯಗಳಿಗಾಗಿ ಉಂಟಾದ ವೆಚ್ಚಗಳಲ್ಲಿ ತಿಳಿಸಲಾಗುತ್ತದೆ. ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕಕ್ಕೆ ಕಾಣಿಸಿಕೊಂಡ ಸ್ವತ್ತು, ಸ್ಥಾವರ ಮತ್ತು ಉಪಕರಣ (ಪಿಪಿಇ)ಗಳ ಖರೀದಿ/ಸ್ವಾಧೀನ ಪ್ರಕ್ರಿಯೆಗಳಿಗಾಗಿ ನೀಡಲಾದ ಬಂಡವಾಳ ಮುಂಗಡಗಳನ್ನು ಇತರ ಚಾಲ್ತಿಯೇತರ ಆಸ್ತಿಗಳೆಂದು ಪ್ರತ್ಯೇಕವಾಗಿ ನಮೂದಿಸಲಾಗುವುದು.

ಎಚ್. ಹೂಡಿಕೆ ಆಸ್ತಿ

ಹೂಡಿಕೆ ಆಸ್ತಿಗಳು, ಅಂದರೆ ಬಾಡಿಗೆ ಗಳಿಸಲು ಹೊಂದಿರುವ ಆಸ್ತಿಗಳು ಮತ್ತು ಅಥವಾ ಬಂಡವಾಳ ವೃದ್ಧಿಗಾಗಿ (ಆ ಉದ್ದೇಶಕ್ಕಾಗಿ ನಿರ್ಮಾಣ ಹಂತದಲ್ಲಿರುವ ಆಸ್ತಿಯೂ ಸೇರಿದಂತೆ) ಇರುವ ಆಸ್ತಿಗಳು. ಹೂಡಿಕೆ ಆಸ್ತಿಗಳನ್ನು ಆರಂಭದಲ್ಲಿ ವರ್ಗಾವಣೆಗಾಗಿ ಉಂಟಾದ ವೆಚ್ಚವೂ ಸೇರಿದಂತೆ ಒಟ್ಟು ವೆಚ್ಚದಲ್ಲಿ ಲೆಕ್ಕ ಹಾಕಲಾಗುವುದು. ಗ್ರೂಪ್‌ನ ಎಲ್ಲ ಆಸ್ತಿ ಹಿತಾಸಕ್ತಿಗಳನ್ನು ಬಾಡಿಗೆ ಗಳಿಸಲು ಕಾರ್ಯಾಚರಣೆಯಲ್ಲಿರುವ ಗುತ್ತಿಗೆಗಳಡಿ ಅಥವಾ ಬಂಡವಾಳ ವೃದ್ಧಿ ಉದ್ದೇಶಕ್ಕಾಗಿ ಹೊಂದಿರುವುವುಗಳನ್ನು ಹೂಡಿಕೆ ಆಸ್ತಿಗಳೆಂದು ಪರಿಗಣಿತವಾಗುವುವು. ಆರಂಭದ ಮಾನ್ಯತೆಯ ನಂತರ ಗ್ರೂಪ್ ಹೂಡಿಕೆ ಆಸ್ತಿಯನ್ನು ತಗುಲಿದ ವೆಚ್ಚದಲ್ಲಿ ಮಾಪನ ಮಾಡುವುದು.

ಹೂಡಿಕೆ ಆಸ್ತಿಗಳನ್ನು ಅವುಗಳ ವಿಲೇವಾರಿ ಮೇರೆಗೆ ಅಥವಾ ಶಾಶ್ವತವಾಗಿ ಹೂಡಿಕೆ ಆಸ್ತಿಗಳನ್ನು ಬಳಕೆಯಿಂದ ಹಿಂಪಡೆದಾಗ ಮತ್ತು ವಿಲೇವಾರಿಯ ನಂತರ ಮುಂದೆ ಅದರಿಂದ ಯಾವುದೇ ಆರ್ಥಿಕ ಲಾಭ ಇಲ್ಲವೆಂದಾಗ ಅಮಾನ್ಯ ಮಾಡಲಾಗುತ್ತದೆ. ಅಮಾನ್ಯಗೊಂಡ ಆಸ್ತಿಯಿಂದ ಯಾವುದೇ ಲಾಭ ಅಥವಾ ನಷ್ಟಗಳನ್ನು (ಆಸ್ತಿ ಹೊಂದಿರುವ ಮೌಲ್ಯ ಮತ್ತು ಅದರ ವಿಲೇವಾರಿಯಿಂದ ಬಂದ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಆಸ್ತಿಯ ಅಮಾನ್ಯಗೊಳಿಸಿದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

ಹೂಡಿಕೆ ಆಸ್ತಿಗಳನ್ನು ಅವುಗಳು ಸೇರಿದ ಆಸ್ತಿಯ ವರ್ಗ ಮತ್ತು ಆ ವರ್ಗದ ಆಸ್ತಿಗಳಿಗೆ ಗೊತ್ತುಪಡಿಸಿದ ಜೀವಿತಾವಧಿಯನುಸಾರ ಸವಕಳಿಗೊಳಿಸಲಾಗುತ್ತದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ – II ರಲ್ಲಿ ನಿರ್ದಿಷ್ಟಪಡಿಸಿರುವ ಆಸ್ತಿಯ ಉಪಯುಕ್ತತೆ ಜೀವಿತಾವಧಿ ಆಧಾರದ ಮೇಲೆ ನೇರ ಮಾರ್ಗದ ವಿಧಾನದಲ್ಲಿ ಸವಕಳಿ/ಅಮಾರ್ಟೈಜೇಷನ್ ಮಾಡಿದೆ. ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ – IIರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಗಳ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಲಾಗುವುದು ಮತ್ತು ಸೂಕ್ತವಾಗಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗಿದೆ.

ಕಟ್ಟಡಗಳ ಉಪಯುಕ್ತತೆ ಜೀವಿತಾವಧಿ 60 ವರ್ಷಗಳು ಎಂದು ಅಂದಾಜು ಮಾಡಿದೆ.

ಹೂಡಿಕೆ ಸ್ವತ್ತಿನ ನ್ಯಾಯೋಚಿತ ಮೌಲ್ಯವನ್ನು ಟಿಪ್ಪಣಿಗಳಲ್ಲಿ ತಿಳಿಸಿದೆ. ಮಾನ್ಯತೆ ಹೊಂದಿದ ಬಾಹ್ಯ ಸ್ವತಂತ್ರ ಮೌಲ್ಯಮಾಪಕರಿಂದ ಮಾಡಿದ ವಾರ್ಷಿಕ ಮೌಲ್ಯಮಾಪನದ ಆಧಾರದ ಮೇಲೆ ನ್ಯಾಯೋಚಿತ ಮೌಲ್ಯಗಳನ್ನು ನಿರ್ಧರಣೆ ಮಾಡಿದೆ.

ಐ) ಹಣಕಾಸಿನ ವೆಚ್ಚಗಳು:

ಹಣಕಾಸಿನ ವೆಚ್ಚದಲ್ಲಿ ಗುತ್ತಿಗೆ ಮೇಲಿನ ಬಡ್ಡಿ ಮತ್ತು ಇತರೆ ಹಣಕಾಸಿನ ಹೊಣೆಗಾರಿಕೆಗಳು, ಬ್ಯಾಂಕ್ ಶುಲ್ಕಗಳು ಮತ್ತು ಖಾತರಿ ಕಮಿಷನ್ ಒಳಗೊಂಡಿರುವುದು. ಎಲ್ಲಾ ಹಣಕಾಸಿನ ವೆಚ್ಚಗಳನ್ನು ಅವು ಉಂಟಾದ ಅವಧಿಯಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

ಜೆ) ನಗದು ಮತ್ತು ನಗದು ಸಮಾನಗಳು:

ಸ್ಥಿತಿ ವಿವರಣಾ ಪಟ್ಟಿಯಲ್ಲಿನ ನಗದು ಮತ್ತು ನಗದು ಸಮಾನಗಳು, ಬ್ಯಾಂಕ್‌ಗಳಲ್ಲಿನ ನಗದು, ಕೈಯಲ್ಲಿರುವ ನಗದು ಮತ್ತು ಮೂಲತಃ 3 ತಿಂಗಳು ಅಥವಾ ಕಡಿಮೆ ಪಕ್ವತೆ ಅವಧಿಯ ಅಲ್ಪಾವಧಿ ಠೇವಣಿಗಳು ಒಳಗೊಂಡಿರುವವು. ಈ ಠೇವಣಿಗಳು ಅವುಗಳ ಮೌಲ್ಯದಲ್ಲಿ ಯಾವುದೇ ಮಹತ್ತರ ಬದಲಾವಣೆಯಾಗದ ಅಪಾಯವಿಲ್ಲದಿರುವಿಕೆಗೆ ಒಳಪಟ್ಟಿರುತ್ತವೆ.

ಕೆ) ಗುತ್ತಿಗೆಗಳು:

ಕಾಂಟ್ರಾಕ್ಟ್ ಒಂದು ಗುತ್ತಿಗೆಯನ್ನು ಅಥವಾ ಗುತ್ತಿಗೆಗಳನ್ನು ಒಳಗೊಂಡಿದ್ದು, ಪರಿಗಣಿತ ಹಣದ ವಿನಿಮಯದ ಮೇಲೆ ಒಂದು ಅವಧಿಯವರೆಗೆ ಗುರುತಿಸಿದ ಆಸ್ತಿಯ ಬಳಕೆಯನ್ನು ನಿಯಂತ್ರಿಸಲು ಹಕ್ಕನ್ನು ನೀಡುವುದು.

ಗ್ರೂಪ್ ಪ್ರತಿ ಗುತ್ತಿಗೆ ಅಥವಾ ವ್ಯವಸ್ಥೆಯನ್ನು ಅದು ಐಎನ್‌ಡಿ ಎಎಸ್ 116 ಅನ್ವಯ ಪ್ರತಿಪಾದಿಸಿರುವಂತೆ ಗುತ್ತಿಗೆ ಎಂಬುದಾಗಿ ಅರ್ಹತೆ ಪಡೆದಿದ್ದರೆ ಅದನ್ನು ಮೌಲ್ಯಮಾಪನ ಮಾಡುವುದು.

ಗ್ರೂಪ್ ಗುತ್ತಿಗೆದಾರನಾಗಿ

ಗ್ರೂಪ್ ಅಂಗಡಿಗಳು, ಕಚೇರಿಗಳನ್ನು ಗುತ್ತಿಗೆಗೆ ಪಡೆಯಲು ವ್ಯವಸ್ಥೆಯೊಂದನ್ನು ಮಾಡಿಕೊಳ್ಳುವುದು. ಅಂತಹ ವ್ಯವಸ್ಥೆಗಳು

ಸಾಮಾನ್ಯವಾಗಿ ನಿಗದಿತ ಅವಧಿಯದಾಗಿರುವವು. ಆದರೆ ವಿಸ್ತರಣೆ ಅಥವಾ ರದ್ದತಿ ಆಯ್ಕೆಯನ್ನು ಹೊಂದಿರಬಹುದು. ಕಾಂಟ್ರಾಕ್ಟ್ ಅದರ ಪ್ರಾರಂಭದಲ್ಲಿ ಗುತ್ತಿಗೆಯನ್ನು ಹೊಂದಿರುವುದೇ ಎಂಬುದನ್ನು ಗ್ರೂಪ್ ನಿರ್ಧರಣೆ ಮಾಡುವುದು. ಕಾಂಟ್ರಾಕ್ಟ್ ಕೆಳಕಂಡವುಗಳಿಗೆ ಹಕ್ಕುಗಳನ್ನು ನೀಡುವುದಾಗಿದ್ದರೆ ಆಗ ಕಾಂಟ್ರಾಕ್ಟ್ ಗುತ್ತಿಗೆಯನ್ನು ಒಳಗೊಂಡಿರುತ್ತದೆ. –

ಎ) ಗುರುತಿಸಿದ ಆಸ್ತಿಯ ಬಳಕೆಯ ನಿಯಂತ್ರಣ

ಬಿ) ಗುರುತಿಸಿದ ಆಸ್ತಿಯ ಬಳಕೆಯಿಂದ ಬರುವ ಎಲ್ಲಾ ಆರ್ಥಿಕ ಅನುಕೂಲಗಳನ್ನು ಗಣನೀಯವಾಗಿ ಪಡೆಯುವುದು; ಮತ್ತು

ಸಿ) ಗುರುತಿಸಿದ ಆಸ್ತಿಯ ಬಳಕೆಯ ನಿರ್ದೇಶನ ನೀಡಿಕೆ.

ಗ್ರೂಪ್ ಗುತ್ತಿಗೆ ಅವಧಿಯನ್ನು ಗುತ್ತಿಗೆಯ ರದ್ದುಪಡಿಸಲಾಗದ ಅವಧಿಯಾಗಿ ನಿರ್ಧರಣೆ ಮಾಡುವುದು. ಇದರ ಜೊತೆ ಜೊತೆಗೆ ಕಂಪನಿಯು ತನ್ನ ಆಯ್ಕೆಯನ್ನು ಚಲಾಯಿಸಲು ಸಕಾರಣೀಯ ನಿಶ್ಚಿತತೆಯಿರುವುದರಿಂದ ಗುತ್ತಿಗೆಯನ್ನು ವಿಸ್ತರಣೆ ಮಾಡಲು ಆಯ್ಕೆ ಒಂದರಿಂದ ಅಂತಹ ವಿಸ್ತರಣೆ ಮಾಡಬಹುದಾದ ಅವಧಿಯನ್ನು ಒಳಪಡಿಸಬಹುದಾಗಿರುತ್ತದೆ.

ಗ್ರೂಪ್ ಹನ್ನೆರಡು ತಿಂಗಳುಗಳಿಗೂ ಕಡಿಮೆ ಅವಧಿಯ ಗುತ್ತಿಗೆಗಳು (ಅಲ್ಪಾವಧಿ ಗುತ್ತಿಗೆಗಳು) ಮತ್ತು ಕಡಿಮೆ ಮೌಲ್ಯದ ಆಸ್ತಿಗಳು ಹೊರತಾಗಿ ಗುತ್ತಿಗೆ ಕಾಂಟ್ರಾಕ್ಟ್‌ನ ಪ್ರಾರಂಭದಲ್ಲಿ ಆಸ್ತಿಯನ್ನು ಅದರ ಬೆಲೆಯಲ್ಲಿ ಮತ್ತು ಸಂಬಂಧಪಟ್ಟ ಗುತ್ತಿಗೆ ಹೊಣೆಗಾರಿಕೆಯಂತೆ ಬಳಕೆ ಹಕ್ಕನ್ನು (ಆರ್‌ಒಯು) ಪರಿಗಣಿಸುವುದು. ಸದರಿ ಅಲ್ಪಾವಧಿಯ ಮತ್ತು ಕಡಿಮೆ ಮೌಲ್ಯದ ಗುತ್ತಿಗೆಗಳಿಗೆ, ಗ್ರೂಪ್ ಗುತ್ತಿಗೆ ಪಾವತಿಗಳನ್ನು ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಕಾರ್ಯಾಚರಣೆ ಖರ್ಚುಗಳಾಗಿ ಪರಿಗಣಿಸುವುದು.

ಬಳಕೆ ಹಕ್ಕಿನ ಆಸ್ತಿಯ ಬೆಲೆಯು ಗುತ್ತಿಗೆ ಬಾಧ್ಯತೆಯ ಪ್ರಾರಂಭಿಕ ಮಾಪನದ ಮೊತ್ತ , ಗುತ್ತಿಗೆ ಪ್ರಾರಂಭಿಕ ದಿನಾಂಕದಲ್ಲಿ ಅಥವಾ ಅದಕ್ಕೂ ಮುನ್ನ ಮಾಡಿದ ಯಾವುದೇ ಗುತ್ತಿಗೆ ಪಾವತಿಗಳು ಜೊತೆಗೆ ಯಾವುದೇ ಪ್ರಾರಂಭಿಕ ನೇರ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ಗುತ್ತಿಗೆ ಪ್ರೋತ್ಸಾಹ ಧನಗಳನ್ನು ಪಡೆದಿದ್ದರೆ ಅದನ್ನು ಇದರಲ್ಲಿ ಕಳೆದಿರುತ್ತದೆ. ತದನಂತರ ಬಳಕೆ ಹಕ್ಕಿನ ಆಸ್ತಿಗಳನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಯಾವುದೇ ಸಂಚಯನವಾದ ದುರ್ಬಲತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಮಾಪನ ಮಾಡಿದೆ. ಬಳಕೆ ಹಕ್ಕಿನ ಆಸ್ತಿಗಳನ್ನು ಅತಿ ಕಡಿಮೆಯ ಗುತ್ತಿಗೆ ಅವಧಿಯಲ್ಲಿ ಅಥವಾ ಬಳಕೆ ಹಕ್ಕಿನ ಆಸ್ತಿಯ ಉಪಯುಕ್ತತೆ ಜೀವಿತಾವಧಿ ದಿನಾಂಕದಿಂದ ಪ್ರಾರಂಭಿಸಿ ನೇರ ಮಾರ್ಗದ ವಿಧಾನವನ್ನು ಬಳಸಿ ಸವಕಳಿ ಲೆಕ್ಕ ಹಾಕಲಾಗಿದೆ. ಬಳಕೆ ಹಕ್ಕಿನ ಆಸ್ತಿಗಳ ಅಂದಾಜು ಮಾಡಿದ ಉಪಯುಕ್ತತೆ ಜೀವಿತಾವಧಿಯನ್ನು ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಸಂಬಂಧ ಮಾಡಿದ ಅದೇ ಆಧಾರದಲ್ಲಿ ನಿರ್ಧರಣೆ ಮಾಡಲಾಗಿದೆ.

ಗ್ರೂಪ್ ಬಳಕೆ ಹಕ್ಕಿನ ಆಸ್ತಿಯು ದುರ್ಬಲಗೊಂಡಿರುವುದೇ ಎಂಬುದನ್ನು ನಿರ್ಧರಣೆ ಮಾಡಲು ಮತ್ತು ಹಣಕಾಸೇತರ ಆಸ್ತಿಗಳ ದುರ್ಬಲತೆಯಲ್ಲಿ ವಿವರಿಸಿರುವಂತೆ ಯಾವುದೇ ಗುರುತಿಸಿದ ದುರ್ಬಲತೆ ನಷ್ಟವನ್ನು ಲೆಕ್ಕ ಮಾಡಲು ಐಎನ್‌ಡಿ ಎಎಸ್ 36 ಅನ್ನು ಅನ್ವಯ ಮಾಡುವುದು.

ಗುತ್ತಿಗೆಯ ಪ್ರಾರಂಭದಲ್ಲಿನ ಗುತ್ತಿಗೆ ಬಾಧ್ಯತೆಗಳಿಗಾಗಿ, ಆ ದಿನಾಂಕದಲ್ಲಿ ಪಾವತಿ ಮಾಡಿರದ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಗುತ್ತಿಗೆ ಬಾಧ್ಯತೆಯನ್ನು ಗ್ರೂಪ್ ಮಾಪನ ಮಾಡುವುದು. ಗುತ್ತಿಗೆಯಲ್ಲಿ ಅಂತರ್ಗತವಾಗಿರುವ ಬಡ್ಡಿದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಬಹುದಾಗಿದ್ದರೆ ಅದನ್ನು ಬಳಸಿ ಗುತ್ತಿಗೆ ಪಾವತಿಯನ್ನು ಕಳೆಯಲಾಗಿದೆ. ಬಡ್ಡಿ ದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಿರದಿದ್ದರೆ, ಆಸ್ತಿಯ ಸ್ವರೂಪ ಮತ್ತು ಸ್ಥಳ, ಸಮಾನ ಭದ್ರತೆ, ಮಾರುಕಟ್ಟೆ ನಿಯಮಗಳು ಮತ್ತು ನಿಬಂಧನೆಗಳು, ಇದೇ ರೀತಿಯ ಆರ್ಥಿಕ ಪರಿಸ್ಥಿತಿಯಲ್ಲಿ ಅನ್ವಯವಾಗುವಿಕೆಯ ಅಂಶಗಳ ಪರಿಗಣನೆ ಸೇರಿದಂತೆ, ಹಣವನ್ನು ಪಡೆಯಲು ಕಂಪನಿ ಪಾವತಿ ಮಾಡಬೇಕಿರುವ ಹೆಚ್ಚಳ ಮಾಡಿದ ಹಣ ಪಡೆಯುವಿಕೆ ದರ ಬಳಸಿ ಗುತ್ತಿಗೆ ಪಾವತಿಗಳನ್ನು ಕಳೆಯಲಾಗಿದೆ.

ಪ್ರಾರಂಭಿಕ ದಿನಾಂಕದ ನಂತರ ಗುತ್ತಿಗೆ ಹೊಣೆಗಾರಿಕೆಯ ಮೊತ್ತವು ಬಡ್ಡಿಯ ಸಂಚಯನ ಬಿಂಬಿಸಲು ಹೆಚ್ಚಳಗೊಂಡಿದೆ ಮತ್ತು ಮಾಡಿದ ಗುತ್ತಿಗೆ ಪಾವತಿಯಿಂದ ಕಡಿಮೆಯಾಗಿದೆ.

ಗ್ರೂಪ್ ಬಳಕೆ ಹಕ್ಕಿನ ಆಸ್ತಿಗಳಿಗೆ ಹೊಂದಾಣಿಕೆಯಾಗಿ ಗುತ್ತಿಗೆ ಬಾಧ್ಯತೆಯ ಮರು ಮಾಪನದ ಮೊತ್ತವನ್ನು ಪರಿಗಣಿಸಿದೆ. ಬಳಕೆ ಹಕ್ಕಿನ ಆಸ್ತಿಯ ವಾಹಕ ಮೊತ್ತವು ಶೂನ್ಯಕ್ಕೆ ಇಳಿಕೆಯಾಗಿರುವ ಸಂದರ್ಭದಲ್ಲಿ ಮತ್ತು ಗುತ್ತಿಗೆ ಬಾಧ್ಯತೆಯ ಮಾಪನದಲ್ಲಿ ಇನ್ನೂ ಇಳಿಕೆಯಾಗುವುದಿದ್ದರೆ ಆಗ ಗ್ರೂಪ್ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮರು-ಮಾಪನದ ಯಾವುದೇ ಉಳಿಕೆಯಾಗಿರುವ ಮೊತ್ತವನ್ನು ಪರಿಗಣಿಸುವುದು.

ಗುತ್ತಿಗೆ ಬಾಧ್ಯತೆ ಪಾವತಿಗಳನ್ನು ನಗದು ಹರಿವಿನ ಹೇಳಿಕೆಯಲ್ಲಿ ''ಹಣ ನೀಡಿಕೆ ಚಟುವಟಿಕೆಗಳಲ್ಲಿ ಬಳಸಿದ ನಗದು'' ಎಂಬುದಾಗಿ ವರ್ಗೀಕರಿಸಲಾಗಿದೆ.

ಗ್ರೂಪ್ ಗುತ್ತಿಗೆ ನೀಡಿಕೆದಾರರಾಗಿ:

ಗ್ರೂಪ್ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳನ್ನು ಹಣಕಾಸಿನ ಅಥವಾ ಕಾರ್ಯಾಚರಣೆಯಾಗುತ್ತಿರುವ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಎಲ್ಲಾ ಅಪಾಯಗಳು ಮತ್ತು ಅನುಕೂಲಗಳನ್ನು ಗಣನೀಯವಾಗಿ ಗುತ್ತಿಗೆದಾರರಿಗೆ ವರ್ಗಾಯಿಸಿರುವ ಗುತ್ತಿಗೆ ಕಾಂಟ್ರಾಕ್ಟ್‌ಗಳನ್ನು ಹಣಕಾಸಿನ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಿದೆ. ಉಳಿದೆಲ್ಲ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳೆಂದು ವರ್ಗೀಕರಿಸಿದೆ.

ಗ್ರೂಪ್ ಮಧ್ಯವರ್ತಿ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳಿಗೆ ಗ್ರೂಪ್ ಪ್ರಧಾನ ಗುತ್ತಿಗೆ ಮತ್ತು ಉಪಗುತ್ತಿಗೆ ಎಂಬುದಾಗಿ ಎರಡು ಪ್ರತ್ಯೇಕ ಕಾಂಟ್ರಾಕ್ಟ್‌ಗಳ ಲೆಕ್ಕಾಚಾರ ಮಾಡಿದೆ. ಉಪ ಗುತ್ತಿಗೆಗಳನ್ನು ಪ್ರಧಾನ ಗುತ್ತಿಗೆಯಿಂದ ಬರುವ ಉಪಯೋಗದ ಹಕ್ಕಿನ ಆಸ್ತಿಯ ಉಲ್ಲೇಖ ಮಾಡುವ ಮೂಲಕ ಹಣಕಾಸಿನ ಗುತ್ತಿಗೆ ಅಥವಾ ಕಾರ್ಯಾಚರಣೆ ಗುತ್ತಿಗೆ ಎಂಬುದಾಗಿಯೂ ಮುಂದುವರಿದ ವರ್ಗೀಕರಣ ಮಾಡಿದೆ.

ಎಲ್) ನೌಕರರ ಸೌಲಭ್ಯಗಳು:

ನಿರೂಪಿತ ವಂತಿಗೆ ಯೋಜನೆ:

ಗ್ರೂಪ್ ನಿರೂಪಿತ ವಂತಿಗೆ ಯೋಜನೆಗಳು–ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ವಿವಿಧ ಉಪಬಂಧಗಳ ಕಾಯ್ದೆ, 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್‌ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಮತ್ತು ನಿವೃತ್ತಿ ಸೌಲಭ್ಯ ಆಗಿರುತ್ತವೆ. ಇವುಗಳಿಗೆ ಗ್ರೂಪ್ ವಂತಿಗೆಗಳನ್ನು ನೀಡುವುದರ ಹೊರತಾಗಿ ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ, ಇಎಸ್‌ಐಗೆ ಮತ್ತು ನಿವೃತ್ತಿ ಯೋಜನೆಗೆ ಕಂಪನಿಯ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ. ನಿವೃತ್ತಿಗೆ ಸಂಬಂಧಿಸಿದ ಆಸ್ತಿಯನ್ನು ಟ್ರಸ್ಟ್ ಒಂದು ನಿರ್ವಹಿಸುತ್ತಿದ್ದು ಅದು ಭಾರತೀಯ ಜೀವ ವಿಮಾ ನಿಗಮದಲ್ಲಿ ಹೂಡಿಕೆ ಮಾಡುತ್ತಿದೆ.

ಮರಣ ಪರಿಹಾರ ನಿಧಿ:

ಮರಣ ಪರಿಹಾರ ನಿಧಿಯ ಬಗ್ಗೆ ಗ್ರೂಪ್ ಹೊಂದಿರುವ ಹೊಣೆಗಾರಿಕೆಯನ್ನು ವರದಿಗಾರಿಕೆ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ.

ನಿರೂಪಿತ ಸೌಲಭ್ಯ ಯೋಜನೆ:

ಗ್ರೂಪ್ ಗ್ರ್ಯಾಚ್ಯುಟಿ ಕಾಯ್ದೆ 1972ರನ್ವಯ ಗ್ರ್ಯಾಚ್ಯುಟಿ ಪಾವತಿಗಾಗಿ ನಿರೂಪಿತ ಸೌಲಭ್ಯ ಯೋಜನೆಯನ್ನು ಹೊಂದಿದೆ. ಗ್ರ್ಯಾಚ್ಯುಟಿ ಯೋಜನೆಯು ನೌಕರರ ನಿವೃತ್ತಿಗೆ ನಿಗದಿಯಾಗಿರುವ ವಯೋಮಾನದ ಸೇವಾ ಅವಧಿಯಲ್ಲಿ 5 ವರ್ಷ ಅಥವಾ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ ಒಟ್ಟಾಗಿ ಹಣಕಾಸು ಪಾವತಿ ಸೌಲಭ್ಯ ಒದಗಿಸುತ್ತದೆ. ಅಂಗವಿಕಲತೆ ಅಥವಾ ಸೇವೆಯಿಂದ ವಜಾ ಆದಲ್ಲಿ ಅಂತಹ ಸಿಬ್ಬಂದಿಯವರಿಗೆ ಅವರು ಕಂಪನಿಯೊಂದಿಗೆ ಅದುವರೆಗೂ ಸೇವೆ ಸಲ್ಲಿಸಿದ ವರ್ಷಗಳು ಮತ್ತು ಸಂಬಂಧಪಟ್ಟ ಸಿಬ್ಬಂದಿಯವರು ಪಡೆದ ಕೊನೆಯ ತಿಂಗಳ ವೇತನ ಅಂಶಗಳನ್ನು ಪರಿಗಣಿಸಿ ಗ್ರ್ಯಾಚ್ಯುಟಿಯನ್ನು ಪಾವತಿ ಮಾಡಲಾಗುತ್ತದೆ. ಭಾರತೀಯ ಜೀವ ವಿಮಾ ನಿಗಮ ನಿರ್ವಹಿಸುತ್ತಿರುವ ಎಂಎಸ್‌ಐಎಲ್ ನೌಕರರ ನಿವೃತ್ತಿ ನಿಧಿ ಟ್ರಸ್ಟ್‌ಗೆ ಕಂಪನಿ ವಂತಿಗೆ ನೀಡುತ್ತದೆ.

ಗ್ರೂಪ್ ಋಣಭಾರವನ್ನು (ಯೋಜಿತ ಘಟಕ ಸಾಲ ವಿಧಾನವನ್ನು ಬಳಸಿ) ಪ್ರತಿ ವರದಿ ಅವಧಿಯ ಕೊನೆಯಲ್ಲಿ ವಿಮಾಗಣನ ಮೌಲ್ಯಮಾಪನದಿಂದ ನಿರ್ಧರಣೆ ಮಾಡಲಾಗುತ್ತಿದೆ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವನ್ನು ಭವಿಷ್ಯದ ಅಂದಾಜು ನಗದು ಚಲಾವಣೆಯನ್ನು ಸಂಬಂಧಿತ ಬಾಧ್ಯತೆಯ ಅಂದಾಜು ಅವಧಿಯನ್ನು ಹೊಂದಿರುವ ಸರ್ಕಾರದ ಬಾಂಡುಗಳಿಂದ ವರದಿಯ ವರ್ಷದ ಕೊನೆಯಲ್ಲಿ ಲಭ್ಯವಾಗುವ ಮಾರುಕಟ್ಟೆ ಫಲಿತಾಂಶಗಳಿಗೆ ಸಂಬಂಧಿಸಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ನಿವ್ವಳ ಬಡ್ಡಿ ವೆಚ್ಚವನ್ನು ನಿರೂಪಿತ ಸೌಲಭ್ಯ ಬಾಧ್ಯತೆಯನ್ನು ನಿವ್ವಳ ಬಾಕಿ ಮತ್ತು ಯಾವುದಾದರೂ ಯೋಜನೆ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯಗಳಿಗೆ ಕಡಿತ ದರ (ಸೋಡಿ) ಅನ್ವಯಿಸಿ ಲೆಕ್ಕ ಹಾಕಲಾಗುತ್ತಿದೆ. ಈ ವೆಚ್ಚವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನೌಕರರ ಸೌಲಭ್ಯ ವೆಚ್ಚದಲ್ಲಿ ಸೇರಿಸಲಾಗುತ್ತದೆ.

ಗ್ರ್ಯಾಚ್ಯುಟಿ ಯೋಜನೆಯ ಸಂಬಂಧಿತ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಬಾಧ್ಯತೆ ಅಥವಾ ಆಸ್ತಿಯು ವರದಿ ಅವಧಿಯ ಕೊನೆಯಲ್ಲಿ ಯಾವುದಾದರೂ ಯೋಜನಾ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯವನ್ನು ಕಳೆದು ಉಂಟಾಗುವ ಮೌಲ್ಯವೇ ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವಾಗುತ್ತದೆ.

ವಿಮಾಗಣನಾ ಅಂದಾಜುಗಳಲ್ಲಿ ಅನುಭವ, ಹೊಂದಾಣಿಕೆ ಮತ್ತು ಮಾರ್ಪಾಟುಗಳಿಂದ ಉಂಟಾಗುವ ಲಾಭ ಮತ್ತು ನಷ್ಟಗಳ ಮರು ಮಾಪನವನ್ನು ಅವುಗಳು ಉದ್ಭವಿಸುವ ಅವಧಿಯಲ್ಲಿ ಮಾನ್ಯ ಮಾಡಲಾಗುತ್ತದೆ. ಇದನ್ನು ನೇರವಾಗಿ ಇತರ ಸಮಗ್ರ ಆದಾಯದಲ್ಲಿ ಮತ್ತು ಲಾಭ ಅಥವಾ ನಷ್ಟದಲ್ಲಿ ಎಂದಿಗೂ ಮರು ವರ್ಗೀಕರಣ ಮಾಡುವುದಿಲ್ಲ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯದಲ್ಲಿ ಯೋಜನಾ ತಿದ್ದುಪಡಿ ಅಥವಾ ಸ್ಥಗಿತತೆಯಿಂದ ಉಂಟಾಗುವ ಬದಲಾವಣೆಯನ್ನು ತಕ್ಷಣವೇ ಲಾಭ ಮತ್ತು ನಷ್ಟ ಹೇಳಿಕೆಯಲ್ಲಿ ಹಿಂದಿನ ಸೇವಾ ವೆಚ್ಚವೆಂದು ಮಾನ್ಯಮಾಡಲಾಗುತ್ತದೆ.

ಗಳಿಕೆ ರಜೆಗಳು:

ಗ್ರೂಪ್‌ನ ನೀತಿನಿಯಮಾನುಸಾರ, ನೌಕರರು ಉಪಯೋಗಿಸದೇ ಜಮೆಯಾಗುವ ರಜೆಗಳನ್ನು ಮುಂದಿನ ಸೇವಾ ಅವಧಿಗೆ ಮುಂದುವರಿಸಿಕೊಂಡು ಹೋಗಬಹುದು ಮತ್ತು ಬಳಸಿಕೊಳ್ಳಬಹುದು ಅಥವಾ ನಗದು ಪರಿಹಾರ ಪಡೆದುಕೊಳ್ಳಬಹುದಾಗಿದೆ. ಪರಿಹಾರಿತ ಗೈರುಹಾಜರಿಯು ನೌಕರರು ಸೇವೆ ಸಲ್ಲಿಸುವ ಅವಧಿಯ ಕೊನೆಯಾದ ನಂತರ 12 ತಿಂಗಳೊಳಗಾಗಿ ಬಾಕಿ ಇರುತ್ತವೆ. ಆ ಸೌಲಭ್ಯವನ್ನು ಪ್ರಸಕ್ತ ನೌಕರರ ಸೌಲಭ್ಯ ಎಂದು ವರ್ಗೀಕರಣ ಮಾಡಲಾಗುವುದು. ಗ್ರೂಪ್ ಆ ತೆರನಾದ ಪರಿಹಾರಿತ ಗೈರುಹಾಜರಿಯನ್ನು ನೌಕರರು ಸೇವೆ ಸಲ್ಲಿಸುವ ವರ್ಷದಲ್ಲಿ ತನ್ನ ಬಾಧ್ಯತೆಯೆಂದು ಪರಿಗಣಿಸುತ್ತದೆ. ಅದು ನೌಕರರ ಹಕ್ಕನ್ನು ವೃದ್ಧಿಸುತ್ತದೆ.

ಇದರೊಡಗಿನ ಸದರಿ ಬಾಧ್ಯತೆಯನ್ನು ಸಂಗ್ರಹಿತ ಪರಿಹಾರಿತ ಗೈರುಹಾಜರಿಗಳ ನಿರೀಕ್ಷಿತ ವೆಚ್ಚ ಬಳಕೆಯಾಗದ ರಜಾ ಹಕ್ಕಿನ ಪರಿಣಾಮವಾಗಿ ಹೆಚ್ಚುವರಿ ಮೊತ್ತವಾಗಿ ಪಾವತಿ ಮಾಡಬೇಕಾಗಿದೆ ಎಂದು ವರದಿಯ ಅವಧಿಯಂದಿನಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಗ್ರೂಪ್‌ನ ಋಣಭಾರವನ್ನು ವಿಮಾಗಣವಾಗಿ (ಯೋಜಿತ ಘಟಕ ಸಾಲ ವಿಧಾನ ಬಳಸಿ) ಪ್ರತಿ ವರದಿ ಮಾಡುವ ಅವಧಿಯ ಕೊನೆಯಲ್ಲಿ ನಿರ್ಧರಣೆ ಮಾಡಲಾಗಿದೆ.

ಇತರೆ ಅಲ್ಪಾವಧಿ ಸೌಲಭ್ಯಗಳು:

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷಿಯಾ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

ಅಲ್ಪಾವಧಿ ನೌಕರರ ಸೌಲಭ್ಯಗಳು ಕಾರ್ಯನಿರ್ವಹಣಾ ಬೋನಸ್ ಸೇರಿದಂತೆ ನೌಕರರ ವೆಚ್ಚಗಳೆಂದು ನೌಕರರು ಸಲ್ಲಿಸುವ ಸೇವಾ ಅವಧಿಗೆ ಪಾವತಿ ಮಾಡಿದ ಅಥವಾ ಮಾಡಬೇಕಾದ ಮೊತ್ತದ ಆಧಾರದಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯ ಪಟ್ಟಿಯಲ್ಲಿ ಮಾನ್ಯ ಮಾಡಲಾಗುತ್ತದೆ.

ಎಂ. ತೆರಿಗೆ ವೆಚ್ಚಗಳು:

ಆದಾಯ ತೆರಿಗೆಗಳು

ಆದಾಯ ತೆರಿಗೆ ವೆಚ್ಚಗಳು ಪ್ರಸ್ತುತ ಪಾವತಿ ಮಾಡಬೇಕಾದ ತೆರಿಗೆ ಮತ್ತು ಮುಂದೂಡಿದ ತೆರಿಗೆಯನ್ನು ಪ್ರತಿಪಾದಿಸುವುದು.

ಚಾಲ್ತಿ ತೆರಿಗೆ

ಚಾಲ್ತಿ ತೆರಿಗೆಯು ಆದಾಯ ತೆರಿಗೆ ಕಾಯ್ದೆ 1961ರ ಉಪಬಂಧಗಳನುಸಾರ ಮತ್ತು ಅನ್ವಯಿತ ತೆರಿಗೆ ದರಗಳನುಸಾರ ಆ ವರ್ಷದ ತೆರಿಗೆ ವಿಧಿಸಬಹುದಾದ ಲಾಭದ ಮೊತ್ತ ಆಧರಿಸಿ ನಿರ್ಧರಣೆ ಮಾಡಿರುವ ಪಾವತಿ ಮಾಡಬೇಕಾದ ತೆರಿಗೆ ಮೊತ್ತವಾಗಿರುತ್ತದೆ. ಅಂತೆಯೇ ಇತರ ದೇಶಗಳಲ್ಲಿ ಗ್ರೂಪ್ ಕಾರ್ಯನಿರ್ವಹಿಸಿ ಅಲ್ಲಿ ತೆರಿಗೆ ವಿಧಿಸಬಹುದಾದ ಆದಾಯ ಗಳಿಸಿದಲ್ಲಿ ಆದೇಶದಲ್ಲಿ ಅನ್ವಯಿಸುವ ತೆರಿಗೆ ಕಾನೂನುಗಳನುಸಾರ ಚಾಲ್ತಿ ತೆರಿಗೆ ಪಾವತಿ ಮಾಡಬೇಕಾಗುವುದು.

ಗ್ರೂಪ್ ಚಾಲ್ತಿ ತೆರಿಗೆ ಆಸ್ತಿ ಮತ್ತು ಚಾಲ್ತಿ ತೆರಿಗೆ ಋಣ ಬಾಧ್ಯತೆಗಳನ್ನು ನಿರುಕ್ತಿಗೊಳಿಸಿದೆ. ಇಲ್ಲಿ ಗ್ರೂಪ್ ಕಾನೂನಾತ್ಮಕವಾಗಿ ಪರಿಗಣಿತ ಮೊತ್ತಗಳನ್ನು ಚಾಲನೆಗೊಳಪಡಿಸಿ ಜಾರಿಗೊಳಿಸುವ ಹಕ್ಕು ಹೊಂದಿದೆ ಮತ್ತು ಅದು ನಿವ್ವಳ ಆಧರಿತದಲ್ಲಿ ಇತ್ಯರ್ಥಪಡಿಸುವ ಅಥವಾ ಏಕಕಾಲಕ್ಕೆ ಆಸ್ತಿಯನ್ನು ಹೊಂದಲು ಮತ್ತು ಋಣಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಉದ್ದೇಶಿಸುತ್ತದೆ.

ಮುಂದೂಡಿದ ತೆರಿಗೆ:

ಮುಂದೂಡಿದ ತೆರಿಗೆಗಳನ್ನು ಆಸ್ತಿಗಳ ವಾಹಕ ಮೊತ್ತಗಳು ಮತ್ತು ಋಣಬಾಧ್ಯತೆಗಳ ನಡುವಿನ ತಾತ್ಕಾಲಿಕ ವ್ಯತ್ಯಾಸಗಳೆಂದು ಹಣಕಾಸು ಹೇಳಿಕೆಗಳಲ್ಲಿ ಮತ್ತು ತೆರಿಗೆ ವಿಧಿಸಬಹುದಾದ ಲಾಭದ ಗಣನೆಯಲ್ಲಿ ಉಪಯೋಗಿಸುವ ಸಮನ್ವಯಿಕ ತೆರಿಗೆ ಆಧಾರಗಳಲ್ಲಿ ಮಾನ್ಯ ಮಾಡಲಾಗುತ್ತದೆ. ಮುಂದೂಡಿದ ತೆರಿಗೆ ಬಾಧ್ಯತೆಗಳನ್ನು ಸಾಮಾನ್ಯವಾಗಿ ಎಲ್ಲ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳೆಂದು ಗುರುತಿಸಲಾಗುತ್ತದೆ. ಮುಂದೂಡಿದ ತೆರಿಗೆ ಆಸ್ತಿಗಳನ್ನು ಸಾಮಾನ್ಯವಾಗಿ ಎಲ್ಲಾ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗಾಗಿ ತೆರಿಗೆ ವಿಧಿಸಬಹುದಾದ ಲಾಭಗಳು ಲಭ್ಯವಾಗಲಿದ್ದು ಅವುಗಳಿಗೆ ಪ್ರತಿಯಾಗಿ ಆ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಿಕೊಳ್ಳಲು ಸಾಧ್ಯ ಎಂದು ಮಾನ್ಯ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ವರದಿ ಮಾಡುವ ಪ್ರತಿ ಅವಧಿಯ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಮುಂದೆ ಅದು ಉಂಟಾಗಬಹುದೆಂದು ಊಹಿಸುವುದಕ್ಕಿಲ್ಲ ಎನ್ನುವ ಮಟ್ಟಿಗೆ ಕಡಿತಗೊಳಿಸಲಾಗುತ್ತದೆ. ಏಕೆಂದರೆ ಸಾಕಷ್ಟು ತೆರಿಗೆ ವಿಧಿಸಬಹುದಾದ ಲಾಭವು ಲಭ್ಯವಿದ್ದು ಪೂರ್ಣ ತೆರಿಗೆ ಕಡಿತಕ್ಕೆ ಅವಕಾಶ ಅಥವಾ ವಸೂಲಿ ಮಾಡಬೇಕಾದ ಆಸ್ತಿಯ ಭಾಗ ಲಭ್ಯವಿರುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಬಾಧ್ಯತೆಗಳನ್ನು ಬಾಧ್ಯತೆಗಳು ಇತ್ಯರ್ಥಗೊಳಿಸಲಾದ ಅವಧಿಯಲ್ಲಿ ಅನ್ವಯವಾಗಬಹುದೆಂದು ನಿರೀಕ್ಷಿಸಿದ ತೆರಿಗೆ ದರಗಳಲ್ಲಿ ಅಥವಾ ಆಸ್ತಿಯ ನಗದೀಕರಣದ ಅಥವಾ ಹಾಲಿ ಇರುವ ತೆರಿಗೆದರ (ತೆರಿಗೆ ಕಾನೂನುಗಳು) ಅಥವಾ ತದನಂತರ ವರದಿ ಅವಧಿಯ ಕೊನೆಯಲ್ಲಿ ರೂಪಿಸುವ ಕಾನೂನುಗಳನ್ನು ಆಧರಿಸಿ ಮಾಪನ ಮಾಡಲಾಗುತ್ತದೆ.

ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಬಾಧ್ಯತೆಗಳು ಒಂದು ವೇಳೆ ಚಾಲ್ತಿ ತೆರಿಗೆ ಬಾಧ್ಯತೆಗಳಿಗೆ ಪ್ರತಿಯಾಗಿ ಚಾಲ್ತಿ ತೆರಿಗೆ ಆಸ್ತಿಗಳನ್ನು ರೂಪಿಸಲು ಕಾನೂನಾತ್ಮಕ ಹಕ್ಕು ಆಸ್ತಿತ್ವದಲ್ಲಿದ್ದಲ್ಲಿ ಮತ್ತು ಮುಂದೂಡಿದ ತೆರಿಗೆಗಳು. ಅದೇ ತೆರಿಗೆ ವಿಧಿಸಬಹುದಾದ ಸಂಸ್ಥೆ ಮತ್ತು ಅದೇ ತೆರಿಗೆ ಪ್ರಾಧಿಕಾರಕ್ಕೆ ಸಂಬಂಧಿಸಿದಲ್ಲಿ ನಿರುಕ್ತಿಗೊಳ್ಳುತ್ತವೆ.

ಒಂದು ಅವಧಿಯ ಚಾಲ್ತಿ ಮತ್ತು ಮುಂದೂಡಿದ ತೆರಿಗೆ:

ಚಾಲ್ತಿ ಮತ್ತು ಮುಂದೂಡಿದ ತೆರಿಗೆಯನ್ನು ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಬರುವ ಬಾಬ್ತುಗಳಿಗೆ ಸಂಬಂಧಿಸಿದಂತಹ ಪ್ರಕರಣದಲ್ಲಿ ಚಾಲ್ತಿ ಮತ್ತು ಮುಂದೂಡಿದ ತೆರಿಗೆಗಳನ್ನು ಸಹ ಕ್ರಮವಾಗಿ ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಮಾನ್ಯ

ಮಾಡಿರುವುದನ್ನು ಹೊರತುಪಡಿಸಿ ಕಂಪನಿಯ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಲಾಗುತ್ತದೆ.

ಎನ್) ಪ್ರತಿ ಷೇರಿನ ಗಳಿಕೆಗಳು:

ಷೇರು ಒಂದರ ಮೂಲ ಗಳಿಕೆಗಳನ್ನು , ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಗೆ ನಿವ್ವಳ ಲಾಭ ಅಥವಾ ನಷ್ಟವನ್ನು, (ಕಾರಣವಾಗಬಹುದಾದ ತೆರಿಗೆ ಕಡಿತದ ನಂತರ) ಆ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗಿದೆ. ಈ ಅವಧಿಯಲ್ಲಿ ಬಾಕಿ ಉಳಿದಿರುವ ಈಕ್ವಿಟಿ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಸಂಬಂಧಿಸಿತ ಸಂಪನ್ಮೂಲಗಳಲ್ಲಿ ಯಾವುದೇ ಬದಲಾವಣೆಯಿಲ್ಲದೆ ಬದಲಾಯಿಸಿದ ಪೋಟೆನ್ಶಿಯಲ್ ಷೇರುಗಳ ಪರಿವರ್ತನೆಯನ್ನು ಹೊರತುಪಡಿಸಿ ಬೋನಸ್ ನೀಡಿಕೆಗೆ ಹೊಂದಾಣಿಕೆ ಮಾಡಲಾಗಿದೆ.

ಷೇರು ಒಂದರ ಕ್ಷೀಣಿಸಿದ ಗಳಿಕೆಗಳನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ, ಈಕ್ವಿಟಿ ಷೇರುದಾರರುಗಳಿಗೆ ಅನ್ವಯಿಸಬಹುದಾದ ಅವಧಿಯ ನಿವ್ವಳ ಲಾಭ ಅಥವಾ ನಷ್ಟವನ್ನು ಮತ್ತು ಈ ಅವಧಿಯಲ್ಲಿ ಬಾಕಿಯಿರುವ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯನ್ನು ಎಲ್ಲಾ ಕ್ಷೀಣಿಸುವ ಪೊಟೆನಿಷಿಯಲ್ ಈಕ್ವಿಟಿ ಷೇರುಗಳಿಗೆ ಹೊಂದಾಣಿಕೆ ಮಾಡಿದೆ.

ಪ್ರತಿ ಷೇರಿನ ಕ್ಷೀಣಿಸಿದ ಗಳಿಕೆಯು ಪ್ರತಿ ಷೇರಿನ ಮೂಲ ಗಳಿಕೆಯ ನಿರ್ಧಾರಣೆಗೆ ಬಳಸಿದ ಸಂಖ್ಯೆಗೆ ಪರಿಗಣಿಸಲು ಹೊಂದಾಣಿಕೆಯಾಗುತ್ತದೆ.

(i) ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದೊಂದಿಗೆ ಬಡ್ಡಿ ಮತ್ತು ಇತರ ಹಣಕಾಸು ವೆಚ್ಚಗಳ ಸಂಯೋಜನೆಗಳ ಆದಾಯ ತೆರಿಗೆಯ ನಂತರದ ಪರಿಣಾಮ ಮತ್ತು

(ii) ಎಲ್ಲಾ ಕ್ಷೀಣಿಸಿದ ಈಕ್ವಿಟಿ ಷೇರುಗಳ ಮೌಲ್ಯದ ಪರಿವರ್ತನೆಯನ್ನು ಊಹಿಸಿ ಮಾಪನ ಮಾಡಿದ ಸರಾಸರಿ ಬಾಕಿ ಇರಬಹುದಾದ ಹೆಚ್ಚುವರಿ ಈಕ್ವಿಟಿ ಷೇರುಗಳು

ಓ) ಉಪಬಂಧಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳು:

ಗ್ರೂಪ್ ಹಿಂದಿನ ಘಟನಾವಳಿಗಳ ಪರಿಣಾಮವಾಗಿ ಪ್ರಸಕ್ತದಲ್ಲಿ ಪೂರೈಸಬೇಕಾಗಿರುವ ಬಾಧ್ಯತೆಯನ್ನು (ಕಾನೂನಾತ್ಮಕ ಅಥವಾ ರಚನಾತ್ಮಕ) ಹೊಂದಿದ್ದಲ್ಲಿ ಆಗ ಅದಕ್ಕಾಗಿ ಅವಕಾಶಗಳನ್ನು ಮಾನ್ಯ ಮಾಡಲಾಗಿದೆ. ಆ ರೀತಿಯ ಬಾಧ್ಯತೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯವಿದ್ದು, ಈ ಬಗ್ಗೆ ವಿಶ್ವಾಸನೀಯವಾಗಿ ಅಂದಾಜು ಮಾಡಬಹುದಾಗಿದೆ.

ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದಿನಂತೆ ಪ್ರಸಕ್ತ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಅಗತ್ಯವೆಂದು ಪರಿಗಣಿಸಿರುವ ಮೊತ್ತವು ಅತ್ಯುತ್ತಮ ಅಂದಾಜು ಮೊತ್ತ ಎಂದು ಬಾಧ್ಯತೆಯನ್ನು ಆವರಿಸಿಕೊಂಡಿರುವ ಅಪಾಯ ಮತ್ತು ಅನಿಶ್ಚಿತತೆಗಳನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಮಾಡಲಾಗಿದೆ. ಪ್ರಸಕ್ತ ಬಾಧ್ಯತೆಯನ್ನು ಇತ್ಯರ್ಥಪಡಿಸಲು ನಗದು ಚಲಾವಣೆಯನ್ನು ಬಳಸಿ ಅಂದಾಜಿಸಿದ ಮುನ್ನೇರ್ಪಾಡುಗಳನ್ನು ಮಾಪನ ಮಾಡಿದಾಗ ಅದರ ವಾಹಕ ಮೊತ್ತವು ಆ ನಗದು ಚಲಾವಣೆಯ ಪ್ರಸಕ್ತ ಮೌಲ್ಯವಾಗಿರುತ್ತದೆ. (ಯಾವಾಗ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿರುವುದು).

ಒಂದು ವೇಳೆ ಹಣದ ಸಮಯ ಮೌಲ್ಯದ ಪರಿಣಾಮ ವಸ್ತುವಾಗಿದ್ದಲ್ಲಿ ಮುನ್ನೇರ್ಪಾಡುಗಳನ್ನು ಮುಂದಿನ ನಿರೀಕ್ಷಿತ ನಗದು ಚಲಾವಣೆಯನ್ನು ತೆರಿಗೆ ಪೂರ್ವ ದರದಲ್ಲಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ಇದು ಹಣದ ಸಮಯ ಮೌಲ್ಯದ ಮಾರುಕಟ್ಟೆ ಅಂದಾಜುಗಳನ್ನು ಮತ್ತು ಬಾಧ್ಯತೆಗೆ ನಿರ್ದಿಷ್ಟವಾದ ಅಪಾಯಗಳನ್ನು ಬಿಂಬಿಸುತ್ತದೆ. ಕಾಲಾವಧಿಯ ಕಾರಣದಿಂದಾಗಿ ಮುನ್ನೇರ್ಪಾಡುಗಳ ಹೆಚ್ಚಳವನ್ನು ಬಡ್ಡಿ ವೆಚ್ಚವೆಂದು ಮಾನ್ಯ ಮಾಡಲಾಗಿದೆ.

ಗುರುತರ ಜವಾಬ್ದಾರಿಯುಳ್ಳ ಗುತ್ತಿಗೆಗಳಡಿ ಉಂಟಾಗುವ ಪ್ರಸಕ್ತ ಬಾಧ್ಯತೆಗಳನ್ನು ಮುನ್ನೇರ್ಪಾಡುಗಳೆಂದು ಮಾನ್ಯ ಮಾಡಲಾಗಿದೆ ಮತ್ತು ಮಾಪನ ಮಾಡಲಾಗಿದೆ.. ಒಂದು ಗುರುತರ ಗುತ್ತಿಗೆಯನ್ನು ಒಂದು ಗುತ್ತಿಗೆಯಡಿ ಇರುವ ಬಾಧ್ಯತೆಗಳನ್ನು ಪೂರೈಸಲು ತಡೆಯಲಸಾಧ್ಯವಾದ ವೆಚ್ಚದ ಮೊತ್ತವು ಆ ಗುತ್ತಿಗೆಯಿಂದ ಬರಬಹುದೆಂದು ನಿರೀಕ್ಷಿಸಲಾದ ಹಣಕಾಸು ಲಾಭಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ಗುರುತರ ಜವಾಬ್ದಾರಿಗಳ ಗುತ್ತಿಗೆ ಎಂದು ಪರಿಗಣಿಸಲಾಗುತ್ತದೆ.

ಸ್ಥಗಿತಗೊಳಿಸುವ ವೆಚ್ಚಗಳನ್ನು ಬಾಧ್ಯತೆಯ ಇತ್ಯರ್ಥವಾಗಿ ವೆಚ್ಚದ ಅತ್ಯುತ್ತಮ ಅಂದಾಜು ಎಂದು ಪರಿಗಣಿಸಲಾಗುವುದು ಅಥವಾ ಬಾಧ್ಯತೆಯನ್ನು ಮೂರನೇ ವ್ಯಕ್ತಿಗೆ ವರ್ಗಾಯಿಸುವುದು. ಬಾಧ್ಯತೆಗಳ ಸ್ಥಗಿತಗೊಳಿಸುವ ಮುನ್ನೇರ್ಪಾಡುಗಳನ್ನು ವ್ಯವಸ್ಥೆಯ ಆರಂಭದಲ್ಲೇ ಗುರುತಿಸಬೇಕಾಗುತ್ತದೆ. ವ್ಯವಸ್ಥೆಗಳ ಕೊನೆಯಲ್ಲಿ ಭರಿಸಬೇಕಾದ ಅಂದಾಜು ವೆಚ್ಚಗಳನ್ನು ಮರಳಿ ಪಡೆಯುವ ಮಾರುಕಟ್ಟೆ ದರ ಬಳಸಿ ಅದರ ಪ್ರಸಕ್ತ ಮೌಲ್ಯಕ್ಕೆ ಕಡಿತಗೊಳಿಸಲಾಗಿದೆ.

ಕೆಲವು ಅಥವಾ ಎಲ್ಲ ಹಣಕಾಸು ಲಾಭಗಳನ್ನು ಸೌಲಭ್ಯಗಳನ್ನು ಇತ್ಯರ್ಥಗೊಳಿಸಬೇಕಾದಲ್ಲಿ ಮೂರನೇ ವ್ಯಕ್ತಿ ಸಂಸ್ಥೆಯಿಂದ ಮರುವಸೂಲಿ ಮಾಡುವ ಅವಕಾಶವನ್ನು ನಿರೀಕ್ಷಿಸಲಾಗುತ್ತದೆ. ಹಾಗೆ ಪಡೆಯಬಹುದಾದ ಮೊತ್ತವು ಒಂದು ವೇಳೆ ಮರು ಭರಿಸುವಿಕೆಯ ಮೊತ್ತವು ಪಡೆಯಲಾಗುವುದು ಎಂದು ಬಹುತೇಕ ಖಚಿತವಾಗಿದ್ದಲ್ಲಿ ಆಸ್ತಿ ಎಂದು ಮಾನ್ಯ ಮಾಡಲಾಗಿದೆ ಮತ್ತು ಆ ಪಡೆಯಬಹುದಾದ ಮೊತ್ತವನ್ನು ವಿಶ್ವಾಸನೀಯವಾಗಿ ಮಾಪನ ಮಾಡಲಾಗಿದೆ.

ಸಂಭಾವ್ಯ ಬಾಧ್ಯತೆಗಳನ್ನು ಕೆಳಕಂಡ ಪ್ರಕರಣ ಸನ್ನಿವೇಶಗಳಿದ್ದಲ್ಲಿ ಬಹಿರಂಗಪಡಿಸಲಾಗಿದೆ:

(i) ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನಾವಳಿಯಿಂದ ಉಂಟಾಗಿದ್ದಲ್ಲಿ, ಆ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯು ಅಗತ್ಯತೆ ಕಂಡು ಬರುವ ಸಾಧ್ಯತೆಗಳು ಇಲ್ಲದಿರುವಾಗ

(ii) ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನೆಯಿಂದ ಉಂಟಾಗಿದ್ದು ಬಾಧ್ಯತೆಯ ವಿಶ್ವಾಸನೀಯ ಅಂದಾಜು ಮಾಡಲು ಸಾಧ್ಯವಾಗದಿದ್ದಾಗ ಮತ್ತು

(iii) ಹಿಂದಿನ ಘಟನಾವಳಿಗಳಿಂದ ಉಂಟಾಗಬಹುದಾದ ಬಾಧ್ಯತೆಗಳಲ್ಲಿ ಸಂಪನ್ಮೂಲಗಳ ರವಾನೆ ಸಾಧ್ಯತೆಗಳು ಕ್ಷೀಣವಾಗಿಲ್ಲ ದಿದ್ದಲ್ಲಿ;

ಸಂಭಾವ್ಯ ಆಸ್ತಿಗಳನ್ನು ಆರ್ಥಿಕ ಲಾಭಗಳ ಒಳಹರಿವಿಕೆಯ ಸಾಧ್ಯತೆಗಳಿದ್ದಾಗ ಲೆಕ್ಕ ನಿರ್ವಹಣಾ ವಿಭಾಗಕ್ಕೆ ಟಿಪ್ಪಣಿಗಳ ಮೂಲಕ ಹಣಕಾಸು ಹೇಳಿಕೆಗಳಲ್ಲಿ ತೋರಿಸಲಾಗುತ್ತದೆ.

ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಮುನ್ನೇರ್ಪಾಡುಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳ ಕುರಿತು ಪರಿಶೀಲಿಸಲಾಗಿದೆ.

ಪಿ) ಹಣಕಾಸು ಸಾಧನಗಳು

ಹಣಕಾಸು ಆಸ್ತಿಗಳು:

ಆರಂಭಿಕ ಮಾನ್ಯತೆ ಮತ್ತು ಮಾಪನ:

ಎಲ್ಲಾ ಆರ್ಥಿಕ ಹಣಕಾಸು ಆಸ್ತಿಗಳನ್ನು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಲಾಗಿದೆ ಮತ್ತು ಆ ಹಣಕಾಸು ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದ ವೆಚ್ಚವನ್ನು ಹೊಂದಾಣಿಕೆ ಮಾಡಲಾಗಿದೆ.

ತದನಂತರದ ಮಾಪನ

ಋಣ ಸಾಧನಗಳು

ಋಣಸಾಧನಗಳು ಅಪಮೌಲ್ಯಗೊಳಿಸಿದ ವೆಚ್ಚದಲ್ಲಿ :

ಒಂದು ಋಣ ಸಾಧನವನ್ನು ವ್ಯವಹಾರದ ಮಾದರಿಯ ವ್ಯಾಪ್ತಿಯಲ್ಲಿ ಅಂದರೆ ಒಪ್ಪಂದವಾದ ನಗದು ಹರಿವಿಕೆಯ ಸಂಗ್ರಹಣೆಗಾಗಿ ಆಸ್ತಿಯ ಹೊಂದುವ ಉದ್ದೇಶಕ್ಕಾಗಿ ಆಸ್ತಿಯನ್ನು ಹಿಡಿದಿಟ್ಟಿದ್ದಲ್ಲಿ ಅದನ್ನು ತದನಂತರ ಮಾಪನ ಮಾಡಲಾಗುತ್ತದೆ ಮತ್ತು ಗುತ್ತಿಗೆಗಾರಿಕೆಯ ಹಣಕಾಸು ಆಸ್ತಿಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಹರಿವಿಕೆಗೆ ಅವಕಾಶ ಒದಗಿಸುತ್ತದೆ. ಅವುಗಳು ಇಡಿಯಾಗಿ ಬಾಕಿ ಇರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತವೆ.

ಆರಂಭದ ಮಾಪನದ ನಂತರ ಅಂತಹ ಹಣಕಾಸು ಆಸ್ತಿಗಳನ್ನು, ಪರಿಣಾಮಕಾರಿ ಬಡ್ಡಿ ದರದ ವಿಧಾನ (ಇಐಆರ್) ಉಪಯೋಗಿಸಿಕೊಂಡು ಅಪಮೌಲ್ಯೀಕರಣ ವೆಚ್ಚ ವಿಧಾನದಲ್ಲಿ ಮಾಪನ ಮಾಡಲಾಗಿದೆ. ಅಪಮೌಲ್ಯೀಕರಣ ವೆಚ್ಚವನ್ನು ಪರಿಣಾಮಕಾರಿ ಬಡ್ಡಿ ದರದ ಅವಿಭಾಜ್ಯ ಭಾಗಗಳಾದ ಯಾವುದೇ ಸೋಡಿ, ಸ್ವಾಧೀನದ ಮೇಲೆ ಪ್ರೀಮಿಯಂ ಮತ್ತು ಶುಲ್ಕಗಳು ಅಥವಾ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಲೆಕ್ಕ ಹಾಕಲಾಗಿದೆ. ಪರಿಣಾಮಕಾರಿ ಬಡ್ಡಿ ದರದ ಅಪಮೌಲ್ಯೀಕರಣವು ಲಾಭ ಅಥವಾ ನಷ್ಟದಲ್ಲಿನ ಹಣಕಾಸು ಆದಾಯದಲ್ಲಿ ಒಳಗೊಂಡಿದೆ. ನಿಶ್ಚಲತೆಯಿಂದ ಉಂಟಾದ ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯ ಹೊಂದಿರುವ ಋಣ ಸಾಧನಗಳು (FVTOCI)

ಒಂದು ಋಣ ಸಾಧನವನ್ನು ತದನಂತರದಲ್ಲಿ ಒಂದು ವೇಳೆ ಅದನ್ನು ವ್ಯವಹಾರದ ಮಾದರಿ ವ್ಯಾಪ್ತಿಯಲ್ಲಿ ಹಿಡಿದಿಟ್ಟಿದಲ್ಲಿ ಅದನ್ನು ಇತರ ಸಮಗ್ರ ಆದಾಯದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ಇದರ ಉದ್ದೇಶವಾದ ಗುತ್ತಿಗೆಗಾರಿಕೆಯ ನಗದು ಚಲಾವಣೆ ಮತ್ತು ಹಣಕಾಸು ಆಸ್ತಿಗಳ ಮಾರಾಟ ಎರಡನ್ನು ಸಾಧಿಸಲಾಗಿದೆ ಮತ್ತು ಆಸ್ತಿಯ ಗುತ್ತಿಗೆಗಾರಿಕೆಯ ಷರತ್ತುಗಳು ನಿರ್ದಿಷ್ಟ ದಿನಾಂಕಗಳಂದು ನಗದು ಚಲಾವಣೆಗೆ ಅವಕಾಶ ಒದಗಿಸುತ್ತವೆ. ಅವುಗಳು ಸಂಪೂರ್ಣವಾಗಿ ಬಾಕಿ ಇರುವ ಅಸಲು ಮೊತ್ತದ ಮೇಲಿನ ಅಸಲು ಮತ್ತು ಬಡ್ಡಿ ಮೊತ್ತದ ಪಾವತಿಯಾಗಿರುತ್ತವೆ. ನ್ಯಾಯೋಚಿತ ಮೌಲ್ಯ ಚಲನವಲನಗಳನ್ನು ಇತರ ಸಮಗ್ರ ಆದಾಯದಲ್ಲಿ (OCI) ಮಾನ್ಯ ಮಾಡಲಾಗಿದೆ.

ಋಣಸಾಧನಗಳು ಲಾಭ ಮತ್ತು ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ : (FVTPL)

ಎಫ್‌ವಿಟಿಪಿಎಲ್ ಋಣಸಾಧನೆಗಳಿಗೆ ಒಂದು ಉಳಿಕೆ ಪ್ರವರ್ಗ ವಾಗಿರುತ್ತದೆ. ಯಾವುದೇ ಋಣಸಾಧನವು ಅಪಮೌಲ್ಯೀಕರಣದ ವೆಚ್ಚ ಅಥವಾ ಎಫ್‌ವಿಒಸಿಐ ರೂಪದಲ್ಲಿ ಪ್ರವರ್ಗೀಕರಣ ಮಾಡಲು ಬೇಕಾದ ಅರ್ಹತೆಗಳನ್ನು ಪೂರೈಸದಿದ್ದಲ್ಲಿ ಅದನ್ನು ಎಫ್‌ವಿಟಿಪಿಎಲ್ ಎಂದು ವರ್ಗೀಕರಣ ಮಾಡಲಾಗಿರುತ್ತದೆ. ಎಫ್‌ವಿಟಿಪಿಎಲ್ ವ್ಯಾಪ್ತಿಗೆ ಒಳಪಟ್ಟ ಎಲ್ಲ ಋಣಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾದ ಎಲ್ಲಾ ಮಾರ್ಪಾಡುಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

ಈಕ್ವಿಟಿ ಹೂಡಿಕೆಗಳು:

ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 109ರ ವ್ಯಾಪ್ತಿಯಲ್ಲಿ ಎಲ್ಲಾ ಈಕ್ವಿಟಿ ಹೂಡಿಕೆಗಳು, ಹಣಕಾಸು ಸಾಧನಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ. ವಾಣಿಜ್ಯೋದ್ದೇಶಕ್ಕಾಗಿ ಮತ್ತು ಸಂಭಾವ್ಯ ಪರಿಗಣನೆಗೊಳಗಾಗಿ ಹೊಂದಿರುವ ಈಕ್ವಿಟಿ ಸಾಧನಗಳನ್ನು ವ್ಯವಹಾರ ಸಂಯೋಜನೆಯಲ್ಲಿ ಸ್ವಾಧೀನಕಾರರಿಂದ ಮಾನ್ಯ ಮಾಡಲಾಗಿದೆ. ಇದಕ್ಕೆ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 103, ವ್ಯವಹಾರ ಸಂಯೋಜನೆ (Business Combination) ಅನ್ವಯಿಸುತ್ತದೆ. ಇವುಗಳನ್ನು ಎಫ್‌ವಿಟಿಪಿಎಲ್‌ಗೆ ವರ್ಗೀಕರಣ ಮಾಡಲಾಗಿದೆ. ಎಲ್ಲ ಇತರ ಈಕ್ವಿಟಿ ಸಾಧನಗಳನ್ನು

ಗ್ರೂಪ್ ಇತರ ಸಮಗ್ರ ಆದಾಯದಲ್ಲಿ ಪ್ರಸ್ತುತಪಡಿಸಲು ಕಂಪನಿ ರದ್ದುಪಡಿಸಲಾಗದ ಆಯ್ಕೆಯನ್ನು ನ್ಯಾಯೋಚಿತ ಮೌಲ್ಯದಲ್ಲಿ ತದನಂತರದ ಬದಲಾವಣೆಗಳೊಂದಿಗೆ ಮಾಡಿಕೊಳ್ಳಬಹುದಾಗಿದೆ.

ಗ್ರೂಪ್ ಈ ರೀತಿಯ ಆಯ್ಕೆಯನ್ನು ಸಾಧನ ನಂತರ ಸಾಧನ ಆಧಾರದಲ್ಲಿ ಮಾಡಿಕೊಳ್ಳುತ್ತದೆ. ಈ ವರ್ಗೀಕರಣವು ಆರಂಭದ ಮಾನ್ಯತೆಯ ಮೇರೆಗೆ ಮಾಡಿಕೊಂಡಿದೆ ಮತ್ತು ರದ್ದುಪಡಿಸಲಾಗದಂತಿದೆ.

ಗ್ರೂಪ್ ಒಂದು ವೇಳೆ ಒಂದು ಈಕ್ವಿಟಿ ಸಾಧನವನ್ನು ಎಫ್‌ವಿಒಸಿಐಗೆ ವರ್ಗೀಕರಣ ಮಾಡಲು ತೀರ್ಮಾನಿಸಿದಲ್ಲಿ ಆಗ ಸಾಧನದ ಎಲ್ಲ ನ್ಯಾಯೋಚಿತ ಮೌಲ್ಯಗಳು ಮಾರ್ಪಡುತ್ತವೆ. ಇದು ಲಾಭಾಂಶ, ದುರ್ಬಲತೆಯ ಲಾಭಗಳು ಅಥವಾ ನಷ್ಟಗಳನ್ನು ಹೊರತಾಗಿಸಿದೆ. ಮತ್ತು ವಿದೇಶಿ ವಿನಿಮಯದ ಲಾಭಗಳು ಮತ್ತು ನಷ್ಟಗಳನ್ನು ಇತರ ಸಮಗ್ರ ಆದಾಯದಲ್ಲಿ (ಒಸಿಐ) ಮಾನ್ಯ ಮಾಡಲಾಗಿದೆ.

ಇತರ ಸಮಗ್ರ ಆದಾಯ ಮೊತ್ತಗಳು, ಹೂಡಿಕೆ ಮಾರಾಟದ ಮೇಲಿನ ಮೊತ್ತವೂ ಸಹ ಲಾಭ ಮತ್ತು ನಷ್ಟದ ಹೇಳಿಕೆಗೆ ಮರು ಆವರ್ತನ ಮಾಡಲಾಗುವುದಿಲ್ಲ.

ಎಫ್‌ವಿಟಿಪಿಎಲ್ ಪ್ರವರ್ಗದಲ್ಲಿ ಸೇರಿಸಲ್ಪಟ್ಟ ಈಕ್ವಿಟಿ ಸಾಧನಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿರುವ ಎಲ್ಲಾ ಬದಲಾವಣೆಗಳೊಂದಿಗೆ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗಿದೆ.

ಹಣಕಾಸು ಆಸ್ತಿಗಳ ಅಮಾನ್ಯತೆ:

ಒಂದು ಹಣಕಾಸು ಆಸ್ತಿಯನ್ನು ಆ ಆಸ್ತಿಯಿಂದ ಪಡೆಯಬೇಕಾದ ನಗದು ಚಲಾವಣೆ (ಹರಿವಿಕೆ) ಹಕ್ಕುಗಳು ಸ್ಥಗಿತಗೊಂಡಾಗ ಅಥವಾ ಗ್ರೂಪ್ ಆಸ್ತಿಯಿಂದ ಬರಬೇಕಾಗಿರುವ ನಗದು ಹರಿವಿಕೆ ಸ್ವೀಕರಿಸುವ ತನ್ನ ಹಕ್ಕುಗಳನ್ನು ವರ್ಗಾವಣೆ ಮಾಡಿದಾಗ ಪ್ರಧಾನವಾಗಿ ಅಮಾನ್ಯ ಮಾಡಲಾಗುತ್ತದೆ.

ಒಂದು ವೇಳೆ ಕಂಪನಿ ಆಸ್ತಿಯ ಮಾಲೀಕತ್ವವನ್ನು ವರ್ಗಾವಣೆ ಮಾಡದೇ ಅಥವಾ ಮಾಲೀಕತ್ವದ ಗಣನೀಯ ಅಪಾಯ ಮತ್ತು ಅನುಕೂಲತೆಗಳನ್ನು ಉಳಿಸಿಕೊಳ್ಳದೇ ಮತ್ತು ವರ್ಗಾವಣೆಯಾದ ಆಸ್ತಿಯ ಮೇಲೆ ನಿಯಂತ್ರಣ ಮುಂದುವರಿಸಿದಲ್ಲಿ, ಗ್ರೂಪ್ ಆಸ್ತಿಯ ಮೇಲೆ ತನಗಿರುವ ಆಸಕ್ತಿಯನ್ನು ಮತ್ತು ಅದು ಪಾವತಿ ಮಾಡಬೇಕಾಗಿರುವ ಮೊತ್ತಗಳ ಋಣಬಾಧ್ಯತೆಯನ್ನು ಮಾನ್ಯ ಮಾಡುತ್ತದೆ ಎಂದರ್ಥ.

ಒಂದು ವೇಳೆ ಕಂಪನಿ ವರ್ಗಾವಣೆಯಾದ ಹಣಕಾಸು ಆಸ್ತಿಯ ಎಲ್ಲ ಗಣನೀಯ ಅಪಾಯಗಳು ಮತ್ತು ಅನುಕೂಲಗಳನ್ನು ಉಳಿಸಿಕೊಳ್ಳುತ್ತಿದ್ದಲ್ಲಿ ಗ್ರೂಪ್ ಸದರಿ ಹಣಕಾಸು ಆಸ್ತಿಯ ಮಾನ್ಯತೆಯನ್ನು ಮುಂದುವರಿಸಿದೆ ಮತ್ತು ಸ್ವೀಕರಿಸಿದ ಮೊತ್ತಕ್ಕೆ ಉಪ ಅಡಮಾನದ ಸಾಲಗಳಿಗೂ ಮಾನ್ಯ ಮಾಡುತ್ತದೆ ಎಂದರ್ಥ. ಒಂದು ಹಣಕಾಸು ಆಸ್ತಿಯ ಅದರ ಪೂರ್ಣ ಪ್ರಮಾಣದಲ್ಲಿ ಅಥವಾ ಇಡಿಯಾಗಿ ಅಮಾನ್ಯತೆಯ ಮೇರೆಗೆ ಆಸ್ತಿಯ ವಾಹಕ ಮೊತ್ತ ಮತ್ತು ಸ್ವೀಕರಿಸಿದ ಪರಿಗಣಿತ ಮೊತ್ತ ಮತ್ತು ಸ್ವೀಕರಿಸಬಹುದಾದ ಮೊತ್ತ ನಡುವೆ ವ್ಯತ್ಯಾಸ ಹಾಗೂ ಸಮಗ್ರ ಆದಾಯದಲ್ಲಿ ಗುರುತಿಸಲಾದ ಸಂಚಿತ ಲಾಭ ಅಥವಾ ನಷ್ಟ ಹಾಗೂ ಈಕ್ವಿಟಿಯಲ್ಲಿ ಸಂಚಯಗೊಂಡ ಮೊತ್ತಗಳನ್ನು ಲಾಭ ಮತ್ತು ನಷ್ಟದಲ್ಲಿ ಮಾನ್ಯ ಮಾಡಲಾಗಿದೆ.

ಕ್ಯೂ) ಹಣಕಾಸು ಹೊಣೆಗಾರಿಕೆಗಳು

ಆರಂಭದ ಮಾನ್ಯತೆ:

ಎಲ್ಲಾ ಹಣಕಾಸಿನ ಹೊಣೆಗಾರಿಕೆಗಳನ್ನು ಪ್ರಾರಂಭಿಕವಾಗಿ ನ್ಯಾಯೋಚಿತ ಮೌಲ್ಯದಲ್ಲಿ ಮಾನ್ಯ ಮಾಡಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿಲ್ಲದ (FVPL) ಹಣಕಾಸಿನ ಬಾಧ್ಯತೆಗಳ ವಿಚಾರಕ್ಕೆ ನೇರವಾಗಿ ಅನ್ವಯಿಸಬಹುದಾದ ವ್ಯವಹಾರ ವೆಚ್ಚಗಳನ್ನು ಪ್ರಾರಂಭಿಕ ಮಾನ್ಯತೆಯಲ್ಲಿ ನ್ಯಾಯೋಚಿತ ಮೌಲ್ಯಕ್ಕೆ ಸೇರಿಸಿದೆ.

ತದನಂತರದ ಮಾಪನ:

ಹಣಕಾಸಿನ ಹೊಣೆಗಾರಿಕೆಗಳನ್ನು, ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ತದನಂತರ ಮಾಪನ ಮಾಡಿರುವ ವ್ಯವಹಾರದ ಸಂಯೋಜನೆಯಲ್ಲಿ ಮಾನ್ಯ ಮಾಡಿರುವ ಸಂಭಾವ್ಯತೆ ಪರಿಗಣನೆ ಹೊರತುಪಡಿಸಿ, ತದನಂತರ ಅನ್ವಯವಾಗುವ ಬಡ್ಡಿ ವಿಧಾನ ಬಳಸಿ ಅಮಾರ್ಟೈಸ್ಡ್ ಬೆಲೆಯಲ್ಲಿ ಪರಿಗಣಿಸಿದೆ. ಸ್ಥಿತಿ ವಿವರಣ ಪಟ್ಟಿ ದಿನಾಂಕದಿಂದ ಒಂದು ವರ್ಷದ ಒಳಗೆ ಪಕ್ವವಾಗುವ ವ್ಯಾಪಾರದ ಬಗ್ಗೆ ಮತ್ತು ಇತರೆ ಪಾವತಿಗಳಿಗೆ, ಈ ಸಾಧನಗಳ ಅಲ್ಪಕಾಲಿಕ ಪಕ್ವತೆಯಿಂದಾಗಿ ನ್ಯಾಯೋಚಿತ ಮೌಲ್ಯದ ವಾಹಕ ಮೊತ್ತವು ಅಂದಾಜಿನದಾಗಿರುತ್ತದೆ.

ಹಣಕಾಸು ಹೊಣೆಗಾರಿಕೆಗಳ ಅಮಾನ್ಯತೆ:

ಒಂದು ಹಣಕಾಸು ಹೊಣೆಗಾರಿಕೆಗಳನ್ನು ಋಣಭಾರ ಬಾಧ್ಯತೆಯಡಿ ಹೊಣೆಗಾರಿಕೆಯನ್ನು ಬಿಡುಗಡೆಗೊಳಿಸಿದಲ್ಲಿ ಅಥವಾ ರದ್ದುಪಡಿಸಿದಲ್ಲಿ ಅಥವಾ ಅವಧಿ ಮುಗಿದಿದ್ದಲ್ಲಿ ಅಮಾನ್ಯತೆ ಮಾಡಲಾಗುತ್ತದೆ. ಹಾಲಿ ಹಣಕಾಸು ಋಣಬಾಧ್ಯತೆಯನ್ನು ಬದಲಿಸಿ ಅದೇ ಸಾಲಿನಿಂದ ಗಣನೀಯವಾದ ಬೇರೆ ಷರತ್ತುಗಳೊಂದಿಗೆ ಅಥವಾ ಹಾಲಿ ಬಾಧ್ಯತೆಯ ಷರತ್ತುಗಳಲ್ಲಿ ಸಾಕಷ್ಟು ಮಾರ್ಪಾಟುಗಳೊಂದಿಗೆ ಮತ್ತೊಂದು ಹಣಕಾಸು ಋಣಬಾಧ್ಯತೆ ಉಂಟು ಮಾಡಿದಾಗ ಅಂತಹ ವಿನಿಮಯ ಅಥವಾ ಮಾರ್ಪಾಟು, ಮೂಲ ಋಣಬಾಧ್ಯತೆಯ ಅಮಾನ್ಯತೆ ಎಂದು ಪರಿಗಣಿಸಲಾಗುತ್ತದೆ ಮತ್ತು ಹೊಸ ಬಾಧ್ಯತೆಯ ಮಾನ್ಯತೆಯಾಗಿರುತ್ತದೆ. ಈ ಎರಡು ಬಗೆಯ ಋಣಬಾಧ್ಯತೆಗಳ ವಾಹಕ ಮೊತ್ತಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗಿದೆ.

ಹಣಕಾಸು ಸಾಧನಗಳನ್ನು ಸ್ಥಗಿತಗೊಳಿಸುವಿಕೆ:

ಹಣಕಾಸು ಆಸ್ತಿಗಳು ಮತ್ತು ಹಣಕಾಸು ಋಣಬಾಧ್ಯತೆಗಳನ್ನು ಒಂದು ವೇಳೆ ಮಾನ್ಯ ಮಾಡಿದ ಮೊತ್ತಗಳನ್ನು ಸ್ಥಗಿತಗೊಳಿಸಲು ಪ್ರಸ್ತುತ ಜಾರಿಗೊಳಿಸಬಹುದಾದ ಕಾನೂನಾತ್ಮಕ ಹಕ್ಕು ಹೊಂದಿದ್ದಲ್ಲಿ ಮತ್ತು ನಿವ್ವಳ ಆಧಾರದಲ್ಲಿ ಏಕಕಾಲಕ್ಕೆ ಆಸ್ತಿಯ ಸಾಕಾರಕ್ಕೆ ಮತ್ತು ಋಣಬಾಧ್ಯತೆಗಳ ಇತ್ಯರ್ಥದ ಉದ್ದೇಶ ಹೊಂದಿದ್ದಲ್ಲಿ ಸ್ಥಗಿತಗೊಳಿಸಲಾಗುತ್ತದೆ.

ಆರ್) ಹಣಕಾಸು ಆಸ್ತಿಗಳ ಕ್ಷೀಣತೆ:

ಗ್ರೂಪ್ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟ(ಇಸಿಎಲ್) ಮಾದರಿ ಬಳಸಿ ನಷ್ಟ ಪರಿಹಾರ ಭತ್ಯೆಗಳನ್ನು ಮಾನ್ಯ ಮಾಡುತ್ತದೆ. ಈ ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯೀಕರಣ ಮಾಡಿರುವುದಿಲ್ಲ. ಮಹತ್ತರವಾದ ಹಣಕಾಸು ಅಂಶವನ್ನು ಒಳಗೊಂಡಿರದ ವ್ಯಾಪಾರದಿಂದ ಬರಬಹುದಾದ ನಷ್ಟ ಪರಿಹಾರ ಭತ್ಯೆಗಳನ್ನು ನಿರೀಕ್ಷಿತ ಸಾಲ ನಷ್ಟದ ಜೀವಿತಾವಧಿಗೆ ಸಮನಾದ ಮೊತ್ತಕ್ಕೆ ಮಾಪನ ಮಾಡಲಾಗಿದೆ. ಇತರ ಎಲ್ಲ ಹಣಕಾಸು ಆಸ್ತಿಗಳಿಗೆ ನಿರೀಕ್ಷಿತ ಸಾಲ ನಷ್ಟವನ್ನು 12ತಿಂಗಳಿಗೆ ಇಸಿಎಲ್‌ಗೆ ಸಮನಾಗಿರುವಂತೆ ಮಾಪನ ಮಾಡಿದೆ. ಒಂದು ವೇಳೆ ಸಾಲದ ಅಪಾಯದಲ್ಲಿ ಆರಂಭದಲ್ಲಿ ಗುರುತಿಸಿದ್ದಕ್ಕಿಂತ ಮಹತ್ತರವಾದ ಏರಿಕೆ ಕಂಡುಬಂದಲ್ಲಿ ಆಗ ಅಂತಹ ಪ್ರಕರಣಗಳನ್ನು ಜೀವಿತಾವಧಿ ಇಸಿಎಲ್ ನಂತೆ ಮಾಪನ ಮಾಡಲಾಗಿದೆ. ನಿರೀಕ್ಷಿತ ಸಾಲ ನಷ್ಟದ ಮೊತ್ತವು (ಅಥವಾ ಪ್ರತಿಲೋಮ) ವರದಿ ಮಾಡುವ ದಿನಾಂಕದಂದಿನಂತೆ ನಷ್ಟ ಪರಿಹಾರ ಭತ್ಯೆಗಳು ಹೊಂದಾಣಿಕೆಗಾಗಿ ಅಗತ್ಯವಿದ್ದು, ಮಾನ್ಯ ಮಾಡಬೇಕಾಗಿರುವ ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಕ್ಷೀಣತೆ ಲಾಭ ಅಥವಾ ನಷ್ಟ ಎಂದು ಮಾನ್ಯ ಮಾಡಲಾಗಿದೆ.

ಎಸ್) ಹಣಕಾಸೇತರ ಆಸ್ತಿಗಳ ಕ್ಷೀಣತೆ:

ಪ್ರತಿ ವರದಿ ಅವಧಿಯ ಕೊನೆಯಲ್ಲಿ, ಗ್ರೂಪ್ ತನ್ನ ಎಲ್ಲ ಗೋಚರಿತ ಮತ್ತು ಅಗೋಚರಿತ ಆಸ್ತಿಗಳ ವಾಹಕ ಮೊತ್ತಗಳನ್ನು ಪರಿಶೀಲಿಸಿ ಅವುಗಳಲ್ಲಿ ಯಾವುದಾದರೂ ಕ್ಷೀಣತೆ ನಷ್ಟವನ್ನು ಎದುರಿಸುತ್ತದೆ ಎಂಬುದನ್ನು ನಿರ್ಧರಣೆ ಮಾಡುತ್ತದೆ. ಒಂದು ವೇಳೆ ಅಂತಹ ಯಾವುದಾದರೂ ಲಕ್ಷಣ ಕಂಡು ಬಂದಲ್ಲಿ ಆ ಆಸ್ತಿಯ ಮರು ಪಡೆಯಬಹುದಾದ ಮೊತ್ತವನ್ನು ಕ್ಷೀಣತೆ ನಷ್ಟದ ಪ್ರಮಾಣ ನಿರ್ಧರಿಸಲು (ಯಾವುದೇ ಇದ್ದಲ್ಲಿ) ಅಂದಾಜು ಮಾಡಲಾಗುತ್ತದೆ.

ಯಾವುದೇ ಒಂದು ಆಸ್ತಿಯ ಪಡೆಯಬಹುದಾದ ಮೊತ್ತದ ಅಂದಾಜೀಕರಣ ಸಾಧ್ಯವಿಲ್ಲದಿದ್ದಲ್ಲಿ, ಗ್ರೂಪ್‌ಆ ಆಸ್ತಿಗೆ ಸಂಬಂಧಪಟ್ಟ ನಗದು ಸೃಜಿಸುವ ಘಟಕದ ಪಡೆಯಬಹುದಾದ ಮೊತ್ತವನ್ನು ಅಂದಾಜು ಮಾಡುತ್ತದೆ. ಅದರಲ್ಲಿ ಹಂಚಿಕೆಯ ಸಕಾರಣಾತ್ಮಕ ಮತು ಸುಸ್ಥಿರ ಆಧಾರಗಳನ್ನು ಗುರುತಿಸುವಂತಿರಬೇಕು. ಸಾಂಸ್ಥಿಕ ಆಸ್ತಿಗಳನ್ನು ಸಹ ಬಿಡಿಯಾದ ನಗದು ಸೃಜಿಸುವ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ಅಥವಾ ಅದಾಗದಿದ್ದಲ್ಲಿ ಅವುಗಳನ್ನು ನಗದು ಸೃಜಿಸುವ ಘಟಕಗಳ ಅತ್ಯಂತ ಸಣ್ಣ ಗುಂಪುಗಳಿಗೆ ಹಂಚಿಕೆ ಮಾಡಲಾಗಿದ್ದು, ಆ ಮೂಲಕ ಸಕಾರಣಾತ್ಮಕ ಮತ್ತು ಸುಸ್ಥಿರ ಹಂಚಿಕೆಯ ನೆಲೆಯನ್ನು ಗುರುತಿಸಲು ಸಾಧ್ಯ .

ಪಡೆಯಬಹುದಾದ ಮೊತ್ತವು ನ್ಯಾಯೋಚಿತ ಮೌಲ್ಯವನ್ನು ಮೀರಿದ್ದು, ಮಾರಾಟ ಮಾಡಲು ಕಡಿಮೆ ವೆಚ್ಚ ಮತ್ತು ಬಳಕೆಯ ಮೌಲ್ಯವು ಕಡಿಮೆಯಾಗಿದ್ದು, ಬಳಕೆಯಲ್ಲಿರುವ ಮೌಲ್ಯದ ಅಂದಾಜುವಿಕೆಯಲ್ಲಿಅಂದಾಜಿತ ಭವಿಷ್ಯದ ನಗದು ಚಲಾವಣೆಗಳನ್ನು ಅವುಗಳ ಅಪ್ರಸಕ್ತ ಮೌಲ್ಯಕ್ಕೆ ತೆರಿಗೆ ಪೂರ್ವ ಸೋಡಿ ದರ ಅನ್ವಯಿಸಿ ಕಡಿತಗೊಳಿಸಲಾಗುತ್ತಿದೆ. ಇದು ಹಣದ ಸಮಯ ಮೌಲ್ಯ ಮತ್ತು ಆಸ್ತಿಗೆ ನಿರ್ದಿಷ್ಟವಾದ ಅಪಾಯಗಳ ಚಾಲ್ತಿ ಮಾರುಕಟ್ಟೆ ಲೆಕ್ಕಾಚಾರಗಳನ್ನು ಬಿಂಬಿಸುತ್ತಿದ್ದು, ಅದಕ್ಕಾಗಿ ಭವಿಷ್ಯದ ನಗದು ಚಲಾವಣೆಗಳ ಅಂದಾಜುಗಳನ್ನು ಸರಿದೂಗಿಸಿರುವುದಿಲ್ಲ.

ಆಸ್ತಿಯ (ಅಥವಾ ನಗದು ಸೃಜಿಸುವ ಘಟಕ) ಪಡೆಯಬಹುದಾದ ಮೊತ್ತವು ಅದು ಹೊಂದಿರುವ ಮೊತ್ತಕ್ಕಿಂತ ಕಡಿಮೆ ಅಂದಾಜು ಮಾಡಿದ್ದಲ್ಲಿ ಆಸ್ತಿಯ (ಅಥವಾ ನಗದು ಸೃಜಿಸುವ ಘಟಕ) ವಾಹಕ ಮೊತ್ತವನ್ನು ಅದರ ಪಡೆಯಬಹುದಾದ ಮೊತ್ತಕ್ಕೆ ಇಳಿಸಲಾಗಿರುತ್ತದೆ. ಕುಗ್ಗಿಸುವಿಕೆ ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ತಕ್ಷಣವೇ ಮಾನ್ಯ ಮಾಡಲಾಗಿರುತ್ತದೆ. ಇಲ್ಲದಿದ್ದಲ್ಲಿ ಸಂಬಂಧಿತ ಆಸ್ತಿಯು ಮರು ಮೌಲ್ಯೀಕರಣದ ಮೊತ್ತ ಹೊಂದಿದ್ದಲ್ಲಿ ಅಂತಹ ಪ್ರಕರಣದಲ್ಲಿ ಕ್ಷೀಣತೆ ನಷ್ಟವನ್ನು ಮರು ಮೌಲ್ಯೀಕರಣದ ಇಳಿಕೆ ಎಂದು ಪರಿಗಣಿಸಲಾಗಿರುತ್ತದೆ.

ತದನಂತರ ಕ್ಷೀಣತೆಯ ನಷ್ಟವು ಪ್ರತಿಲೋಮಗೊಂಡಾಗ ಆಸ್ತಿಯ ವಾಹಕ ಮೊತ್ತವು (ಅಥವಾ ನಗದು ಸೃಜಿಸುವ ಘಟಕ) ಅದರ ಹಿಂಪಡೆಯಬಹುದಾದ ಮೊತ್ತದ ಪರಿಷ್ಕೃತ ಅಂದಾಜಿಗೆ ಏರಿಕೆಯಾಗಿರುತ್ತದೆ. ಆದರೆ ಏರಿಕೆಯಾದ ವಾಹಕ ಮೊತ್ತವು ಹಿಂದಿನ ವರ್ಷಗಳಲ್ಲಿನ ಆಸ್ತಿಯ (ಅಥವಾ ನಗದು ಸೃಜನೆ ಘಟಕ) ಕುಗ್ಗುವಿಕೆಯ ನಷ್ಟವಿಲ್ಲದಿದ್ದಲ್ಲಿ ನಿರ್ಧರಣೆ ಮಾಡಬಹುದಾಗಿದ್ದು, ವಾಹಕ ಮೊತ್ತವನ್ನು ಮೀರುವುದಿಲ್ಲ. ಕುಗ್ಗಿಸುವಿಕೆ ನಷ್ಟದ ವ್ಯತಿರಿಕ್ತತೆಯನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ತಕ್ಷಣವೇ ಮಾನ್ಯ ಮಾಡಲಾಗುತ್ತದೆ. ಇಲ್ಲದಿದ್ದಲ್ಲಿ ಸಂಬಂಧಿತ ಆಸ್ತಿಯ ಮರು ಮೌಲ್ಯೀಕರಣದ ಮೊತ್ತ ಹೊಂದಿದ್ದಲ್ಲಿ ಅಂತಹ ಪ್ರಕರಣದಲ್ಲಿ ಕ್ಷೀಣತೆ ನಷ್ಟದ ವ್ಯತಿರಿಕ್ತತೆಯನ್ನು ಮರು ಮೌಲ್ಯೀಕರಣದ ಏರಿಕೆ ಎಂದು ಪರಿಗಣಿಸಲಾಗುತ್ತಿದೆ.

ಟಿ) ವಿಭಾಗದ ವರದಿಗಾರಿಕೆ:

ಒಂದು ಕಾರ್ಯಾಚರಣೆ ವಿಭಾಗವು ಗ್ರೂಪ್‌ನ ಒಂದು ಭಾಗವಾಗಿದ್ದು, ಅದು ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತದೆ. ಅದರಿಂದ ಆ ವಿಭಾಗವು ಆದಾಯ ಗಳಿಸಬಹುದು ಮತ್ತು

ಖರ್ಚುಗಳನ್ನು ಮಾಡಬಹುದು. ಈ ರೀತಿ ಅದು ಗ್ರೂಪ್‌ನ ಇತರ ಭಾಗಗಳೊಂದಿಗಿನ ವಹಿವಾಟಿನ ಆದಾಯ ಮತ್ತು ಖರ್ಚುಗಳನ್ನು ನಿರ್ವಹಿಸುತ್ತದೆ ಮತ್ತು ಅದಕ್ಕಾಗಿ ವಿಶೇಷ ಹಣಕಾಸು ಮಾಹಿತಿಯು ಲಭ್ಯವಿರುತ್ತದೆ. ಕಾರ್ಯಾಚರಣೆ ವಿಭಾಗಗಳು ಆಂತರಿಕ ವರದಿಗಾರಿಕೆಯ ಅನುರೂಪದಲ್ಲಿ ಅಂದರೆ ಮುಖ್ಯ ಕಾರ್ಯಾಚರಣೆ ನಿರ್ಧಾರ ಮಾಡುವವರಿಗೆ ಒದಗಿಸಿರುವಂತೆ ವರದಿ ಮಾಡಲ್ಪಡುತ್ತವೆ.

ವಿಭಾಗೀಯ ಲೆಕ್ಕ ನಿರ್ವಹಣಾ ನೀತಿಗಳು ಗ್ರೂಪ್‌ನ ಲೆಕ್ಕ ನಿರ್ವಹಣಾ ನೀತಿಗಳಿಗನುಗುಣವಾಗಿಯೇ ಇರುತ್ತದೆ. ಇದರೊಂದಿಗೆ ಕೆಳಕಂಡ ನಿರ್ದಿಷ್ಟ ಲೆಕ್ಕ ನಿರ್ವಹಣ ನೀತಿಗಳನ್ನು ವಿಭಾಗದ ವರದಿಗಾರಿಕೆಗಾಗಿ ಅನುಸರಿಸಲಾಗುತ್ತಿದೆ.

(i) ವಿಭಾಗದ ಆದಾಯವು ಅಂತರ್ ವಿಭಾಗದ ಆದಾಯವೂ ಸೇರಿದಂತೆ ವಿಭಾಗಕ್ಕೆ ನೇರವಾಗಿ ಗುರುತಿಸಬಹುದಾದ/ಹಂಚಿಕೆ ಮಾಡಬಹುದಾದ ಮಾರಾಟ ಮತ್ತು ಇತರ ಆದಾಯಗಳನ್ನು ಒಳಗೊಂಡಿರುತ್ತದೆ.

(ii) ವಿಭಾಗದ ಫಲಿತಾಂಶದ ನಿರ್ಧರಣೆಗಾಗಿ ವಿಭಾಗದೊಂದಿಗೆ/ ವಿಭಾಗಕ್ಕೆ ನೇರವಾಗಿ ಗುರುತಿಸಬಹುದಾದ/ಹಂಚಿಕೆ ಮಾಡಬಹುದಾದ ವೆಚ್ಚಗಳನ್ನು ಪರಿಗಣಿಸಲಾಗಿರುತ್ತದೆ. ಇಡೀ ಗ್ರೂಪ್‌ಗೆ ಸಂಬಂಧಿಸಿದ ವೆಚ್ಚಗಳು ಮತ್ತು ವಿಭಾಗಕ್ಕೆ ಹಂಚಿಕೆ ಮಾಡದಿರುವ ವೆಚ್ಚಗಳನ್ನು ''ಇತರ ಹಂಚಿಕೆ ಮಾಡಲಾಗದ ಸಾಂಸ್ಥಿಕ (ಕಾರ್ಪೋರೇಟ್) ವೆಚ್ಚದಡಿ'' ಸೇರಿಸಲಾಗಿರುತ್ತದೆ.

(iii) ಇಡೀ ಗ್ರೂಪ್‌ಗೆ ಸಂಬಂಧಿಸಿದ ಆದಾಯ ಮತ್ತು ಶಾಖೆಗೆ ಹಂಚಿಕೆ ಮಾಡಲಾಗದ ಆದಾಯವನ್ನು 'ಹಂಚಿಕೆ ಮಾಡಲಾಗದ ಆದಾಯ' ದಲ್ಲಿ ಸೇರಿಸಲಾಗಿರುತ್ತದೆ.

(iv) ವಿಭಾಗ ಫಲಿತಾಂಶವು ಗ್ರೂಪ್‌ನ ಲಾಭ ಕಂಡುಕೊಳ್ಳಲು ಇಳಿಕೆ ಮಾಡಲಾದ ಅಂತರ್ ಶಾಖಾ ಮಾರ್ಜಿನ್‌ಗಳು ಮತ್ತು ಮಾರಾಟಗಳನ್ನು ಒಳಗೊಂಡಿರುತ್ತದೆ.

(v) ಶಾಖಾ ಆಸ್ತಿಗಳು ಮತ್ತು ಬಾಧ್ಯತೆಗಳು ಆಯಾ ಸಂಬಂಧಿತ ಶಾಖೆಗಳೊಂದಿಗೆ ನೇರವಾಗಿ ಗುರುತಿಸಬಹುದಾದವುಗಳನ್ನು ಒಳಗೊಂಡಿರುತ್ತವೆ. ಹಂಚಿಕೆ ಮಾಡಲಾಗದ ಆಸ್ತಿಗಳು ಮತ್ತು ಬಾಧ್ಯತೆಗಳು ಇಡೀ ಗ್ರೂಪ್‌ಗೆ ಸಂಬಂಧಿಸಿದ ಆಸ್ತಿ ಮತ್ತು ಬಾಧ್ಯತೆಗಳನ್ನು ಪ್ರತಿನಿಧಿಸುತ್ತವೆ ಮತ್ತು ಅವುಗಳನ್ನು ಯಾವುದೇ ಶಾಖೆಗೆ ಹಂಚಿಕೆ ಮಾಡಲಾಗದು.

(vi) ಕಾರ್ಯನಿರ್ವಹಣೆಯನ್ನು ಆಂತರಿಕ ಆಡಳಿತ ಮಂಡಳಿಯ ವರದಿಗಳಲ್ಲಿ ಸೇರಿಸಿರುವಂತೆ ಶಾಖಾ ಲಾಭದ (ತೆರಿಗೆಗೆ ಮುನ್ನ) ಆಧಾರದ ಮೇಲೆ ಮಾಪನ ಮಾಡಲಾಗಿರುತ್ತದೆ. ಅವುಗಳನ್ನು ಗ್ರೂಪ್‌ನ ಸಿಎಂಡಿ ಪರಿಶೀಲಿಸಿರುತ್ತಾರೆ. ಶಾಖಾ ಲಾಭವನ್ನು ಕಾರ್ಯನಿರ್ವಹಣಾ ಮಾಪನಕ್ಕಾಗಿ ಬಳಸಲಾಗುತ್ತಿದೆ. ಇದು ಆಡಳಿತ ಮಂಡಳಿಯು ನಂಬಿರುವಂತೆ ಈ ರೀತಿಯ ಮಾಹಿತಿಯು ಈ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ಸಂಸ್ಥೆಗಳ ಕೆಲವು ನಿಶ್ಚಿತ ಶಾಖೆಗಳ ಫಲಿತಾಂಶಗಳ ಮೌಲ್ಯಮಾಪನಕ್ಕೆ ಅತ್ಯಂತ ಸೂಕ್ತವಾಗಿರುತ್ತದೆ.

ಯು) ನಗದು ಹರಿಯುವಿಕೆ ಹೇಳಿಕೆ:

ನಗದು ಹರಿಯುವಿಕೆಯನ್ನು ಪರೋಕ್ಷ ವಿಧಾನ ಬಳಸಿ ವರದಿ ಮಾಡಲಾಗಿರುತ್ತದೆ. ಆ ಮೂಲಕ ನಗದು ರಹಿತ ರೀತಿಯ ವ್ಯವಹಾರಗಳು ಯಾವುದೇ ಮುಂದೂಡಿಕೆಗಳು ಅಥವಾ ಹಿಂದಿನ ಕಾರ್ಯಾಚರಣೆಯ ನಗದು ಸ್ವೀಕೃತಿ ಅಥವಾ ಪಾವತಿಗಳು ಸೇರುವಿಕೆಗಳು ಮತ್ತು ಹೂಡಿಕೆಗೆ ಅಥವಾ ಹಣಕಾಸು ನಗದು ಚಲಾವಣೆಗಳೊಂದಿಗೆ ಸಂಬಂಧಿಸಿದ ಆದಾಯ ಅಥವಾ ವೆಚ್ಚಗಳ ಅಂಶಗಳ ಪರಿಣಾಮಗಳಿಗಾಗಿ ಆ ಅವಧಿಯ ಲಾಭವನ್ನು ಹೊಂದಾಣಿಕೆ ಮಾಡಲಾಗಿರುತ್ತದೆ. ಗ್ರೂಪ್‌ನ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ಕಾರ್ಯಚಟುವಟಿಕೆಗಳಿಂದ ಬರುವ ನಗದನ್ನು ಪ್ರತ್ಯೇಕಗೊಳಿಸಲಾಗಿರುತ್ತದೆ.

ವಿ) ವರದಿ ಮಾಡುವ ದಿನಾಂಕದ ನಂತರದ ಘಟನೆಗಳು:

ಆಸ್ತಿಗಳು ಮತ್ತು ಬಾಧ್ಯತೆಗಳನ್ನು ವರದಿಗಾರಿಕೆ ಅವಧಿಯ ನಂತರ ಉದ್ಭವಿಸುವ ಘಟನೆಗಳಿಗಾಗಿ ಹೊಂದಾಣಿಕೆ ಮಾಡಲಾಗಿರುತ್ತದೆ. ಇದು ವರದಿ ಅವಧಿಯ ಕೊನೆಯಲ್ಲಿ ಉಂಟಾಗುವ ಸನ್ನಿವೇಶಗಳಿಗೆ ಸಂಬಂಧಿಸಿದಂತೆ, ಮೊತ್ತಗಳ ಅಂದಾಜಿಕೆಗೆ ಸಹಕಾರಿಯಾಗಿ ಹೆಚ್ಚುವರಿ ಸಾಕ್ಷ್ಯವನ್ನು ಒದಗಿಸುತ್ತವೆ.

ವರದಿಯ ಅವಧಿಯ ನಂತರ ಗ್ರೂಪ್‌ನಿಂದ ಘೋಷಿಸಲಾಗುವ ಲಾಭಾಂಶವನ್ನು ವರದಿ ಅವಧಿಯ ಕೊನೆಯಲ್ಲಿ ಬಾಧ್ಯತೆ ಎಂದು ಪರಿಗಣಿಸಲಾಗುವುದಿಲ್ಲ. ವರದಿಯ ಅವಧಿಯ ನಂತರ ಆದರೆ ಹಣಕಾಸು ಹೇಳಿಕೆಗಳನ್ನು ಹೊರಡಿಸುವುದಕ್ಕಿಂತ ಮುಂಚೆ ಘೋಷಿತ ಲಾಭಾಂಶಗಳನ್ನು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಯಾವುದೇ ಹೊಣೆಗಾರಿಕೆ ಬಾಧ್ಯತೆ ಇರದಿರುವುದರಿಂದ ಬಾಧ್ಯತೆ ಎಂದು ಪರಿಗಣಿಸಿರುವುದಿಲ್ಲ. ಅಂತಹ ಲಾಭಾಂಶಗಳನ್ನು ಹಣಕಾಸು ಹೇಳಿಕೆಗಳ ಟಿಪ್ಪಣಿಗಳಲ್ಲಿ ತೋರಿಸಲಾಗಿರುತ್ತದೆ.

ಡಬ್ಲ್ಯೂ) ವಿಶೇಷ ಬಾಬ್ತುಗಳು:

ವಿಶೇಷ ಬಾಬ್ತುಗಳನ್ನು ಹಣಕಾಸು ಹೇಳಿಕೆಗಳಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ. ಇದು ಗ್ರೂಪ್‌ನ ಹಣಕಾಸು ಕಾರ್ಯನಿರ್ವಹಣೆಯ ಬಗ್ಗೆ ಮತ್ತಷ್ಟು ತಿಳಿದುಕೊಳ್ಳಲು ಅವಕಾಶವಾಗುವುದಕ್ಕೆ ಅವಶ್ಯವಿರುತ್ತದೆ. ಅವುಗಳು ಆದಾಯದ ಅಥವಾ ವೆಚ್ಚಗಳ ವಾಸ್ತವಿಕ ಬಾಬ್ತುಗಳಾಗಿದ್ದು, ಅವುಗಳ ಸ್ವಭಾವ ಅಥವಾ ಮೊತ್ತದ ಮಹತ್ವದ ಮೇರೆಗೆ ಪ್ರತ್ಯೇಕವಾಗಿ ತೋರಿಸಲಾಗಿರುತ್ತದೆ.

ಹಿಂದಿನ ಅವಧಿಗೆ (ಅವಧಿಗಳಿಗೆ) ಸಂಬಂಧಿಸಿದ ವಾಸ್ತವಿಕ ಮೊತ್ತಗಳ ತಪ್ಪುಗಳನ್ನು ಹಿಂದಿನ ಅವಧಿಯ ತಪ್ಪುಗಳ ಲಕ್ಷಣದೊಂದಿಗೆ ಟಿಪ್ಪಣಿಯ ಮೂಲಕ ಅಭಿವ್ಯಕ್ತಪಡಿಸಲಾಗಿದೆ. ಅಂತಹ ಪ್ರತಿ ಹಿಂದಿನ ಅವಧಿಯ ಸರಿಪಡಿಸುವಿಕೆಯ ಪ್ರಮಾಣವನ್ನು ಪೂರ್ವಾನ್ವಯದೊಂದಿಗೆ ಪ್ರತಿ ಷೇರಿನ ಮೂಲ ಮತ್ತು ದುರ್ಬಲಗೊಳಿಸಿದ ಗಳಿಕೆಗಳಲ್ಲಿನ ಮಾರ್ಪಾಡುಗಳ ಸಮೇತ ಕಾರ್ಯಸಾಧು ಹಂತದವರಿಗೆ ಪ್ರಸ್ತುತಪಡಿಸಲಾಗಿದೆ.

ಆದಾಗ್ಯೂ ಒಂದು ನಿರ್ದಿಷ್ಟ ಅವಧಿಗೆ ಸಂಬಂಧಿಸಿದಂತೆ ಪೂರ್ವಾನ್ವಯ ಮರು ಹೇಳಿಕೆ ಕಾರ್ಯಸಾಧ್ಯವಾಗದಿರುವಾಗ ಅಂತಹ ಪರಿಸ್ಥಿತಿಯಲ್ಲಿ ತಪ್ಪನ್ನು ಹೇಗೆ ಮತ್ತು ಎಲ್ಲಿಂದ ಸರಿಪಡಿಸಲಾಗಿದೆ ಎಂದು ವಿವರಣೆಯನ್ನು ನೀಡಬೇಕಾದ ಸನ್ನಿವೇಶ ಉದ್ಭವವಾಗುವುದು. ಅದನ್ನು ಲೆಕ್ಕ ನಿರ್ವಹಣಾ ವಿಭಾಗಕ್ಕೆ ನೀಡುವ ಟಿಪ್ಪಣಿಗಳಲ್ಲಿ ಅಭಿವ್ಯಕ್ತಗೊಳಿಸಲಾಗಿರುತ್ತದೆ.

ಎಕ್ಸ್) ಮಾರಾಟ ಮತ್ತು ಕಾರ್ಯಾಚರಣೆ ಸ್ಥಗಿತಕ್ಕಾಗಿ ಹೊಂದಿರುವ ಚಾಲ್ತಿಯೇತರ ಆಸ್ತಿಗಳು:

ಒಂದು ಸಂಸ್ಥೆಯು ಆಸ್ತಿಯ ಬಳಕೆಯನ್ನು ಮುಂದುವರಿದ ಬಳಕೆಗೆ ಬದಲಾಗಿ ಮಾರಾಟ ವ್ಯವಹಾರಗಳ ಮೂಲಕ ಅದರ ವಾಹಕ ಮೊತ್ತವನ್ನು ಅಸಲು ರೂಪದಲ್ಲಿ ಹಿಂಪಡೆಯಬಹುದಾಗಿದ್ದಲ್ಲಿ ಮಾರಾಟಕ್ಕಿಟ್ಟ ಅಂತಹ ಆಸ್ತಿಯನ್ನು ಚಾಲ್ತಿಯೇತರ ಆಸ್ತಿ ಎಂದು (ಅಥವಾ ವಿಲೇವಾರಿ ಗ್ರೂಪ್ ಎಂದು) ವರ್ಗೀಕರಣ ಮಾಡಲಾಗುವುದು. ಆಸ್ತಿಯು ತಾನಿರುವ ಸ್ಥಿತಿಯಲ್ಲಿ ತಕ್ಷಣವೇ ಮಾರಾಟಕ್ಕೆ ಲಭ್ಯವಿದ್ದು, ಈ ರೀತಿಯ ಆಸ್ತಿಗಳ ಮಾರಾಟಕ್ಕೆ ಸಾಮಾನ್ಯವಾಗಿ ಮತ್ತು ಸಾಂಪ್ರದಾಯಿಕವಾಗಿ ಅನ್ವಯಿಸುವ ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುವ ಷರತ್ತಿಗೆ ಒಳಪಟ್ಟು ಮತ್ತು ಅದರ ಮಾರಾಟದ ಸಾಧ್ಯತೆಗಳು ಹೆಚ್ಚಾಗಿದ್ದಲ್ಲಿ ಸದರಿ ನಿಬಂಧನೆಯನ್ನು ಪೂರೈಸಿದೆ ಎಂದು ಪರಿಗಣಿಸಲಾಗುತ್ತದೆ. ಆಡಳಿತ ಮಂಡಳಿಯು ಮಾರಾಟಕ್ಕೆ ಬದ್ಧವಾಗಿರಲೇಬೇಕು. ಅದರಿಂದ ವರ್ಗೀಕರಣ ದಿನಾಂಕದಿಂದ ಒಂದು ವರ್ಷದೊಳಗಾಗಿ ಪೂರ್ಣಗೊಂಡ ಮಾರಾಟ ಎಂಬ ಮಾನ್ಯತೆಗೆ ಅರ್ಹಗೊಳಿಸುವುದನ್ನು ನಿರೀಕ್ಷಿಸಲಾಗುತ್ತದೆ.

ಚಾಲ್ತಿಯೇತರ ಆಸ್ತಿಗಳನ್ನು ಮಾರಾಟಕ್ಕಿಟ್ಟಿದ್ದು ಅವುಗಳನ್ನು ಪ್ರತ್ಯೇಕವಾಗಿ ಪ್ರಸ್ತುತಪಡಿಸಲಾಗಿದೆ ಮತ್ತು ಮಾರಾಟಕ್ಕಿಟ್ಟ ಆಸ್ತಿ ಎಂದು ವರ್ಗೀಕರಣದ ತಕ್ಷಣದ ಪೂರ್ವಭಾವಿಯಾಗಿ ಅವುಗಳ ವಾಹಕ ಮೊತ್ತಕ್ಕೆ ಕಡಿಮೆಯಾಗಿ ಮಾಪನ ಮಾಡಲಾಗಿರುತ್ತದೆ ಮತ್ತು ಅವುಗಳ ನ್ಯಾಯೋಚಿತ ಮೌಲ್ಯವು ಮಾರಾಟದ ಕಡಿಮೆ ವೆಚ್ಚಕ್ಕೆ ಕಾರಣವಾಗುತ್ತದೆ. ಆದಾಗ್ಯೂ ಹಣಕಾಸು ಆಸ್ತಿಗಳಂತಹ ಕೆಲವು ಮಾರಾಟಕ್ಕಿಟ್ಟ ಆಸ್ತಿಗಳು, ನೌಕರರ ಸೌಲಭ್ಯಗಳಿಂದ ಉಂಟಾಗುವ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಆಸ್ತಿಗಳನ್ನು ಗ್ರೂಪ್ ಅಂತಹ ಆಸ್ತಿಗಳಿಗಾಗಿ ಹೊಂದಿರುವ ಸೂಕ್ತ ಲೆಕ್ಕ ನಿರ್ವಹಣಾ ನೀತಿಯನುಸಾರ ಮಾಪನ ಮಾಡುವುದನ್ನು ಮುಂದುವರಿಸುವುದು. ಒಂದು ಬಾರಿ ಆಸ್ತಿಯನ್ನು ಮಾರಾಟಕ್ಕಿಟ್ಟ ಆಸ್ತಿ ಎಂದು ವರ್ಗೀಕರಣ ಮಾಡಿದಲ್ಲಿ ಆ ಆಸ್ತಿಗಳು ಸವಕಳಿ ಅಥವಾ ಅಪಮೌಲ್ಯೀಕರಣಕ್ಕೆ ಒಳಪಟ್ಟಿರುವುದಿಲ್ಲ.

ಸ್ಥಗಿತಗೊಂಡ ಕಾರ್ಯಾಚರಣೆಯು ಗ್ರೂಪ್‌ನ ವ್ಯವಹಾರಿಕ ಭಾಗವಾಗಿದ್ದು, ಅದು ವ್ಯಾಪಾರದ ಪ್ರತ್ಯೇಕ ಮಾರ್ಗವನ್ನು ಪ್ರತಿನಿಧಿಸುತ್ತದೆ. ಅಂದರೆ ವಿಲೇ ಮಾಡಲಾದ ಅಥವಾ ಮಾರಾಟಕ್ಕಿಟ್ಟಿರುವ ಅಥವಾ ಸಹಾಯಕ ಸಂಸ್ಥೆಯನ್ನಾಗಿ ಮರು ಮಾರಾಟಕ್ಕೆಂದೇ ವಿಶೇಷ ಪರಿಗಣನೆಯಲ್ಲಿ ಸ್ವಾಧೀನಪಡಿಸಿಕೊಂಡಿರುವುದಾಗಿರುತ್ತದೆ. ಸ್ಥಗಿತಗೊಳಿಸಿದ ಕಾರ್ಯಾಚರಣೆ ಎಂಬ ವರ್ಗೀಕರಣವು ವಿಲೇವಾರಿ ಪೂರ್ವದಲ್ಲಿ ಅಥವಾ ಕಾರ್ಯಾಚರಣೆಯು ಮಾರಾಟಕ್ಕಿಟ್ಟ ಎಂದು ವರ್ಗೀಕರಣಕ್ಕಾಗಿರುವ ಅರ್ಹತಾ ಮಾನದಂಡಗಳನ್ನು ಪೂರೈಸಿದಾಗ ಉದ್ಭವವಾಗುವುದು.

ವೈ) ಸರ್ಕಾರದ ಅನುದಾನಗಳು:

ಸರ್ಕಾರದ ಅನುದಾನಗಳನ್ನು, ಅನುದಾನ ಸ್ವೀಕರಿಸಲಾಗುವುದೆಂಬ ಮತ್ತು ಅದಕ್ಕೆ ಲಗತ್ತುಗೊಂಡ ಎಲ್ಲ ನಿಬಂಧನೆಗಳನ್ನು ಪೂರೈಸಲಾಗುವುದೆಂದು ಸಕಾರಾಣಾತ್ಮಕ ಭರವಸೆಯಿದ್ದಲ್ಲಿ ಮಾನ್ಯ ಮಾಡಲಾಗಿರುತ್ತದೆ.

ಅನುದಾನ ಖರ್ಚು ಬಾಬ್ತಿಗೆ ಸಂಬಂಧಿಸಿದಾಗ, ಅದನ್ನು ಕಾಲಾವಧಿಯ ಮೇಲೆ ಒಂದು ವ್ಯವಸ್ಥಿತ ಆಧಾರದಲ್ಲಿ ಆದಾಯ ಎಂದು ಮಾನ್ಯಮಾಡಲಾಗಿರುತ್ತದೆ. ಸಂಬಂಧಿತ ವೆಚ್ಚಗಳು ಅಂದರೆ ಯಾವುದಕ್ಕೆ ಪರಿಹಾರಾರ್ಥ ಎಂದು ಉದ್ದೇಶಿಸಲಾಗಿತ್ತು. ಅದಕ್ಕಾಗಿಯೇ ವೆಚ್ಚ ಮಾಡಲಾಗಿರುತ್ತದೆ.

ಅನುದಾನವು ಆಸ್ತಿಗೆ ಸಂಬಂಧಿಸಿದಾಗ, ಅದನ್ನು ಆಸ್ತಿಯ ವಾಹಕ ಮೊತ್ತದಿಂದ ಅನುದಾನ ಕಡಿತಗೊಳಿಸುವುದರಿಂದ ಪ್ರಸ್ತುತಪಡಿಸಲಾಗಿರುತ್ತದೆ. ಗ್ರೂಪ್ ಹಣಕಾಸೇತರ ಆಸ್ತಿಯ ಅನುದಾನ ಸ್ವೀಕರಿಸಿದಾಗ ಅದನ್ನು ಔಪಚಾರಿಕ ಮೌಲ್ಯ ಎಂದು ಪರಿಗಣಿಸಲಾಗಿರುತ್ತದೆ.

ಸಾಲಗಳು ಅಥವಾ ಅದೇ ತೆರನಾದ ನೆರವುಗಳನ್ನು ಸರ್ಕಾರಗಳು ಅಥವಾ ಸಂಬಂಧಿತ ಸಂಸ್ಥೆಗಳು ಚಾಲ್ತಿಯಲ್ಲಿ ಅನ್ವಯದಿಂದಾಗುವ ಮಾರುಕಟ್ಟೆ ದರಗಳಿಗಿಂತಲೂ ಕಡಿಮೆ ಬಡ್ಡಿದರದಲ್ಲಿ ಒದಗಿಸಿದಾಗ ಈ ರೀತಿಯ ಅನುಕೂಲಕರ ಬಡ್ಡಿಯ ಪರಿಣಾಮವನ್ನು ಸರ್ಕಾರದ ಅನುದಾನ ಎಂದು ಪರಿಗಣಿಸಲಾಗಿರುತ್ತದೆ. ಸಾಲ ಅಥವಾ ನೆರವನ್ನು ನ್ಯಾಯೋಚಿತ ಮೌಲ್ಯದಲ್ಲಿ ಆರಂಭದಲ್ಲಿ ಮಾನ್ಯ ಮತ್ತು ಮಾಪನ ಮಾಡಲಾಗಿದೆ ಹಾಗೂ ಸರ್ಕಾರದ ಅನುದಾನವನ್ನು ಸಾಲದ ಆರಂಭದ ವಾಹಕ ಮೌಲ್ಯ ಮತ್ತು ಸ್ವೀಕರಿಸಲಾದ ಮೊತ್ತಗಳ ನಡುವಿನ ವ್ಯತ್ಯಾಸವಾಗಿ ಮಾಪನ ಮಾಡಲಾಗಿರುತ್ತದೆ. ಸಾಲವನ್ನು ತದನಂತರದಲ್ಲಿ ಹಣಕಾಸು ಬಾಧ್ಯತೆಗಳಿಗೆ ಅನ್ವಯಿಸುವ ಲೆಕ್ಕ ನಿರ್ವಹಣಾ ನೀತಿಯನುಸಾರ ಮಾಪನ ಮಾಡಲಾಗಿರುತ್ತದೆ.

1.3 ಲೆಕ್ಕ ನಿರ್ವಹಣೆ ನೀತಿಗಳನ್ನು ಅನ್ವಯ ಮಾಡುವಲ್ಲಿ ಮಹತ್ತವಾದ ಅಂದಾಜುಗಳು:

ಎ) **ಆದಾಯ:-** ಗ್ರಾಹಕರ ಜೊತೆಗಿನ ಕಾಂಟ್ರಾಕ್ಟ್‌ಗಳಿಂದ ಬರುವ ಆದಾಯದ ಮೊತ್ತ ಮತ್ತು ಸಮಯವನ್ನು ನಿರ್ಧರಣೆ ಮಾಡಲು ಗ್ರೂಪ್ ಮಹತ್ತರವಾಗಿ ತೀರ್ಮಾನಗಳನ್ನು ಅನ್ವಯಿಸಿದೆ.

ಬಿ) **ತಪಶೀಲು ಸರಕುಗಳ ನಿವ್ವಳ ನಗದೀಕರಣ ಮೌಲ್ಯ:-** ತಪಶೀಲು ಸರಕುಗಳ ನಿವ್ವಳನಗದೀಕರಣಮೌಲ್ಯ ನಿರ್ಧರಣೆಯು ಹಾಲಿಯಿರುವ ಮಾರುಕಟ್ಟೆ ಸ್ಥಿತಿಗಳು, ಚಾಲ್ತಿ ದರಗಳು ಮತ್ತು ಯೋಜನೆಯ ಪ್ರಾರಂಭ ಮತ್ತು ಪೂರ್ಣಗೊಳಿಸುವಿಕೆ ನಿರೀಕ್ಷಿತ ದಿನಾಂಕ ಅಂದಾಜು ಮಾಡಲಾದ ಮುಂದಿನ ಮಾರಾಟ ಬೆಲೆ, ಯೋಜನೆಗಳನ್ನು ಪೂರ್ಣಗೊಳಿಸಲು ತಗಲುವ ವೆಚ್ಚ ಮತ್ತು ಮಾರಾಟ ಬೆಲೆ ಆಧಾರದ ಮೇಲೆ ಅಂದಾಜುಗಳನ್ನು ಒಳಗೊಂಡಿರುವುದು.

ಸಿ) **ಮುಂಗಡಗಳು/ಸ್ವೀಕೃತಿಗಳ ವಸೂಲಾತಿ:** ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು, ನಿರೀಕ್ಷಿಸಲಾದ ಜೀವಿತಾವಧಿಯಲ್ಲಿ ಅನುಸರಣೆ ಮಾಡಿರುವ ಐತಿಹಾಸಿಕ ಡಿಫಾಲ್ಟ್ ದರಗಳ ಆಧಾರದ ಮೇಲೆ ಬಾಕಿಯಿರುವ ಸ್ವೀಕೃತಗಳು ಮತ್ತು ಮುಂಗಡಗಳ ಮೇಲೆ ನಿರೀಕ್ಷಿತ ಜಮೆ ನಷ್ಟವನ್ನು ಆಡಳಿತ ಮಂಡಳಿ ನಿರ್ಧರಣೆ ಮಾಡುವುದು.

ಡಿ) **ಸವಕಳಿ ಮಾಡಬಹುದಾದ/ಅಮಾರ್ಟೈಸ್ ಮಾಡಬಹುದಾದ ಆಸ್ತಿಗಳ ಉಪಯುಕ್ತತೆ ಜೀವಿತಾವಧಿ-**ಆಡಳಿತ ಮಂಡಳಿಯು ಪ್ರತಿ ವರದಿಗಾರಿಕೆ ದಿನಾಂಕದಂದು ಆಸ್ತಿಗಳ ನಿರೀಕ್ಷಿತ ಉಪಯುಕ್ತತೆ ಆಧಾರದ ಮೇಲೆ ಸವಕಳಿ ಮಾಡಬಹುದಾದ/ಅಮಾರ್ಟೈಸ್ ಮಾಡಬಹುದಾದ ಆಸ್ತಿಗಳ ಉಪಯುಕ್ತತೆ ಜೀವಿತಾವಧಿಯ ತನ್ನ ಅಂದಾಜನ್ನು ಪರಿಶೀಲಿಸುವುದು. ಕೆಲವೊಂದು ತಂತ್ರಾಂಶ ಮತ್ತು ಇತರೆ ಆಸ್ತಿಗಳ ಉಪಯುಕ್ತತೆ ಬದಲಾಗಬಹುದಿದ್ದು, ತಾಂತ್ರಿಕ ಮತ್ತು ಆರ್ಥಿಕ ಬಳಕೆ ಕ್ಷೀಣತೆಗೆ ಸದರಿ ಅಂದಾಜುಗಳ ಅನಿಶ್ಚಿತತೆಗಳು ಸಂಬಂಧಿಸಿರುವವು.

ಇ) **ನಿರೂಪಿತ ಸೌಲಭ್ಯ ಬಾಧ್ಯತೆ (ಡಿಬಿಓ):-** ನಿರೂಪಿತ ಸೌಲಭ್ಯ ಬಾಧ್ಯತೆಯ ಬಗ್ಗೆ ಆಡಳಿತ ಮಂಡಳಿಯು ಅಂದಾಜು ಮಾಡುವಿಕೆಯು ಕೆಳಕಂಡ ನಾಜೂಕಾದ ಊಹೆಗಳಾದ ಹಣದುಬ್ಬರದ ನಿಗದಿತ ದರಗಳು, ವೈದ್ಯಕೀಯ ವೆಚ್ಚಗಳ ರೀತಿ, ಮರಣ ಪ್ರಮಾಣ, ರಿಯಾಯಿತಿ ದರ, ಮತ್ತು ಮುಂದಿನ ವೇತನ ಹೆಚ್ಚಳದ ನಿರೀಕ್ಷೆ ಮೇಲೆ ಆಧರಿಸಿರುತ್ತದೆ. ಸದರಿ ಊಹೆಗಳ ವ್ಯತ್ಯಾಸವು ನಿರೂಪಿತ ಸೌಲಭ್ಯ ಬಾಧ್ಯತೆ ಮೊತ್ತದ ಮೇಲೆ ಮತ್ತು ವಾರ್ಷಿಕ ನಿರೂಪಿತ ಸೌಲಭ್ಯ ಖರ್ಚುಗಳ ಮೇಲೆ ಗಮನಾರ್ಹ ಪರಿಣಾಮ ಉಂಟು ಮಾಡುವುದು.

ಎಫ್) **ನ್ಯಾಯೋಚಿತ ಮೌಲ್ಯಮಾಪನಗಳು:-** ಆಡಳಿತ ಮಂಡಳಿಯು ಹಣಕಾಸು ಸಾಧನಗಳ ನ್ಯಾಯೋಚಿತ ಮೌಲ್ಯ ನಿರ್ಧರಣೆಗೆ (ಸಕ್ರಿಯ ಮಾರುಕಟ್ಟೆ ನಮೂದುಗಳು ಲಭ್ಯವಿಲ್ಲದಿರುವೆಡೆ) ಮೌಲ್ಯಮಾಪನ ತಂತ್ರಗಳನ್ನು ಅನ್ವಯಿಸುವುದು. ಇದು ಅಂದಾಜುವಿಕೆಗಳ ಅಭಿವೃದ್ಧಿಪಡಿಸುವುದು ಮತ್ತು ಮಾರುಕಟ್ಟೆ ಭಾಗಿದಾರರು ಸಾಧನಕ್ಕೆ ಯಾವ ರೀತಿ ಬೆಲೆ ಕಟ್ಟುತ್ತಾರೆ ಎನ್ನುವುದರ ಊಹೆಗಳನ್ನು ಒಳಗೊಂಡಿರುತ್ತದೆ. ಆಡಳಿತ ಮಂಡಳಿಯು ಲಭ್ಯವಿರುವ ಅತ್ಯುತ್ತಮ ಮಾಹಿತಿಯನ್ನು ಉಪಯೋಗಿಸುತ್ತಾರೆ. ಅಂದಾಜು ಮಾಡಲಾದ ನ್ಯಾಯೋಚಿತ ಮೌಲ್ಯಗಳು ವರದಿ ಮಾಡುವ ದಿನಾಂಕದಂದು ಹಸ್ತಾಂತರ ವಹಿವಾಟು ಮೂಲಕ ಸಾಧಿಸಿರಬಹುದಾದ ವಾಸ್ತವ ಬೆಲೆಗಳಿಂದ ಭಿನ್ನವಾಗಿರಬಹುದು.

ಜಿ) **ಹಣಕಾಸಿನ ಆಸ್ತಿಗಳಲ್ಲಿ ನಿರೀಕ್ಷಿತ ಸಾಲದ ನಷ್ಟಗಳು:** ಹಣಕಾಸಿನ ಆಸ್ತಿಗಳ ಕ್ಷೀಣತೆ ಅವಕಾಶಗಳು ದೋಷದ ಅಪಾಯದ ಊಹೆಗಳ ಮೇಲೆ ಮತ್ತು ವಸೂಲಿಯ ನಿರೀಕ್ಷಿತ ಸಮಯದ ಮೇಲೆ ಆಧಾರಿತವಾಗುತ್ತವೆ. ಈ ಊಹೆಗಳನ್ನು ಮಾಡುವಾಗ ಗ್ರೂಪ್ ತೀರ್ಮಾನಗಳನ್ನು ಬಳಸುವುದು ಮತ್ತು ವಸೂಲಿಯ ಗ್ರೂಪ್‌ನ ಇತಿಹಾಸ, ಗ್ರಾಹಕರ ಸಾಲ ಪಡೆಯುವಿಕೆ ಅರ್ಹತೆ, ಹಾಲಿಯಿರುವ ಮಾರುಕಟ್ಟೆ ಪರಿಸ್ಥಿತಿ ಹಾಗೂ ಪ್ರತಿ ವರದಿಗಾರಿಕೆ ಅವಧಿಯ ಕೊನೆಯಲ್ಲಿ ಮುಂಗಾಣ್ಕೆ ಅಂದಾಜುಗಳ ಆಧಾರದ ಮೇಲೆ ನಿರೀಕ್ಷಿತ ಸಾಲದ ನಷ್ಟದ ಲೆಕ್ಕಾಚಾರಕ್ಕೆ ಆಧಾರ ಅಂಶಗಳನ್ನು ಆಯ್ಕೆ ಮಾಡುವುದು.

ಎಚ್) **ಗುತ್ತಿಗೆಗಳು:-** ಐಎನ್‌ಡಿ ಎಎಸ್ 116 ಗುತ್ತಿಗೆ ಅವಧಿಯನ್ನು ರದ್ದುಪಡಿಸಲಾಗದ ಅವಧಿ ಎಂದು ಪ್ರತಿಪಾದಿಸಿರುವುದು. ಇದರಂತೆ ಗುತ್ತಿಗೆದಾರನು, ಸಂಸ್ಥೆಯು ಗುತ್ತಿಗೆ ಅವಧಿ ವಿಸ್ತರಿಸಲು (ಅಥವಾ ರದ್ದುಪಡಿಸದಿರಲು) ಆಯ್ಕೆಯನ್ನು ಚಲಾಯಿಸಲು ಸೂಕ್ತವಾಗಿ ಖಚಿತವಾಗಿದ್ದಾಗ ಐಚ್ಛಿಕ ಅವಧಿಯೂ ಸೇರಿದಂತೆ ನಿಗದಿತ ಆಸ್ತಿಯ ಬಳಕೆ ಹಕ್ಕನ್ನು ಹೊಂದಿರುವರು. ಗುತ್ತಿಗೆ ಅವಧಿ ನಿರ್ಧರಣೆ ಮಾಡಿದಾಗ ಆಯ್ಕೆಯನ್ನು ಚಲಾಯಿಸಲು ಗುತ್ತಿಗೆದಾರನಿಗೆ ಆರ್ಥಿಕ ಪ್ರೋತ್ಸಾಹಕ ಧನ ಸೃಷ್ಟಿಸುವ ಎಲ್ಲಾ ಸಂಬಂಧಪಟ್ಟ ಅಂಶಗಳು ಮತ್ತು ಪರಿಸ್ಥಿತಿಗಳನ್ನು ಗ್ರೂಪ್ ಪರಿಗಣಿಸುವುದು. ಗುತ್ತಿಗೆದಾರನು ಆಯ್ಕೆಯನ್ನು ಚಲಾಯಿಸಬಹುದು ಎಂಬ ಬಗ್ಗೆ ಸೂಕ್ತವಾದ ಖಚಿತತೆಯಿದ್ದಲ್ಲಿ ಗುತ್ತಿಗೆ ಅವಧಿಯಲ್ಲಿ ಗುತ್ತಿಗೆ ಅವಧಿಯ ವಿಸ್ತರಣೆ ಆಯ್ಕೆಯನ್ನು ಸೇರ್ಪಡೆ ಮಾಡಿದೆ. ಗುತ್ತಿಗೆದಾರನ ನಿಯಂತ್ರಣದ ಒಳಗೆ ಇರುವ ಮಹತ್ತರವಾದ ಘಟನಾವಳಿಗಳು ಅಥವಾ ಪರಿಸ್ಥಿತಿಗಳಲ್ಲಿನ ಬದಲಾವಣೆಗಳು ಉಂಟಾದಾಗ ಆಯ್ಕೆ ಯನ್ನು ಗ್ರೂಪ್ ಮರು ನಿರ್ಧರಣೆ ಮಾಡುವುದು.

1.4 ಲೆಕ್ಕ ನಿರ್ವಹಣಾ ನೀತಿಗಳ ಅನ್ವಯಿಕೆಯಲ್ಲಿ ಸೂಕ್ಷ್ಮ ತೀರ್ಪುಗಳು:

ಎ) **ಮುಂದೂಡಿದ ತೆರಿಗೆ ಆಸ್ತಿಗಳ ಮಾನ್ಯತೆ:-** ಮುಂದೂಡಿದ ತೆರಿಗೆ ಆಸ್ತಿಗಳನ್ನು ಯಾವ ಮಟ್ಟಕ್ಕೆ ಮಾನ್ಯ ಮಾಡಲು ಸಾಧ್ಯ ಎಂಬುದು ಗ್ರೂಪ್ ಆಗಿ ಭವಿಷ್ಯದ ತೆರಿಗೆ ವಿಧಿಸಬಹುದಾದ ಆದಾಯ ಸಾಧ್ಯತೆಗೆ ಪ್ರತಿಯಾಗಿ ಮುಂದೂಡಿದ ತೆರಿಗೆ ಆಸ್ತಿಯನ್ನು ಬಳಸಿಕೊಳ್ಳಲು ಸಾಧ್ಯ ಎಂಬುದರ ಲೆಕ್ಕಾಚಾರವನ್ನು ಆಧರಿಸಿರುತ್ತದೆ. ಇದರೊಂದಿಗೆ ವಿವಿಧ ತೆರಿಗೆ ವ್ಯಾಪ್ತಿಗಳಲ್ಲಿ ಯಾವುದೇ ಕಾನೂನು ಅಥವಾ ಹಣಕಾಸಿನ ಮಿತಿಗಳು ಅಥವಾ ಅನಿಶ್ಚಿತತೆಗಳ ಪರಿಣಾಮಗಳ ಲೆಕ್ಕಾಚಾರದಲ್ಲಿ ಮಹತ್ತರ ತೀರ್ಮಾನವೂ ಅಗತ್ಯವಿರುತ್ತದೆ.

ಬಿ) **ವಿತರಣೆಯಾಗದ ಲಾಭಗಳ ಮೇಲಿನ ಮುಂದೂಡಿದ ತೆರಿಗೆ ಬಾಧ್ಯತೆಯ ಮಾನ್ಯತೆ:-** ಗ್ರೂಪ್ ಯಾವ ಮಟ್ಟದಲ್ಲಿ ತನ್ನ ಸಹಾಯಕ ಸಂಸ್ಥೆಗಳ ವಿತರಣೆಯಾಗದ ಲಾಭದ ಮೇಲಿನ ಮುಂದೂಡಿದ ತೆರಿಗೆ ಬಾಧ್ಯತೆಯ ವ್ಯತಿರಿಕ್ತತೆಯ ವೇಳೆಯನ್ನು ನಿಯಂತ್ರಿಸಬಲ್ಲದು ಎನ್ನುವುದಕ್ಕೆ ತೀರ್ಮಾನ ಅಗತ್ಯವಿರುತ್ತದೆ.

ಸಿ) **ಆಸ್ತಿಗಳ ದುರ್ಬಲಗೊಳಿಸುವಿಕೆಯ ಲಕ್ಷಣಗಳ ಮೌಲ್ಯಮಾಪನ:-** ಆಸ್ತಿಗಳ ದುರ್ಬಲಗೊಳಿಸುವಿಕೆಯ ಲಕ್ಷಣಗಳ ಅನ್ವಯಿಕೆಯ ಮೌಲ್ಯಮಾಪನಕ್ಕೆ ಹಲವಾರು ಬಾಹ್ಯ ಮತ್ತು ಆಂತರಿಕ ಅಂಶಗಳ ಲೆಕ್ಕಾಚಾರದ ಅಗತ್ಯವಿರುತ್ತದೆ. ಅವುಗಳು ವಸೂಲು ಮಾಡಬಹುದಾದ ಆಸ್ತಿಯ ಮೊತ್ತದ ಕುಸಿಯುವಿಕೆಗೆ ಕಾರಣವಾಗಬಹುದಾಗಿದೆ.

ನಿಶ್ಚಲತೆಯ ಲೆಕ್ಕಾಚಾರದಲ್ಲಿ ಆಡಳಿತ ಮಂಡಳಿಯು ಪ್ರತಿ ಆಸ್ತಿಯ ಅಥವಾ ನಗದು ಸೃಜಿಸುವ ಘಟಕದ ವಸೂಲು ಮಾಡಬಹುದಾದ ಮೊತ್ತವನ್ನು ನಿರೀಕ್ಷಿತ ಮುಂದಿನ ನಗದು ಚಲಾವಣೆ ಆಧಾರದಲ್ಲಿ ಅಂದಾಜು ಮಾಡುತ್ತದೆ ಮತ್ತು ಪ್ರಸಕ್ತ ನಿವ್ವಳ ಮೌಲ್ಯಕ್ಕೆ ಬರಲು ಸೋಡಿ ದರಗಳನ್ನು ಬಳಸುತ್ತದೆ.

ಅಂದಾಜುವಿಕೆಯ ಅನಿಶ್ಚಿತತೆಯು ಭವಿಷ್ಯದ ಕಾರ್ಯಾಚರಣೆ ಫಲಿತಾಂಶಗಳು ಮತ್ತು ಸೂಕ್ತ ಸೋಡಿ ದರ ನಿರ್ಧರಣೆ ಕುರಿತು ಊಹೆಗಳಿಗೆ ಸಂಬಂಧಿಸಿರುತ್ತದೆ.

ಡಿ) **ವ್ಯವಸ್ಥೆಗಳು:-** ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕ ಆಧರಿಸಿ ಆಡಳಿತ ಮಂಡಳಿಯ ತೀರ್ಮಾನ, ವಾಸ್ತವಗಳಲ್ಲಿ ಮತ್ತು ಕಾನೂನು ಆಯಾಮಗಳಲ್ಲಿ ಬದಲಾವಣೆಯನ್ನು ಮಾಡುತ್ತದೆ. ಬಾಕಿ ಇರುವ ವ್ಯಾರೆಂಟಿಗಳು ಮತ್ತು ಗ್ಯಾರಂಟಿಗಳಿಗೆ ಪ್ರತಿಯಾಗಿ ನಿಯಮಗಳ ಅಗತ್ಯತೆಯನ್ನು ಗ್ರೂಪ್ ಲೆಕ್ಕಾಚಾರ ಮಾಡುತ್ತದೆ. ಆದಾಗ್ಯೂ ವಾಸ್ತವ ಭವಿಷ್ಯದ ಫಲಿತಾಂಶವು ಈ ತೀರ್ಪಿನಿಂದ ಭಿನ್ನವಾಗಿರಬಹುದು.

ಇ) **ಸಂಭಾವ್ಯ ಹೊಣೆಗಾರಿಕೆಗಳು:-** ಗ್ರೂಪ್ ಸಂಭಾವ್ಯ ಹೊಣೆಗಾರಿಕೆಗಳ ಪ್ರಕಟಣೆಗೆ ಮಹತ್ತರವಾದ ತೀರ್ಮಾನಗಳನ್ನು ಬಳಸುವುದು. ಹಿಂದಿನ ಘಟನಾವಳಿಗಳಿಂದ ಉಂಟಾಗುವ ಸಂಭವನೀಯ ಹೊಣೆಗಾರಿಕೆಗಳಿದ್ದಲ್ಲಿ ಸಂಭಾವ್ಯ ಹೊಣೆಗಾರಿಕೆಗಳನ್ನು ಪ್ರಕಟಪಡಿಸಲಾಗುತ್ತದೆ. ಇವುಗಳ ಇರುವಿಕೆಯನ್ನು ಗ್ರೂಪ್‌ನ ಸಂಪೂರ್ಣ ನಿಯಂತ್ರಣದಲ್ಲಿ ಇಲ್ಲದ ಒಂದು ಅಥವಾ ಹೆಚ್ಚು ಅನಿಶ್ಚಿತ ಮುಂದಿನ ಘಟನಾವಳಿಗಳು ಘಟಿಸಿದಾಗ ಅಥವಾ ಘಟಿಸದಿರುವಾಗ ಅಥವಾ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ಹೊರ ಹರಿವು ಇರಬೇಕಾದುದು ಅಗತ್ಯವಿಲ್ಲದಾಗ ಅಥವಾ ವಿಶ್ವಾಸನೀಯ ಮೊತ್ತದ ಅಂದಾಜನ್ನು ಮಾಡದಿದ್ದಾಗ ಮಾತ್ರ ಅವುಗಳ ಇರುವಿಕೆಯನ್ನು ದೃಢಪಡಿಸಲಾಗುವುದು. ಸಂಭಾವ್ಯ ಆಸ್ತಿಗಳನ್ನು ಹಣಕಾಸಿನ ಹೇಳಿಕೆಗಳಲ್ಲಿ ಮಾನ್ಯ ಮಾಡಿರುವುದಿಲ್ಲ ಅಥವಾ ಪ್ರಕಟಪಡಿಸಿರುವುದಿಲ್ಲ.

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳು ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಯ ಸಾರಾಂಶ

(ಎಲ್ಲಾ ಮೊತ್ತಗಳು ನಿರ್ದಿಷ್ಟ ಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

2 ಸ್ವತ್ತು, ಸ್ಥಾವರ ಮತ್ತು ಉಪಕರಣ

ಗ್ರೂಪ್‌ನ ಸ್ವತ್ತು, ಸ್ಥಾವರ ಮತ್ತು ಉಪಕರಣದ ವಿವರಗಳು ಮತ್ತು ವರದಿಗಾರಿಕೆ ಅವಧಿಯ ಪ್ರಾರಂಭದಿಂದ ಕೊನೆಯವರೆಗಿನ ಅವುಗಳ ವಾಹಕ ಮೊತ್ತಗಳ ಸಮಂಜಸತೆ ಈ ಕೆಳಕಂಡಂತಿರುವುದು:

ವಿವರಗಳು	ಮುಕ್ತ ಹಿಡುವಳಿ ಜಮೀನು	ಗುತ್ತಿಗೆ ಹಿಡುವಳಿ ಜಮೀನು(★)	ಕಟ್ಟಡ - ಮುಕ್ತ ಹಿಡುವಳಿ	ಕಟ್ಟಡ - ಗುತ್ತಿಗೆ ಹಿಡುವಳಿ	ನಿರ್ವಹಣೆ ಉಪಕರಣ	ವಿದ್ಯುತ್ ಉಪಕರಣ	ಕಂಪ್ಯೂಟರ್‌ಗಳು (★★★)	ಪೀಠೋಪಕರಣ ಮತ್ತು ಆಳವಡಿಕೆಗಳು	ವಾಹನಗಳು	ಗುತ್ತಿಗೆ ಕೊಟ್ಟಿರುವ ಆಸ್ತಿಗಳು	ಕಚೇರಿ ಉಪಕರಣ	ಅನುದಾನ ಆಸ್ತಿಗಳು	ಡಿಜಿ ಪ್ಲೆಕ್ಸ್ ಪ್ರಿಂಟಿಂಗ್ ಮೆಷಿನ್	ಡಾರ್ಕ್‌ರೂಂ ಉಪಕರಣಗಳು	ಪಾರ್ಟಿಷನ್‌ಗಳು (★★)	ಒಟ್ಟು
ಒಟ್ಟು ವಾಹಕ ಮೊತ್ತ																
01ನೇ ಏಪ್ರಿಲ್ 2021ರಂದು ಇದ್ದಂತೆ	167.69	269.55	440.65	–	0.32	1,834.57	286.47	2,874.15	351.50	7.05	1,145.02	0.00	–	4.51	105.89	7,487.37
ಸೇರ್ಪಡೆಗಳು	–	72.83	–	–	–	230.87	132.99	574.28	–	–	165.19	–	–	–	–	1,176.16
ವಿಲೇವಾರಿಗಳು	–	–	–	–		(3.44)		(11.77)			(3.85)	–	–			(19.06)
ಕಟ್ಟಡದಿಂದ ಜಮೀನಿಗೆ ಮರು ವರ್ಗೀಕರಣ	–	–	–	–	–	–	–	–	–	–	–	–	–	–	–	
ಹೂಡಿಕೆ ಸ್ವತ್ತಿಗೆ ಮರು ವರ್ಗೀಕರಣ	–	–	–	–	–	–	–	–	–	–	–	–	–	–	–	
31ನೇ ಮಾರ್ಚ್ 2022 ರಂದು ಇದ್ದಂತೆ	167.69	–	440.65	–	0.32	2,062.00	419.46	3,436.66	351.50	7.05	1,306.36	0.00	–	4.51	105.89	8,644.47
ಸೇರ್ಪಡೆಗಳು	–	–	–	–		726.91	21.71	932.18	82.76		306.58		–	–	–	2,070.14
ವಿಲೇವಾರಿಗಳು	–	–	–	–		(3.36)	(0.58)	(19.09)	(0.80)		(3.51)		–	–	–	(27.33)
ಹಿಂದಿನ ವರ್ಷಕ್ಕೆ ಹೊಂದಾಣಿಕೆ ಮಾಡಬೇಕಿರುವುದು★	–	(69.41)	–	–	–	–	–	–	–	–	–	–	–	–	–	(69.41)
ಹಿಂದಿನ ವರ್ಷಕ್ಕೆ ಹೊಂದಾಣಿಕೆ ಮಾಡಬೇಕಿರುವುದು★★	–	(72.83)	–	–	–	–	–	–	–	–	–	–	–	–	–	(72.83)
31ನೇ ಮಾರ್ಚ್ 2023ರಂದು ಇದ್ದಂತೆ	167.69	200.14	440.65	–	0.32	2,785.55	440.58	4,349.75	433.46	7.05	1,609.44	0.00	–	4.51	105.89	10,545.03
ಸಂಚಯನವಾದ ಸವಕಳಿ	–	–	–	–	–	–	–	–	–	–	–	–	–	–	–	–
1ನೇ ಏಪ್ರಿಲ್ 2021 ರಂದು ಇದ್ದಂತೆ	–	–	94.59	–	0.27	531.84	214.57	1,285.14	124.66	0.86	577.60	–	–	4.51	100.60	2,934.64
ವರ್ಷದ ಶುಲ್ಕ	–	–	8.36	–		190.41	41.88	550.01	40.18	2.23	136.75	–	–	–	–	969.82

ಏಲೇವಾರಿಗೆ ಹೊಂದಾಣಿಕೆಗಳು	–	–	–	–	–	–	–	–	–	–	–	–	–	–	–	0.00
ಮರು ವರ್ಗೀಕರಣ	–	–	–	–	–	–	–	–	–	–	–	–	–	–	–	0.00
31ನೇ ಮಾರ್ಚ್ 2022ರಂದು ಇದ್ದಂತೆ	–	–	102.95	–	0.27	719.65	256.45	1,823.38	164.84	3.09	713.06		–	4.51	100.60	3,888.80
ವರ್ಷದ ಶುಲ್ಕ	–	–	9.21	–	–	231.77	65.30	636.66	43.63	2.23	190.55		–	–	–	1,179.35
ಏಲೇವಾರಿಗೆ ಹೊಂದಾಣಿಕೆಗಳು	–	–	–	–	–	(2.64)	(0.54)	(12.60)	–	–	(1.29)		–	–	–	(17.06)
ಮಾರಾಟಕ್ಕೆ ಹೊಂದಲು ಆಸ್ತಿಗಳ ವರ್ಗಾವಣೆ ಮಾಡಿದ್ದಕ್ಕೆ ಹೊಂದಾಣಿಕೆ	–	–	–	–	–	–	–	–	–	–	–	–	–	–	–	–
31ನೇ ಮಾರ್ಚ್ 2023ರಂದು ಇದ್ದಂತೆ	–	–	112.16	–	–	948.78	321.21	2,447.44	208.47	5.32	902.33	–	–	4.51	100.60	5,051.10
31ನೇ ಮಾರ್ಚ್ 2022 ರಂದು ಇದ್ದಂತೆ ನಿವ್ವಳ ಬ್ಲಾಕ್	167.69	342.38	337.70	–	0.05	1,342.35	163.01	1,613.28	186.66	3.96	593.30	0.00	–	–	5.29	4,755.67
31ನೇ ಮಾರ್ಚ್ 2023 ರಂದು ಇದ್ದಂತೆ ನಿವ್ವಳ ಬ್ಲಾಕ್	167.69	200.14	328.49	–	0.05	1,836.77	119.38	1,902.31	224.99	1.73	707.11	0.00	–	–	5.29	5,493.94

ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟ ಸಹಾಯಕ ಕಂಪನಿ–ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್

(★) ಕಂಪನಿಯು ದಿನಾಂಕ 05ನೇ ಮಾರ್ಚ್ 2014ರ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರದ ಅನ್ವಯ ಅನುಸಾರ ಕೆಐಎಡಿಬಿಗೆ ಜಮೀನಿನ ಬೆಲೆಯಾಗಿ ರೂ.178.59 ಲಕ್ಷ ಪಾವತಿಸಿದೆ. ಕಂಪನಿಯು ಈ ಜಮೀನನ್ನು 10 ವರ್ಷಗಳ ಅವಧಿಗೆ ಗುತ್ತಿಗೆ ಮೇಲೆ ಪಡೆದಿದೆ. ಗುತ್ತಿಗೆ ಒಪ್ಪಂದ ಪತ್ರದ ಅನ್ವಯ ಕಂಪನಿಯು ಪ್ರತಿ ವರ್ಷ ವರ್ಷ ಒಂದಕ್ಕೆ ರೂ.0.01ಲಕ್ಷ ಬಾಡಿಗೆ ಪಾವತಿ ಮಾಡಬೇಕಿದೆ. ಮತ್ತು ವರ್ಷ ಒಂದಕ್ಕೆ ರೂ.0.10 ಲಕ್ಷಗಳ ನಿರ್ವಹಣೆ ಶುಲ್ಕ ಪಾವತಿ ಮಾಡಬೇಕಾಗಿದೆ. ಈ ಜಮೀನನ್ನು ಗುತ್ತಿಗೆ ಹಿಡುವಳಿ ಜಮೀನು ಎಂಬುದಾಗಿ ವರ್ಗೀಕರಿಸಲಾಗಿದೆ. ಗುತ್ತಿಗೆ ಹಾಗೂ ಮಾರಾಟ ಒಪ್ಪಂದದ ಕಲಂ ಸಂ.10 (i) ರ ಅನ್ವಯ ರೂ.69.41ಲಕ್ಷಗಳ ಜಮೀನಿನ ಬೆಲೆ ಪಾವತಿ ಮಾಡುವಂತೆ ಮಾಡಿರುವ ಡಿಮ್ಯಾಂಡ್‌ಗೆ ಸಂಬಂಧಿಸಿದಂತೆ ಕೆಐಎಡಿಬಿಯಿಂದ ಬಂದಿರುವ ದಿನಾಂಕ: 05.01.2018ರ ಪತ್ರದ ಅನ್ವಯ ಪುಸ್ತಕಗಳಲ್ಲಿ ಸಂಚಯನವಾಗಿದೆ. ಸಿ ಅಂಡ್ ಎಜಿ ನಿರ್ದೇಶನದಂತೆ ದಂಡದ ಶುಲ್ಕವನ್ನು ಅಮಾನ್ಯಗೊಳಿಸಿದೆ ಮತ್ತು ಕಂಪನಿಯ ಹೆಚ್ಚುವರಿ ನಿಧಿಗೆ ಹೊಂದಾಣಿಕೆ ಮಾಡಿದೆ.

(★★) ಹಿಂದಿನ ವರ್ಷದ 2020–21ರ ಅವಧಿಯಲ್ಲಿ ಗುತ್ತಿಗೆ ಹಿಡುವಳಿ ಜಮೀನನ್ನು ಟಿಪ್ಪಣಿ ಸಂ.3 ಸ್ವತ್ತು, ಸ್ಥಾವರ ಮತ್ತು ಉಪಕರಣದ ಭಾಗವಾಗಿ ಪರಿಗಣಿಸಲಾಗಿದೆ. ಚಾಲ್ತಿ ಹಣಕಾಸಿನ ವರ್ಷ 2022–23ರ ಅವಧಿಗೆ ಸೂಕ್ತವಾದ ಘೋಷಣೆ ಮಾಡಬೇಕಿದೆ. ಗುತ್ತಿಗೆ ಹಿಡುವಳಿ ಜಮೀನನ್ನು ಟಿಪ್ಪಣಿ ಸಂ.4 ''ಬಳಕೆ ಹಕ್ಕಿನ ಆಸ್ತಿಗಳ'' ಅಡಿಯಲ್ಲಿ ಗುಂಪು ಮಾಡಿದೆ.

3 ಪ್ರಗತಿಯಲ್ಲಿರುವ ಬಂಡವಾಳ ಕಾರ್ಯಗಳು		
ವಿವರಗಳು	ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ	ಒಟ್ಟು
01ನೇ ಏಪ್ರಿಲ್ 2021ರಂದು ಇದ್ದಂತೆ	**405.86**	**405.86**
ಸೇರ್ಪಡೆಗಳು	94.00	94.00
ವರ್ಷದ ಅವಧಿಯಲ್ಲಿ ಬಂಡವಾಳಗೊಳಿಸಿರುವುದು	40.41	40.41
ತೆಗೆದು ಹಾಕಿರುವುದು	62.42	62.42
31ನೇ ಮಾರ್ಚ್ 2022ರಂದು ಇದ್ದಂತೆ	**397.04**	**397.04**
ಸೇರ್ಪಡೆಗಳು	195.80	195.80
ವರ್ಷದ ಅವಧಿಯಲ್ಲಿ ಬಂಡವಾಳಗೊಳಿಸಿರುವುದು	–	–
ತೆಗೆದು ಹಾಕಿರುವುದು	–	–
31ನೇ ಮಾರ್ಚ್ 2023ರಂದು ಇದ್ದಂತೆ	**592.83**	**592.83**

ಸಿಡಬ್ಲ್ಯೂಐಪಿ ಕಾಲಾವಧಿ					
	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಅವಧಿಯ ಸಿಡಬ್ಲ್ಯೂಐಪಿಯಲ್ಲಿನ ಮೊತ್ತ				
ಸಿಡಬ್ಲ್ಯೂಐಪಿ	1 ವರ್ಷಕ್ಕಿಂತ ಕಡಿಮೆ	1-2 ವರ್ಷಗಳು	2-3 ವರ್ಷಗಳು	3 ವರ್ಷಗಳಿಗೆ ಮೇಲ್ಪಟ್ಟು	ಒಟ್ಟು
ಪ್ರಗತಿಯಲ್ಲಿರುವ ಯೋಜನೆ	195.80	94.00	141.88	161.16	592.83
ತಾತ್ಕಾಲಿಕವಾಗಿ ಅಮಾನತುಗೊಳಿಸಿರುವ ಯೋಜನೆಗಳು	–	–	–	–	–
ಒಟ್ಟು	**195.80**	**94.00**	**141.88**	**161.16**	**592.83**

ಮೂಲ ಯೋಜನೆಗೆ ಹೋಲಿಸಿದರೆ ಪೂರ್ಣಗೊಳಿಸುವಿಕೆ ಅವಧಿ ಮೀರಿರುವ ಅಥವಾ ಅಂದಾಜು ಮಾಡಿದ ಕಾಲಾವಧಿಗಿಂತ ವೆಚ್ಚ ಹೆಚ್ಚಾಗಿರುವ ಪ್ರಗತಿಯಲ್ಲಿರುವ ಯೋಜನೆಗಳ ವಿವರ				
	ಪೂರ್ಣಗೊಳಿಸಲು ಅಂದಾಜು ಮಾಡಿದ್ದ ದಿನಾಂಕ	ನಿಗದಿಪಡಿಸಿದ ಯೋಜನಾ ವೆಚ್ಚ	31ನೇ ಮಾರ್ಚ್ 2023 ರಂದು ಇದ್ದಂತೆ ವಾಸ್ತವಿಕ ವೆಚ್ಚ	ವಿಳಂಬಕ್ಕೆ ಕಾರಣಗಳು
ಪ್ರಗತಿಯಲ್ಲಿರುವ ಯೋಜನೆ				
ಉಗ್ರಾಣ, ಕಾಪನೂರ್ ಕೈಗಾರಿಕಾ ಪ್ರದೇಶ, ಕಲಬುರಗಿ	31.05.2024	752.91	592.83	ಹೆಚ್ಚುವರಿ ಕೆಲಸ ಸೇರ್ಪಡೆ ಮಾಡಿದರಿಂದ
ತಾತ್ಕಾಲಿಕವಾಗಿ ಅಮಾನತುಗೊಳಿಸಿರುವ ಯೋಜನೆಗಳು	ಇಲ್ಲ			

	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ಅವಧಿಯ ಸಿಡಬ್ಲ್ಯೂಐಪಿಯಲ್ಲಿನ ಮೊತ್ತ				
ಸಿಡಬ್ಲ್ಯೂಐಪಿ	1 ವರ್ಷಕ್ಕಿಂತ ಕಡಿಮೆ	1-2 ವರ್ಷಗಳು	2-3 ವರ್ಷಗಳು	3 ವರ್ಷಗಳಿಗೆ ಮೇಲ್ಪಟ್ಟು	ಒಟ್ಟು
ಪ್ರಗತಿಯಲ್ಲಿರುವ ಯೋಜನೆ	94.00	141.88	161.16	–	397.04
ತಾತ್ಕಾಲಿಕವಾಗಿ ಅಮಾನತುಗೊಳಿಸಿರುವ ಯೋಜನೆಗಳು	–	–	–	–	–
ಒಟ್ಟು	94.00	141.88	161.16	–	397.04

ಪೂರ್ಣಗೊಳಿಸುವಿಕೆ ಅವಧಿ ಮೀರಿರುವ ಅಥವಾ ಅಂದಾಜು ಮಾಡಿದ ಸಮಯದ ಚೌಕಟ್ಟಿಗಿಂತ ಮೀರಿರುವ ವೆಚ್ಚದ ಪ್ರಗತಿಯಲ್ಲಿರುವ ಯೋಜನೆಗಳ ವಿವರ				
	ಪೂರ್ಣಗೊಳಿಸುವ ಅಂದಾಜು ಮಾಡಿದ ದಿನಾಂಕ	ಬಜೆಟ್ ಮಾಡಿದ ಯೋಜನಾ ವೆಚ್ಚ	31ನೇ ಮಾರ್ಚ್ ರಂದು ಇದ್ದಂತೆ ವಾಸ್ತವಿಕ ವೆಚ್ಚ	ವಿಳಂಬಕ್ಕೆ ಕಾರಣ
ಪ್ರಗತಿಯಲ್ಲಿರುವ ಯೋಜನೆ				
ಉಗ್ರಾಣ, ಕಪನೂರ್ ಕೈಗಾರಿಕಾ ಪ್ರದೇಶ, ಕಲಬುರಗಿ	31/7/2022	565.12	397.04	★ಕೆಳಗಿನ ಟಿಪ್ಪಣಿ ನೋಡಿ
ಚಿಟ್ ವಿಭಾಗದಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿ	31/3/2021	83.80	61.46	ಇಲ್ಲ
ಫಾರ್ಮ ವಿಭಾಗದಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿ	31/3/2021	41.36	41.36	ಇಲ್ಲ
ಕಸ್ಟಂ ಬಾಂಡೆಡ್ ವೇರ್‌ಹೌಸ್, ಮಂಗಳೂರು	31/3/2021	25.00	20.00	ಇಲ್ಲ
ತಾತ್ಕಾಲಿಕವಾಗಿ ಅಮಾನತು ಮಾಡಿದ ಯೋಜನೆಗಳು	ಇಲ್ಲ			

ಎ. ಗುತ್ತಿಗೆದಾರಿಕೆ ಹೊಣೆಗಾರಿಕೆಗಳು

ಗುತ್ತಿಗೆದಾರಿಕೆ ಹೊಣೆಗಾರಿಕೆಗಳ ವಿವರಗಳನ್ನು ಟಿಪ್ಪಣಿ 41ರಲ್ಲಿ ತಿಳಿಸಿದೆ.

ಬಿ. ಭದ್ರತೆಯಾಗಿ ಈಡು ಮಾಡಿರುವ ಸ್ವತ್ತು , ಸ್ಥಾವರ ಮತ್ತು ಉಪಕರಣ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ.

ಭದ್ರತೆಯಾಗಿ ಈಡುಮಾಡಿರುವ ಸ್ವತ್ತು ಸ್ಥಾವರ ಮತ್ತು ಉಪಕರಣ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ-31ನೇ ಮಾರ್ಚ್ 2023ರಲ್ಲಿ ಇದ್ದಂತೆ-ಇಲ್ಲ (31ನೇ ಮಾರ್ಚ್ 2022ರಲ್ಲಿ ಇಲ್ಲ)

ಸಿ. 31ನೇ ಮಾರ್ಚ್ 2023 ಮತ್ತು 31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಬಂಡವಾಳಕರಿಸಿದ ಯಾವುದೇ ಸಾಲದ ವೆಚ್ಚ ಇರುವುದಿಲ್ಲ.

ಡಿ. ಕಟ್ಟಡಗಳನ್ನು ಒಳಗೊಂಡಿರುವ ಪ್ರಗತಿಯಲ್ಲಿರುವ ಬಂಡವಾಳ ಕಾರ್ಯಗಳು.

ಎ. ಒಪ್ಪಂದದ ಹೊಣೆಗಾರಿಕೆಗಳು

ಒಪ್ಪಂದದ ಹೊಣೆಗಾರಿಕೆಗಳ ವಿವರಗಳನ್ನು ಟಿಪ್ಪಣಿ-41ರಲ್ಲಿ ಕೊಟ್ಟಿದೆ.

ಬಿ. ಭದ್ರತೆಯಾಗಿ ಈಡು ಮಾಡಿರುವ ಸ್ವತ್ತು , ಸ್ಥಾವರ ಮತ್ತು ಉಪಕರಣ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾರ್ಯಗಳು

31ನೇ ಮಾರ್ಚ್ 2022ರಂದು ಇದ್ದಂತೆ ಭದ್ರತೆಯಾಗಿ ಈಡು ಮಾಡಿರುವ ಸ್ವತ್ತು , ಸ್ಥಾವರ ಮತ್ತು ಉಪಕರಣ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ-ಇಲ್ಲ (31ನೇ ಮಾರ್ಚ್ 2021ರಂದು: ಇಲ್ಲ)

ಸಿ. 31ನೇ ಮಾರ್ಚ್ 2022ಕ್ಕೆ ಮತ್ತು 31ನೇ ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಬಂಡವಾಳೀಕರಿಸಿದ ಸಾಲದ ವೆಚ್ಚಗಳು ಇರುವುದಿಲ್ಲ.

ಡಿ. ಪ್ರಗತಿಯಲ್ಲಿರುವ ಬಂಡವಾಳ ಕಾರ್ಯಗಳು ಕಟ್ಟಡಗಳನ್ನು ಒಳಗೊಂಡಿರುವವು.

4. ಹೂಡಿಕೆ ಸ್ವತ್ತು

ವಿವರಗಳು	ಮುಕ್ತ ಹಿಡುವಳಿ ಜಮೀನು	ಗುತ್ತಿಗೆ ಹಿಡುವಳಿ ಜಮೀನು	ಕಟ್ಟಡ- ಮುಕ್ತ ಹಿಡುವಳಿ	ಕಟ್ಟಡ -ಗುತ್ತಿಗೆ ಹಿಡುವಳಿ	ಒಟ್ಟು
01ನೇ ಏಪ್ರಿಲ್ 2021ರಂದು ಇದ್ದಂತೆ	53.06	100.95	1,604.08	2,686.59	4,444.68
ಸೇರ್ಪಡೆಗಳು (ತದನಂತರದ ಖರ್ಚುಗಳು)	–	–	–	–	–
ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಮರು ವರ್ಗೀಕರಣ	–	–	–	–	–
31ನೇ ಮಾರ್ಚ್ 2022 ರಂದು ಇದ್ದಂತೆ	**53.06**	**100.95**	**1,604.08**	**2,686.59**	**4,444.68**
ಸೇರ್ಪಡೆಗಳು (ತದನಂತರದ ಖರ್ಚುಗಳು)	–	–	–	–	–
31ನೇ ಮಾರ್ಚ್ 2023ರಂದು ಇದ್ದಂತೆ	**53.06**	**100.95**	**1,604.08**	**2,686.59**	**4,444.68**
ಸವಕಳಿ ಮತ್ತು ಕ್ಷೀಣತೆ	–	–	–	–	–
1ನೇ ಏಪ್ರಿಲ್ 2021ರಂದು ಇದ್ದಂತೆ	–	–	**89.96**	**269.39**	**359.35**
ಸವಕಳಿ (ಟಿಪ್ಪಣಿ 28)	–	–	29.85	89.84	119.69
ಪಿಪಿ & ಇ ಯಿಂದ ಮರು ವರ್ಗೀಕರಣ	–	–	–	–	–
31ನೇ ಮಾರ್ಚ್ 2022 ರಂದು ಇದ್ದಂತೆ	–	–	**119.81**	**359.23**	**479.04**
ಸವಕಳಿ (ಟಿಪ್ಪಣಿ 28 ನೋಡಿ)	–	–	28.40	89.84	118.24
31ನೇ ಮಾರ್ಚ್ 2023	–	–	**148.21**	**449.07**	**597.28**
31ನೇ ಮಾರ್ಚ್ 2022ರಂದು ಇದ್ದಂತೆ ನಿವ್ವಳ ಬ್ಲಾಕ್	**53.06**	**100.95**	**1,484.27**	**2,327.36**	**3,965.64**
31ನೇ ಮಾರ್ಚ್ 2023ರಂದು ಇದ್ದಂತೆ ನಿವ್ವಳ ಬ್ಲಾಕ್	**53.06**	**100.95**	**1,455.87**	**2,237.52**	**3,847.40**

ಹೂಡಿಕೆ ಸ್ವತ್ತಿನ ಆದಾಯ ಮತ್ತು ಖರ್ಚಿನ ಬಗ್ಗೆ ಮಾಹಿತಿ	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
ಹೂಡಿಕೆ ಸ್ವತ್ತುಗಳಿಂದ ಬಂದ ಬಾಡಿಗೆ ಆದಾಯ (ಟಿಪ್ಪಣಿ–21 ನೋಡಿ)	855.40	666.76
ಹೂಡಿಕೆ ಆಸ್ತಿಗೆ ಸೇರಿದ ನೇರ ಕಾರ್ಯಾಚರಣೆ ಖರ್ಚುಗಳು (ದುರಸ್ತಿ ಮತ್ತು ನಿರ್ವಹಣೆ ಸೇರಿದಂತೆ)	(107.07)	(173.95)
ಸವಕಳಿ ಮತ್ತು ಪರೋಕ್ಷ ಖರ್ಚುಗಳಿಗೆ ಮುನ್ನ ಹೂಡಿಕೆ ಆಸ್ತಿಗಳಿಂದ ಬಂದ ಲಾಭ	**748.33**	**492.81**
ಕಳೆದು–ಸವಕಳಿ	(118.24)	(119.69)
ಪರೋಕ್ಷ ಖರ್ಚುಗಳಿಗೆ ಮುನ್ನ ಹೂಡಿಕೆ ಆಸ್ತಿಗಳಿಂದ ಬಂದ ಲಾಭ	**630.09**	**373.12**

ಕಂಪನಿಯು ಹೂಡಿಕೆ ಸ್ವತ್ತಿನ ಮೌಲ್ಯಮಾಪನ ಪಡೆಯುವ ಪ್ರಕ್ರಿಯೆಯಲ್ಲಿದೆ.

ಕಂಪನಿಯು ತನ್ನ ಹೂಡಿಕೆ ಸ್ವತ್ತುಗಳ ನಗದೀಕರಣದ ಬಗ್ಗೆ ಯಾವುದೇ ನಿರ್ಬಂಧಗಳನ್ನು ಹೊಂದಿರುವುದಿಲ್ಲ. ಹೂಡಿಕೆ ಸ್ವತ್ತುಗಳ ಖರೀದಿ ಅಥವಾ ಅಭಿವೃದ್ಧಿಗೆ ಯಾವುದೇ ಒಪ್ಪಂದ ಬಾಧ್ಯತೆಗಳಿರುವುದಿಲ್ಲ.

5. ಇತರೆ ಅಗೋಚರಿತ ಆಸ್ತಿಗಳು

ವಿವರಗಳು	ಕಂಪ್ಯೂಟರ್ ತಂತ್ರಾಂಶ	ಒಟ್ಟು
ಒಟ್ಟು ವಾಹಕ ಮೊತ್ತ		
01ನೇ ಏಪ್ರಿಲ್ 2021ರಂದು ಇದ್ದಂತೆ	**78.24**	**78.24**
ಸೇರ್ಪಡೆಗಳು	27.05	27.05
31ನೇ ಮಾರ್ಚ್ 2022ರಂದು ಇದ್ದಂತೆ	**105.29**	**105.29**
ಸೇರ್ಪಡೆಗಳು	5.30	5.30
31ನೇ ಮಾರ್ಚ್ 2023 ರಂದು ಇದ್ದಂತೆ	**110.59**	**110.59**
ಸಂಚಯನವಾದ ಅಮಾರ್ಟೈಜೇಶನ್ 01ನೇ ಏಪ್ರಿಲ್ 2021ರಂದು ಇದ್ದಂತೆ	**71.08**	**71.08**
ವರ್ಷದ ಅವಧಿಯಲ್ಲಿ ಅಮಾರ್ಟೈಜೇಶನ್ ಶುಲ್ಕ	7.36	7.36
31ನೇ ಮಾರ್ಚ್ 2022ರಂದು ಇದ್ದಂತೆ	**78.43**	**78.43**
ವರ್ಷದ ಅವಧಿಯಲ್ಲಿ ಅಮಾರ್ಟೈಜೇಶನ್ ಶುಲ್ಕ	11.46	11.46
31ನೇ ಮಾರ್ಚ್ 2023ರಂದು ಇದ್ದಂತೆ	**89.89**	**89.89**
31ನೇ ಮಾರ್ಚ್ 2022ರಂದು ಇದ್ದಂತೆ ನಿವ್ವಳ ಬ್ಲಾಕ್	**26.86**	**26.86**
31ನೇ ಮಾರ್ಚ್ 2023ರಂದು ಇದ್ದಂತೆ ನಿವ್ವಳ ಬ್ಲಾಕ್	**20.70**	**20.70**

5ಎ ಬಳಕೆ ಆಸ್ತಿಗಳ ಹಕ್ಕು

ವಿವರಗಳು	ಬಳಕೆ ಹಕ್ಕು
ವಿಲೇವಾರಿಗಳು	
31ನೇ ಮಾರ್ಚ್ 2022 ರಂದು ಇದ್ದಂತೆ	**3,139.34**
ಸೇರ್ಪಡೆಗಳು (★)	354.87
ಹಿಂದಿನ ವರ್ಷದಲ್ಲಿನ ತಪ್ಪಿಗೆ ಮಾಡಿದ ಹೊಂದಾಣಿಕೆ ವಿಲೇವಾರಿಗಳು	72.83
ವಿಲೇವಾರಿಗಳು	–
31ನೇ ಮಾರ್ಚ್ 2023ರಂದು ಇದ್ದಂತೆ	**3,567.04**
ಸಂಚಯನವಾಗಿರುವ ಸವಕಳಿ	–
1ನೇ ಏಪ್ರಿಲ್ 2021ರಂದು ಇದ್ದಂತೆ	**1,412.09**
ವರ್ಷದ ಶುಲ್ಕ	698.99
ವಿಲೇವಾರಿಗೆ ಹೊಂದಾಣಿಕೆಗಳು	–
31ನೇ ಮಾರ್ಚ್ 2022 ರಂದು ಇದ್ದಂತೆ	**2,111.08**
ವರ್ಷದ ಶುಲ್ಕ	595.69
ವಿಲೇವಾರಿ ಹೊಂದಾಣಿಕೆಗಳು	–
31ನೇ ಮಾರ್ಚ್ 2023ರಂದು ಇದ್ದಂತೆ	2,706.77
31ನೇ ಮಾರ್ಚ್ 2022ರಂದು ಇದ್ದಂತೆ ನಿವ್ವಳ ವಾಹಕ ಮೌಲ್ಯ	1,028.26
31ನೇ ಮಾರ್ಚ್ 2023ರಂದು ಇದ್ದಂತೆ ನಿವ್ವಳ ವಾಹಕ ಮೌಲ್ಯ	860.28

(★) ಬಳಕೆ ಹಕ್ಕಿನ ಆಸ್ತಿಗಳನ್ನು 01ನೇ ಏಪ್ರಿಲ್ 2019ರಂದು ಇದ್ದಂತೆ ಮಾರ್ಪಾಡು ಮಾಡಿದ ಪೂರ್ವಾನ್ವಯ ವಿಧಾನದ ಬಳಕೆ ಮಾಡಿ ಐಎನ್‌ಡಿ ಎಎಸ್ 116 ಅಳವಡಿಕೆ ಮೇರೆಗೆ ಮಾನ್ಯ ಮಾಡಿದೆ. ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿರುವ ಖರ್ಚುಗಳು ಕೆಳಕಂಡಂತಿರುವುದು:

ವಿವರಗಳು	31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ	31ನೇ ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷದಲ್ಲಿ
ಬಳಕೆ ಹಕ್ಕಿನ ಆಸ್ತಿಗಳ ಸವಕಳಿ ಖರ್ಚು	595.69	698.99
ಗುತ್ತಿಗೆ ಹೊಣೆಗಾರಿಕೆಗಳ ಮೇಲಿನ ಬಡ್ಡಿ ಖರ್ಚುಗಳು	103.84	83.79
ಅಲ್ಪಾವಧಿ ಗುತ್ತಿಗೆಗಳಿಗೆ ಸಂಬಂಧಿಸಿದ ಖರ್ಚು	1,117.99	866.91
ಲಾಭ ಮತ್ತು ನಷ್ಟದಲ್ಲಿ ಗಣನೆ ಮಾಡಿರುವ ಒಟ್ಟು ಮೊತ್ತ	**1,817.53**	**1,649.69**

		31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
6	**ಹೂಡಿಕೆಗಳು**		
	ಚಾಲ್ತಿಯೇತರ		
ಎ.	**ದರ ನಮೂದಿತ ಹೂಡಿಕೆಗಳು**		
	ಒಸಿಐ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಈಕ್ವಿಟಿ ಷೇರುಗಳಲ್ಲಿ ಹೂಡಿಕೆ ಮಾಡಿರುವಿಕೆಗಳು (ಪೂರ್ಣ ಪಾವತಿ)		
	ಮೆ॥ ಜೆ.ಕೆ. ಟೈರ್ ಇಂಡಸ್ಟ್ರೀಸ್ ಲಿಮಿಟೆಡ್	**508.89**	**386.15**
	ತಲಾ ರೂ.2 ರ 329,060 (31ನೇ ಮಾರ್ಚ್ 2022: 329,060) ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರುಗಳು		
	ಮೆ॥ ಬೆಂಗಾಲ್ ಅಂಡ್ ಅಸ್ಸಾಂ ಕಂ ಲಿಮಿಟೆಡ್	**140.04**	**90.29**
	ತಲಾ ರೂ.10ರ 3,831 (31ನೇ ಮಾರ್ಚ್ 2022, 3,831) ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರುಗಳು		
	ಒಟ್ಟಾರೆ ಒಗ್ಗೂಡಿಸಿದ ನಮೂದಿತ ಹೂಡಿಕೆಗಳು (ಎ)	648.93	476.44
	ನಮೂದಿತ ಹೂಡಿಕೆಗಳ ಒಟ್ಟಾರೆ ಪುಸ್ತಕದ ಮೌಲ್ಯ	648.93	476.44
	ನಮೂದಿತ ಹೂಡಿಕೆಗಳ ಒಟ್ಟಾರೆ ಮಾರುಕಟ್ಟೆ ಮೌಲ್ಯ	648.93	476.44
ಬಿ.	**ನಮೂದಿಸಿರದ ಹೂಡಿಕೆಗಳು**		
	ಸಹಾಯಕ ಕಂಪನಿಗಳು, ಸಹವರ್ತಿ ಕಂಪನಿಗಳು ಮತ್ತು ಸಹಭಾಗಿತ್ವ ಕಂಪನಿಯಲ್ಲಿನ ಈಕ್ವಿಟಿ ಸಾಧನಗಳಲ್ಲಿ ಹೂಡಿಕೆಗಳು		
	ಪರಿಭಾವಿತ ಬೆಲೆಯಲ್ಲಿ ಸಹಾಯಕ ಕಂಪನಿ (★)		
	ಮೆ॥ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್		
	ತಲಾ ರೂ.10ರ 357,252(31ನೇ ಮಾರ್ಚ್ 2022: 357,252) ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರುಗಳು		
	ಮೆ॥ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್		
	ತಲಾ ರೂ.10ರ 720,875(31ನೇ ಮಾರ್ಚ್ 2022: 720,875) ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರುಗಳು		
	ಕರ್ನಾಟಕ ಸರ್ಕಾರದ ಆದೇಶದ ಅನ್ವಯ ರೂ.5000 ಸಾಧಾರಣ ಮೌಲ್ಯದಲ್ಲಿ ನೀಡಿರುವುದು.		
	ಸಹವರ್ತಿ ಸಂಸ್ಥೆಗಳು ವಾಸ್ತವ ಬೆಲೆಯಲ್ಲಿ		
	ಮೆ॥ ಕೆ.ಟಿ. ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್		
	ತಲಾ ರೂ. 100/–ರ 35 (31ನೇ ಮಾರ್ಚ್ 2022: 35) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು	0.04	0.04
	ಮೆ॥ ಕೆ.ಟಿ. ಮ್ಯಾನ್‌ಷನ್ಸ್ ಅಪಾರ್ಟ್‌ಮೆಂಟ್ಸ್ ಓನರ್ಸ್ ಅಸೋಸಿಯೇಷನ್		
	ತಲಾ ರೂ. 100/–ರ 25 (31ನೇ ಮಾರ್ಚ್ 2022: 25) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು	0.03	0.03
	ಇತರೆ – ಒಸಿಐ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ		
	ಮೆ॥ ಹಾಸನ್ ಮಂಗಳೂರು ರೈಲ್ ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್	1,729.78	1,922.50
	ತಲಾ ರೂ. 100/–ರ 7,000,000 (31ನೇ ಮಾರ್ಚ್ 2022: 7,000,000) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು		
	ಕರ್ನಾಟಕ ಸ್ಟೇಟ್ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್ – ಒಂದು–ಸಿ–ದರ್ಜೆ ಸಾಮಾನ್ಯ ಷೇರು:	26.15	24.92
	ತಲಾ ರೂ.1,000,000/–ರ 1 (31ನೇ ಮಾರ್ಚ್ 2022:1) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು		
	ನಮೂದಿಸಿಲ್ಲದ ಹೂಡಿಕೆಗಳ ಒಟ್ಟು ಒಗ್ಗೂಡಿಕೆ (ಬಿ)	**1,755.99**	**1,947.49**
	ಒಟ್ಟು (ಎ+ಬಿ)	**2,404.92**	**2,423.94**
	ನಮೂದಿಸಿದ ಹೂಡಿಕೆಗಳ ಒಟ್ಟಾರೆ ಮೊತ್ತ ಮತ್ತು ಅವುಗಳ ಮಾರುಕಟ್ಟೆ ಮೌಲ್ಯ	648.93	476.44
	ನಮೂದು ಮಾಡಿರದ ಹೂಡಿಕೆಗಳ ಒಟ್ಟು ಮೊತ್ತ	1,755.99	1,947.49

MSIL

7. ಇತರೆ ಹಣಕಾಸಿನ ಆಸ್ತಿಗಳು

	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
	ಚಾಲ್ತಿಯೇತರ	ಚಾಲ್ತಿ	ಚಾಲ್ತಿಯೇತರ	ಚಾಲ್ತಿ
ಅಮಾರ್ಟೈಸ್ಡ್ ಬೆಲೆಯಲ್ಲಿ				
ಎ) ಸಾಲಗಳು ಮತ್ತು ಮುಂಗಡಗಳು –ಚಿಟ್ ಕಾರ್ಯಾಚರಣೆಗಳು	–	–	–	–
(i) ಭದ್ರತೆಯುಳ್ಳ ಮತ್ತು ಉತ್ತಮವೆಂದು ಪರಿಗಣಿಸಿರುವುದು	16,590.87	9,061.44	12,437.45	7,767.12
(ii) ಭದ್ರತೆಯಿಲ್ಲದ್ದು ಮತ್ತು ಉತ್ತಮವೆಂದು ಪರಿಗಣಿಸಿರುವುದು	–	–	–	6.00
(iii) ಸಂದೇಹಾಸ್ಪದವೆಂದು ಪರಿಗಣಿಸಿರುವುದು	249.36	684.75	203.90	559.92
ಕಳೆದು: ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ	249.36	(684.75)	(203.90)	(559.92)
ಬಿ) ವಸ್ತುವಿನ ರೂಪದಲ್ಲಿ ವಸೂಲು ಮಾಡಬಹುದಾದ ಇತರೆ ಮುಂಗಡಗಳು ಅಥವಾ ಪಡೆಯಬಹುದಾಗಿರುವ ಮೌಲ್ಯ:	–	–	–	–
(i) ಭದ್ರತೆಯುಳ್ಳ ಮತ್ತು ಉತ್ತಮವೆಂದು ಪರಿಗಣಿಸಿರುವುದು	–	–	–	–
(ii) ಭದ್ರತೆರಹಿತ ಮತ್ತು ಉತ್ತಮವೆಂದು ಪರಿಗಣಿಸಿರುವುದು (★★)	–	4,071.52	1.20	2,030.76
(iii) ಸಂದೇಹಾಸ್ಪದವೆಂದು ಪರಿಗಣಿಸಿರುವುದು	–	915.61	–	1,220.20
ಕಳೆದು : ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ	–	(915.61)	–	(1,220.20)
ಸಿ) ಭದ್ರತಾ ಠೇವಣಿ (★)	–	–	–	–
(i) ಭದ್ರತೆಯುಳ್ಳ ಮತ್ತು ಉತ್ತಮವೆಂದು ಪರಿಗಣಿಸಿರುವುದು	–	148.43	–	–
(ii) ಭದ್ರತೆಯಿಲ್ಲದ ಮತ್ತು ಉತ್ತಮವೆಂದು ಪರಿಗಣಿಸಿರುವುದು	3.06	1,011.23	3.06	1,124.54
(iii) ಸಂದೇಹಾಸ್ಪದ ಎಂದು ಪರಿಗಣಿಸಿರುವುದು	–	16.38	–	29.08
ಕಳೆದು: ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ	–	(16.38)	–	(29.08)
ಡಿ)ಇತರೆ ಸ್ವೀಕೃತಗಳು	87.24	66.06	–	66.13
ಕಳೆದು: ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ	87.00	(66.06)	–	(66.06)
ಒಟ್ಟು	**16,594.17**	**14,292.61**	**12,441.71**	**10,928.49**

8. ಇತರೆ ಆಸ್ತಿಗಳು				
	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
	ಚಾಲ್ತಿಯೇತರ	ಚಾಲ್ತಿ	ಚಾಲ್ತಿಯೇತರ	ಚಾಲ್ತಿ
ಪೂರ್ವ ಪಾವತಿ ಖರ್ಚುಗಳು	–	1,213.26	–	1,132.69
ಶಾಸನಬದ್ಧ ಪ್ರಾಧಿಕಾರಿಗಳಲ್ಲಿನ ಶಿಲ್ಕು	10.30	1,081.38	10.30	2,003.71
ಮುಂಗಡ ಆದಾಯ ತೆರಿಗೆ ಮತ್ತು ಟಿಡಿಎಸ್	–	–	551.61	1,752.77
ಇತರೆ ಸ್ವೀಕೃತಗಳು	10.61	3,695.09	597.40	2,746.14
ಗ್ರ್ಯಾಚ್ಯುಟಿ ನಿಧಿ ಲೆಕ್ಕ	65.60	–	–	–
ವ್ಯಾಪಾರದ ಪ್ರಮಾಣದ ಮೇಲೆ ಸ್ವೀಕರಿಸಬಹುದಾಗಿರುವ ರಿಬೇಟ್/ಡಿಸ್ಕೌಂಟ್	–	–	–	–
ವ್ಯಾಪಾರದ ಮುಂಗಡಗಳು ಮತ್ತು ಇತರೆ ಸ್ವೀಕೃತಗಳು	–	–	–	–
ಬಿಲ್ ಮಾಡದಿರುವ ಗಳಿಕೆಗಳು	–	3,843.24	–	–
ಕ್ಯಾಪಿಟಲ್ ವೆಂಡರ್‌ಗಳು ಮತ್ತು ಕಾರ್ಯಾಚರಣೆ ಕ್ರೆಡಿಟಾರ್‌ಗಳಿಗೆ ಮುಂಗಡಗಳು	–	3,524.09	–	–
ವೆಂಡರ್ ಗಳಿಗೆ ನೀಡಿದ ವ್ಯವಸ್ಥೆಯ ಮುಂಗಡಗಳು	–	1,029.79	–	–
ಒಟ್ಟು	**86.51**	**12,327.28**	**1,159.31**	**7,635.31**

ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುವ ಸಹಾಯಕ ಕಂಪನಿ – ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್

ಕಂಪನಿಯು ಹಿಂದಿನ ನೌಕರರಾದ ಶ್ರೀ ಎಸ್.ಎಂ. ಪಾಷ ಮತ್ತು ಶ್ರೀ ಎಎನ್ಎಂ ರಾವ್‌ರವರ ವಿರುದ್ಧ, 1995-96ರ ಹಣಕಾಸಿನ ವರ್ಷದಲ್ಲಿ ರೂ. 28.11 ಲಕ್ಷಗಳ ಮೊತ್ತದ ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ವಸೂಲಿ ಮಾಡಲು ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾವೆ ಹೂಡಿತ್ತು (ಓ.ಎಸ್. ನಂ. 8758/1996). ವಸೂಲಿ ಪ್ರಕರಣ 09ನೇ ಜುಲೈ 2013ರಲ್ಲಿ ವಿಲೇವಾರಿಯಾಗಿದೆ. ನ್ಯಾಯಾಲಯವು ಶ್ರೀ ಎಸ್.ಎಂ. ಪಾಷ ಅವರ ವಿರುದ್ಧ ದಾವೆಯ ತೀರ್ಪು ನೀಡಿ, ಶ್ರೀ ಎಎನ್ಎಂ ರಾವ್ ವಿರುದ್ಧದ ದಾವೆಯನ್ನು ವಜಾ ಮಾಡಿತ್ತು. ಈ ವಿಚಾರವಾಗಿ ಕಂಪನಿ ವಕೀಲರ ಅಭಿಪ್ರಾಯ ಕೇಳಿತು. ತೀರ್ಪನ್ನು ವಿರೋಧಿಸಲು ಸದರಿ ಪ್ರಕರಣದಲ್ಲಿ ಕೆಲವು ಆಧಾರಗಳಿರುವುದಾಗಿ ಅಭಿಪ್ರಾಯ ತಿಳಿಸಿದ್ದರು. ಇದರಂತೆ ಕಂಪನಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಂ. 236/2014 ಅನ್ನು ಸಲ್ಲಿಸಿದೆ ಮತ್ತು ಅದು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಉಳಿದಿದೆ. 1995-96ರ ವರ್ಷದ ಅವಧಿಯಲ್ಲಿ ಈ ವಿವಾದಿತ ಮೊತ್ತವನ್ನು ಬರಬೇಕಾಗಿರುವುದು ಮತ್ತು ಕಂಪನಿಯ ಲೆಕ್ಕದಲ್ಲಿ ದುರುಪಯೋಗಿಸಿಕೊಂಡಿರುವುದನ್ನು ಪಾವತಿ ಮಾಡಬೇಕಾಗಿರುವುದು ಎಂದು ತೋರಿಸಿದೆ ಮತ್ತು 1996-97ರಲ್ಲಿ ಅಬಕಾರಿ ಇಲಾಖೆಗೆ ರೂ. 25.00 ಲಕ್ಷವನ್ನು ಪಾವತಿ ಮಾಡಿದೆ ಮತ್ತು ಬರಬೇಕಾಗಿರುವುದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ವಸೂಲಾಗದ ಸಾಲ ಎಂಬುದಾಗಿ ತಿಳಿಸಿದೆ. 2008-09ರ ವರ್ಷದ ಅವಧಿಯಲ್ಲಿ ದುರುಪಯೋಗ ಮಾಡಿಕೊಂಡಿರುವ ಮೊತ್ತ ರೂ. 27.12 ಲಕ್ಷವನ್ನು ಬರಬೇಕಾಗಿರುವುದು ಮತ್ತು ಕಂಪನಿಯ ಲೆಕ್ಕದಲ್ಲಿ ದುರುಪಯೋಗ ಮಾಡಿಕೊಂಡಿರುವುದನ್ನು ಪಾವತಿ ಮಾಡಬೇಕಾಗಿರುವುದು ಎಂಬುದಾಗಿ ತಿಳಿಸಿದೆ. ಬರಬೇಕಾಗಿರುವುದು ಮತ್ತು ಪಾವತಿ ಮಾಡಬೇಕಾಗಿರುವುದು ಸಂಭಾವ್ಯತೆಯಾಗಿರುವುದರಿಂದ ಅದನ್ನು ಹೊಂದಾಣಿಕೆ ಮಾಡಲಾಗಿದೆ ಮತ್ತು ಸಂಭಾವ್ಯ ಆಸ್ತಿ ರೂ. 28.11 ಲಕ್ಷವನ್ನು ವಸೂಲಿ ಆಧಾರದ ಮೇಲೆ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಪರಿಗಣಿಸಲಾಗಿದೆ.

ರೂ. 122.06 ಲಕ್ಷಗಳ ಮೊತ್ತದ ಆದಾಯ ತೆರಿಗೆ ಮರುಪಾವತಿ (2021: 122.06 ಲಕ್ಷಗಳು) 4 ವರ್ಷಗಳಿಗೂ ಮೇಲ್ಪಟ್ಟ ಅವಧಿಯಿಂದ ಬಾಕಿ ಉಳಿದಿದೆ ಮತ್ತು ಕಂಪನಿಯು ಇಲಾಖೆ ಜೊತೆ ಸಂಪರ್ಕ ನಡೆಸುತ್ತಿದೆ.

ನೋಂದಾವಣೆಯಾಗಿರದ ಮಾರಾಟಗಾರರು/ವೆಂಡರ್‌ಗೆ ಪಾವತಿ ಮಾಡಿರುವ ವ್ಯಾಟ್‌ನ ಸಂಬಂಧ ರೂ.10.30 ಲಕ್ಷಗಳ ಮೊತ್ತದ ವ್ಯಾಟ್ ಮರುಪಾವತಿಯು ಬರಬೇಕಾಗಿರುವ ಬಾಕಿಗಳಲ್ಲಿ ಸೇರಿದೆ. ಇದನ್ನು 05.03.2015ರಂದು ವ್ಯಾಟ್ ಇಲಾಖೆಯಿಂದ ಬರಬೇಕಾದ ಮರುಪಾವತಿ ಎಂದು ಮಾನ್ಯ ಮಾಡಿದೆ.

8ಎ. ಚಾಲ್ತಿ ತೆರಿಗೆ ಆಸ್ತಿ (ನಿವ್ವಳ)				
	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2023ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ	31ನೇ ಮಾರ್ಚ್ 2022ರಂದು ಇದ್ದಂತೆ
	ಚಾಲ್ತಿಯೇತರ	ಚಾಲ್ತಿ	ಚಾಲ್ತಿಯೇತರ	ಚಾಲ್ತಿ
ಮುಂಗಡ ತೆರಿಗೆ ಮತ್ತು ಟಿಡಿಎಸ್	–	3,851.20	–	4,486.14
ಆದಾಯ ತೆರಿಗೆಗೆ ವ್ಯವಸ್ಥೆ	–	3,382.65	–	2,311.88
	–	**468.55**	–	**2,174.26**

9 ತಪಶೀಲುಗಳು		
